ವಿಜಯ	ನಿತ್ಯತಿಥಿ	1930	ಅಕ್ಟೋಬರ್
ಬುಧವಾರ	1.10.1930		
ಶನಿವಾರ	4.10.1930		
ರವಿವಾರ	5.10.1930		
ಸೋಮವಾರ	6.10.1930		
ಮಂಗಳವಾರ	7.10.1930		
ಬುಧವಾರ	8.10.1930		
ಗುರುವಾರ	9.10.1930		
ಶುಕ್ರವಾರ	10.10.1930		
ಶನಿವಾರ	11.10.1930		
ರವಿವಾರ	12.10.1930		
ಸೋಮವಾರ	13.10.1930		
ಮಂಗಳವಾರ	14.10.1930		
ಬುಧವಾರ	15.10.1930		
ಗುರುವಾರ	16.10.1930		
ಶುಕ್ರವಾರ	17.10.1930		
ಶನಿವಾರ	18.10.1930		
ಸೋಮವಾರ	20.10.1930		
ಶನಿವಾರ	25.10.1930		
ರವಿವಾರ	26.10.1930		
ಸೋಮವಾರ	27.10.1930		
ಮಂಗಳವಾರ	28.10.1930		
ಬುಧವಾರ	29.10.1930		
ಗುರುವಾರ	30.10.1930		
ಶುಕ್ರವಾರ	31.10.1930		

ವಿಷಶಾಗಿರುವ ಪ್ರಾಣಿಯವರಿಗೆ ಅಮೃತ ಸಂಜೀವಿ

ಮೃತ್ಯುಂಜಯ

ಕೆಂಪು, ಬಿಳಿ, ಆಥವಾ ಯಾವುದೇ ಬಣ್ಣದ ಚೇಳು ಕುಳಿಯ ಕೊಂಗಡಿ ನಮ್ಮ ಮೃತ್ಯುಂಜಯ ದಿವ್ಯೌಷಧದ ಒಂದು ಮೂರು ದಿವಸಗಳಲ್ಲಿ ಸಂಪೂರ್ಣ ಗುಣವಾಗುವುದು. ಇದಲ್ಲದೆ ಕೇವಲ ಮನುಷ್ಯರಿಗಲ್ಲ ಅನ್ಯತ ಪ್ರಾಣಿಗಳ ಅದ್ಭುತ ಪ್ರಭಾವ! ವೃದ್ಧರ ಅನುಭವ ಸಾಕ್ಷಿಗಳ ಅನುಭವ!! ಬೆಲೆ ಒಂದು ರೂಪಾಯಿ, ಅಂಚೆಖರ್ಚು ಬೇರೆ. ಈ ರೂಪಾಯಿಗಳನ್ನು ಮನಿ ಆರ್ಡರಿನಿಂದಾಗಲಿ, ಪೋಸ್ಟ್ ಕಿಚಿಟಿನ ಮೂಲಕವಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ—ಶ್ರೀ. ಬಾಪಟ್ಟಾಚಾರ್ಯ ದೀಕ್ಷಿತ

ಧಾರವಾಡ

ಕೆಲವು ಕಡೆ ಕೆಲ ಲೇಖಕರು ಯಾವ ಪದೇಶಗಳನ್ನೆ ಇಟ್ಟಿರುತ್ತಾರೆ ಅದೇ ಪ್ರದೇಶಗಳನ್ನು ಮಾಡಿಕೊಳ್ಳುವುದು. ಇ

ಡಿದರು. ಇವರು ತಂತಮ್ಮ ಮನೆಯಿಂದ
, ಚೇಳೆ, ಪರಾತ, ಹಂಚು, ಅಗ್ನಿಷ್ಟಿಗೆ ಸವಟು
ತದ್ದನ್ನು ಮೈದು ಅಡಿಗೆ ಮಾಡಿದರು. ಕಾಂ
ಕಮಾಟಿಯವರು ಇದ್ದಲಿಯನ್ನಷ್ಟೇ ಕೊಟ್ಟರು.

ಶ್ರೀ. ದೇಶಪಾಂಡೆ ಗಂಗಾಧರರಾಯರನ್ನು
ಾವಿಯ ಹಿಂದಲ್ಲಗಿಯ ತುರಂಗಕ್ಕೆ ತುಬಿದ್ದು
ಗುರುವಾರ ದಿವಸ ಬಿಡುಗಡೆ ಮಾಡಿದುವರು.

ಾಯ.ಪೂರ ಜಿಲ್ಲೆಯಲ್ಲಿ ಗುಂಡು ಹಾರಿ ಒಬ್ಬನು
ು. ಮತ್ತಿವರು ಘಾಯವಾದರು. ಆ ಜಿ
ಲ್ಲಿ ಕೆಲವೆಡೆಯಲ್ಲಿ ತಾರಿನ ಕಂಬಗಳನ್ನು ಕಿ
ಕಿದ್ದಾರೆ.

ಧಾರವಾಡ

—ಂ—

ಇಲ್ಲಿಯ ತುಂಗಳವಾರಪೇಟೆಯ ಶ್ರೀ. ವೆಂಕ
ಟೇಶದೇವರ ರಥೋತ್ಸವವು ನಾಳಿನ ದಿವಸ ಪ್ರಾತಃ
ಕಾಲದ ಏಳು ಗಂಟೆಗೆ ಪ್ರಾರಂಭವಾಗುವದು. ಇ
ದಕ್ಕೆ ದಯಮಾಡಿಸಿದ ಶ್ರೀ. ಪುತ್ತಿಗೆಯ ಶ್ರೀಪಾದಂ
ಗಳವರು ದೇವರನ್ನು ರಥಾರೋಹಣ ಮಾಡಿಸುವರು.
ಉತ್ಸವಕ್ಕೆ ಎಲ್ಲ ಅಭಿಮಾನಿಗಳು ಬರಬೇಕೆಂದು ವ್ಯ
ವಸ್ಥಾಪಕರ ವಿನಂತಿ ಇರುತ್ತದೆ.

ಶ್ರೀ. ಜಠಾರ ಬಳವಂತರಾಯರ ಮಗನು
ಸುಖರೂಪವಾಗಿ ಮನೆಗೆ ಬಂದನೆಂದು ಬರಿಯುವದ
ಕ್ಕೆ ಸಂತೋಷವಾಗುತ್ತದೆ.

ದಿಲ್ಲಿಯಲ್ಲಿ ಒಬ್ಬಾ ಸಾಕುವಿನ ಹುಳಮತ್ತು ಪುಸ್ತಕವನ್ನು ಸಂಕಾರಿದವರು ಪ್ರೊಸ್ಕ್ರಾ ಮಾಡಿದರು.

ದಸರೆಯ ರಜೆ—

ಇಂದು ಖಂಡೇಪೂಜೆ ಮತ್ತು ನಾಳೆ ದಸರೆಯ ದೆಸೆಯಿಂದ ಎರಡು ದಿವಸ ಮುದ್ರಾಲಯಕ್ಕೆ

ನಿತ್ಯ ಪತ್ರ

ಸಂಪಾದಕರು:- ಅಣ್ಣಾ ಭಾಲಯ್ಯ ಹಾಳಾಪುರ

ವರ್ಷ ೧೧ ಧಾರವಾಡ ಬುಧವಾರ ತಾರೀಖು ೧೩ ನೇ ಅಕ್ಟೋ

ಹೊರಡಿರಿ! ಮೈಸೂರಿಗೆ ಹೊರಡಿರಿ!!

ಕರ್ನಾಟಕ ಚುಲಪುರೋಹಿತರಾದ

ಶ್ರೀ. ಆಲೂರ ವೆಂಕಟರಾಯರು

ಸಾಹಿತ್ಯ ಭಾಂಡಾರನನ್ನೊಡೆಸಲು!!!

ಈ ಸಾರಿ ಮೈಸೂರಲ್ಲಿ ನಾಳೆನ ಅಕ್ಟೋಬರ ೫ಕ್ಕೆ ನೆರವ ಕರ್ನಾಟಕ ಸಾಹಿತ್ಯಪರಿಷತ್ತಿನ ಅಧಿವೇಶನ ಶ್ರೀ. ಆಲೂರ ವೆಂಕಟರಾಯರ ಕೈಗೆ ಸೇರಿದುದು ಉತ್ತರ ಕರ್ನಾಟಕಕ್ಕೇ ಅಭಿಮಾನಾಸ್ಪದವಾದುದು. ಇಲ್ಲಿಯವರು ಇಂತಹ ಹೆಚ್ಚಳದ ಸಂಧಿಯನ್ನು ಕಳದುಕೊಳ್ಳಲಾಗದು. ಎಲ್ಲರೂ ತಂಡತಂಡವಾಗಿ ಮೈಸೂರಿಗೆ ಹೋಗಿ, ಶ್ರೀ. ವೆಂಕಟರಾಯರು ಸೂರೆ ಮಾಡುವ ಮುತ್ತುಗಳನ್ನು ಬಳಿದುಕೊಂಡು ಬರಬೇಕು. ಒಡಗಣನಾಡಿನ ಸಮಿಯಾದ ತಿಳಿಯಾದ ಇನಿದಾದ ಸಾಹಿತ್ಯಪ್ರವಾಹವನ್ನು ತೆಂಕಣಕ್ಕೆ ಹರಿಯಿಸಿರಿ; ಮೈಸೂರ ಬಂಧುಗಳನ್ನು ತಣಿಸಿರಿ. ಅಭಿಮಾನದ ಸೆಳವಿನಿಂದಲೂ ಹುರುಪಿನ ನಿನಾದದಿಂದಲೂ ಪಾಠ್ಯಯಪ್ರೇಮಿಗಳ ಜನಸಂದಣಿ ನಡುಗೆದಂದ ನಡೆಯಲಿ. ಏಳಿರೇ ಏಳಿರಿ: ಮೈಸೂರಿಗೆ ತೆರಳಿರಿ!!

ವಿಶೇಷ— ನಿಯೋಜಿತ ಅಧ್ಯಕ್ಷರಾದ ಶ್ರೀ. ಆಲೂರ ವೆಂಕಟರಾಯರು, ಕರ್ನಾಟಕದ ಹುಲಿ ಮುಂದವೀಡು ಕೃಷ್ಣರಾಯರು, ಗೆಳೆಯರ ಗುಂಪಿನವರು, ಕನ್ನಡಿಗರ ಕೂಟದವರು ಪರಿಷತ್ತಿಗಾಗಿ ಬರುವ ಅಕ್ಟೋಬರ ೩ ನೇ ತಾರೀಖಿನ ರಾತ್ರಿ ೨॥ ಗಂಟೆಯ ಬಂಡಿಯಿಂದ ಹೊರಡುವರು. ಪ್ರತಿಯೊಬ್ಬನಿಗೆ ಸುಮಾರು ೩೦ ರೂಪಾಯಿ ಹೆಚ್ಚು ಬರಬಹುದು. ಇಷ್ಟು ಹೆಚ್ಚದಲ್ಲಿ ಬೆಂಗಳೂರು, ಮೈಸೂರು, ಕನ್ನಂಬಾಡಿ, ಶ್ರೀರಂಗಪಟ್ಟಣ ನಂಜನಗೂಡು ಈ ಮೊದಲಾದ ನಗರಗಳನ್ನು ನೋಡಿ ಬರಲಿಕ್ಕಾಗುವದು. ಅದುದರಿಂದ ಬರಲಿಚ್ಛಿಸುವವರು ಇದೇ ತಿಂಗಳ ೩೦ ನೇ ತಾರೀಖಿನ ರಾತ್ರಿ ೮ ಗಂಟೆಯೊಳಗಾಗಿ ಶಾಂತೇಶವಾಚನಾಲಯದಲ್ಲಿ ಬಂದು ತಿಳಿಸಿದಲ್ಲಿ ಅವರ ಪ್ರವಾಸದ ಸೌಕರ್ಯವನ್ನು ಮಾಡಲಾಗುವದು.

ಧಾರವಾಡ ೨ ಹನುಮಂತ

ಧಾರವಾಡ
ಆಶ್ವಯುಜ ಶುಕ್ಲ ೫
ಶಾ. ವಿ. ಸ. ೧೫೫೫

ತಮ್ಮೊಲವಿನ
ಕನ್ನಡಿಗರ ಕೂಟದ ಆಡಳಿತಗಾರ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ನೆಹರೂಜಿಯ

ಒಬ್ಬನೇ ರಾವಣನ ವಧೆ.

—(೨)—

ವ್ಯಾಪಾರದ ನಿಮಿತ್ತ ಮೂಲಕ ಲಾಹೋರದ ಹಿಂದೂ ವ್ಯಾಪಾರಸ್ಥರು ದಸರೆಯ ಹಬ್ಬವನ್ನು ಮಾಡುವರು. ಪ್ರತಿ ವರ್ಷ ೧೨-೧೩ ದೊಡ್ಡ ದೊಡ್ಡ ಮೆರವಣಿಗೆ ತೆಗೆಯುವರು. ಸ್ವಸ್ಥಯೊಂದರಲ್ಲಿಯೂ ರಾವಣನನ್ನೊಂದು ಗೊಂಬೆ ಇರುವದು. ಸಾಯಂಕಾಲದಲ್ಲಿ ಇವನ್ನೆಲ್ಲ ಒಟ್ಟುಗೂಡಿಸಿ, ಸುಡುವರು. ನಾಳೆನ ದಿವಸ ರಾವಣನ ಒಂದೇ ಗೊಂಬೆ ಮಾಡಿ, ಮೆರೆಸಿದ ಶಾಸ್ತ್ರ ಮಾಡಿ, ಸುಡುವರು.

ವಿಲಾಯತಿಯ ಒಟ್ಟಿಗೆ ಒಹಿಷ್ಕಾರ.

—(೨)—

ಸಿಂಧದಲ್ಲಿರುವ ಸಕ್ಕರದ ನಗರದ ೧೮ ಜನ ಕಾಂಗ್ರೆಸದ ಮುಖಂಡರನ್ನು ಹಿಡಿದಿದ್ದರ ಮುಖ್ಯವೆಂದು ಆರಾಜಿಯ ವಾಪಾರಸ್ಥರು ವಿಲಾಯತಿಯ ಒಟ್ಟೆಯನ್ನು ಎಸ್ಟು ಪಾತ್ರಕ್ಕೂ ಮಾರತ್ಕಾದ್ದಲ್ಲಿಂದು ತರಾವು ಮಾಡಿದ್ದಾರೆ. ಒಂದಂದಲ್ಲಿರುವ ಈ ಅಲಕಾರರು ಇವುಗಳ ಗಂಟು, ಪೆಟ್ಟಿಗೆಗಳನ್ನು ಪಡಗಗಳ ಮೇಲೆ ಏರಿಸುವದನ್ನು ನೈಶೊಳ್ಳಬಕ್ಕದ್ದಲ್ಲೆಂದೂ ನಿರ್ಧರಿಸಿದ್ದಾರೆ.

ಮುಂಬಯಿಯಲ್ಲಿ ಕಾಂಗ್ರೆಸದವರ ಜಯ.

ಮುಂಬಯಿಯಲ್ಲಿ ಹೋದ ಆದಿತ್ಯವಾರದ ದಿವಸ ಕಾಂಗ್ರೆಸದವರು ರಾವುಂಡ ಟೇಬಲ ಪರಿಷತ್ತನ್ನು ನಿಷೇಧಿಸುವ ಪ್ರಚಂಡ ಮೆರವಣಿಗೆ ತೆಗದಿದ್ದರು. ಮೆರವಣಿಗೆಯಲ್ಲಿ ಸ್ತ್ರೀಪುರುಷರ ಸಂಖ್ಯೆಯು ಅಸಂಖ್ಯವಾಗಿತ್ತು. ದೊಂಬಣಿಗೆಯು ಪೋಲೀಸರು ಈ ಮೊದಲು ಪ್ರತಿಬಂಧ ಮಾಡಿ, ತಲೆಯಂಡೆಯುತ್ತಿದ್ದ ಬೀದಿಗಳಿಂದಲೇ ಕಿಲ್ಲೆಯಲ್ಲಿ ಹೋಗಿ, ಫ್ಲೋರಾಕಾರಂಜಿಯ ಚತ್ತರ, ಮಹಾತ್ಮರ ಜಯ ಜಯಕಾರದಲ್ಲಿ ವಿಸರ್ಜನೆ ಹೊಂದಿತು.

ಶ್ರೀಮಂತರ ಮನೆತನಗಳ ಐನೂರು ಹೆಣ್ಣುಮಕ್ಕಳು ತುರಂಗದ ರೊಟ್ಟೀ ಸುಟ್ಟರು.

—೦೫೦—

ಮುಂಬಯಿಯ ಖಾಂಭಾಗದಲ್ಲಿ ಈ ಮೊದಲು ಪ್ರಸಿದ್ಧವಾದಂತೆ ತುರಂಗದ ರೊಟ್ಟಿ ಮತ್ತು ಬೇಳೆಯ ಪ್ರೀತಿಭೋಜನವಾಯಿತು. ಐದು ಸಾವಿರ ಜನರು ಜಾತಿಭೇದವಿಲ್ಲದೆ ನಾಲಾಗಿ ಊಟ, ತುರಂಗದ ಊಟದ ರುಚಿ ನೋಡಿದರು. ದೊಡ್ಡ ದೊಡ್ಡ ಶ್ರೀಮಂತರ ಮನೆಯ ಐನೂರು ಹೆಣ್ಣುಮಕ್ಕಳೇ ರೊಟ್ಟಿ ಸುಟ್ಟರು. ಬೇಳೆ ಬೆಯಿಸಿದರು ಬೇ ಸೀಡಿದರು. ಅವರು ತಂತಮ್ಮ ಮನೆಯಿಂದ ಹಿಟ್ಟು, ಬೇಳೆ, ಪರಂತ, ಹಣ್ಣು, ಅಗ್ನಿಪ್ರಿಗೆ ಸಮಸ್ತ ಮುಂತಾದ್ದನ್ನು ವೈದು ಅಡಿಗೆ ಮಾಡಿದರು. ಕಾಂಗ್ರೆಸ ಕಮಿಟಿಯವರು ಇದ್ದಲಿಯನ್ನೆಲ್ಲ ಕೊಟ್ಟರು.

ಶ್ರೀ. ದೇಶಪಾಂಡೆ ಗಂಗಾಧರರಾಯರನ್ನು ಬೆಳಗಾವಿಯ ಹಿಂಡಲಗಿಯ ಜೂರಂಗಕ್ಕೆ ತಂದಿಟ್ಟು ಬರುವ ಗುರುವಾರ ದಿವಸ ವಿಚಾರಣೆ ಜರಿಗಿದೆ.

ರಾಯಪೂರ ಜಿಲ್ಲೆಯಲ್ಲಿ ಗುಂಡು ಹಾರಿ ಒಬ್ಬನು ಸತ್ತನು. ಮೂವರು ಘಾಯವಾದರು. ಆ ಜಿಲ್ಲೆಯಲ್ಲಿ ಕೆಲವೆಡೆಯಲ್ಲಿ ತಾರಿಣಿ ಕಂಬಿಗಳನ್ನು ಕಿತ್ತಿಹಾಕಿದ್ದಾರೆ.

ದಿಲ್ಲಿಯಲ್ಲಿ ಇಜ್ಜಾಸಾಕುವಿನ ಹುಳಮತ್ತು ಎಂಬ ಪುಸ್ತಕವನ್ನು ಸಂಕಾರದವರು ಪ್ರೊಸ್ಕ್ರಾಯಿಬ ಮಾಡಿದರು.

೧೨ನೇ ನವ್ಹಂಬರದ ಮೊದಲು ರಾವುಂಡ ಟೇಬಲ ನೇರಲಾರದು. ಆದ್ದರಿಂದ ಪ್ರತಿನಿಧಿಗಳು ೧೧ ಅಥವಾ ೧೮ನೇ ಅಕ್ಟೋಬರದ ಹಡಗದಿಂದ ಹೊರಡಬೇಕೆಂದು ಸರಕಾರದಿಂದ ಜಾಹೀರ ಮಾಡಲ್ಪಟ್ಟಿದೆ.

ಧಾರವಾಡ

ಇಲ್ಲಿಯ ಮುಂಗಳವಾರಪೇಟೆಯ ಶ್ರೀ. ವೆಂಕಟೇಶರಾವ ಇವರ ಮನೆಯ ದಸರೆ ಪ್ರಾತಃಕಾಲದ ವೇಳೆ ಗುರುವಿಗೆ ಪ್ರಾರಂಭವಾಗುವದು. ಇದಕ್ಕೆ ಬರುವಿಕೆಯಾಗಿರುವ ಶ್ರೀ. ಪುತ್ತಗಿಯ ಶ್ರೀಪಾದಂಗಳವರು ದೇವರನ್ನು ಎಚ್ಚರಿಸುವ ಮಾಡಿಸುವರು. ಆದ್ದರಿಂದ ಎಲ್ಲ ಅಭಿಮಾನಿಗಳು ಬರಬೇಕೆಂದು ವ್ಯವಸ್ಥಾಪಕರ ವಿನಂತಿ ಇರುತ್ತದೆ.

ಶ್ರೀ. ಬಿಡಾರ ಬಳವಂತರಾಯರ ಮಗನು ಸುಖರೂಪವಾಗಿ ಮನೆಗೆ ಬಂದನೆಂದು ಬರಿಯುವದಕ್ಕೆ ಸಂತೋಷವಾಗುತ್ತದೆ.

ದಸರೆಯ ರಜೆ—

ಇಂದು ಖಂಡೇಪೂಜೆ ಮತ್ತು ನಾಳೆ ದಸರೆಯ ದೆಸೆಯಿಂದ ಎರಡು ದಿವಸ ಮುದ್ರಾಲಯಕ್ಕೆ ರಜೆ ಇರುವದರಿಂದ ಗುರುವಾರ ಮತ್ತು ಶುಕ್ರವಾರದ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಅನೇಕ ಔಷಧಗಳನ್ನು ಸೇವಿಸಿ
ನಿರಾಶವಾಗಿರುವ ಭಗಿನಿಯರಿಗೆ ಅಮೃತ ಸಂಜೀವಿನಿ

ಮೆಗ್ನೆಟಿಕ್ ಬೆಲ್ಟ

ಅಂಪ್ಯ, ಅಜೀರ್ಣ, ಮಲಬದ್ಧತೆ, ಮೂತ್ರಾಶಯ ಮತ್ತು ಕಿಡ್ನಿ ಸಂಬಂಧದ ಬೇನೆಗಳು ಮುಂತಾದವುಗಳಿಗೆ ಅಮೃತ ಸಂಜೀವಿನಿ ಗುಣವಾಗುವುದು. ಇದನ್ನು ಕೇವಲ ಸ್ತ್ರೀಯರಿಗಲ್ಲದೆ ಪುರುಷರಿಗೂ ಉಪಯೋಗಿಸಬಹುದು. ಇದರ ಉಪಯೋಗದಿಂದ ಹಸಿವು ಹೆಚ್ಚಾಗುವುದು, ಮೈಯ ಕಾಂತಿ ಹೆಚ್ಚುವುದು, ಮೈಯ ಕಾಂತಿ ಹೆಚ್ಚುವುದು, ಮೈಯ ಕಾಂತಿ ಹೆಚ್ಚುವುದು.

ಬೆಲೆ—೧ ರೂಪಾಯಿ ಮಾತ್ರ
೧/೨ ಸುಧ್ಯಜ್ಯಾಂಬರ ಭಾರವಾಣಿ

ಮೇಲಿನ ಬೆಲೆ ಕೊಟ್ಟರೆ ಯಾರ ವರ್ತಮಾನಕ್ಕೆ ಅಪೇಕ್ಷಿಸಿ ಸಿಗುವ ಬಿಡಿಸಿದ್ದನ್ನು ಮೊದಲಿನಿಂದಲೂ ಕಳಿಸುವೆನು.

ವಿಜಯ

ನಿತ್ಯ ಪತ್ರಿಕೆ ಬೆಲೆ ಒಂದಣ್ಣೆ

ಕೀರ್ತಿ ಸಂಪಾದಕರು- ಅಣ್ಣಾ ಬಾಯಿ ಜಾಳಾಜಾಯಿ ಮೊಸಳೇರಿ. ಕೀರ್ತಿ

ವರ್ಷ ೧೧ ಧಾರವಾಡ ಬುಧವಾರ ತಾರೀಖು ೧೩ ನೇ ಅಕ್ಟೋಬರ ೧೯೩೦ (ಸಂಚಿಕೆ ೨೧೭

ಮೊದಲಿನಿಂದ ಮೈಸೂರಿಗೆ ಹೊರಡಿರಿ!

ಕರ್ನಾಟಕ ಯುವಪ್ರೇಕ್ಷಕರಾದ

ಶ್ರೀ. ಅಲಿಯವರ ಬೆಂಕಿಪೆಟ್ಟಿಗೆಯವರು

ಮಹಿಳಾ ಧಾರವಾಡಕ್ಕೆ ಹೊಡೆದ !!!

[illegible]

ಕರ್ನಾಟಕ ಯುವಪ್ರೇಕ್ಷಕರಾದ ಶ್ರೀ. ಅಲಿಯವರ ಬೆಂಕಿಪೆಟ್ಟಿಗೆಯವರು ಅಕ್ಟೋ [illegible] ಮೈಸೂರಿಗೆ ಹೊರಟ ಶ್ರೀ. ಮೊಹಿಯುದ್ದೀನ ಸಾಹೆಬ ಮದುವ [illegible] ಬಾಯಿ ಹೊಂಡು ಬರಹೇಳಿ. [illegible] ಹಿನ್ನೆ, [illegible] ಕೆಂಗಾಳ್ಳ ಪರಿಯಿಂದ, ಸ್ವಸ್ಥರ ಬಂಧುಗಳನ್ನು ತಿಳಿಸಿರಿ. ಅಭಿ [illegible] ಮಮತೆಯ ನಿಮಿತ್ತದಿಂದಲೂ ಕಾಪ್ಟ್ [illegible] ಜಯ [illegible] ಸದಗರದಿಂದ ಸಮಯಾ [illegible] ಮೈಸೂರಿಗೆ ಹೊರಿರಿ!!

[illegible]

ಧಾರವಾಡ
ಅನ್ನಯಾಣ [illegible]
ಬಾ. ವಿ. ವ. [illegible]

ತಮ್ಮೊಲಿಸಿ
ಕನ್ನಡಿಗರ ಕೂಟದ ಉದಯಕೆಗಾರ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ [illegible] ಮತ್ತು ಶ್ರೀಮತಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಚೌಕಟ್ಟಿನಲ್ಲಿ ಹಾಕಿ ಇಡಲು ಒರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಗಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣಿ ಹೋಲ ಬೆಳ್ಳಿಯವರಿಗೆ ನೋಡ್ಕೆ ಧರಪೂರ ಕಮೀಶನ ದೊರೆಯುವದು.

ಜಿ. ಪ್ಲಿ- ನವರತ್ನ,
ಶ್ರೀ. ಅಕ್ಷೀವೆಂಕಟೇಶ ಸ್ಟೋರ್ಸ್‌ವ ಮಾರ್ಕೆಟ ರೋಡ, ಧಾರವಾಡ

ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಾರ್ಚ ೩೧ ರ ಹೇಟ ಧಾರವಾಡ.

ಕೋ- ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಗಿ ಸರ್ಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕೆಳಗಿನ ವಿಳಾಸದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೀಪ್ರಕಾರ ಸಾಗಿದೆ.

ಕೋಟಿಗಳು ಎಂಟು ಲಕ್ಷದ ಮೇಲಾಂಟು. ಬೆಳ [illegible] ಮೊದಲಾಗಿ ಬ್ಯಾಂಕಿನ ಎಲ್ಲ ವ್ಯಾಪಾರ ವ್ಯವಹಾರ [illegible] ಮಾಡಲ್ಪಡುವದು. [illegible] ಮತ್ತು ಬೇರೆ ಬೆಲೆ [illegible] ಕೊಡಲ್ಪಡುವದು.

[illegible] ಸಂಗತಿಗಳನ್ನು ಕೆಳಗೆ ನೋಡಿ ಪಾಲಿಸಬೇಕು ಮತ್ತು ತಿಳಿಸಿರಬೇಕು.

ಮಾಧ್ಯಮಾಪ ಜಿ. ಜಕಾಲಿ,
ಮ್ಯಾನೆಜಿಂಗ ಡಾಯರೆಕ್ಟರ

ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕನಲ್ಲಿ ಮುಂದು ನಾಲ್ಕು ಆಯಿ [illegible] ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಹಾಗೂ [illegible] ಬೇಕು.

ಈ ಬ್ಯಾಂಕಿನಲ್ಲಿ ಮಾಗೀಸೆಗಳನ್ನು ಪತ್ತಿ ಇಟ್ಟುಕೊಳ್ಳುವ ಒಂದಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿರಿ.

ಮ್ಯಾನೆಜರ ವಿಜಯ ಧಾರವಾಡ

ವಿಜಯ.

ಶಾಲಿವಾಹನ ವಿಕ್ರಮ ವರ್ಷಾಯಣ ಆಶ್ವೀಜ ಶುದ್ಧ ೯

ಸಪವೇಲಬಲ್ಲಾಟ ಘೋರ ಅನರ್ಥವು.

ಪನವೇಲದಲ್ಲಾದಂಥ ಘೋರ ಅನರ್ಥವು ಕಾಯಗೆಭಂಗದ ಜಳಪಳಿಯ ದ್ವಾರಂಭದಿಂದೆಲ್ಲಿಯೂ ಜರಗಲಿಲ್ಲ. ಸೊಲ್ಲಾಪೂರಕ್ಕಿಂತ ಹೆಚ್ಚು ಭಯಂಕರ ಮತ್ತು ಹೃದಯಸ್ಪರ್ಶಕವಾಯಿತು. ಸೊಲ್ಲಾಪೂರದಲ್ಲಿ ಮೊದಲು ಪೋಲಿಸರು ಸುಡಿಸಿಕೊಂಡು ಸತ್ತರು. ಒಳಿಕ ಗುಂಡು ಹಾರಿದವು. ಪನವೇಲದಲ್ಲಿ ಮೊದಲನೇ ಏಟಿಗೆ ಯಾರಿಗೂ ತಿಳಿಯದೆ, ಮ್ಯಾಜಿಸ್ಟ್ರೇಟರ ಅಪ್ಪಣೆ ಇಲ್ಲದೆ, ಮ್ಯಾಜಿಸ್ಟ್ರೇಟರೇ ಗುಂಡು ಬಡಿಸಿಕೊಂಡು ಸತ್ತು ಬಿದ್ದರು. ಮ್ಯಾಜಿಸ್ಟ್ರೇಟರಾದ ಮಿ. ಜೋಶಿಯವರು ಉದ್ದಾಮರಾಗಿರಲಿಲ್ಲ. ಲೋಕಪ್ರಿಯರಾಗಿದ್ದರು. ಹತ್ತು ಮಕ್ಕಳ ತಂದೆ. ಸತ್ಯಾಗ್ರಹಿಗಳನ್ನು ಶಕ್ಯವಾದಷ್ಟು ಉಂಸಿಸಬೇಕು; ಅಥವಾ ಜನರಲ್ಲಿ ಅಂಜಿಕೆಯನ್ನು ಹುಟ್ಟಿಸಬೇಕೆಂದು ಪೋಲಿಸರು ಹಾಕಿದ ಬೇಡಿಗಳನ್ನು ಸಹ ತೆಗೆಸಿದಂಥ ಪುಣ್ಯಾತ್ಮರೇ ಪೋಲಿಸರ ಗುಂಡಿನಬಾಯಿಗೆ ಸೊಡಲನೇ ತುತ್ತಾಗಿ ಬಿದ್ದದ್ದು ಅತ್ಯಂತ ವಿಷಾದಕರವಾಯಿತು. ಇವರಂತೆ ಫಾರೆಸ್ಟ ಆಫೀಸರ, ಗಾರ್ಡ, ಪೋಲಿಸಸಿಪಾಯಿರ ಮರಣವೂ ವ್ಯಸನವನ್ನುಂಟುಮಾಡುವದಾಯಿತು. ಇದೆಲ್ಲ ಅನರ್ಥಕ್ಕೆ ಯಾರು ಜವಾಬದಾರರೆಂಬ ಪ್ರಶ್ನೆವು ಸಹಜವಾಗಿ ಹೊರಡುತ್ತದೆ. ದಂಗೆಯಲ್ಲಿ ಗುಂಡು ಹಾಕಿರೆಂದು ಹೇಳುವ ಅಧಿಕಾರವು ಮ್ಯಾಜಿಸ್ಟ್ರೇಟರ ಗುಂಟು. ಅವರು ಸ್ವತಃ ಅಲ್ಲಿದ್ದರು. ಹುಕುಮು ಕೊಡಲಿಲ್ಲ. ಪೋಲಿಸ ಇನ್ಸಪೇಕ್ಟರರು ಹಾಜರಿದ್ದರು. ಗುಂಡು ಹಾಕಲಿಕ್ಕೆ ತಾವು ಹುಕುಮು ಮಾಡಲಿಲ್ಲೆಂದು ಇವರು ಹೇಳುತ್ತಾರೆ. ಕಾಂಗ್ರೆಸದವರ ಆಕ್ರಮ ಹೊಂದಿ, ಗಾಂಧೀ ಟೊಪ್ಪಿಗೆ ಹಾಕಿ ಖಾದೀ ಅಂಗೀ ತೊಟ್ಟುಕೊಂಡು ತಾವು ಪಾರಾಗಬೇಕಾದರೇ ಸಾಕಾಗಿ ಹೋಯಿತು. ಸರಕಾರದವರು ಕಾಂಗ್ರೆಸದವರು ಈ ಪ್ರಕಾರ ಪೋಲಿಸರಿಗೆ ಜೀವದಾನಕೊಟ್ಟದ್ದರ ಉಪಕಾರವನ್ನು ತಿಸುವಾದರೂ ಸ್ಮರಿಸುವರೆಂದು ತಿಳಿಯುತ್ತೇವೆ.

ಗುಂಡಿನಿಂದ ಸತ್ತಂಥ ಸರಕಾರೀ ಅಮಲದಾರರ ಮನೆತನದವರಿಗೆ ಸಂಸ್ಕಾರವು ಪೆನಶನ ಮಾಡಿಕೊಡುವದು. ಇದೇ ಪ್ರಕಾರ ಅನ್ಯಾಯವಾಗಿ ಸತ್ತಂಥ ಜಂಗಲ ಸತ್ಯಾಗ್ರಹಿಗಳಲ್ಲಿ ಸತ್ತ ಕುಟುಂಬದವರಿಗೂ, ಗುಂಡಿನಿಂದ ಸಾಯುವತನಕ ಅಂಗವ್ಯಂಗವಾಗುವ ಜನರಿಗೂ ಪೋಟಗಿ ಕೊಡುವದು ಅವಶ್ಯವಾದದ್ದು. ಇದು ಮಾತ್ರವಲ್ಲದೆ, ಸಂಸ್ಕಾರದವರು ಈ ಅನಾಹುತದ ವಿಚಾರವನ್ನು ಮಂಜರ ವಿದ್ಯಮಾನಮಾಡಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಲಿಕ್ಕೆ ಬೇಕು. ಸಕ್ಕರದಂತೆ ಅವನ್ನು ಪಾರಮಾಡಕಕ್ಕದ್ದಲ್ಲ. ಏಕಂದರೆ- ಗುಂಡು ಹಾರಿಸಿದವರು ಪೋಲಿಸರು; ಪೋಲಿಸರ ಎಲ್ಲ ಕಾದತಿಸುಗಳೂ ತೀರಿ ಹೋಗಿವೆ. ಯಾರು ಆರೋಪಿಗಳೆಂದು ಗೊತ್ತಾಗಲಿಕ್ಕೆ ಯಾವ ಅಡ್ಡಿಯೂ ಉಂಟಾಗ ವದಿಲ್ಲ. ಪೋಲಿಸರ ಸ್ವೇಚ್ಛಾಚಾರಕ್ಕೆ ಬಿರೇ ಹಾಕಿದಿದ್ದರೆ- ಸರಕಾರೀ ಕಾಮದಾರರೇ ಸತ್ತು ಧಮಂಕರ ಅನರ್ಥವೇಳದಿರ ಅಲಾರದು.

ರಾ. ಬ. ಕಂಬಳಿಯವರು ದಿವಾನರಾಗುವರೇ?

ರಾ. ಬ. ಕಂಬಳಿಯವರಿಗೆ ಇತ್ತ ದಿವಾನಗಿರಿಯ ಆಶೆ, ಅತ್ತ ರಾಷ್ಟ್ರಪತಿ ಟೇಬಲದ ಆಶೆ. ಹೀಗೆ ಅವರ ಮನಸ್ಸು ಹೊಯ್ದಾಡುವಂಥ ಸಮಯವಾಗಿದೆ. ದಿವಾನ ಜಾಧವರಾಯರು ಮುಂಬಯಿ ಕೌನ್ಸಿಲ ಬಿಟ್ಟು. ಅಸೆಂಬ್ಲಿಯ ಮೆಂಬರರಾದ್ದರಿಂದ ಮುಂಬಯಿ ಇಲಾಖೆಯ ಬ್ರಾಹ್ಮಣೇತರರಲ್ಲಿ ಇವರೇ ಸೀನಿಯರರಾಗುತ್ತಾರೆ. ಇವರ ಸಂಖ್ಯೆಯು ೧೬ ಇರುತ್ತದೆಂದು ಹೇಳುವರು. ಈ ಸಂಖ್ಯಾಬಲದಿಂದ ರಾ. ಬ. ರವರು ದಿವಾನರಾಗುವ ಸಂಭವವು ಹಿಂದಿನ ಸಾರೆಗಿಂತ ಈ ಸಾರೆ ಹೆಚ್ಚಾಗಿದೆ. ದಿವಾನರಾದ ಕೂಡಲ ಸರಕಾರೀ ಕಾಮದಾರರಾಗಿ, ರಾಷ್ಟ್ರಪತಿ ಟೇಬಲದ ಪ್ರತಿನಿಧಿಯಾಗಲಿಕ್ಕೆ ಬರುವದಿಲ್ಲ. ಆದ್ದರಿಂದ, ಇವರು ಎರಡರಲ್ಲೊಂದನ್ನು ಆದರಿಸಬೇಕಾಗಿದೆ. ರಾಷ್ಟ್ರಪತಿ ಟೇಬಲವು ಮೂರು ದಿವಸದ್ದಾಗಿದ್ದರೂ, ಮೂರು ತಿಂಗಳದ್ದಾಗುವದು. ಅಲ್ಲಿಗೆ ಆ ಕೃತ್ಯ ಮುಗಿಯುವದು. ದಿವಾನಗಿರಿಯ ಮಾತು ಹಾಗಲ್ಲ. ಮೂರು ವರ್ಷದ್ದು, ಸಂಬಳ ದೊಡ್ಡದು. ಅಧಿಕಾರ ದೊಡ್ಡದು. ಹೋದ ಹೋದಲ್ಲಿ ಮಾನಪತ್ರ ಮತ್ತು ಬೇರೆ ಮಾನಪಾನಗಳಿಗೆ ಕೊರತೆಯಾಗದು. ರಾ. ಬ. ರವರು ಕರ್ನಾಟಕದ ಹೆಸರಿನಿಂದ ಆಮಂತ್ರಣ ಹೊಂದಿದ್ದರೂ, ಬ್ರಾಹ್ಮಣೇತರರ ಪ್ರತಿನಿಧಿಗಳೆಂದೂ ನಿತ್ಯ ಬಂದಿದೆ. ಸರಕಾರದವರು ದಿವಾನ ಜಾಧವರಾಯರಿಗೆ ಹೊಸದಾಗಿ ಆಮಂತ್ರಣ ಕೊಟ್ಟದ್ದರಿಂದ, ರಾ. ಬ ರವರು ಏಲಾಯತಿಗೆ ಹೋಗುವದನ್ನು ರಹಿತಪಡಿಸಿ, ಮಂತ್ರಿಯಾಗಬಹುದೆಂದು ಬಹು ಜನರ ತರ್ಕವದೆ. ದಿವಾನಗಿರಿಯ ಮೂರು ಸ್ಥಳಗಳ ದೆಸೆಯಿಂದ ೨೫ ಜನರು ಉಮೇದವಾರರಾಗಿ ಗವರ್ನರಸಾಹೇಬರ ದರ್ಶನಕ್ಕೆ ಸಿದ್ಧರಾಗಿ ಪುಣೆಯ ಸಾರಿಗೆ ಸಜ್ಜಿದ್ದಾರೆ.

ಸಾಮದಾರ ಗವರ್ನರಸಾಹೇಬರು ಚಾಣಕ್ಯಕುಲದ ಹೆಸರಿನಂತೆ ಜಾಣರೆಂದ್ದರಿಗೆ ದಿವಾನಗಿರಿ ಕೊಡದೆ. ಈಗಿನ ಹುಟ್ಟುವಳಿಗೆ ಒಂದು ಹಾಲ ಮಸ್ಕ ತುಂಬಿ ಕೊಡಲು ಸಮರ್ಥವಾಗುವಂಥ ಸ್ಥಳದ್ದರ ಸಂಯುಕ್ತ ಮಂಡಳಕ್ಕೆ ದಿವಾನಗಿರಿ ಕೊಡಬೇಕೆಂದಿದ್ದಾರೆಂದು ನಿನ್ನೆ ಸಾಯಂಕಾಲದಲ್ಲಿ ಒಂದು ವರ್ತಮಾನವಾಗಿದೆ.

ಪಾಳ್ಪಟೆ ಮುಯಾಲುಗೋಳಿಗೆ ಶಿಕ್ಷೆ ಮತ್ತು ದಂಡ

ಗದಗಿನ ನಿವಾಸಿದ್ದ ಪಾಳ್ಪರವಾದ ಶ್ರೀ ಮಿ ಇಟರಾವ ಹುಯಿ ಅಗೋಳ ಇವರು ಗಾಂಧೀ ಅಲಮನ್ನು ಮುರಿದ ಸಂಗತಿಯನ್ನು ಈ ಕೆಳಗಿನ ಸಜಾಯದಲ್ಲಿ ಬರೆದಿದ್ದೇವೆ. ಇವರಿಗೆ ದಿನಾಂಕ ೩ ತಾರೀಖು ೨೦ ಸೇ ಸಪ್ಟಂಬರ ದಿವಸ ಸುಬ್ಬಯ್ಯ ಮಾಮಲೇದಾರರಾದ ಬಿಳಿಯರವರೇ ಕಂಬಳಿಯವರ ಮುಂದೆ ಪಾಲರಾಗಬೇಕೆಂದು ಹೇಳಿ ಹೋಯಿತು. ಅಮೇರೆಗೆ ಅವರು ಸಂಜೆಯಾದ ದಿವಸ ೧೧॥ ಯ ಸಮಯಕ್ಕೆ ಕಚೇರಿಗೆ ಹೋದ ದ್ದೊಂದೇ ಸಲ. ರಾವಸಾಹೇಬರು ಮಾತಿಗೆ ಪ್ರಾರಂಭಿಸಿದರು. ಗಳಿಗೆ ಕಲಮು ಮುರಿದ ವಿಷಯ ಮೇಲೆ ಮಾಡಿದ ಪ್ರಶ್ನೆಗಳ್ಕೆ ಪಾಳ್ಪರವು ಹಾಗೆಂದು ಉತ್ತರವಿತ್ತರು. ರಾವಸಾಹೇಬರು ಇದೊಂದು ಕಬೂಲಿ ಜವಾಬು ಸರಿಯೆಂದು ತೀರ್ಪು ಬರೆದು, ಐದು ವಾರಗಳ ಸಾದಾ ಕೈದು, ಇನ್ನೂರು ರೂಪಾಯಿ ದಂಡದ ಶಿಕ್ಷೆ ವಿಧಿಸಿದರು. ತೀರ್ಪು ಹೇಳಿದ ಕೂಡಲೆ ಪೋಲಿಸರು ಇವರನ್ನು ಪೋಟರಿನಲ್ಲಿ ಕೂಡಿಸಿಕೊಂಡು, ಸ್ಟೇಶನಕ್ಕೆ ಹೋಗಿ ಮೇಲಿನಿಂದ ಬೆಳಗಾವಿಗೆ ಕರಕೊಂಡು ಹೋದರು.

ಮುಸಲಮಾನರ ಹೆಣ್ಣುಮಗಳು
ರಾಷ್ಟ್ರೀಯ ನಿಶಾನ ಏರಿಸಿದಳು.

—(o)—

ಬೆಳ್ಳಿಯ ಶ್ರೀ ಸಾ॥ ಅಲಿಯಾಬೇಗಮಸಾಹೆಬರು ಪಕ್ಷಾರವರವಾಜ ಎಂಬ ಅಗಸೀ ಬಾಗಿಲದ ಮೇಲೆ ರಾಷ್ಟ್ರೀಯ ನಿಶಾನೆ ಏರಿಸುವ ಮಹೋತ್ಸವ ಮಾಡಿದಳು. ಈ ಸಮಾರಂಭದಲ್ಲಿ ಮುಸಲ್ಮಾನರೇ ಹೆಚ್ಚಾಗಿದ್ದರು.

ಶ್ರೀ. ಹೊಸಮನಿ ಪರಮಣ್ಣನವ ಪತ್ರಗಿರಿ

—(೦)—

ಡಾಕ್ಟರ ಮಾಡಿ ಲಗೋಳಿದವರಂತೆ ಹಾವೇರಿಯಲ್ಲಿ ಹೊಸಮನಿಯ ಶ್ರೀ ಪರಮಣ್ಣನವರ ಮೇಲೆ ೧೧ಳಿಳ ತಲಮೆ ಬಲಿದೆ, ೧೧ಜಿಸಾಲಿಸಿದ ಅಪೋಪವಿದ್ದು, ಅವರನ್ನು ಹಾವೇರಿಯಲ್ಲಿ ಸೋವ ಪಾರ ಹಿಡಿದು, ಧಾರವಾಡಕ್ಕೆ ತಂದು, ಮುಂದ ಬೆಳಗಾವಿಗೆ ಕಳಿಸೋಂಡು ಹೋದರು. ಇದರ ಮೇಲಿನ ಈಗಿನ ಅಪೋಪವು ಬೆಳಗಾವ ಜಿಲ್ಲೆಯಲ್ಲಿ ಭಾಷಣ ಮಾಡಿದ್ದಕ್ಕೆದ್ದು, ವಿಚಾರಣೆಯ ಮೇಲೆ ಶೇಷಾಚಾರಿಯವರ ಮುಂದ ನಡೆಯುತ್ತಿದ್ದಿದ.

ಪುನಃ ಉಪ್ಪಿನ ಕಾಯುದೆಂಘದದ ಪ್ರಾರಂಭ.

—(೦)—

ಗುಜರಾಥದ ಧಂಗಾಸಾಹಾರಾಳ್ಳಿ ಉಪ್ಪಿನ ಕಾಯುದೆಭಂಗ ಪ್ರಾರಂಭ ಮಾಡಬೇಕೆಂದು ನಿರ್ಧರವನ್ನೇಕೆ ರಹಿತಪಡಿಸಿದರೆಂಬದನ್ನು ಈ ಮೊದಲು ಒದಿದ್ದೇವೆ. ಅಹಮದಾಬಾದ ಮತ್ತು ಸುರತಬಿಲ್ಲೆಗಳವರು ಸಂಕಾರೀಹಜ್ಜೆ ತೊಡಗಲಾರದೆಂದು ಗೈರಜ್ಜಿ ಜಾಗ್ರತಿಯನ್ನುಂಟುಮಾಡುವದಕ್ಕಾಗಿಯೇ ಧಂಗಾಸಾಸದ ಕಾಯುದೆಭಂಗವು ಪ್ರಾರಂಭದಲ್ಲಿಡಪಟ್ಟಿದೆಂದು ಹೇಳಿದ್ದಾರೆ. ಇದರ ತರುವಾಯ ಕಾಯುದೆಭಂಗದ ಎರಡನೇ ಲಾಭ್ಯಕ್ಕೆತ್ರವಾದ ವಡಾಲಾದಲ್ಲಿ ಕಾಯುದೆಭಂಗ ಪ್ರಾರಂಭಿಸಿ, ಸ್ವೀಕರಿಸಿಕೊಂಡು ಉದ್ಯೋಗ ಮಾಡಬೇಕೆಂದಿದ್ದಾರೆ. ಗುಜರಾಥದಂತೆ ಮೆಂಗುಲೆ ತಾಲೂಕಿನಲ್ಲಿ ಗೋಳೆದು ಸೀಮೆಗೆ ಹತ್ತಿರುವ ಶಿರೋಡದಲ್ಲಿ ದಸರೆಯ ಮೂರುದಿವಸದ ಮುಹೂರ್ತದಲ್ಲಿ ಕಾಯುದೆಭಂಗ ಪ್ರಾರಂಭಿಸುವರು ಮುಂಬಯಿಯ ಪ್ರಸಿದ್ಧ ವಕೀಲರಾದ ಶ್ರೀ ಜಮನಾಭಾಯ ದೇಸಾಯಿಯವರು ಇದರ ಧುರೀಣತ್ವವನ್ನು ಸ್ವೀಕರಿಸುವರು. ಗುಜರಾಥ ಮತ್ತು ಮಹಾರಾಷ್ಟ್ರದಿಂತೆ ಅಂಕೋಲೆಯಲ್ಲಿಯೂ ಕಾಯುದೆಭಂಗವಾಗತಕ್ಕದ್ದು. ಕಾರವಾರ ಜಿಲ್ಲೆಯವರು ಜಂಗಲ ಕಾಯುದೆಭಂಗದಲ್ಲಿ ತೊಡಗಿದ್ದರಿಂದ, ಸದ್ಯ ಅಂಕೋಲೆಯ ವಿಚಾರವನ್ನು ರಹಿತಪಡಿಸುವರು.

ಸ್ತ್ರೀಯರ ಸತ್ಯಾಗ್ರಹ.

ಅಮೃತಸರದಲ್ಲಿರುವ ಶ್ರೀಖರ ಬಂಗಾರದ ದೇವಾಲಯದಲ್ಲಿ ಪರದೇಶೀ ಅರಿವೆ ಹಾಕಿದವನ್ನು ಒಳಗೆ ಬಿಡದಂತೆ ಸ್ತ್ರೀಯರು ಧರ್ಣಟಿಂಗ ನಡೆಸುವರು.

ವನಚರಾಯಿಯ ಬಗ್ಗೆ ಶಿರ್ಸಿ ಮಾಮಲೇದಾರರ ಸರಕ್ಯೂಲರ್.

ಸರಕಾರದ ಅಡವಿಗಳಲ್ಲಿ ಮಲಬನ್ನಿಯ ಫೀ ಕೊಟ್ಟು, ದನಗಳನ್ನು ಮೇಯಿಸುವ ಮುದ್ದತು ಇಂದಿಗೇ ಮುಗಿಯುತ್ತದೆ ಈ ನಂತರ ಜನರು ಫೀ ಕೊಡದೆ, ದನಗಳನ್ನು ಅಡವಿಗೆ ತಕ್ಕೊಂಡು ಹೋಗುವಂಥವರ ಪೆಸರುಗಳನ್ನು ಬರೆದು, ತಮಗೆ ತಿಳಿಸಬೇಕೆಂದು, ಶಿರ್ಸಿಯ ಪಣವ ಲೇದಾರರು ಒಂದು ಸರಕ್ಯೂಲರ ಹೆಗೆದು, ಅದನ್ನು ಗ್ರಾಮ ಸ್ಥರ ಕಡೆಗೆ ಕಳಿಸಿದ್ದಾರೆ. ಶೈಕರು ಸರಕ್ಯೂಲರದ ವಿರುದ್ಧ ದನಗಳನ್ನು ಅಡವಿಗೆ ಬೈಸುವ ಕಾಯದೆಭಂಗ ಮಾಡುವರು. ಆಗ ಸರಕಾರೀ ಅಮಲದಾರರೂ, ಪೋಲಿಸರೂ, ದನಗಳ ಅದವಾ ರೈತರ ಜಂಗಮ ಆಸ್ತಿಯ ಜಪ್ತಿಗೆ ಬಂದರೆ. ಸ್ವಯಂಸೇವಕರು ಬ್ಯಾಗಿಲು, ಕಿಟಕಿ ಹಿಡಿದು, ಜನರನ್ನು ಎಚ್ಚರಿಸುವಂತೆ ಬಾಡಹೋಲಿಯ ಪದ್ಧತಿಯನ್ನು ಅನುಸರಿಸುವ ಏರ್ಪಾಟು ಮಾಡಿದ್ದಾರೆ.

ಹುಲಿಯ ಹೊಟ್ಟೆಯಿಂದ ಹುಲಿಯೇ ಹುಟ್ಟಿದಂತಾಯಿತು.

—(೦)—

ಮುಂಬಯಿಯ ಯುದ್ಧಮಂಡಲದ ಅಧ್ಯಕ್ಷರಾಗಿ ಶುರಂಗದಾಸಿಯಾದ ಶ್ರೀ. ರಮಾಬಾಯಿ ಕಾಮ ವಾರರು ಇನ್ನೂ ಪೋಲಿಸ ಲಾಕಪ್ಪಿನಲ್ಲಿರುವಾಗ ಅವರ ಚಿರಂಜೀವನಾದ ಶ್ರೀ. ಭಗವಾನದಾಸನು ತಾಯಿಯನ್ನು ಕಾಣಲಿಕ್ಕೆ ಬಂದನು. ತಂದೆ ತಾಯಿಗಳಿಬ್ಬರೂ ಕಟಕಾಂಜನವಲ್ಲಿದ್ದನ್ನು ಕಂಡು, ಮನ ಕಾಗಿದನು. ತಂದೆಯೂ ವಕೀಲಿ ಬಿಟ್ಟು, ದೇಶಸೇವಾನಿರತನಾಗಿದ್ದಾನೆ. ತಂದೆ ತಾಯಿಗಳಿಬ್ಬರೂ ದೇಶಸೇವಾನಿರತರಾಗಿದ್ದಾಗ, ತಾನು ಪರದಾಸ್ಯಶೇವೆ ಮಾಡುವದು ಅನುಚಿತವೆಂದು ಭಾವಿಸಿದನೇ ಅಲ್ಲದೇ ಇದ್ದ ಕೆಲಸದ ತಕ್ಕೊಂಡು ರಾಜೀನಾಮೆ ಗೀಚಿ ಹಾಕಿದನು. ಉತ್ತಮ ಹುರುಳ ಬುದ್ಧಿಯವನು. ಇಂಜಿನಿಯರ ಪರೀಕ್ಷೆಯಲ್ಲಿ ಹಿಂದನೆಯ ದರ್ಜೆದಲ್ಲಿ ಪಾಸಾಗಿ, ನಾಸಿಕದಲ್ಲಿ ಸಬ್ಬ ಡಿವಿಜನಲ ಇನ್ಸ್‌ಪೆಕ್ಟರನಾಗಿದ್ದನು. ಇಂಜೀನಿಯರಿಯಲ ಸರ್ವೀಸದಲ್ಲಿ ಸೇರಿದವನು. ದೊಡ್ಡ ಅಧಿಕಾರಿಯಾಗುವಂಥವನು. ರಾಜಶೇವೆಗಿಂತ ದೇಶಶೇವೆಯೇ ಹೆಚ್ಚಿನದೆಂದು ಭಾವಿಸಿ, ರಾಜೀನಾಮೆ ಕೊಟ್ಟನು.

ಸೊಲ್ಲಾಪುರದಲ್ಲಿ ನಡೆದಿರುವ ವಿಚಾರಣೆಯಲ್ಲಿ ಅರೋಪಿಗಳಿಗೆ ಜಾಮೀನು ಅಗತಕ್ಕವರಿಗೆ ಜಾಮೀನಾಗದಂತೆ ಜನರನ್ನು ಪೋಲಿಸರು ಹಿಂಸಿಸುತ್ತಾರೆಂದು ಕೇಳಿ, ೨೦ ಜನ ಆರೋಪಿಗಳು ಶುರಂಗದಲ್ಲಿ ಅಸ್ಪತ್ಯಾಗ ಮಾಡಿದ್ದರು. ಮುಸಲಮಾನರ ಮೇಳೆಯಿಂದ ಅನ್ನ ತಕ್ಕೊಳ್ಳಲಾರಂಭಿಸಿದ್ದಾರೆ.

ಮಹಾಹಾತಿನ ಸ್ವರಾಜ್ಯ; ಸ್ವತಂತ್ರ ಸ್ವರಾಜ್ಯ.

—(೦)—

ಹಿಂದುಸ್ಥಾನಕ್ಕೆ ಮಹಾಹಾತಿನ ಸ್ವರಾಜ್ಯ ಬೇಕೇ? ಸಂಪೂರ್ಣ ಸ್ವಾತಂತ್ರ್ಯದ ಸ್ವರಾಜ್ಯ ಬೇಕೇ? ಎಂಬ ವಿಷಯವು ಸಿಂಧ ಪ್ರೆಸಿಡೆನ್ಸಿಯ ಕಾಲೇಜದ ವಿದ್ಯಾರ್ಥಿಗಳ ವಾದವಿವಾದ ಕಮೀಟಿಯಲ್ಲಿ ಚರ್ಚೆಗೆ ಬಂತು. ಹಾಯಕೋರ್ಟಿನ ಜಡ್ಜರು ಅಧ್ಯಕ್ಷರಾಗಿದ್ದರು. ವಿದ್ಯಾರ್ಥಿಗಳು ಸ್ವರಾಜ್ಯ ಸ್ವಾತಂತ್ರ್ಯ ಬೇಕೆಂದು ಭಾಷಣ ಮಾಡಲಾರಂಭಿಸಿದ ಕೂಡಲೆ, ಜಡ್ಜಸಾಹೇಬರು ಸಭೆಯಿಂದ ಎದ್ದೇ ಹೋದರು. ನಾವು ನಮ್ಮ ವಿದ್ಯಾರ್ಥಿಸ್ನೇಹಿತರು, ಜಡ್ಜರ ವಿರುದ್ಧ ಪ್ರಿನ್ಸಿಪಾಲರ ಕಡೆಗೆ ಅರ್ಜಿಯನ್ನು ಮಾಡಲು- ಪ್ರಿನ್ಸಿಪಾಲರು ಈ ವಿಷಯದ ಬಗ್ಗೆ ವಿಚಾರ ಪುನಃ ನಡೆಯಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ.

ಶರೆಯ ದೊಡ್ಡ ಕಂಪನಿಯ ಸತ್ಯಾಗ್ರಹಕ್ಕೆ ಸೋತಿತು

—(೦)—

ಕರಾಚಿಯಲ್ಲಿ ಉಘೇಮಲ ರಾಗುಡಂಡ ಎಂಬ ಕಂಪನಿಯುಂಟು. ಇದು ಶರೆಯ ದೊಡ್ಡ ವ್ಯಾಪಾರ ಮಾಡುವದು. ಸ್ವಯಂಸೇವಕರು ಬಂದರದಲ್ಲಿರುವ ಇದರ ಮಳಿಗೆಯ ಮುಂದೆಯೇ ಪಿಕೆಟಿಂಗ ಪ್ರಾರಂಭಿಸಿದರು. ಕಂಪನಿಯವರು ಪೊಲಿಸ ಹಾಕಿಸಿದರು. ಆದರೆ ಜನರು ಕಾನೂನಿನ ಬಲಿಷ್ಠರ ಹಾಕಲು- ಉಘೇಮಲ್ಲರು ಉಘೇಮಲ ಬಿಸಿಂಬಟಿಕೆಗೆ ಬಂದು, ಒಂದು ತಿಂಗಳ ನಂತರ ಪ್ರಾರಂಭವಾಗುವ ಹೊಸ ವರ್ಷದ ಬಗ್ಗೆ ಆಗಿ ಶ್ರೀ ಕಕ್ಕೊಳ್ಳುವದಿಲ್ಲೆಂದು ಶರತ್ ಬರೆದು ಕೊಟ್ಟರು. ಇದರಂತೆ ಇನ್ನೊಂದು ಕಂಪನಿಗೂ ಧಾಕಿ ಬಂದಿದೆ.

ಸರ ದಾಭೋಳಕರರ ಹುನಾವಣೆಗೆ ಬಂದ ವಿಘ್ನ.

ಮುಂಬಯಿಯಲ್ಲಿ ಸರ ವಸಂತರಾವ ದಾಭೋಳಕರರು ಯಾವದೊಂದು ಸಾರ್ವಜನಿಕ ಸಂಸ್ಥೆಗೆ ಏನು ಸಾವಿರ ರೂಪಾಯಿ ಕೆಲಿಸಬೇಕು; ಶ್ರೀ. ಭಟ್ಟರು ರಾಜೀನಾಮೆ ಕೊಡಬೇಕೆಂದು ಮಾತುಕತೆ ನಡೆದು, ಶ್ರೀ. ಭಟ್ಟರು ರಾಜೀನಾಮೆ ಕೊಟ್ಟರು. ಇದು ಲಂಚವಾಗುತ್ತದೆಂದು ಸ್ಟ್ರೈಕರಾಟ, ಸರಕಾರದಲ್ಲಿ ಈ ವಿಷಯವಾಗಿ ವಿಚಾರಣೆ ನಡೆದಿದೆ. ಸರರು ಮೆ. ಹಾಟಸನ್ನ ಮತ್ತು ಗವರ್ನರಸಾಹೇಬರನ್ನು ಕಾಣಲು ಪುಣೆಗೆ ಎಳತಂದಿದ್ದಾರೆ.

ನೋಟೀಸು

ರಾ|| ರಾ|| ಹನಮಪ್ಪಾ ತಂದಿ ನೀಲಪ್ಪಾ ಮಾದರ ಸಾಕೀನ ಹಳ್ಳಿಕೇರಿ ತಾಲೂಕ ನವಲಗುಂದ ಇವರಿಗೆ-

ಕೆಳಗೆ ಸಹಿ ಮಾಡಿದ ನಾನು ನಿಮಗೆ ಈ ನೋಟೀಸಿನಿಂದ ತಿಳಿಸುವದೇನಂದರೆ- ನೀವು ನನಗೆ ಸದಗ ಸಿಟಿ ಶ್ರೀ ರುದ್ರವಿಲಾಸ ಮುದ್ರಣಾಲಯದಲ್ಲಿ ತಾ|| ೨೯-೪-೯೦ ನೇ ದಿವಸ ನೋಟೀಸ ಕೊಟ್ಟ ಮಜಕೂರ ಆಗದೇ ಖೋಟಾ ವ ಮತಲಬಿದಾ ಅದೆ ನಿನ್ನ ಸುಪುತ್ರಿ ಫಕೀರಿ ಕೋಂ ಭರಮಪ್ಪಾ ಮಾದರ ಈಕೆಯು ನನ್ನ ಲಗ್ನದ ಹೆಂಡತಿಯಿದ್ದು ಮದುವೆಯಾದ ಆಗಾಯಿತು ನನ್ನಲ್ಲಿಯೇ ಸಂತೋಷದಿಂದಾ ಬಾಳ್ವೆ ಮಾಡಿಕೋತಾ ಆಮಾಸ ೧೦-೧೧ ವರ್ಷವಿದ್ದು ನನಗೆ ಗರ್ಭಿಣಿ ಆಗಿದ್ದವಳನ್ನು ನೀವು ನಿಮ್ಮೂರಿಗೆ ಹಡೆಯಲಿಕ್ಕೆ ಕರಕೊಂಡು ಹೋಗುವಾಗ್ಗೆ ಅಕಿಯ ಮೈಮೇಲೆ ಲಗ್ನ ಕಾಲದಿಂದ ಇಟ್ಟ ದಾಗೀನೆಗಳು ಸಹ ಅಕಿಯ ಮೈಮೇಲೆ ಇದ್ದ ವಿವರ ಬಂಗಾರ ಬಳೆಜೋಡು ಎಂದು ತೊಲಿ ೫ ಜೊಕ್ಕ ಬಂಗಾರ ನವು ಇವಗಳ ಕಿಮ್ಮತ್ತು ರೂ ೧೧೫ ಮತ್ತು ಕೊರಳೊಳಗಿನ ಶ್ರಿಂಗಾರಪಟಾ ಬಂಗಾರದ್ದು ಅಜ ಮಾಸ ೨ ತೊಲಿ ವರಿ ಜೊಕ್ಕ ಇದರ ಕಿಮ್ಮತ ರೂ ೪೨ ಇದಲ್ಲದೆ ಬೆಳ್ಳಿ ಕೋಳಬಂದಿ ಜೋಡ ಎಂದು ತೊಲಿ ೨೪ ಒರೆ ಬೈಕೆ ಕಿಮ್ಮತ ರೂ ೧೫ ಅಂಕೂ ೧೬೨ ರೂಪಾಯಿಗಳ ಕಿಮ್ಮತ್ತಿನ ದಾಗೀನೆಗಳು ಮೈಮೇಲೆ ಇದ್ದಾಕಿಯನ್ನು ಕರಕೊಂಡು ಹೋದರಿ ಸದರಿಯವಳು ಹೆಣ್ಣು ಕೂಸು ಹಡಿದಳು ಹಡದ ಕೂಸಿನ ಮೋರಿ ನೋಡಲಿಕ್ಕೆ ನಾನು ನಿಮ್ಮಲ್ಲಿಗೆ ಬಂದಾಗ್ಗೆ ನನ್ನ ಹೆಂಡತಿ ಮೈಮೇಲೆ ಸದರಿ ಯಾವ ದಾಗೀನೆಗಳೂ ಇನ್ದಿಲ್ಲ ನನ್ನ ಹೆಂಡತಿಯನ್ನು ಕೇಳಿದರೆ ನೀವು ತಕ್ಕೊಂಡಾರೆಂದು ಹೇಳಿದಳು ಅದಕ್ಕೆ ನಿಮ್ಮನ್ನು ವಿಚಾರಿಸಲು ನಿನ್ನ ಹೆಂಡತಿ ಕರಕೊಂಡು ಹೋಗುವಾಗ್ಗೆ ಕೊಡತೇನೆ ಅಂತಾ ಅಂದಿರಿ ಮುಂದೆ ೨ ತಿಂಗಳ ಬಿಟ್ಟು ನಾನು ನನ್ನ ಹೆಂಡತಿ ಕಳಿಸಿಕೊಡಿರಿ ಅಂದದ್ದಕ್ಕೆ ಸುಮ್ಮಸುಮ್ಮನೆ ನನ್ನ ಮೇಲೆ ಬಂದು ಅಪವಾದ ಹೊರಿಸಿ ನಿನ್ನ ಹೆಂಡತಿ ಕಳಿಸಿಕೊಂಡುವದಿಲ್ಲಾ ನಿನ್ನ ದಾಗೀನೆ ಕೊಡುವದಿಲ್ಲಾ ಅಂದದ್ದಕ್ಕೆ ನಮ್ಮಲ್ಲಿ ನಾಲ್ಕುಮಂದಿ ಹಿರಿಯರನ್ನು ಕರಕೊಂಡು ಬಂದು ನಿಮಗೆ ಬೇಕಾದ ರೀತಿ ನಿಮಜೂತ ಹೇಳಿದರೂ ನನ್ನ ಹೆಂಡತಿ ಕಳಿಸಿಕೊಡಲಿಲ್ಲಾ ದಾಗೀನೆ ಸಹಾ ಕೊಡಲಿಲ್ಲಾ ಕಾರಣಾ ನಿಮಗೆ ತಿಳಿಸುವದೇನಂದರೆ- ಈ ನೋಟೀಸು ಮುಟ್ಟಿದ ಎಷ್ಟು ದಿವಸಗಳಲ್ಲಿ ಸದರಿ ದಾಗೀನೆಗಳನ್ನು ನನ್ನ ಹೆಂಡತಿ ಮೈಮೇಲೆ ಇಟ್ಟು ಕಳಿಸಿಕೊಡಬೇಕು ಹಾಗೆ ಮಾಡಲಿಕ್ಕೆ ಕಷ್ಟಿದಲ್ಲಿ ದಿವಾಣಿಯಲ್ಲಿ ನಿಮ್ಮ ಮೇಲೆ ಇಲಾಜ ನಡಿಸಿ ನನ್ನ ಹೆಂಡತಿ ದಾಗೀನೆ ಸಹಿತ ಕೋರ್ಟ ಮಾರ್ಫತ ಕಬಜಾ ತಗೊಳ್ಳುತ್ತೇನೆ ನೀನು ನೋಟೀಸು ಕೊಟ್ಟ ಪ್ರಕಾರಕ್ಕೆ ನನ್ನ ಹೆಂಡತಿ ಎರಡನೇದವರಿಗೆ ಉಡಕಿ ಮಾಡಿಕೊಟ್ಟಲ್ಲಿ ರೀತಿ ಪ್ರಕಾರ ಫಾಜದಾರಿಯಲ್ಲಿ ನಿನ್ನಮೇಲೆ ಮಾಡಿಕೊಂಡವನ ಮೇಲೆ ಖಟ್ಲೆ ಮಾಡುತ್ತೇನೆ ಅಂತಾ ಬರಕೊಟ್ಟ ನೋಟೀಸು

ತಾ|| ೧-೧೦-೧೯೯೦

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಬರಮಪ್ಪಾ ಗೋವಿಂದಪ್ಪಾ ಮಾದರ ಸಾ|| ನರಗುಂದ ಈತನ ಕೈದು ಅದೆ.

ನೋಟೀಸು

ಎಲ್ಲಿ ಕೋಂ ಬೆಲ್ಲಪ್ಪಾ ತಳವಾರ ಸಾ|| ಅಬ್ಬಿಗೇರಿ ಇವಳಿಗೆ-

ಕೆಳಗೆ ಸಹಿ ಮಾಡಿದವನು ನಿನಗೆ ನೋಟೀಸು ಕೊಡುವದೇನಂದರೆ ನೀನು ನನ್ನ ಲಗ್ನದ ಹೆಂತಿಯಿದ್ದು, ನನ್ನ ಮನೆಗೆ ಬಂದು ಆರು ತಿಂಗಳು ಚಲೋ ರೀತಿ ಬಾಳ್ವೆ ಮಾಡಿ ಈಗ ಮೂರು ವರ್ಷದ ಕೆಳಗೆ ವ್ಯಭಿಚಾರದಿಂದ ನನ್ನ ಮನೆದಿಟ್ಟು ಎಲ್ಲಿಯೋ ಓಡಿಹೋದಿ ಇಷ್ಟು ದಿವಸವಾದರೂ ಪತ್ತೆ ಇದ್ದಿಲ್ಲ ಈಗ ೧೫ ದಿವಸದ ಕೆಳಗೆ ಒಂದು ಗಂಡುಕೂಸು ಹಡೆದುಕೊಂಡು ಬಂದಿರುತ್ತೀದೆಂದು ಕೇಳುತ್ತೇನೆ ಕಾರಣ ನೀನೂ ನಿನ್ನ ಹೊಟ್ಟೆಲಿ ಹುಟ್ಟಿದ ಮಗನೂ ನನ್ನ ಅಸ್ತಿಗೆ ಬಾಧ್ಯಸ್ಥರಲ್ಲಾ ಇದೇ ನೋಡಪತ್ರವೆಂದು ತಿಳಿಯಬೇಕು ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲದೆ ತಿಳಿಯುವದು

ತಾ|| ೩೦-೪-೯೦ ಇಸ್ವಿ

ಸಹಿ ಬೆಲ್ಲಪ್ಪಾ ತಂದಿ ಹನಮಪ್ಪಾ ತಳವಾರ ಸಾ|| ಅಬ್ಬಿಗೇರಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಶುದ್ಧಬ್ಯಾಂಕ ಧಾರವಾಡ

ಟಿಪ್ಪಣಿ ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರಿಕೆ ಜಾಹೀರಾತಿನ ಮೇಲಿಂದ ಈ ಬೇಡಿಕೆಯನ್ನು ಮಾಡಿರುವಿರೆಂಬದನ್ನು ಬರೆಯಬೇಕು.

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ಸಮಾಚಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತ ವ ಹೊನ್ನಿ ಹೆದ್ದಿ ವ ತಿಸಂ ಸಾಟುಗಳು

ಸಾಗವಾನಿ ಯಲಿ ವ ಸಾಗವಾನಿ (ಟ) ಪೂಟನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ತೈಯಾರಿ ತಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಜಿಆರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 443

ವಿಜಯ

ನಿತ್ಯ ಪತ್ರಿಕೆ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಸಕೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೪ನೇ ಅಕ್ಟೋಬರ ೧೯೩೦ (ಸಂಚಿಕೆ ೨೧೮

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಸಿದ್ಧಾರೂಢರ ಅರ್ಜಿ, ಶ್ರೀ. ಅರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತ್ತು ವಾಗಿ, ಸ್ಥಿತಿವಾದಿ, ಹಾಗು ಮುನಸಫರ ಬಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಜನರ ಆಗ್ರಹದ ಸಂಜನಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎಂಟೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದರಿಂದ ಗ್ರಾಹಕರು ಕ್ಷರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ಯಿ. ಪಿ. ಖರ್ಚ ಬೇರೆ ಬಂದೇಸು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ಯಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೨ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ 'ಕಾರ್ಡದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಕೋಕ ಕಳಿಸಿಕೊಳ್ಳುವವರಿಗೆ ನೂರಕ್ಕೆ ಭರ್ಪೂರ ಕಮೀಶನ ದೊರೆಯುವದು.

ಬಿ. ವ್ಹಿ. ನವರತ್ನ,
ಶ್ರೀ. ಅಕ್ಕೀವೆಂಕಟೇಶ ಸ್ಟೋರ್ಸ್ ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಯ ಎಂಟು ಲಕ್ಷದ ಮೇಲುಂಟು. ಚಲಿ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜನ್ವಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳ ಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷ ಮ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ಡಾಗೀನೆಗಳನ್ನು ಮತ್ತೂ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮಾ. ವಿಜಯ, ಧಾರವಾಡ

ವಿಜಯ.

ಶಾಳಿವಾಹನ ವಿಕ್ರಮ ವರ್ಷಾಯಣ ಆಶ್ವೀಜ ಶುದ್ಧ ೧೨

ಕರ್ನಾಟಕದ ನಾಡಹಬ್ಬವು.

—)(o)(—

ಇಲ್ಲಿಯ ಕರ್ನಾಟಕ ನಾಡಹಬ್ಬವು ಬಹು ಪಡಗರದಿಂದ ನೆರವೇರಿತು. ಇದರಲ್ಲಿದ್ದಿಲ್ಲವೆಂದು ಹೇಳುವಂಥ ವಿಷಯವೇ ಇದ್ದಿಲ್ಲ. ಮುಖ್ಯವಾಗಿ ಈಗಿನ ಚಳವಳಿಗೆ ಪೋಷಕವಾಗಿ ಅನೇಕ ಕಾರ್ಯಗಳು ಕ್ರಮವಾಗಿ ನಡೆದವು. ನಾಡಹಬ್ಬದ ಧ್ಯೇಯವು ಕಾಯದೆಭಂಗ ಮತ್ತು ಅಸಹಕಾರವಲ್ಲ. ಏಕಂದರೆ- ಇವೆರಡೂ ನಡುವೆ ಹುಟ್ಟಿದ ಕೆಲಸಗಳು. ರಾಷ್ಟ್ರದ ಶಕ್ತಿ ಬೆಳೆಯುವದಕ್ಕೆ ರಾಷ್ಟ್ರದ ಸಂಪತ್ತು ಬೆಳೆಯುವದಕ್ಕೆ ರಾಷ್ಟ್ರದಲ್ಲಿ ಐಕ್ಯವಾಗುವದಕ್ಕೆ ಬೇಕಾದ ಕಾರ್ಯಕ್ರಮಗಳನ್ನಿಟ್ಟಿದ್ದರು. ಹಬ್ಬದ ಪ್ರಾರಂಭವು ಶ್ರೀ. ಮಂಜಪ್ಪ ಹರ್ಡೇಕರಿಂದ ಆಗಬೇಕಾಗಿತ್ತು. ಕಾರ್ಯಬಾಹುಳ್ಯದ ಮೂಳಕ ಅವರು ಬರದಾಗಲು- ಅವರಂತೆ ದೇಶಾಭಿಮಾನಿ ಮತ್ತು ಸ್ವರಾಜ್ಯವಾದಿಯೂದ ಹುಬ್ಬಳ್ಳಿಯ ಶ್ರೀ ನಾವಟಿ ವಕೀಲರು ಸ್ವದೇಶಿಯ ಮೇಲೆ ವ್ಯಾಖ್ಯಾನ ಕೊಟ್ಟು, ಸ್ವದೇಶಿ ವಿವಿಧ ಹಸ್ತ ಪ್ರದರ್ಶನವನ್ನು ತೆರೆದರು. ಇವರಂತೆ ಹುಬ್ಬಳ್ಳಿಯಿಂದ ಶ್ರೀ ದಿಳೆಅಂಗಡಿ ವಕೀಲರು ಬಂದು, ಉತ್ಸವಕ್ಕೆ ಉತ್ತೇಜನ ಕೊಟ್ಟರು. ಶ್ರೀ ಸೌ|| ಸಂಜೆಯ ಶ್ರೀಮತಿ ಶಾಯಿಯವರು ಶ್ರೀ ಸೌ|| ಸರೋಜಿನಿದೇವಿಯವರ ಶಿಷ್ಯತಿಗರಲ್ಲಿ ಪ್ರೇಮುಖರಾಗಿದ್ದು ಅವರ ವ್ಯಾಖ್ಯಾನದ ಯೋಗ ಬಂದಿತು. ಕವಿ ಸಮ್ಮೇಲನದಲ್ಲಂತೂ ಹುಡುಕುಗಟ್ಟಿ ಬಂದವರ ಸಂಖ್ಯೆಯು ಕಲ್ಪನಾತೀತವಾಗಿತ್ತು. ಎಲ್ಲರ ಪದಗಳು ದಾಸಕೂಟ ಭಟ್ಟು, ಕಾಂಗ್ರೆಸಕೂಟವನ್ನೇ ಅನುಸರಿಸಿದ್ದವು. ಇದ್ದರು ಅಲಾವಣೆ ಅಂದರು. ಅವೂ ರಾಜಕೀಯವೇ! ದುರ್ಗಾಷ್ಟಮಿಯ ದಿವಸವೇ ದುರ್ಗಾದೇವಿಯ ಸನ್ನಿಧಾನದಲ್ಲಿಯೇ ಶುದ್ಧಿಗಳಾಗಿ ಶರೀರ ಸಾಮರ್ಥ್ಯದ ಮಹತ್ವವನ್ನು ಕುರಿತು ಶ್ರೀ ಮುದವೀಡು ಕೃಷ್ಣರಾಯರ ಭಾಷಣವಾಯಿತು. ಕರ್ನಾಟಕತ್ವವನ್ನು ಕುರಿತು ಶ್ರೀ ಬೆಂದ್ರೆ ದತ್ತರಾಯರು ಅನೇಕ ಶೋಧಕ ವಿಚಾರಂಗಳನ್ನು ಕುರಿತು ಉಪನ್ಯಾಸ ಮಾಡಿದರು. ರಾಟೆಯ ಮೇಲಾಟವಾಯಿತು. ಸಾಯಂಕಾಲದ ತೀವ್ರ ಮತ್ತು ಮಂದ ಹಿದದ ಸಂಧ್ಯ ನಡೆಯಿತು. ಶ್ರೀ ಬಾಪಟ್ಟೆಂವರು ವೈ ಝುಮ್ ಎನ್ನುವಂಥ ಅನೇಕ ಅಸನಗಳನ್ನು ಮಾಡಿ ತೋರಿಸಿದರು. ಕರ್ನಾಟಕವು ತನ್ನ ವೈಶಿಷ್ಟ್ಯ ತೋರಿಸುವಂಥ ವಿವಿಧ ಸಂಗತಿಗಳು ನಡೆದವು. ವಿಜಯ ದಶಮಿಯ ದಿವಸ ಸಾಯಂಕಾಲದಲ್ಲಿ ಕೂಡಿದ ಪ್ರಚಂಡ ಜನ ಸಮೂಹದಲ್ಲಿ ಪ್ರದರ್ಶನಕ್ಕೆ ವಸ್ತುಗಳನ್ನು ತಂದವರಿಗೂ ಬೇರೆ ಬೇರೆಯಾಗಿ ಮೇಲ್ತರಗತಿ ಪಡೆದವರಿಗೂ ಬಹುಮಾನ ಕೊಡುವದಾಯಿತು. ಈ ಕಾರ್ಯದಲ್ಲಿ ಹೆಣ್ಣುಮಕ್ಕಳು ವಿಶೇಷವಾಗಿ ಭಾಗ ತಕ್ಕೊಂಡರೆಂದೂ, ಅವರು ಪ್ರದರ್ಶನದಲ್ಲಿಯ ವಸ್ತುಗಳನ್ನು ಬಹುವಾಗಿ ಕೊಂಡರೆಂದೂ ಬರೆಯುವದಕ್ಕೆ ಸಂತೋಷಪಡುತ್ತೇವೆ. ಮುಂದಿನ ವರ್ಷ ಧಾರವಾಡದಂತೆ ಕರ್ನಾಟಕದ ಪ್ರತಿಯೊಂದು ಪಟ್ಟಣದಲ್ಲಿ ಈ ನಾಡಹಬ್ಬವಾಗುತ್ತಾ ಹೋಗಲೆಂದು ಆಶಿಸುತ್ತೇವೆ.

ಮಹಾತ್ಮರ ವರ್ಧಂತ್ಯುತ್ಸವವು.

—o*o—

ಅಪೂರ್ವ, ಅದ್ವಿತೀಯ ನಗರ ಸಂಕೀರ್ತನೆ.

—(o)—

ಇಂಗ್ರೇಜಿ ಕಾವೀಖಿನ ಮೇರೆಗೆ ದಸರೆಯ ದಿವಸವೇ ಮಹಾತ್ಮರ ವರ್ಧಂತ್ಯುತ್ಸವ ಬಂದಿತು. ಅಂದು ಊರೊಳಗೆ ಹಬ್ಬದ ಕೂಡ ಇದೊಂದು ದೊಡ್ಡ ಜಾಗೃತಿ ಹುಟ್ಟಿತು. ಹಿಂದೆಯಾದ ನಗರ ಸಂಕೀರ್ತನೆಯಲ್ಲಿ ಖಾದಿಗೆ ಮಹತ್ವವಿದ್ದರೂ, ಅದರ ಬಣ್ಣದ ಬಗ್ಗೆ ಆಷ್ಟು ಕಟ್ಟು ಇರಲಿಲ್ಲ. ಗಿರಣಿಯ ಅರವೆಯವರು ಸೇರಿದರೂ, ಅಡ್ಡಿ ಇದ್ದಿಲ್ಲ. ಆದರೆ ಈ ಸಾರೆ ಹಾಗಿರಲಿಲ್ಲ. ಎಲ್ಲರೂ ಖಾದಿಯ ಬಟ್ಟೆಯನ್ನೇ ತೊಡಬೇಕು. ಅವು ಬೆಳ್ಳಗೇ ಇರಬೇಕೆಂಬ ನಿರ್ಧಂಧನೆ ಮಾಡಿದ್ದರು. ಧೋತರ ಅಥವಾ ಚಣ್ಣ, ಪೈರಣ ಮತ್ತು ಗಾಂಧೀ ಟೋಪ್ಪಿಗೆ ಹಾಕಿದ್ದಂಥ ಎರಡು ಸಾವಿರ ಜನರು ಮೆರವಣಿಗೆಯಲ್ಲಿದ್ದರೆಂಬಷ್ಟು ಧಾರವಾಡವೇಕೆ ಕರ್ನಾಟಕದಲ್ಲಿಯೇ ಅದ್ವಿತೀಯ ಮತ್ತು ಅಪೂರ್ವವಾಯಿತೆಂದು ಹೇಳುವದಕ್ಕೆ ಯಾವ ಅಡ್ಡಿಯೂ ಇಲ್ಲ. ಮೆರವಣಿಗೆಗಾಗಿ ಸರಕಾರೀ ವಕೀಲರಾಗಿದ್ದ ಮತ್ತು ರಾವಸಾಹೇಬ ಪದವಿಯುಳ್ಳ ಶ್ರೀ ಕಟ್ಟಿ ಅಣ್ಣಯ್ಯಾಚಾರ್ಯರು ತಮ್ಮ ಕುದುರೆ ಕೊಟ್ಟಿದ್ದರು. ಅದರ ಮೇಲೆ ಪ್ರಾರಂಭದಲ್ಲಿ ಅವರ ಚಿರಂಜೀವನೇ ರಾಷ್ಟ್ರೀಯ ಧ್ವಜ ಹಿಡಿದುಕೊಂಡು ಉತ್ಸವದ ಮುಂದಿದ್ದನು. ಹಿಂದೆ ಸಾಯಿಳಲ ಸವಾರರಿದ್ದರು. ಅವರು ಈ ಕಾಲದ ಅಶ್ವಪತ್ತಿಗಳು. ಇವರ ಹಿಂದೆ ನಾಲ್ವರೆದೊಂದು ಸಾಲಿನಂತೆ ಎರಡು ಫರ್ಲಾಂಗಿನವರೆಗ ಜನರು ಸಿಸ್ತಿನಿಂದ ನಡೆಯುತ್ತಿದ್ದರು. ನಡುನಡುವೆ ಬ್ಯಾಗಿಲ ಹಿಡಿಯುವರು. ಕರ್ನಾಟಕದ ಹೆಜ್ಜೆಳ ಮತ್ತು ನಾಡಹಬ್ಬಕ್ಕೆ ಒಪ್ಪುವಂಥ ಹಾಡುಗಳನ್ನೇ ಹಾಡುವರು. ಯಾವಾಗಾದರೊಮ್ಮೆ ಬಾಯಕಾಟ ಬ್ರಿಟಿಶ ಗೂಡ ಎಂಬ ಧ್ವನಿ ಎಸುವದು. ನಗರ ಸಂಕೀರ್ತನೆಯು ಮುಂದು ವೈಲಿನಷ್ಟು ಉದ್ದವಾದ ಪ್ರದೇಶದಲ್ಲಿ ಗ್ರಾಮ ಪ್ರದಕ್ಷಿಣೆ ಹಾಕಿತು. ದಾರಿಗುಂಟ ಜನ ಮಹಾತ್ಮರ ಭಾವಪಟಕ್ಕೆ ಆರತಿ ಬೆಳಗಿದರು. ಪೂಮಾಲೆ ಹಾಕಿದರು. ತೆಂಗಿನಕಾಯಿ ಗಸ್ತು ನಿವಾಳಿಸಿ ಒಡೆದರ, ಮೆರವಣಿಗೆಯು ಕಡಪಾ ಬೈಲಿಗೆ ಬಂದಬಳಿಕ, ರಾಷ್ಟ್ರಧ್ವಜವಂದನೆಯಾಗಿ ವಿಸರ್ಜನೆಹೊಂದಿತು.

ರಾ. ಬ. ಕಂಬಳಿಯವರು ದಿವಾನರಾಗುವರು.

ಪುಣೆಯಲ್ಲಿ ದಿವಾನ ಬಾಧವರಾಯರ ಬಂಗಲೆಯಲ್ಲಿ ಬ್ರಾಹ್ಮಣೇತರ ಪಕ್ಷದ ಲೌಸ್ಸಿಲ ಮೆಂಬರರ ಆಯ್ಕೆ ಕೂಡಿ, ರಾ ಬ. ಕಂಬಳಿಯವರು ಬ್ರಾಹ್ಮಣೇತರ ಪಕ್ಷದ ಮುಖಂಡರೆಂದು ಗೊತ್ತು ಮಾಡಲ್ಪಟ್ಟಿತು. ಶ್ರೀ ಡೊಂಗರಶಿಂಗರ ತಮಗೆ ದಿವಾನಗಿರಿದೊರೆಯಬೇಕೆಂದು ಪ್ರಯತ್ನಿಸುತ್ತಲಿದ್ದಾರೆಂದು ನಡುವೆ ವರ್ತಮಾನವಾಗಿತ್ತು; ಇವರಲ್ಲಿ ಈಗ ರಾ. ಬ. ಕಂಬಳಿಯವರು ಲೀಕರರಾದರು. ಬ್ರಾಹ್ಮಣೇತರ ಪಕ್ಷಕ್ಕೇ ದಿವಾನಗಿರಿ ಕೊಡಬೇಕೆಂದು ನಾಮದಾರ ಗವರ್ನರಸಾಯೇಬರು ಆಶಿಸಿದರೆ.. ರಾ. ಬ. ರವರು ದಿವಾನರಾಗುವರು. ದಿವಾನರಾದ ಕೂಡಲೆ- ಸರಕಾರೀ ಕಾಮದಾರರಾಗುವದರಿಂದ ರಾವ್ಹಂದ ಟೇಬಲ್ಲಕ್ಕೆ ಹೋಗುವದು ಸಹಜವಾಗುವದು.

ಪ್ರತಿಷ್ಠಿತ ಆರೋಪಿಗಳನ್ನು ನಿರ್ದಯದಿಂದ ನಡಿಸಿಕೊಳ್ಳುವಿಕೆ.

ಶ್ರೀ. ಕರಂದೀಕರ ದಾದಾಸಾಹೇಬರು ಕೋರ್ಟಿಗೆ ಶರಣು ಹೊಡೆದರು.

ಸಾತಾರಿಯಲ್ಲಿ ಕಾಂಗ್ರೆಸ್ಸ ಕಮೀಟಿಯು ಬೇಕಾಯದೆಕ್ಕೆ ಸಂಬಂಧದ ಮೂಲಕ ಹಿಡಿದ ಆರೋಪಿಗಳಲ್ಲಿ ಶ್ರೀ. ಸೋಮಣ ವಕೀಲ ಮೊದಲಾದ ಎಂಟ ಜನ ಪ್ರತಿಷ್ಠಿತರ ಮೇಲೆ ಪೋಲೀಸರು ಖಟ್ಲೆ ಹಾಕಿದ್ದಾರೆ. ಪೋಲೀಸರು ಇವರ ಕೈಗೆ ಬೇಡಿ ಹಾಕಿ, ರಟ್ಟಿಗೆ ತಾಡಣೆ ಹಚ್ಚಿ ಇವರನ್ನು ಕೋರ್ಟಿಗೆ ತಂದರು. ಶ್ರೀ. ದಾದಾಸಾಹೇಬ ಕರಂದೀಕರ ಮೊದಲಾದ ಪ್ರತಿಷ್ಠಿತ ಗೃಹಸ್ಥರು ಈ ಅಪಮಾನ ಮತ್ತು ನಿರ್ದಯದ ಪ್ರಕಾರವನ್ನು ಮ್ಯಾಜಿಸ್ಟ್ರೇಟರ ಕಣ್ಣಿಗೆ ಹಾಕಿದರು. ಆದರೆ ಅವರು ಬಾಯಿಯಿದೂ

ಮೂಕರಾಗಿ ಶ್ರೀ. ಸೋಮಣಂವರ ಬೇಡೀ ತೆಗೆಸಲು ಸಮರ್ಥರಾಗಲಿಲ್ಲ. ಈ ವಿಷಾದದ ಮತ್ತು ಮನಸ್ಸು ಸಂತಾಪಗೊಳ್ಳುವಂಥ ಕೃತ್ಯ ನೋಡಲಾರದೆ, ವಕೀಲರೂ, ಜ್ಯೇಷ್ಠರೂ ಕೋರ್ಟಿಗೆ ಶರಣು ಹೊಡೆದು, ಹೊರಬಿದ್ದು ಬಂದರು.

ಭಗವಂತನ ಅದ್ಭುತ ಚಮತ್ಕಾರ

ವಿಲಾಯತಿಯ ಅರಿವೆ ಸುಟ್ಟು ಖಾದಿಯ ಬಟ್ಟೆ ಉಳಿಯಿತು.

—(೦)—

ದಸರೆಯ ದಿವಸ ಸ್ವಾಕಾಶತಾಲದಲ್ಲಿ ಇಲ್ಲಿಯ ಮಂಗಳವಾರಪೇಟೆಯ ಶ್ರೀ. ವೆಂಕಟೇಶದೇವರ ವಧೋತ್ಸವವಾಯಿತು. ರಥವು ಶಾಮನಕಟ್ಟೆಯ ಕೂಟಿಗೆ ಬಂದಾಗ, ದೇವರ ಮಂಗಳಾರತಿಗಾಗಿ ದೇವರ ಹತ್ತರವೇ ಇದ್ದ ದೀವಟಿಗೆಯ ದೀಪವು ನಿಶಾನೆಗೆ ಹತ್ತಿತು. ಒಂದಕ್ಕೆ ಹತ್ತಿತೆನ್ನುವದರೊಳಗಾಗಿ ಅರ್ಧ ರಥವನ್ನೇ ತಳ್ಳಿಕೊಂಡಿತು. ಆಗ ಬಹುವಾಗಿ ನೆರೆದಿದ್ದ ಭಕ್ತರು ಕೈ ಮೈ ಸುಟ್ಟುಕೊಳ್ಳುವ ಪರಿವೆಯಿಲ್ಲದೆ, ತಮಗೆ ಕಂಡ ಉಪಾಯದಿಂದ ಉರಿಯನ್ನು ಆರಿಸಿದರು. ಇದರಲ್ಲಿ ಚಮತ್ಕಾರವೇನೆಂದರೆ- ಉರಿಯು ಕೇವಲ ವಿಲಾಯತಿಯ ಬಟ್ಟೆ ಮತ್ತು ಕೆಂಪು ನಿಶಾನೆಗಳನ್ನೇ ಬೂದಿ ಮಾಡಿತು. ಇದರಲ್ಲಿ ಎರಡು ರಾಷ್ಟ್ರೀಯ ನಿಶಾನೆಗಳಿದ್ದವು. ಅವು ಮುಕ್ಕು ಕೂಡ ಆಗಲಿಲ್ಲ. ಎರಡನೆಯ ಬದಿಗಿದ್ದ ಖಾದಿಯ ನಿಶಾನೆಗಳಲ್ಲಿ ಒಂದಕ್ಕೆ ಅಗ್ನಿನಾರಾಯಣನ ಸ್ಪರ್ಶವಾಗಲಿಲ್ಲ. ಉರಿಯು ಆರಿದ ಕೂಡಲೆ, ಖಾದಿಯ ಧಾನುಗರನ್ನು ತಂದು ಪುನಃ ರಥವನ್ನು ಶೃಂಗರಿಸಿ, ರಥ ಸಾಗಿಸಿದರು. ಭಗವಂತನ ಮನಸ್ಸಿಗೇ ಪರದೇಶೀ ಅರಿವೆಯ ಸಂಪರ್ಕ ಬೇಕೆಂದೆನಿಸಿ, ಇಂಥ ಅದ್ಭುತ ಚಮತ್ಕಾರ ಮಾಡಿದನೆಂದು ಯಾರೊಬ್ಬರು ಅಂದು, ಆತನ ಲೀಲೆಯನ್ನೇ ಹೊಗಳುತ್ತಿದ್ದಾರೆ.

ಹಾವೇರಿಯಲ್ಲಿ ದಸರೆಯ ಉತ್ಸವ

—(೦)—

ಮೊನ್ನಿನ ದಿವಸ ಹಾವೇರಿಯಲ್ಲಿ ವಿಜಯದಶಮಿಯ ಉತ್ಸವವನ್ನು ನಾಗರಿಕರೆಲ್ಲರೂ ಒಟ್ಟಾಗಿ ಮಾಡಿದರು. ಈ ಮೊದಲು ಬೇರೆ ಬೇರೆ ಮತದವರು ಬೇರಿಯವರು ತಮಗೆ ಸನಿಯವಾದ ದಾರಿಯಿಂದ ಸೀಮೋಲ್ಲಂಘನಕ್ಕೆ ಹೋಗುತ್ತಿದ್ದರು. ಆದರೆ ಈ ಸಾರೆ ಮೊದಲು ಸಭೆಯ ವ್ಯವಸ್ಥೆಮಾಡಿದರು. ಅಲ್ಲಿಗೆ ಎಲ್ಲ ದೇವರ ಪಾಲಕ್ಕಿಗಳು ಬರಬೇಕೆಂದು ವ್ಯವಸ್ಥೆಗೊಳಿಸಿದರು. ಪಲ್ಲಕ್ಕಿಗಳು ಬಂದ ಬಳಿಕ, ಶ್ರೀ ಸಿದ್ದಪ್ಪ ಹೊಸಮನಿಯವರ ಭಾಷಣವಾಯಿತು. ಅನಂತರ ಎಲ್ಲ ಧರ್ಮದವರು ಒಂದೇ ಸ್ಥಳಕ್ಕೆ ಹೋಗಿ, ಒನ್ನೀ ಮುಡಿದರು. ಮಹಾತ್ಮರ ಅರ್ಧಾಂಶ್ಯುತ್ಸವಕ್ಕಾಗಿ ಮಾಡಬೇಕಾಗಿದ್ದ ಎಲ್ಲ ಸಮಾಂಭಗಳನ್ನೂ ಮಾಡಿದರು.

ಮುಂಬಯಿಯಲ್ಲಿ ಬಂದರ ಮತ್ತು ಪಜಾರಿನ ಮುಂದೆ ಪಿಕೆಟಿಂಗ.

—(೨)—

ವಿಲಾಯತಿಯಿಂದ ಬಂದು, ಮುಂಬಯಿ ಬಂದರದಲ್ಲಿಳಿಯುವ ಅರಿವೆಯು ದೇಶದ ಮುಂದೆ ಕದ್ದು ಮುಚ್ಚಿ ಹೋಗಬಾರದೆಂದು ಹಗಲು ರಾತ್ರಿ ಪಿಕೆಟಿಂಗ ಮಾಡಬೇಕೆಂದು ಕಾಂಗ್ರೆಸ ಕಮೀಟಿಯವರು ನಿರ್ಣಯಿಸಿದ್ದಾರೆ. ಸರಕಾರ ಮುಂಬಯಿಯಲ್ಲಿಯೇ ಗತಿಗಾಣದೆ ಬೀಳುವದರಿಂದ, ಸರಕಾರಕ್ಕೆ ಕನ್ಸಮದ ಅರ್ಧಹಾನಿ, ವರ್ತಕರಿಗೆ ದ್ರವ್ಯಹಾನಿಯಾಗುವದರಿಂದ, ಸರಕಾರದವರು ಪಿಕೆಟಿಂಗ ತಪ್ಪಿಸಲು ಪ್ರಬಲ ಉಪಾಯ ಮಾಡುವಂತೆ ತೋರುತ್ತದೆ. ಪಿಕೆಟಿಂಗದ ಒಂದೊಂದು ಗುಂಪಿನಲ್ಲಿ ೫೦ ಜನ ಸ್ವಯಂಸೇವಕರಿರುವರು.

ಲಾರ್ಡ ಬರ್ಕನಹೆಡ್ಡರ ಮೃತ್ಯು.

—(೦)—

ಹಿಂದುಸ್ಥಾನದ ಸ್ಟೇಟ ಸೇಕ್ರೆಟರಿಯಾಗಿದ್ದ ಲಾರ್ಡ ಬರ್ಕನಹೆಡ್ಡಸಾಹೇಬರು ಒಂದು ತಿಂಗಳಿಂದ ಪಾಸಿಗೆ ಹಿಡಿದಿದ್ದರು. ಅವರು ಮೃತ್ಯುಮುಖದಲ್ಲಿ ಬಿದ್ದರೆಂದು ತಾರಿನ ವರ್ತಮಾನ ಬಂದಿರುತ್ತದೆ. ಲಾರ್ಡಸಾಹೇಬರು ಹಿಂದುಸ್ಥಾನದ ಭಾಗಾದಿ ಎನಿಸಿಕೊಂಡು, ಹಿಂದುಸ್ಥಾನಕ್ಕೆ ಬರೇ ಗುಳಿಗೆ ಕೊಡುತ್ತಾ ರಾಜ್ಯಭಾರ ನಡೆಸಿದರು. ಅಧಿಕಾರ ತಪ್ಪಿದ ಬಳಿಕ, ಈಗಿನ ಚಳವಳಿಯ ವಿರುದ್ಧ ಕತ್ತೀ ಹಿರಿದು ನಿಂತೆರು. ಈ ದೇಶವು ಇಂಗ್ಲಂಡದ ಹಿಡಿಯಲ್ಲಿರಬೇಕೆಂದೇ ಇವರ ದುರುದ್ದೇಶವು. ಇವರು ಇನ್ನು ಕೆಲವು ದಿವಸ ಬದುಕಿದ್ದರೆ- ಹಿಂದುಸ್ಥಾನವು ರಾಜಕೀಯ ಹಕ್ಕು ಸಂಪಾದನೆಯಲ್ಲಿ ಹೇಗೆ ಸ್ವಾವಲಂಬನವಾಗಿದೆಂಬದನ್ನು ಕಣ್ಣಾರೆ ನೋಡುತ್ತಿದ್ದರು.

ಮುಂಬಯಿಯಲ್ಲಿ ನೆವಾಕಾಳದ ಮುದ್ರಾಲಯಕ್ಕೆ ಬೇಡಿದ ಇದುಸಾವಿರದ ಜಾವಿಸಾನ ರಕಮು ಬಹಳ ದೊಡ್ಡದಾಗುವ ಕಾರಣ ಅದನ್ನು ಕಡಿಮೆ ಮಾಡಬೇಕೆಂದು ಮಾಲಕರು ಮ್ಯಾಜಿಸ್ಟ್ರೇಟರಿಗೆ ವಿನಂತಿ ಮಾಡಿಕೊಂಡರು. ಮೊದಲಿನ ಹುಕುಮನ್ನು ತಿರ.ಗಿಸಲಿಕ್ಕಾಗುವದಿಲ್ಲೆಂದು ಸಾಹೇಬರು ಉತ್ತರಕೊಟ್ಟರು- ಇದುಸಾವಿರವನ್ನೂ ತುಂಬಿದರು. ಈ ಮೊದಲಿನ ಎರಡು ಸಾವಿರವು ಸರಕಾರ ಜಮೆಯಾಯಿತು.

ವರ್ತಮಾನಸಾರಗಳು

—(೦)—

ವಿಜಾಪೂರದಲ್ಲಿ ಶ್ರೀ ಶಾಲುಗಿ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ರಾಷ್ಟ್ರಧ್ವಜವಂದನೆಯಾಯಿತು. ರಾಯರು ಲಖನೌದಲ್ಲಿ ಜರುಗುವ ಕಾಂಗ್ರೆಸದ ವರ್ಕಿಂಗ ಕಮೀಟಿಗೆ ಪ್ರಯಾಣ ಬೆಳೆಸಿದರು. ತಮಗೆ ಜ್ಞಾನಸಂಚಯವಾಗುವದೆಂದು ತಿಳಿದೇ ಅಲ್ಲಿಗೆ ಹೊರಟಿದ್ದಾರೆ. ಧಾರವಾಡ ಬೇಗಾವಿಗೂ ಬಂದು, ಜನರ ಸಿರೋಪಚಕ್ಕೊಂಡು ಹೋಗಿದ್ದಾರೆ.

ಧಾರವಾಡ ತಾಲೂಕ ತಡಕೋಡದಲ್ಲಿ ದಿನಾಲು ೩೦- ೦ ಜನರ ನಗರ ಸಂಕೀರ್ತನ ಹೊರಡುವದು. ಶ್ರೀ ಚಿನಂಬರ ಚರಕಾಸಂಘದ ಕಾರ್ಯವು ಹುರ ಪಿಸಿಂದ ನಡೆದಿದೆ. ದಸರೆಯ ದಿವಸ ಮಹಾತ್ಮರ ಹುಟ್ಟಿದ ದಿವಸಕ್ಕಾಗಿ ಪೌರವಣಿಗೆಯೂ ಹೊಂಟಿತ್ತು.

ಅಥಣಿಯಲ್ಲಿ ರಾವಸಾಹೇಬ ಟಿ ಎಸ. ಕುಲಕರ್ಣಿ ಮ್ಯಾಜಿಸ್ಟ್ರೇಟರವರು ಶೌದಿ ಗಿಡ ಕಡಿದುದಕ್ಕಾಗಿ ಮತ್ತು ಉಪ್ಪಿನ ಕಾಯದೆಭಂಗ ಮಾಡಿದುದಕ್ಕಾಗಿ ೧೫ ಜನರಿಗೆ ಒಂಧತ್ತರಿಂದ ಅರು ತಿಂಗಳ ತನಕ ಸಶ್ರಮ ತೀಕ್ಷ್ಣ ವಿಧಿಸಿದರು.

ಅಂಬಾಲಾ ಪಟ್ಟಣದಲ್ಲಿ ಕಾಂಗ್ರೆಸ ಕಮೀಟಿಯ ಬೇಕಾಯದೆಶೀರವಾದ್ದರಿಂದ ಯುದ್ಧ ಪಂಚಾಯ್ತಿ ಸ್ಥಾಪಿಸಿ, ಒಬ್ಬರ ಹಿಂದೊಬ್ಬರಂತೆ ತುರಂಗಕ್ಕೆ ಕೋಗಲು ೧೦೧ ಜನರನ್ನು ಈಗಾಗಲೆ ಕೃಮವಾಗಿ ಗೊತ್ತು ಮಾಡಿಟ್ಟಿದ್ದಾರೆ.

ಈಗಿನ ಬಹಿಷ್ಕಾರ ಚಳವಳಿಯನ್ನು ಕಡೆತನಕ ನಡೆಸುವದದಕ್ಕಾಗಿ ಮುಂಬಯಿಯ ವರ್ತಕರು ಕಾಂಗ್ರೆಸ ಫಂಡಿಗೆ ಸರಕಾರದ ತೆರಿಗೆಯಂತೆ ಕೆಲ ರಕಮನ್ನು ತಪ್ಪದೆ ಕೊಡುವಂತೆ ಕಾಂಗ್ರೆಸಕ್ಕೆ ಆಶ್ವಾಸನಕೊಟ್ಟಿರುತ್ತಾರೆ.

ಬೆಳಗಾವಿಯಲ್ಲಿ ಊರೊಳಗಿನ ಎಲ್ಲ ಪ್ರಭಾತ ಸಂಕೀರ್ತನೆಗಳ ಸಮ್ಮೇಲನವಾಗಿ, ಶ್ರೀ ಬೆಳವಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರಧ್ವಜವಂದನೆಯಾಯಿತು

ಇವತ್ತಿನ ದಿವಸವೇ ರಾ. ಬ. ಕಂಬಳಿಯವರು ವಿಲಾಯತಿಯ ಹಡಗವೇರುವರೆಂದು ಪ್ರಸಿದ್ಧವಾಗಿದೆ.

ಪೂಜ್ಯರಾದ ಧಾರವಾಡದ ಸ್ವಾಮಿ ಸಂಸ್ಥಾನದ ಮಠದ ಮೊಮ್ಮಗಳು ರೈತರಿಗೆ ಹಸ್ತೆ ಕೊಡಬೇಡಿರೆಂದು ಉಪದೇಶ ಮಾಡಿದಳೆಂಬ ಆರೋಪದಿಂದ ಧಸ್ತಗಿರ ಮಾಡಿದ್ದಾರೆ.

ಸ ಮಾಡುತ್ತಲಿದ್ದಾರೆ. ಇಡೀ ಜಿಲ್ಲೆಯ ಕಾರ್ಯಕ್ರಮವು ತೃಪ್ತಿಕರವಾಗಿದೆ.

ಸ್ಥಿತಿಯಲ್ಲಿ ಇನ್ನೂ ೫೦ ಲಕ್ಷ ಗುಲಾಮರಿರುವರೆಂದೂ, ಅವರ ವಿಮೋಚನೆಯಾಗಬೇಕೆಂದೂ, ಲಾರ್ಡ ಸೆಸಿಲಸಾಹೇಬರು ಹೇಳುತ್ತಾರೆ.

ಧಾರವಾಡ-

ಇಲ್ಲಿಯ ಕಲೆಕ್ಟರರಾದ ಮೆ. ಅಬೆಟಸಾಹೇಬರು ರಜೆಯ ಮೇಲೆ ಹೋಗುವದರಿಂದ, ಇವರ ಸ್ಥಳದಲ್ಲಿ ಮೆ. ಹಾರ್ಟಶಾರ್ವಸಾಹೇಬರು ನೇಮಿಸಲ್ಪಟ್ಟಿದ್ದಾರೆ. ಈ ಸಾಹೇಬರು ರಜೆಯ ಮೇಲಿದ್ದು, ಇವರು ಬಂದ ಬಳಿಕ, ಮೆ. ಅಬ್ಬಟಸಾಹೇಬರು ಹೋಗುವರು.

ಹಾನಗಲಿನಲ್ಲಿ ಗಂಧದ ಗಿಡ ಕಡಿದ ಶ್ರೀ. ಕುಂದಾಪೂರ ಮೊದಲಾದ ಮೂವರು ಆರೋಪಿಗಳನ್ನು ಮೆ. ಮೆಯಗಸಾಹೇಬರು ಬಿಟ್ಟುಬಿಟ್ಟರು.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಪರವೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಹಾರ

ಯಾವಸ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಗಳೂ ಮತ್ತೆ ವ ಹೊನ್ನಿ ಹೆಸ್ತಿ ವ ಶಿಸಂ ನಾಟುಗಳು

ಸಾಗವಾನಿ ಯೂ ವ ಸಾಗವಾನಿ (ಟ) ಪೂಟಿನ ಹವಕ್ಕ ಕುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆಸಿ ಕೊಡುತ್ತೇವೆ

ಮತ್ತು ಬಿಲ್ಡರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟೆಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನೋಟೀಸು

ಮ॥ ರಾ॥ ರಾ॥ ಶಿವನಗೌಡಾ ಮಹಾದೇವಪ್ಪಗೌಡಾ ಗಂಗನಗೌಡರ ಸಾ॥ ಮುದೇನೂರ ಇವರಿಗೆ—

ನಾನು ಶಿವಲಿಂಗನಗೌಡಾ ಬಿನ್ನ ಶಿವನಗೌಡಾ ಈ ಲೇಖದ ಮೇಲಿಂದ ತಿಳಿಸುವದೇನಂದರೆ- ನೀವು ನನ್ನ ಘರಾಣೇದ ಮ್ಯಾನೇಜರ ನಾತೇದಿಂದ ಇವತ್ತಿನ ವರೆಗೂ ವಹಿವಾಟಮಾಡುತ್ತಾ ಬಂದಿದ್ದು ಘರಾಣೇದ ಇತರ ಮೆಂಬರರಿಗೆ ಏನೂ ವಾಹಿತಿ ಆಗದಂತೆ ನಿಮ್ಮ ಮನಸ್ಸಿಗೆ ಬಂದಂತೆ ವಹಿವಾಟಿ ಮಾಡುತ್ತಾ ಬರುತ್ತೀರಿ. ಆದರೆ ಈ ರೀತಿ ಮಾಡುವದರಿಂದ ಉಳಿದ ಮೆಂಬರ ಜನರಿಗೆ ಲುಕ್ಸಾನ ಮಾಡಿ ನಿಮ್ಮ ಫಾಯದೇ ಮಾಡಿಕೊಳ್ಳುವ ಉದ್ದೇಶವಿದ್ದಂತೆ ಅನುಮಾನ ಬರುತ್ತದೆ. ಕಾರಣ ನಿನ್ನದು ವ ನನ್ನ ಖಾಸ ತಮ್ಮಂದಿರದು ಹಿಶೇ ಬೇರೆಮಾಡಿಕೊಟ್ಟು ಬಡವಿಕ್ಕೆ ಕೇಳಿದರೆ ನನಗೆ ಏನು ಬೇಕಾದದ್ದು ಮಾಡು, ಕೊಡುವದಿಲ್ಲಾ ಅಂತಾ ಹೇಳುತ್ತೀರಿ. ಇದರ ಮೇಲಿಂದ ನೋಡಿದರೆ ನನಗೆ ಲುಕ್ಸಾನ ಮಾಡುವ ಇರಾದೆ ಸ್ಪಷ್ಟವಾಗಿ ಕಾಣಿಸುತ್ತದೆ. ಕಾರಣ ಈ ನೋಟೀಸು ಮುಟ್ಟಿದ ೧೫ ದಿವಸಗಳೊಳಗಾಗಿ ಯೋಗ್ಯ ಪಂಚಾ ಸಮಕ್ಷಮ ನಮ್ಮ ಹಿಶೇ ಯೋಗ್ಯ ರೀತಿಯಿಂದ ಬೇರೆ ಮಾಡಿ ನನ್ನ ತಾಬಾಕ್ಕೆ ಕೊಡಬೇಕು. ಇಲ್ಲದೆ ಹೋದರೆ ನಿಮ್ಮ ಮೇಲೆ ಕಾಯಿದೇತೀರ ಇಲಾಜ ನಡಿಸಬೇತಾದೀತು. ಅದರ ಬಗ್ಗೆ ಹತ್ತುವ ಖರ್ಚು ವಗೈರೆದ್ದರ ಜವಾಬದಾರಿ ನಿಮ್ಮ ಮೇಲೆ ಬರುವದು. ನನಗೆ ಹಿಶೇ ಕೊಡದ ವಿಸಹಾ ಘರಾಣೇದ ವತಿಯಿಂದಾ ನೀವು ಮಾಡಿದ ಯಾವ ವ್ಯವಹಾರಕ್ಕೂ ನಾವು ಬದ್ಧ ಇರುವದಿಲ್ಲಾ. ಇದಕ್ಕೂ ಹಿಂದೆ ಮಾಡಿದ ವ್ಯವಹಾರದ ಬಗ್ಗೆ ಯೋಗ್ಯ ರೀತಿಯಿಂದ ಘರಾಣೇದ ಹಿತದ ದೆಸೆಯಿಂದ ಮಾಡಿದ ವ್ಯವಹಾರಗಳಿಗೆ ಮಾತ್ರ ನಾವು ಬದ್ಧರಿದ್ದೇವೆ ಉಳಿದ ವ್ಯವಹಾರಗಳ ಜವಾಬದಾರಿ ನಿಮ್ಮ ಮೇಲೆ ಇರುತ್ತದೆ. ನಿಮಗೆ ತಿಳಿಸಿದಂತೆ ಸಾರ್ವಜನಿಕ ನೋಟೀಸಿನಿಂದ ಸಹಾ ಎಲ್ಲಾ ಜನರಿಗೆ ನಿಮ್ಮ ವ್ಯವಹಾರಗಳು ನಮ್ಮ ಮೇಲೆ ಬದ್ಧ ಇರುವದಿಲ್ಲಾ ಅಂತಾ ತಿಳಿಸಿರುತ್ತೇನೆ.

ತಾ॥ ೩೦-೯-೧೯೩೦

Shivalingnagouda Shivangouda Gangangoudar
Mudenur

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಮ್ಮು, ದಮ್ಮು, ಅಥವಾ ಯಾವುದೇ ಇನ್ನೂದ ಹೆಸರಿನ ಕೆಮ್ಮು ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಕೆಮ್ಮು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದ್ದಲ್ಲಿ ಕೇವಲ ಮಹಿಳೆಗಳ ಅದ್ಭುತ ಪ್ರತಾಪ! ವೈದ್ಯರ ಅಭಿಪ್ರಾಯ ಮತ್ತು ಅನುಭವ!! ದರ ಎರಡೇ ರೂಪಾಯಿ. ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರಮಾಡಿದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ವಜ್ಯಾಂಕ ಧಾರವಾಡ

ಇದು ಔಷಧ ದೊರೆಯುವ ಕಾಲ ವರ್ತಮಾನಪತ್ರಿಕೆ ಜಾಹೀರಾತು ಕೇಳಿದ ಕೂಡಲೆ ಮುಂಗಡ ಮಾಡಿಸಿಕೊಳ್ಳುವದು ಒಳಿತು.

ಈ ಪತ್ರವನ್ನು ಅಣ್ಣೆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಜಾಳಾಚಾರ್ಯ ಹೂಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೫ನೇ ಅಕ್ಟೋಬರ ೧೯೩೦ (ಸಂಚಿಕೆ ೨೧೯)

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಡಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ಡಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾವದೂತರ ಅಸಲಿ, ಶ್ರೀ. ಆರೂಢ ಸ್ವಾಮಿಗಳ ಲೈಫಿಯಿಂದ ಮತ್ತು ಮುನಸಿಫರಾದ ಶ್ರೀ. ಸಜ್ಜನ ಇವರ ತೀರ್ಪು ಕೊಡಲ್ಪಟ್ಟಿದೆ. ಮತ್ತು ವಾದಿ ಪ್ರತಿವಾದಿ, ಹಾಗು ಮುನಸಿಫರ ಬಾವಚಿತ್ರಗಳನ್ನೂ ಕೊಟ್ಟಿರುತ್ತೆ. ಪುಷ್ಕಳ ಜನರ ಆಗ್ರಹದ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತೆವೆ. ಇದರ ಸಾವಿರ ಪ್ರತಿಗಳನ್ನು ತೆಗೆಸಿದೆ. ಡಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಶೀಘ್ರ ಖಪ್ಪುಆಗಿರುವವು. ಆದರಿಂದ ಗ್ರಾಹಕರು ಶೀಘ್ರ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಖರಿದಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೇಸಲ ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಏಪ್ಪಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಕ್ಕಲ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತಿಳಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಲಿಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಇನ್ನಡಿಯ ಕಟ್ಟಿಗೆಲ್ಲಿ ಕಾಚಿ ಇಡಲು ಒಂದಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮಹಾಪುರುಷರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕಲ್ಪನೆಯಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ಕೋಳ ತಗೆದುಕೊಳ್ಳುವವರಿಗೆ ನೂರಕ್ಕೆ ಘರಘೂ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಯ ಎಂಟು ಲಕ್ಷದ ಮೇಲಂಟು, ಚಲ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಪ್ರ ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ಕರದ ದಿವಾಜಿಟಗಳಿಗೆ ಜನ್ಯಾಗಿ ಬಡಿ ಕೊಡಲ್ಪಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದಂದಿಂದ ತಿಳಕೊಳ್ಳ ಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುವದು. ದರವನ್ನು ಸಮಕ್ಷ ಮ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ಡಾಗೀನಿಗಳನ್ನು ಸತ್ತೆ ಇಟ್ಟುಕೊಳ್ಳುವ ಒಂದು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ವಿಜಯ.

ಶಾಲಿವಾಹನ ವಿಕ್ರಮ ವರ್ಷಾಣಿ ಆಶ್ವಿಜ ಶುದ್ಧ ೧೩

ಸಾಮ್ರಾಜ್ಯ ಪರಿಷತ್ತು ಮತ್ತು ಹಿಂದುಸ್ಥಾನದ ಸ್ವರಾಜ್ಯ.

ಕಾವುಂಡ ಟೇಬಲಿನ ಮುಂಚಿತವಾಗಿ ಲಂಡನದಲ್ಲಿ ವಸಾಹಾತುಗಳ ಪ್ರತಿನಿಧಿಗಳ ಸಾಮ್ರಾಜ್ಯ ಪರಿಷತ್ತು ಕೂಡಿದೆ. ಈ ಪರಿಷತ್ತು ಚತ್ರಕೋಟಿಯಂತಿದೆ. ಒಳಗೆ ಹೋದವನು ಹೊರಗೆ ಬಂದನು; ಹೊರಗಿದ್ದವನು ಒಳಗೆ ಹೋದ ಹೊರ್ತು ಗತ್ಯಂತರವಿಲ್ಲೆಂದಿದೆ. ವಸಾಹಾತುಗಳು ಸ್ವತಂತ್ರವಾಗಬೇಕೆನ್ನುತ್ತವೆ. ಆದರೆ ಅವು ಇಂಗ್ಲಂಡದ ಸಂಬಂಧ ಕಡಿದ ಕೂಡಲೆ ಅನ್ಯರ ಅಧೀನವಾಗಲಿಕ್ಕೆ ಅವಕಾಶವೇ ಹತ್ತದು. ಅಮೇರಿಕೆಯು ಕಾನಡಾ ದೇಶವನ್ನು ನುಂಗೀತು. ಜಪಾನವು ಆಸ್ಟ್ರೇಲಿಯಾದ ಮೇಲೆ ಹೊಂಚು ಹಾಕಿಕೊಂಡು ಕೂತಿರುವದು. ದಕ್ಷಿಣ ಆಫ್ರಿಕೆಯು ಯಾರೊಬ್ಬರ ಭಕ್ಷ್ಯಸ್ಥಾನದಲ್ಲಿ ಬೀಳುವದು. ಆದುದರಿಂದ ಇವು ಭೂಜಲ ಸೇನಾಸಹಾಯದ ದೆಸೆಯಿಂದ ಇಂಗ್ಲಂಡದ ಮೋರೆ ನೋಡಬೇಕಾಗುತ್ತದೆ. ಇಂಗ್ಲಂಡವನ್ನೇ ಅವಲಂಬಿಸಿಕೊಂಡರೆ- ಪರಕೀಯುತ್ವದ ಕಳಂಕ ಹತ್ತುತ್ತದೆ. ಆದುದರಿಂದ ತಮಗೆ ಸ್ವಾತಂತ್ರ್ಯದ ಬಿರುದು ದೊರೆಯಬೇಕೆಂದು ಇವುಗಳ ಅಡಿಕೆಯಾಗಿದೆ. ಅದನ್ನು ಹಿಂದಕ್ಕೆಂದು ಹಾಕಿದ ಮಂಗಮಲಕಿನಂತೆ ಹೇಳ ಆರಂಭಿಸಿದ್ದಾರೆ.

೧ ಸಂಪೂರ್ಣ ಸ್ವಾತಂತ್ರ್ಯವು ಸಾಮ್ರಾಜ್ಯದ ಪರೀಘದಲ್ಲಿರುವದು ಅಸಿದ್ಧವಾಗಲಾರದು.

೨ ಪ್ರತಿಯೊಂದು ವಸಾಹಾತು ತನ್ನ ಸಂಪದಭಿವೃದ್ಧಿಗಾಗಿ ಸ್ವತಂತ್ರವಾದ ಮನೋವೃತ್ತಿಯಿಂದ ವ್ಯಕ್ತೈಶಃ ಪ್ರಯತ್ನಿಸಬಹುದು. ಕಾಯದೆ ಕಾನೂನು ಮಾಡಿಕೊಳ್ಳಬಹುದು. ಆದರೂ ಬ್ರಿಟಿಶ ಸಾಮ್ರಾಜ್ಯದಲ್ಲಿರುವ ಎಲ್ಲ ದೇಶಗಳ ಹಿತಾಹಿತವನ್ನು ತನ್ನ ಕೂಡ ನೋಡಿಕೊಳ್ಳತಕ್ಕದ್ದು.

ಆಯರ್ಲಂಡಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆತಿಲ್ಲ. ಈ ಸ್ವಾತಂತ್ರ್ಯದ ಮಧ್ಯದಲ್ಲಿರುವ ವಿಘ್ನಗಳನ್ನು ತೆಗೆದು ಹಾಕಿದರೆ- ಸಕಲರಿಗೂ ಕ್ಷೇಮವೆಂದು ಮಿ. ಗಲಿಂಗಹ್ಯಾಮರೆಂಬವರು ಭಾಷಣ ಮಾಡಿದರು. ಯಾವದೊಂದು ವಿಷಯ ವಿಚಾರವನ್ನು ಸೂಕ್ಷ್ಮದೃಷ್ಟಿಯಿಂದ ನೋಡದೆ, ವಸಾಹಾತಿನ ಸ್ವಾತಂತ್ರ್ಯದ ಬಗ್ಗೆ ವಿಚಾರ ಮಾಡಿರಿ. ಅಂದರೆ- ಎಲ್ಲ ಬ್ರಿಟಿಶ ವಸಾಹಾತುಗಳ ಏಕೀಕರಣದ ಒಂದು ಸಾಮ್ರಾಜ್ಯವಾಗುವದೆಂದು ಆಸ್ಟ್ರೇಲಿಯಾದ ಪ್ರತಿನಿಧಿಯು ಅಂದಿದ್ದಾನೆ. ಬರೇ ಯೋಗ್ಯತೆ, ಪ್ರತಿಷ್ಠತೆ ಎಂಬ ಅಹಂಕಾರಕ್ಕೆ ಬೀಳದೆ, ಪರಸ್ಪರ ಸಹಕಾರವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಳ್ಳಿರೆಂದು ಸೌಥ್ಆಫ್ರಿಕಾದ ಪ್ರತಿನಿಧಿಯು ಮರ್ಮದ ಮಾತು ಹೇಳಿದನು. ಇದರಲ್ಲಿ ಹಿಂದುಸ್ಥಾನಕ್ಕೆ ಆಮಂತ್ರಣವಿರಲಿಲ್ಲ. ಹೋಗಿ ಮಾತಾಡುವ ಹಕ್ಕಂತೂ ಇರುವದೇ ಇಲ್ಲ. ಆದರೂ ಮೆ. ಬೆನ್ನೆಟ್ ಎಂಬ ಪ್ರಸಿದ್ಧ ಸಾಹೇಬರು ಬ್ರಿಕಾನೇರದ ಮಹಾರಾಜರನ್ನು ಜೆನೇವಾದಿಂದ ಕರಿಸಿ, ಅವರಿಗೆ ಇದರಲ್ಲಿ ಭಾಷಣಮಾಡುವ ಸಮಯವನ್ನೊದಗಿಸಿಕೊಟ್ಟರು. ಹಿಂದುಸ್ಥಾನದಲ್ಲಿದ್ದ ಚಳವಳಿಯ ರಭಸವನ್ನು ಕಂಡು ಕೇಳಿದವರು- ,, ಹಿಂದುಸ್ಥಾನವು ಬ್ರಿಟಿಶ ಸಾಮ್ರಾಜ್ಯದ ಅಂತಸ್ಥಾಗಿ ಉಳಿಯುವದೇ ,, ಎಂಬವಾಗಿ ಪ್ರತಿಯೊಬ್ಬರು ಪ್ರಶ್ನೆ ಮಾಡುತ್ತಾರೆ. ,, ಹಿಂದುಸ್ಥಾನದಲ್ಲಿ ಯಾವ ಸಂಗತಿಯೇ ಆಗಲಿ; ಏನೇ ಸಂಭವಿಸಲಿ. ಹಿಂದುಸ್ಥಾನವು ಬ್ರಿಟಿಶ ಸಾಮ್ರಾಜ್ಯದ ಒಂದು ಭಾಗವೇ ಆಗುವದೆಂದು ,, ನಾನು ಸ್ಪಷ್ಟವಾಗಿ ಹೇಳುತ್ತೇನೆಂದು ಮಹಾರಾಜರು ಅಂದಿದ್ದಾರೆ. ಮಹಾರಾಜರ ರಾಜಭಕ್ತಿಯ ಹೇಗೇ ಇರಲಿ; ಅವರಿಂದ ಹೊರಟ ಉದ್ಗಾರಗಳಂತೆ ಹಿಂದುಸ್ಥಾನದ ರಾಜಕೀಯ ಇತಿಹಾಸವು ಬರೆಯಲ್ಪಡುವ ಸರ್ಪಸ್ವೀ ಭಾರವು ಬ್ರಿಟಿಶ ರಾಜನೀತಿಯನ್ನು ಅವಲಂಬಿಸಿರುತ್ತದೆ. ಬಹಳ ತಡವೇಇಲ್ಲ. ರಾವುಂಡ ಟೇಬಲದಲ್ಲಿ ಅದರ ಫಲಶ್ರುತಿಯು ತಿಳಿಯುವದುಂಟು.

ಭೂಕಂದಾಯ ಕೊಡದ ಎರಡು ಹಳ್ಳಿಗಳ ಮೇಲೆ ಮುತ್ತಿಗೆ

—೦*೦—

ಗುಜರಾಥದ ರೈತರು ಹಪ್ತೆ ಕೊಡಬಾರದೆಂದು ಚಳವಳಿ ನಡೆಸಿದ್ದಾರಷ್ಟೇ; ಹಪ್ತೆ ಕೊಡದಂಥ ಎರಡು ಹಳ್ಳಿಗಳ ಮೇಲೆ ಪೋಲಿಸ ಮತ್ತು ಮ್ಯಾಜಿಸ್ಟ್ರೇಟರ ಜಪ್ತಿಯು ಹೋಯಿತು. ಇವರು ಹಳ್ಳಿಗಳ ಮೇಲೆ ಮುತ್ತಿಗೆ ಹಾಕುವ ರೀತಿಯಲ್ಲಿ ಅರ್ಭಟ ಮಾಡಿದರು, ಜನರನ್ನು ಊರುಬಿಟ್ಟು ಹೋಗಗೊಡಲಿಲ್ಲ. ಮಲಮೂತ್ರ ವಿಸರ್ಜನ, ಬಾವಿಯಿಂದ ನೀರು ತರುವದು ಕೂಡ ದುಸ್ತರವಾಯಿತು. ಅನೇಕ ಹೆಂಗಸರು ಕೇಳಿದ ಪ್ರಶ್ನೆಕ್ಕೆ ಸರಿಯಾಗಿ ಉತ್ತರ ಕೊಡಲಿಲ್ಲೆಂದು ಲತ್ತೀ ತಿಂದರು. ಮ್ಯಾಜಿಸ್ಟ್ರೇಟರು ಕೊಟ್ಟ ಪಾನವನ್ನು ಪೋಲಿಸರು ಕಸಕಿಕೊಂಡರೆ

—)(೦)(—

ಬೇಲಬೆಲ್ಲಿಯಲ್ಲಿ ರಾಜಾಜಿಯವರು ಪದವಿದ್ಯೆನ್ನು ಬಿಟ್ಟುಗೊಟ್ಟ ಶ್ರೀ ಭೈರಾಮಭಾಯಿ ಇವರಿಗೆ ಮ್ಯಾಜಿಸ್ಟ್ರೇಟರು ದಬ್ಬಾಳಿಕೆ ಕಾಯದೆ ಮತ್ತು ಕೋರ್ಟಿನ ಹುಕುಮು ಅವಮಾನ ಮಾಡಿದ್ದಕ್ಕಾಗಿ, ಮೂರು ತಿಂಗಳ ಸಶ್ರಮ ಸಾಕ್ಷ ಇನ್ನೂರು ರೂಪಾಯಿ ದಂಡದ ಶಿಕ್ಷೆ ವಿಧಿಸಿದರು. ವಿಚಾರಣೆಯ ಪೂರ್ವದಲ್ಲಿ ಇವರು ಕೋರ್ಟಿಗೆ ಬಂದು, ಕೆಳಗೆ ಕೂತುಕೊಂಡರು. ಇವರ ಯೋಗ್ಯತೆ ಮತ್ತು ಹಿಂದಕ್ಕಿದ್ದ ಪದವಿಯನ್ನು ಲಕ್ಷ್ಯಕ್ಕೆ ತಂದು, ಮ್ಯಾಜಿಸ್ಟ್ರೇಟರು ಇವರಿಗೆ ಕೂರ್ಚಲು ಖುರ್ಚಿ ಕೊಟ್ಟರು ಕಲಹೊತ್ತಿನವರೆಲೆ ಅ|| ಪ್ರೊ|| ಸಾಹೇಬರು ಬಂದು, ಇವರನ್ನು ಖುರ್ಚಿಯಿಂದೆಬ್ಬಿಸಿ, ಸಾಧಾರಣ ಆರೋಪಿಯಂತೆ ಕೋರ್ಟಿನ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ದೆಪ್ಪಗಾದರು ಕೋರ್ಟಿನಲ್ಲಿ ಸಹ ಪೋಲಿಸರ ಹುಕುಮತ್ತೇ!

ಅಡಿಯ ಮುಂದಿಡೆ ಸ್ವರ್ಗ

—(೦)—

ಬಡೋದೆಯ ಕಲಾಭವನ ವಿದ್ಯಾಲಯದ ವಿದ್ಯಾರ್ಥಿಗಳು ತಮ್ಮ ವಸತಿಗೃಹದವರೆಲೆ ರಾಷ್ಟ್ರೀಯ ನಿಶಾನೆ ಹಚ್ಚಿದರು. ಪ್ರಿನ್ಸಿಪಾಲರು ನಿಶಾನೆ ತೆಗೆಯಬೇಕೆಂದು ವಿದ್ಯಾರ್ಥಿಗಳಿಗೆ ಹುಕುಮು ಮಾಡಿದರು. ವಶಿಷ್ಠ ವಿಶ್ವಾಮಿತ್ರರಂಥ ಗುರುಗಳೆಂದು ತಿಳಿಕೊಂಡಿರಬಹುದು ವಿದ್ಯಾರ್ಥಿಗಳು ಬೂಟ, ಪಾಟ್ಲೂನ, ಸಿಗರಟ್ಟಿನ ಗುರುಗಳ ಆಜ್ಞೆಯನ್ನು ಮನ್ನಿಸತಕ್ಕದ್ದಲ್ಲ; ಒತ್ತಾಯ ಮಾಡಿದರೆ- ವಸತಿಗೃಹಕ್ಕೇ ರಾಜೀನಾಮೆ ಕೊಡಬೇಕೆಂದು ಠರಾವು ಮಾಡಿ ಸ್ಥಿರ ಕೂತಿದ್ದಾರೆ.

ಸಬ್‌ಜಿಸ್ಟ್ರರು ಕ್ಷಮೆ ಬೇಡಿಕೊಂಡರು

ಮುಂಡವಗಿಯಲ್ಲಿ ಹಾಲೆರೆಯಲಿಕ್ಕೆ ಬಂದವರಿಗೆ ವಿಷಪೆರೆದಂತೆ ಆಚರಿಸಿದ ಸಬ್‌ರಜಿಸ್ಟ್ರಾರ ಎಂ ದೇಸಾಯಿಯವರು ತಮ್ಮ ಉದ್ದಾಮತನದ ತಪ್ಪು ಒಪ್ಪಿಕೊಂಡು ಮಾಮಲೇದಾರ ಶ್ರೀ. ಗುತ್ತಲ ಮತ್ತು ಮಹಾಲಕರಿಯಾಗಿ ಹೋಗಿರುವ ಶ್ರೀ. ಶೇಷಗಿರಿರಾವ ಭುಜಂಗ ಇವರ ಸಮಕ್ಷಮ ತ್ರೀ ದೀಕ್ಷಿತರ ಕ್ಷಮೆ ಬೇಡಿಕೊಂಡು, ಹೊತ್ತುತ್ತಿನ್ನ ಉದಿಯನ್ನು ಶಾಂತಪಡಿಸಿಕೊಂಡರು. ಈಗಿನ ಚಳವಳಿಯಲ್ಲಿ ದೊಡ್ಡದೊಡ್ಡ ಮುಂಡಿಗೆಗಳೇ ಉರುಳುತ್ತಿರುವಾಗ, ಎಂ ದೇಸಾಯಿಯಂಥವರು ಅಧಿಕಾರದ ಮಹಿಮೆ ತೋರಿಸಲೆತ್ನಿಸಿದ್ದು ದೂಷಣೀಯವಾಯಿತು. ಯಾರೂ ಇಂಥ ಅವಿಚಾರದ ಕೃತ್ಯ ಮಾಡಲಾರರು.

ಶಿರ್ಸಿ ತಾಲೂಕಿನ ಹಳ್ಳಿಗಳ ಸತ್ಯಾಗ್ರಹ.

ಸರಕಾರಿ ಕಾಮದಾರರಿಗೆ ಮುಂದಾಗಿ

ಎಚ್ಚರಿಕೆ.

—(೦)—

ಅಪ್ಪಣೆ ಪಡೆಕೊಳ್ಳದೆ ಮನೆಯಲ್ಲಿ ಬರಕೂಡದು.

ಶಿರ್ಸಿ ತಾಲೂಕಿನಲ್ಲಿ ಜಂಗಲ ಸತ್ಯಾಗ್ರಹವು ಒಳ್ಳೇ ಕಸವಿನಿಂದ ನಡೆದಿದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಸತ್ಯಾಗ್ರಹವು ಬೇರೂರಿದೆ. ಕೆಲವು ಹಳ್ಳಿಗಳಲ್ಲಂತೂ ಬಹಳ ಮುಂದೆ ಹೋಗಿವೆ. ಬನವಾಸಿಯ ಹತ್ತರಿರುವ ಚಿಗಳಿ, ವೇಂಕಟಾಪೂರ, ಓಣೇಕೇರಿ, ಹುಳೇಮಳಿಗಿ, ಕಲ್ಲುಂಡಿಕೊಪ್ಪ, ಸುಗಾವಿ ಮೊದಲಾದ ಗ್ರಾಮಗಳಲ್ಲಿ ಪ್ರತಿಯೊಂದು ಮನೆಯ ಶಲೆಬಾಗಿಲದಲ್ಲಿ

" ಮನೆಯ ಯಜಮಾನನ ಅಪ್ಪಣೆ ಇಲ್ಲದೆ
ಸರಕಾರಿ ನೌಕರರು ಒಳಗೆ ಬರಕೂಡದು. "

ಎಂದು ಬರೆದ ಬೋರ್ಡುಗಳನ್ನು ಪಚ್ಚಿದ್ದಾರೆ. ಹೆಂಗಸರಲ್ಲಿಯೂ ಹುರುಪು ಮತ್ತು ಆವೇಶ ತುಂಬಿದ್ದು, ಇವರಂಥ ಗಟ್ಟಿಗತನವನ್ನು ಪುರುಷರು ತಂದುಕೊಂಡರೆ ಸಾಕೆಂದು ಅಲ್ಲಿಂದ ಒಂದ ಪತ್ರದ ಸಾರಾಂಶವಾಗಿದೆ.

ಹೊನ್ನಾವರ ತಾಲೂಕ

—(೨)—

ಶಿರ್ಸಿ, ಹೊನ್ನಾವರ, ಹೆಬ್ಬಾಣಕೇರಿ, ಅಳ್ಳಂಕಿ, ಕಾಸರಕೋಡ ದಾಗೂ ಗುಣವಂತೆ ಗ್ರಾಮಗಳಲ್ಲಿ ಜಂಗಲ ಸತ್ಯಾಗ್ರಹ ಮಾಡಿದ್ದರು. ಜನ ಸಂದಣಿಯು ಹೆಚ್ಚಾಗಿತ್ತು. ಕಡಿದು ತಂದ ಕಟ್ಟಿಗೆಯನ್ನು ಊರಲ್ಲಿ ಲಿಲಾವು ಮಾಡಿದರು.

ಭಟ್ಕಳದಲ್ಲಿ ಕನ್ಯಾಶಾಲೆಯ ವಿದ್ಯಾರ್ಥಿಗಳು ತಾ|| ೨೬ರಲ್ಲಿ ಶಾಲೆಯ ಮೇಲೆ ನಾಡಗುಡಿಯನ್ನು ಏರಿಸಿದರು. ಇವರ ಅನುಕರಣಮಾಡಿ ಕಿರಿಯ ಬಾಲಕರೂ ಶಾಲೆಯ ಮೇಲೆ ಧ್ವಜವನ್ನು ಏರಿಸಿದರು.

ಹೊನ್ನಾವರದ ಮಿಶನ ಸ್ಕೂಲಿನ ಪ್ರಿನ್ಸಿಪಾಲ ಬಹಾದ್ದೂರರು ಸ್ವಲ್ಪ ಉದ್ಧಟತನವನ್ನು ತೋರಿಸಿದರು. ಈ ತಾರೀಖಿಗೆ ಒಬ್ಬ ಸ್ವಯಂಸೇವಕನು ಜನ್ಮಭೂಮಿಯಲ್ಲಿ ಬಂದಿದ್ದ ಹೊನ್ನಾವರ ಸುದ್ದಿಯನ್ನು ಹೇಳುತ್ತ ಹೊರಟಿದ್ದನು. ಮಿಶನ್ನ ಸ್ಕೂಲ ಬಳಿ ಬಂದಕೂಡಲೆ ಪ್ರಿನ್ಸಿಪಾಲರು ಅವನನ್ನು ತಾವೇ ಸ್ವತ ಬಳಿಯಬೇಕೆಂದು ಹೋಗಿ ಜನ್ಮಾಗಿ ಹೊಡೆದು ದಬ್ಬಿದರು. ಈ ಮಹತ್ಕಾರ್ಯಮಾಡುವದಕ್ಕಾಗಿ ಅವರು ಅಲ್ಲಿ ಸ್ವಾಭಿಮಾನಿಸಬಳಿಯಿದ್ದ ಸೋಲಿಸನನ್ನು ಕರೆದರು. ಆದರೆ ಅವನು ನಕಾರ ಹೇಳಿದನು.

ತಾರೀಖು ೨೧ರಲ್ಲಿ ಭಟ್ಕಳದ ಬಟ್ಟೆಕಾಲ್ಯಾಣಿಯಲ್ಲಿ ಉಳಿದೆಹೆಗಳಲ್ಲಿ ಗೋಚರವು ಪ್ರಾರಂಭವಾಗಿದೆ. ನಗರಸಂಕೀರ್ತನೆಯಂತೂ ಪ್ರತಿನಿತ್ಯ ನಡೆಯುತ್ತಲಿದೆ.

ತಾ|| (ಬದಾಮಿ) ಕೆರೂರಲ್ಲಿ ಆಡಳಿತ ಕಾಯದೇಭಂಗ.

—೦—

ತಾ|| ೨-೧೦-೩೦ನೇ ವಿಜಯದಶಮಿಯ ದಿವಸ ಮಧ್ಯಾನ್ಹ ೨ ಘಂಟೆಗೆ ಶ್ರೀಯುತ ಭೀಮರಾವ ಕುಲಕರ್ಣಿಯವರ ನೇತೃತ್ವದಲ್ಲಿ ಮದ್ದರಾವ ಕುಟಕನಳೇರಿ, ರಾಮಚಂದ್ರ ಜೋಶಿ, ಭೀಮಶೇಸ ಕಾಮಂಡಿಸಿ, ಗುರಾಚಾರ್ಯ ಕಾಣಕಶಿರೂರ ಈ ನಾಲ್ಕು ಜನ ಸ್ಥಾನಿಕ ಸ್ವಯಂಸೇವಕರನ್ನು ಕೂಡಿಕೊಂಡು ನಾಲ್ಕೈದು ನೂರು ಜನರೊಂದಿಗೂ ಸಬ್ ಇನಸ್ಪೇಕ್ಟರ, ರೆಂಜರ ಫಾರೆಸ್ಟ, ಹವಾಲದಾರ ಕಾನಸ್ಟೇಬಲ ಇನ್ನು ಅನೇಕ ಸರಕಾರೀ ಅಧಿಕಾರಿಗಳೊಂದಿಗೂ ಅತಿ ವಿಜೃಂಭಣೆಯಿಂದ ಮೆರವಣಿಗೆ ಹೊರಟು ಗುಡ್ಡವನ್ನು ಪ್ರವೇಶಿಸಿದರು. ಜನರು ನೋಡಲಿಕ್ಕೆಂದು ತಂಡತಂಡಾಗಿ ನೆರೆಯುತ್ತಿದರು. ಗುಡ್ಡದಲ್ಲಿ ಎತ್ತ ನೋಡಿದತ್ತ ಜನರೇ ತಾಣುತ್ತಿದ್ದರು. ಈ ೫ ಜನರು ಶ್ರೀಗಂಧದ ಗಿಡಗಳನ್ನು ಕಡಿಯಲು ಪ್ರಾರಂಭಿಸಿದರು. ನೆರೆದ ಜನರು ಜಯಘೋಷ ಮಾಡತೊಡಗಿದರು. ಸರಕಾರಿ ಅಮಲದಾರರು ಏನೂ ಮಾಡದೆ ಸುಮ್ಮನೆ ನೋಡುತ್ತ ನಿಂತಿದ್ದರು. ಅಷ್ಟರಲ್ಲಿ ೫॥ ಘಂಟೆಯಾದ್ದರಿಂದ ಗಿಡಕಡಿಯುವದನ್ನು ನಿಲ್ಲಿಸಿ, ಕಡಿದ ಗಿಡಗಳನ್ನು ತೆಗೆದುಕೊಂಡು ಮೆರವಣಿಗೆಯೊಂದಿಗೆ ಊರಿಗೆ ಬಂದರು. ಹೆಣ್ಣು ಮಕ್ಕಳು ಅಲ್ಲಲ್ಲಿ ಪೂಮಾಲೆ ಹಾಕಿ ಆರತಿಯನ್ನು ಬೆಳಗಿದರು. ಜನರಲ್ಲಿ ಉತ್ಸಾಹವು ತುಂಬಿ ತುಳುಕುತ್ತಿತ್ತು. ತೀವ್ರವೇ ಸಾಮುದಾಯಿಕ ಆಡಳಿತ ಕಾಯದೆಭಂಗ ಮಾಡಲ್ಪಡುವದು.

ತಾಲೂಕ ಲೋಕಲಬೋರ್ಡಿನ ಮೇಲೆ ರಾಷ್ಟ್ರೀಯ ನಿಶಾನೆ

—(೨)—

ದಾಣೇಬೆನ್ನೂರಿನ ತಾಲೂಕ ಲೋಕಲ್‌ಬೋರ್ಡಿನ ಕಚೇರಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂದು-

೧ ಶ್ರೀ. ಚನ್ನಪ್ಪಾ ಮಾಳನವರ
೨ ,, ಸಿದ್ದನಗೌಡಾ ಜಲಗೇರಿ
೩ ,, ಮಲ್ಲೇಶಪ್ಪಾ ಬಂದಣ್ಣನವರ
೪ ,, ಲಕ್ಷ್ಮಿಪ್ಪಾ ಗೊಲ್ಲಗೆಪ್ಪಾ ಸಾಹುಕಾರ

ಈ ನಾಲ್ವರು ಪ್ರೆಸಿಡೆಂಟರ ಕಡೆಗೆ ಅರ್ಜಿಯ ಪತ್ರ ಬರೆದು ಕಳಿಸಿದ್ದು, ಅದರ ವಿಚಾರಣೆಯಾಗಿ, ಪ್ರೆಸಿಡೆಂಟರು ಇದೇ ತಿಂಗಳ ೧೫ ನೇ ತಾರೀಖಿನ ದಿವಸ ಸ್ಪೇಶಲ ಜನರಲ ಕಮಿಟಿ ಕೂಡಬೇಕೆಂದು ಗೊತ್ತು ಮಾಡಿದ್ದಾರೆ. ದಾಣೇಬೆನ್ನೂರ ಗಂಟುಗಲಿ ಎನಿಸಿಕೊಳ್ಳುವದೆಂಬದು ಕಾಂಗ್ರೆಸದವರೆಲ್ಲರಿಗೂ ಆನಂದದ ಸುದ್ದಿಯು.

ನಾನೇ ಆ ದುರ್ದೈವಿ ಮದುಮಗನು.

—(೦)—

ಲಂಡನದಲ್ಲೊಂದು ಮದುವೆ ಜರಿಯಿತು. ಮದುವಣಿಗೆ ಮತ್ತು ಮದುಮಗಳು ದೊಡ್ಡ ಮನೆತನದವರು. ಆದರೆ ಪುನರ್ವಿವಾಹ ಗಂಡ ಹೆಂಡರಿಬ್ಬರೂ ರಜಿಸ್ಟ್ರಾರ ಕಚೇರಿಯಲ್ಲಿ ಅಲ್ಲಿಯ ಪದ್ಧತಿ ಪ್ರಕಾರ ಸಹೀ ಮಾಡತಕ್ಕದ್ದು. ಹೊಸ ದಂಪತ್ಯನ್ನು ನೋಡಲು ಕಚೇರಿಯ ಬಯಿಲದಲ್ಲಿ ಸಾವಿರಾರು ಜನರು ನೆರೆದರು. ಹೆಂಡತಿಯು ಗಂಡ ಕೊಟ್ಟ ಅನೇಕ ಮುತ್ತಿನ ಹಾರಗಳನ್ನು ಧರಿಸಿಕೊಂಡು, ಬಿಳಿಯುಳ್ಳ ಬಟ್ಟೆಗಳನ್ನುಟ್ಟುಕೊಂಡು, ಕಚೇರಿಗೆ ಬಂದಳು. ಗಂಡನು ಹೀಗೆ ಬರಲಿಲ್ಲ. ಸಾದಾ ಉಡಿಗೆ ತೊಡಿಗೆ ಇತ್ತು. ಜನರ ಗದ್ದಲದಲ್ಲಿ ಯಾರೂ ಹಾವೀ ಬಿಡದಾದರು. ಇವನನ್ನು ಗುರ್ತಿಸುವಂಥವರಾರೂ ಇರಲಿಲ್ಲ. ಸಿಪಾಯಿಯು ಕೂಡ ಮಗನಾದ ಸರ ರಾಮಲಂಡ ಹಾಜರಾಗಿದ್ದನು ಒಂದಿರುವನೇ ಎಂದು ಕೂಗಿದ್ದು- ನಾನೇ ಆ ದುರ್ದೈವಿಯು ಎಂದು ಹೇಳುತ್ತ ಕಚೇರಿಯಲ್ಲಿ ಹೋದನು. ಹೆಂಡತಿಯು ಬೊದಲು ಒಪ್ಪಿ ಅಲ್ಲಿನ ಹೆಂಡತಿಯು. ಸಂಗತಿ ಹತ್ತು ವರ್ಷದ ಮಗನನ್ನು ಕರಕೊಂಡೇ ಹೋಗಿದ್ದಳು. ಕಚೇರಿಯಲ್ಲಿ ಗಂಡನ ಕೈ ಹಿಡಿಯುವದಕ್ಕಿಂತ, ಹೆಚ್ಚಾಗಿ ಈ ಮಗನಿಗೆ ತಿರಿಪ್ಪಿಲ್ಲದೆ ಮುದ್ದು ಕೂಡುತ್ತಿಳೇ ಇದ್ದಳು!!!

ಮದ್ರಾಸ ಮತ್ತು ನಿಜಾಮ ಸರಕಾರದವರು ಸೇರಿ, ತಿಮ್ಮಲಾಪೂರದಲ್ಲಿ ತುಂಗಭದ್ರಾ ನದಿಗೆ ಸಣ್ಣದಂತೆ ಪ್ರಚಂಡ ಕಾಲುವೆ ಮಾಡಿದ್ದುದರು. ಈ ಕಾಲುವೆಯು ನೂರಿನ್ನೂರು ಮೈಲು ಉದ್ದವಾಗುವದು. ಏನು ಕೋಟಿಯ ಬೆಚ್ಚ ಬರುವದು.

ಸರ ವಿಟ್ಠಲದಾಸ ಠಾಕರಸಿ ಟಾಟಾ ಕಂಪನಿಯ ಕಬ್ಬಿಣದ ಕಾರಖಾನೆಯ ಗೌರವ ವ್ಯವಸ್ಥಾಪಕರಾಗುವರು. ಸಂಬಳವಿಲ್ಲ. ಕೆಲಸಕ್ಕೆ ತಕ್ಕಂತೆ ಒಪ್ಪುವಾನವಾಗಿ ದ್ರವ್ಯದ ರಾಸಿಯು ಇವರ ಮುಂದೆ ಬೀಳುವದು.

ವಿಜಾಪುರದಲ್ಲಿ ಕಾಂಗ್ರೆಸ ಕೆಲಸವು ಭರದಿಂದ ಸಾಗುತ್ತಿದೆ. ಮಹಮ್ಮದೀಯರು ಮುಂದೆಬಂದು ಕೆಲ

ಧಾರವಾಡ—

ನಿನ್ನವಿಂದ ಮೈಸೂರಿನಲ್ಲಿ ೧೬ನೇ ಕರ್ನಾಟಕ ಸಾಹಿತ್ಯ ಸಮ್ಮೇಲನವು ಶ್ರೀ ಅಲೂರ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿದೆ. ಎಲ್ಲ ವಿಷಯಗಳನ್ನು ಸವಿಸ್ತರವಾಗಿ ಬುಧವಾರದಿಂದ ಓದಿಯುತ್ತಾ ಹೋಗುವೆವು.

ನಿನ್ನೆ ಮಧ್ಯಾನ್ಹದಲ್ಲಿ ಒಂದು ಸರವು ಮುಳಿಬಿತ್ತು.

ನೋಟೀಸಿನ ಉತ್ತರ

—(೦)—

ಶಿವಪ್ಪಾ ತಂದಿ ಭರಮಪ್ಪಾ ಸುಣಗಾರ ಸಾ॥ ಹೊಸೂರ ತಾಲುಕ ಕಲಘಟಗಿ ಇವನಿಗೆ-

ಕಳಗೆ ಸಹಿ ಮಾಡಿದವಳಕಡೆಯಿಂದಾ ಈ ನೋಟೀಸಿನಮೂಲಕ ತಿಳಿಸುವದೇನಂದರೆ- ನೀನು ನನ್ನ ಗಂಡನಿದ್ದು ನನ್ನ ನಿನ್ನ ಲಗ್ನವಾಗಿ ಅಜಮಾಸ ೧೦-೧೫ ವರ್ಷವಾಯಿತು ಲಗ್ನವಾದನಂತರ ಎರಡು ವರ್ಷದವರೆಗೆ ಸುಖೀತ ರೀತಿಯಿಂದ ಬಾಳ್ವೆ ಮಾಡಿಕೊಂತಾಬಂದು ಈಗ ಅಜಮಾಸ ವರ್ಷದವರಿ ಕಳಗೆ ಎರಡನೇದವರ ಮಾತು ಕೇಳಿ ನನಗೆ ಹೊಡೆದು ಬಡೆದು ಮಾಡಿ ಉಪ್ಪೀರಿದರಸಲೆ ಹೊರಗೆ ಹಾಕಿದಿ ಆ ಕಾಲಕ್ಕೆ ನನ್ನ ಮೈಮೇಲೆ ಒಂದು ದಾಗೀನೆ ಸಹ ಇದ್ದಿಲ್ಲಾ ನಾನು ಕೆಲವು ಜನ ಪಂಚಾಯತಕಡೆಯಿಂದಾ ಹೇಳಿಸಿದರೂ ನೀನು ಕೇಳಲಿಲ್ಲಾ ಹೀಗಿದ್ದು ತಾರೀಖು ೨೫-೯-೯೦ ರಂದೇ ಇನ್ನಯ ದಿವಸ ವಿಜಯ ಪತ್ರದಲ್ಲಿ ಕೊಟ್ಟ ನೋಟೀಸು ಅಜೇಬಾತ ಸುಳ್ಳು ಇರುತ್ತದೆ ನೀನು ನನಗೆ ಹೊರಗೆ ಹಾಕಿದಂದಿನಿಂದಾ ಇಲ್ಲಿಯವರೆಗೆ ನನ್ನ ಹೊಟ್ಟೆ ಬಟ್ಟೆಯ ಸಲುವಾಗಿ ಎರಡನೇದವಂಲ್ಲಿ ಹೂದು ನೂರು ೧೦೦ ರೂಪಾಯಿ ಸಾಲಾತೆಗೆದಿರುತ್ತೇನೆ ಈಗ ಆ ಸಾಲಗಾರರ ತಗಾದೆ ಬಹಳವಾದ್ದರಿಂದಲೂ ಮುಂದೆ ನನ್ನ ಉಪಜೀವನಕ್ಕೆ ಮಾರ್ಗವಿಲ್ಲದ್ದರಿಂದಲೂ ಈ ನೋಟೀಸು ಕೊಡಬೇಕಾಯಿತು

ಈ ನೋಟೀಸು ಮುಟ್ಟಿದ ೮ ದಿವಸದ ಒಳಗಾಗಿ ಮೇಲೆ ಕಾಣಿಸಿದ ನೂರು ರೂಪಾಯಿ ಸಾಲಾ ತೀರಿಸಿ ಮತ್ತು ಯೋಗ್ಯ ಜಾವಿಸಾನು ಕೊಟ್ಟು ನನ್ನನ್ನು ಕರೆದುಕೊಂಡು ಹೋಗಿ ಸುರಳೀತ ರೀತಿಯಿಂದಾ ಬಾಳುವೆ ಮಾಡಬೇಕು ಜರ ಇದಕ್ಕೆ ತಪ್ಪಿದರೆ ಇದೇ ನೋಡಬೇಟಿಯೆಂದು ತಿಳಿದು ನಾನು ಎಂಡನೇದವನನ್ನು ಉಡಿಕೆ ಮಾಡಿಕೊಳ್ಳುತ್ತೇನೆ ಆಮೇಲೆ ನಿನ್ನದು ನನ್ನ ಮೇಲೆಯೂ ಮತ್ತು ನನ್ನ ಉಡಿಕೆ ಗಂಡನಮೇಲೆಯೂ ನಿನ್ನ ಯಾವ ತರದ ಹಕ್ಕು ನಡಿಯಲಿಕ್ಕಿಲ್ಲಾ ಈ ನೋಟಿಸಿನ ಖರ್ಚು ನಿನ್ನ ತಲೆಯಮೇಲೆ ಅಂತ ತಿಳಿಯುವದು ಅಂತಾ ಕೊಟ್ಟ ನೋಟೀಸಿಗೆ ಸಹಿ ತಾರೀಖು ೪-೧೦-೯೯ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ನಾಗವ್ವಾ ಕೋಂ ಶಿವಪ್ಪಾ ಸುಣಗಾರ ಸಾ॥ ಹೊಸೂರು ಇ ಕೆಯ ದು ಇರುತ್ತದೆ

ಅನೇಕ ವಿಷಧಗಳನ್ನು ಸೇವಿಸಿ
ಬಿಸಾಕಲ್ಪಟ್ಟಿರುವ ಭಗಿನಿಯರಿಗೆ ಅಮೃತ ಸುದೇಶ

ಮುಕ್ತಾಂಬರ

ಕೆಲ್ಲು ಅಗಿ, ಅಥವಾ ಯಾವುದೇ ಬ್ಯಾದಿ ಕೆಲಿಯ ಕೊಟ್ಟರೆ ನಮ್ಮ ಮುಕ್ತಾಂಬರ ದಿವ್ಯಾಷಧವು ಈ ವಿಷಧಗಳ ದೇಹದಿಂದ ಮೂಡಿ ದಿವಸಗಳಲ್ಲಿ ಸಂಪೂರ್ಣ ಗುಣವಾಗುವದು. ಅದ್ದೆ ಕೇವಲ ಮನುಷ್ಯರಿಗೆ ಅದ್ಭುತ ಪ್ರಭಾವ! ಪ್ರಾಣಿಗಳ ಅನೇಕ ವಿಷಗಳ ಅನುಭವ! ದರ ಎರಡೇ ರೂಪಾಯಿ. ಅಂಚೆಪೆಟ್ಟಿಗೆ ಈ ರೂಪಾಯಿಗಳನ್ನು ಮತ್ತು ಅಭಿಪ್ರಾಯಗಳು, ಪ್ರೋಸ್ಟ ಕಿಟಿಟಿನ ರೂಪದಿಂದಾಗಲಿ, ಮುಂಗಡ ಕಳಿಸಿಕೊಡುವದು

ವಿಳಾಸ—ಶ್ರೀ. ಜಾತಕರಾಯ ದೀಕ್ಷಿತ
C/o ಮಧ್ವಜ್ಯಾಂಕಳ ಭಾರತಾಶ್ರಮ

ಇದು ಕಿಷ್ಟ ದೇಶವಾಗ್ಯ ಯಾರ ಪರಿಚಯಪತ್ರಿಕೆ ಇಲ್ಲದೆ ನೀಡುವ ಕಿ ದೇಶಿಸುವ ಮಾಡಿರುವದಿಂದ ಬರೆಯಬೇಕು.

ಛಾಪಖಾನೆಯ ಪಾಮಾನ ಮಾರತಕ್ಕವಿವೆ-

—(೦)—

ಚಾಂಡ್ಲರ ಲ್ಯಡ ಪ್ರಾಯಿಸ್ ಫುಲ್‌ಸ್ಕೇಪ ಜಾಫಶೀಟ ಟ್ರೆಡಲ್, ಪಾವ್ವೀರ ಕಟಿಂಗ ಮಶಿನ್ ೨೮ ಇಂಚು ಹ್ಯಾಂಡ ಪರಫೋರೆಟಿಂಗ ಮಶಿನ್ ೧೬ ಇಂಚು ಸ್ಟಿಚಿಂಗ ಮಶಿನ್ ನಂಬರಿಂಗ ಮಶಿನ್ ಸಿಂಗಲ ಸಿಲೆಂಡರ ಪ್ರಿಂಟಿಂಗ ಮಶಿನ್ ಪ್ರೂಫಪ್ರೆಸ್ಸ ಲೆಡ್ ಮೋಲ್ಡ ಲೆಡ್ಡ ಕಟರ ಬುಕ್ಕ ಬಾಯಿಂಡರ ದೇಶೀ ಕಟಿಂಗ ಮಶಿನ್ನ ರೂಲಿಂಗ ಮಶಿನುಗಳೂ ಕನ್ನಡ ಮರಾಠಿ ಮತ್ತು ಇಂಗ್ಲಿಷ ಅನೇಕ ನಮೂನೆಯ ಟಾಯಿಪಗಳು ಕೇಸು ಸ್ಟ್ರಾಂಗ ಗ್ಯಾಲಿ ಸ್ಟಿಕ್ ಮತ್ತು ಬ್ಲಾಕುಗಳೂ ಮಾರಲಿಕ್ಕೆ ಸಿದ್ಧವಿವೆ. ಇವುಗಳನ್ನು ಒಟ್ಟಿಗೆಯಾಗಲಿ ಬೇರೆ ಬೇರೆಯಾಗಲಿ ಮಾರಲಿಕ್ಕೆ ಕೊಡುವೆವು. ಗ್ರಾಹಕರು ತ್ವರೆಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪತ್ರದ್ವಾರದಿಂದ ಅಥವಾ ಸಮಕ್ಷಮ ಭೆಟ್ಟಿಯಾಗಿ ತಿಳಿದುಕೊಳ್ಳಬೇಕು.

ಕ, ವಾ. ಕಂಟಿ

ವ್ಯವಸ್ಥಾಪಕ :: ಕನ್ನಡಿಗ

ಜಾಹೀರ ನೋಟೀಸು-

—(೦)—

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ- ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆಡ್ಡಿ ವ ಶಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವಾನಿ (ಟ) ಪುಟಿನ ಡವಕ್ಕ ಹುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಾತಿ ವ ರೀತಿ ವ ಶಿಲಿಂಗು ತ್ಯಯಾರಿ ತಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಹಲ್ಲರ ಪರಿಸೀಡರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋತಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.]

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೬ ನೇ ಅಕ್ಟೋಬರ ೧೯೩೦ (ಸಂಚಿಕೆ ೨೨೦

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಸಿದ್ಧಾವದೂತರ ಅನಲರ್ಜ, ಶ್ರೀ. ಆರೂಢಸ್ವಾಮಿಗಳ ಕೈಪಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತ್ತು ವಾದಿ. ಪ್ರತಿವಾದಿ. ಹಾಗು ಮುನಸಫರ ಬಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಇವರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೇರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಏಡಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಿಡ ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಇನ್ನಡಿಯಳ್ಳವರಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಕೋಳ ಕಳಿಸ್ಲಿಳ್ಳುವವರಿಗೆ ನೂರಕ್ಕೆ ಧರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಅಕ್ಕೀವೆಂಕಟೇಶ ಸ್ಟೋರ್ಸ್‌ವ ಕಾರ್ಕಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯ ಎಂಟು ಲಕ್ಷದ ಮೇಲುಂಟು. ಚಿಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಶಾಹೀಮ ಮತ್ತು ಬೇರೆ ತರಹ ದಿವಾಜಿಟಗಳಿಗೆ ಜನ್ಮಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದಬಿರಿಂದ ತಿಳಕೊಳ ಬೇಕು.

ಮಲ್ಲರಾವ ಬಿ. ಜಳಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರೆ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಮಿಷೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ.

ವಿಜಯ.

ಆರೋಗ್ಯ ನಿಶ್ರಮ ವರ್ಷಾಣಿ ಅಶ್ವೀಜ ಶುದ್ಧ ೧೫

ಏಕೆ ವಿಲಾಯತಿಗೆ ಹೋಗುವರು ?

ನೀನು ನನ್ನ ಲಗ್ನದ ಗಂಡನಾಗಿದ್ದು ನನ್ನ ತಂದೆ ಪೊಲೀಸಕಾರಿ ಲಕ್ಷ್ಮಣ್ಣನು ನಿನಗೆ ಮನಿ ಆಳಿಯನನಕ್ಕೆ ಇಟ್ಟುಕೊಂಡು ನಮಗೆ ಸಂರಕ್ಷಣೆ ಮಾಡಿಕೋತಾ ಮನಿಯಲ್ಲಿಯೇ ಇರಬೇಕೆಂದು ಲಗ್ನ ಮಾಡಿದನು ಲಗ್ನವಾದ ೨-೩ ತಿಂಗಳಲ್ಲಿಯೇ ನೀನು ನಮ್ಮ ಮನಿ ಬಿಟ್ಟು ಹೊರಟುಹೋದಿ ೪-೫ ವರ್ಷದಿಂದಾ ಸ್ತ್ರೀಧನುದಂತೆ ನಾನು ನಿನ್ನ ಸಂರಕ್ಷಣೆ ಮಾಡಿದ್ದು ನೀನು ಬಂದು ಬಾಳ್ವೆ ಮಾಡಲಿಲ್ಲಾ ನನ್ನ ತಂದಿ ತಾಯಿಗಳು ಅಗದೀ ಬಡವರಿದ್ದದ್ದರಿಂದಾ ನಾನು ಬೇರೆ ಕಡಿಗೆ ಮೂರುನೂರು ರೂಪಾಯಿ ಸಾಲಾ ಮಾಡಿ ಹೊಟ್ಟೆ ಹೊರಕೊಂಡೆನು ಈಗ ಸಾಲದವರ ತಗಾದಿ ಹೆಚ್ಚಾಗಿರುವದರಿಂದಾ ನೋಟೀಸು ಕೊಡುವ ಭಾಗ ಬಿತ್ತು ಕಾರಣ ಈ ನೋಟೀಸು ಮುಟ್ಟಿದ ೮ ದಿವಸದೊಳಗೆ ಬಂದು ಸಾಲ ಕೊಟ್ಟವರ ರೂಪಾಯಿ ಕೊಟ್ಟು ನನ್ನ ಸಂಗಡಾ ಪ್ರಪಂಚ ಮಾಡಬೇಕು ಇಲ್ಲವಾದ್ರೆ ನಾನು ಬೇರೆ ಕಡಿಗೆ ಉಡಕೀ ಮಾಡಿಕೊಂಡಲ್ಲಿ ನನಗೆ ಮಾಡಿಕೊಂಡವನ ಮೇಲೂ ನನ್ನ ಮೇಲೂ ನಿನ್ನ ಯಾವ ಥರದ ಹಕ್ಕು ವಗೈರೆ ಏನೂ ಇರುವದಿಲ್ಲಾ ಇದೇ ನೋಡಪತ್ರ ಖಂತಾ ತಿಳಿಯತಕ್ಕದ್ದು ಇದೂ ನನ್ನ ಸಹಿಯಿಂದಾ ನೋಟೀಸ ಕೊಟ್ಟ ತಾರೀಖು ೨೯-೪-೧೯೩೦ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ನಿಂಗಪ್ಪಾ ಕೋಂ ಹನಮಂತಾ ಇವಳದು ಅದೆ

ಜಾಹೀರ ನೋಟೀಸು

—(೦)—

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತ ವ ಹೊನ್ನಿ ಹೆದ್ದಿ ವ ತಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವಾನಿ (ಟ) ಪೂಟಿನ ಜವಳ್ಳ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಾತಿ ವ ರೀಪು ವ ತಿಲಿಂಗು ಶ್ಯಾಯಾರಿ ತಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಬಿಲ್ಡರ ಥರನೀಜರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ

ಟಿಂಬರ ಮರ್ಚಂಟ,

ಮಾಳಿಕಟ್ಟ ಧಾರವಾಡ.

ನಕಾಶೆ ಸರಿಂತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು

ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು

ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಚ್ಚ. ಅಕ್ಕಿಂಡಿ

ಉರ್ದು ಸ್ಕೂಲ ಹೆಡ್ಡಮಾಸ್ಟರ

ಶಾಳಾ ನಂಬರ ೧. ಗದಗ ಬೆಟಗೇರಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊನಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

No. R. B 1643

ವಿಜಯ

ನಿತ್ಯ ಪತ್ರಿಕೆ ಬೆಲೆ ಅರ್ಧ ಆಣೆ.

ಸಂಪಾದಕರು:- ಅಣ್ಣಾಜಾಯಿ ಬಾಳಾಜಾಯಿ ಹೂಸಕೇರಿ.

ವರ್ಷ ೧೧ ಧಾರವಾಡ ಬುಧವಾರ ತಾರೀಖು ೮ ನೇ ಅಕ್ಟೋಬರ ೧೯೩೦ (ಸಂಚಿಕೆ ೨೨೧

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿಸುತ್ತೇವೆ. ಇದರಲ್ಲಿ ವಾದೀ ಶ್ರೀ. ಸಿದ್ಧಾವದೂತರ ಅಸಲಿಜೀ, ಶ್ರೀ. ಅರೂಢಸ್ವಾಮಿಗಳ ಕೈಫಿಯತು ಮತ್ತು ಮನಸಫಕಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತ್ತು ವಾದಿ, ಪ್ರತಿವಾದಿ, ಹಾಗು ಮನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕದ ಜನರ ಅಗ್ರಹದ ಸಂಜಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿಸುತ್ತದೆ, ಇದರ ಖಾಜೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಖರ್ಚುಸೆನಿಸುವವು, ಆದರಿಂದ ಗ್ರಾಹಕರು ಶೀಘ್ರ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೇಂದು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಆರ್ಡರ ಕಳಿಸಬೇಕು. ವ್ಹಿ. ಪಿ. ಯಿಂದ ಕಳಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಆರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಿಡ ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಕೋಕ ತಳ್ಳಿಕೊಳ್ಳುವವರಿಗೆ ನೂರಕ್ಕೆ ಧಂಪೂರ ಕಮೀಶನ ದೊರೆಯುವದು.

ಜಿ. ಹ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ವ ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕ್ರೇ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕ್ರೇ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹಂದಿಗೆಯ ಎಂಟು ಲಕ್ಷದ ಮೇಲುಂಟು. ಚಿಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ಪರದ ಡಿಪಾಜಿಟಗಳಿಗೆ ಜಾಸ್ತಿಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅಥವ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಪತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ.

೧೬ನೆಯ ಕರ್ನಾಟಕ ಸಾಹಿತ್ಯ ಪರಿಷತ್ತು

ಅಧ್ಯಕ್ಷ ಶ್ರೀ. ಆಲೂರ ವೆಂಕಟರಾಯರ

ಭಾ ಷ ಣ

೧ನೇ ಭಾಗ ಉಪಕ್ರಮ

ಸರಸ್ವತಿಯ ಆರಾಧನೆ-

ವಾಗ್ದೇವತೆಯ ಪೂಜೆ ಮಾಡುವ ಮುಂಡೆ, ನಾವು ಅವಳ ನಿಜಸ್ವರೂಪವನ್ನರಿತುಕೊಳ್ಳಬೇಕಲ್ಲವೇ? ದೇವತಾಸಮುದಾಯದಲ್ಲಿ ಅಕೆಯ ಸ್ಥಾನ ಎಷ್ಟುದು? ಅವಳು ಬ್ರಹ್ಮನ ಮಗಳೂ ಅಹುದು, ಪಟ್ಟದ ರಾಣಿಯೂ ಅಹುದು. ಇಡೀ ಸೃಷ್ಟಿಯನ್ನು ಹುಟ್ಟಿಸಿದಾತನು ಬ್ರಹ್ಮನು. ಇಡೀ ಸೃಷ್ಟಿಯನ್ನು ಹುಟ್ಟಿಸುವಾಗ ಆತನು ಅರ್ಥಾತ್ ವಾಣಿಯನ್ನೂ ಹುಟ್ಟಿಸಿದನು. ಆದುದರಿಂದ ಅವಳು ಆತನ ಮಗಳು. ಆದರೆ, ಮುಂದೆ ಸೃಷ್ಟಿಯೊಳಗಿನ ಸರ್ವ ವಾಙ್ಮಯಿಕ ವ್ಯವಹಾರಕ್ಕೆ ಅವಳ ಅವಶ್ಯಕತೆಯುಂಟಾದುದರಿಂದ, ಅವಳಿಗೂ ಬ್ರಹ್ಮನಿಗೂ ನಿತ್ಯ ಸಂಬಂಧವುಂಟಾಯಿತು, ಎಂದರೆ ಅವಳು ಆತನ ಪಟ್ಟದ ರಾಣಿಯಾದಳು. ಇದನ್ನೇ ಈಗ ಪ್ರಥಮವಾಗಿರುವ ಅಚ್ಛೆತನ್ಯ ಭಾಷೆಯಲ್ಲಿ ಹೇಳುವುದಾದರೆ, ಮನುಷ್ಯನ ಮನಸ್ಸಿನಲ್ಲಿ ಹುಟ್ಟುವ ಯಾವತ್ತು ವಿಕಾರಗಳಿಗೂ ವಿಚಾರಗಳಿಗೂ ವಾಣಿಯ ಅವಶ್ಯಕತೆಯುಂಟು. ಇಲ್ಲದಿದ್ದರೆ, ವ್ಯವಹಾರವೆಲ್ಲವೂ ಕಟ್ಟಾಗುವುದು. ಮನದೊಳಗೆ ಜನಿಸಿದ ಹೊಸ ಭಾವನೆ, ಹೊಸ ಕಲ್ಪನೆ, ಹೊಸ ವಿಚಾರ-ಇವುಗಳಿಗೆಲ್ಲಕ್ಕೂ ವಾರ್ತಸ್ವರೂಪವನ್ನು ಕೊಡುವುದು ವಾಣಿಯು. ಈ ಕಾರ್ಯವನ್ನು ಉತ್ಕೃಷ್ಟವಾಗಿ ನೆರವೇರಿಸುವ ವಾಙ್ಮಯವೇ ಉಜ್ವಲ ವಾಙ್ಮಯವು.

ವಾಙ್ಮಯದ ಈ ಧರ್ಮದ ಮೂಲಕವೇ ಜನಸಾಂಗಕ್ಕೂ ವಾಙ್ಮಯಕ್ಕೂ ನಿತ್ಯವಾದ ಸಂಬಂಧವುಂಟಾಗುತ್ತದೆ. ಮನುಷ್ಯನು ಯಾವಾಗಲೂ ಸಮಾಜದಲ್ಲಿ ವಿಹರಿಸುವ ಪ್ರಾಣಿಯಾದುದರಿಂದ, ಅವನ ವಾಙ್ಮಯವು ಜನಜೀವನವನ್ನು ಪ್ರತಿಬಿಂಬಿಸುತ್ತದೆ. ಆದುದರಿಂದ, ನಿರ್ಜೀವವಾದ ಜನಾಂಗದಲ್ಲಿ ಸಜೀವವಾದ ವಾಙ್ಮಯವು ಹುಟ್ಟಲಾರದು. ಭರತಖಂಡದ ಜನತೆಯ ಜೀವನ, ಅಭ್ಯುದಯ, ಉತ್ಕರ್ಷ ಇವೆಲ್ಲವುಗಳ ಮೇಲೆ ನಮ್ಮ ವಾಙ್ಮಯವು ಅವಲಂಬಿಸಿರುತ್ತದೆ. ಕರ್ನಾಟಕದ ವಾಙ್ಮಯವೆಂದರೆ ಭರತಭೂಮಿಯ ಜನಜೀವನವನ್ನು ಒಂದು ವಿಶಿಷ್ಟವಾದ ಪರಿಧಿಯಲ್ಲಿ ಹಾಕಿ ಮೂಡಿದ ಮೂರ್ತಿ. ಆದುದರಿಂದ, ಕರ್ನಾಟಕದ ವಾಙ್ಮಯದಲ್ಲಿ ಇವೆರಡೂ ಸಂಸ್ಕೃತಿಗಳು ಎಂದರೆ ಭರತಖಂಡ ಮತ್ತು ಕರ್ನಾಟಕ ಇವೆರಡೂ ಸಂಸ್ಕೃತಿಗಳು ಪ್ರತಿಫಲಿತವಾಗಿರಬೇಕು. ನಮ್ಮ ರೋಮ ರೋಮಗಳಲ್ಲಿ ರಾಷ್ಟ್ರೀಯತ್ವವೂ ಕರ್ನಾಟಕತ್ವವೂ ತುಂಬಿದ್ದರೆ ಮಾತ್ರವೇ ನಮ್ಮಿಂದ ಅತ್ಯಂತ ಉಜ್ವಲವಾದ ವಾಙ್ಮಯವು ಹುಟ್ಟಬಹುದು. ಇಲ್ಲದಿದ್ದರೆ ಎಂದೂ ಹುಟ್ಟಲಾರದು. ಸಾರಾಂಶವೇನಂದರೆ- ನಾವು ವಿಶ್ವಸಂಸ್ಕೃತಿಯನ್ನೊಳಕೊಂಡ ರಾಷ್ಟ್ರೀಯತ್ವವನ್ನೂ ಕರ್ನಾಟಕತ್ವವನ್ನೂ ಯಾವಾಗಲೂ ಅನುಸಂಧಾನ ಮಾಡಿಕೊಂಡೇ ವಾಙ್ಮಯವನ್ನು ಹುಟ್ಟಿಸುವುದಕ್ಕೆ ಸ್ವವೃತ್ತರಾಗಬೇಕು.

ವಾಙ್ಮಯದ ಅಂತಃಸ್ವಭಾವ-

ಈ ರೀತಿಯ ಅನುಸಂಧಾನವನ್ನು ನಾವು ಮೂರು ವಿಧವಾಗಿ ಹೂಡಬಹುದು. ಅವು ಯಾವುವೆಂದರೆ ವಾಙ್ಮಯಯಜ್ಞ, ವಾಙ್ಮಯದಾನ ಮತ್ತು ವಾಙ್ಮಯತಪ. ವಾಙ್ಮಯವನ್ನು ಹುಟ್ಟಿಸುವಾಗ, ನಮ್ಮ ಮನಸ್ಸಿನಲ್ಲಿ ಯಾವ ತರಹದ ಪ್ರಯೋಜನಾಪೇಕ್ಷೆಯೂ ಇರದೆ, ಅದು ಕೇವಲ ಪರಮಾತ್ಮನ ಪೂಜೆಯೆಂದೂ ಅದರಿಂದಲೇ ಆತನು ಪ್ರಸನ್ನನಾಗುತ್ತಾನೆಂದೂ ಭಾವನೆಯನ್ನು ತಾಳಿ, ನಮಗೆ ದೇವನು ಕೊಟ್ಟಿರುವ ಸಕಲವಿಧಶಕ್ತಿಗಳನ್ನೂ ವಾಗ್ದೇವತೆಯ ಪಾದಾರವಿಂದದಲ್ಲಿ ಸಮರ್ಪಿಸುವುದೇ ವಾಙ್ಮಯಯಜ್ಞ. ಈ ತರಹದ ವಿಶುದ್ಧ ಬುದ್ಧಿಯಿಲ್ಲದೆ, ಯಾವುದೊಂದು ಪ್ರಯೋಜನಾಪೇಕ್ಷೆಯಿಂದ ಹುಟ್ಟಿದ ವಾಙ್ಮಯದ ನಿಜವಾದ ವಾಙ್ಮಯವಾಗಲಾರದು. ಆದುದರಿಂದ, ಗ್ರಂಥಕರ್ತರು ಮತ್ತು ಲೇಖಕರು ವಾಗ್ದೇವತೆಯ ಸೇವೆಯೆಂದೇ ಗ್ರಂಥಗಳನ್ನು ಅಥವಾ ಲೇಖಗಳನ್ನು ಬರೆಯುವುದಕ್ಕೆ ಪ್ರವೃತ್ತರಾಗಬೇಕು. ಹೀಗೆ ಮಾಡಿದರೆ ಮಾತ್ರ, ಅವರ ವಾಙ್ಮಯವು ತೇಜೋವಂತವಾಗುವುದು. ವಾಙ್ಮಯದಾನವೆಂದರೆ ನಾವು ಸಂಪಾದಿಸಿದ ಜ್ಞಾನವನ್ನು ಅನ್ಯರಿಗೆ ಕೊಡುವುದು ಎಂದರೆ ಜ್ಞಾನಪ್ರಸಾರವು. ವಾಙ್ಮಯತಪವೆಂದರೆ ಆ ಜ್ಞಾನವನ್ನು ಗಳಿಸುವುದಕ್ಕೆ ಮಾಡಬೇಕಾದ ಸ್ವಾಧ್ಯಾಯ ಮತ್ತು ಅಭ್ಯಾಸ. ಈ ಬಗೆಯಾಗಿ ನಾವು ವಿಶುದ್ಧವಾದ ಬುದ್ಧಿಯಿಂದ ಅಧ್ಯಯನಾದಿಗಳನ್ನು ಮಾಡಿ ಜ್ಞಾನ ಸಂಪಾದಿಸಿ ಜ್ಞಾನ ಪ್ರಸಾರವನ್ನು ಮಾಡಬೇಕು.

ಕರ್ನಾಟಕದ ಪಂಚಕೋಶಗಳ ವಿಕಾಸ-

ಈ ಪ್ರಕಾರದ ಯಜ್ಞದಾನ ತಪಗಳಿಂದ ವಾಙ್ಮಯದ ಮುಖಾಂತರವಾಗಿ ನಾವು ಕರ್ನಾಟಕದ ಪಂಚಕೋಶಗಳನ್ನೂ ವಿಕಾಸಗೊಳಿಸಬೇಕು. ಆ ಪಂಚಕೋಶಗಳು ಯಾವುವೆಂದರೆ- ಕರ್ನಾಟಕದ ಶರೀರ, ಪ್ರಾಣ, ಮನಸ್ಸು, ವಿಜ್ಞಾನ ಮತ್ತು ಆನಂದ. ಇದರಿಂದ ನಮ್ಮ ವಾಙ್ಮಯದಲ್ಲಿ ಯಾವತ್ತು ತರಹದ ಗ್ರಂಥಗಳು ಹುಟ್ಟುವವು. ಕರ್ನಾಟಕದ ಭೂಗೋಲ, ಜನಸಂಖ್ಯೆ, ಭೂಗುಣ, ಖನಿಜ ಸಂಪತ್ತು ಇವೇ ಮುಂತಾದವುಗಳು ಹುಟ್ಟಿದರೆ ಕರ್ನಾಟಕದ ಭೌತಿಕ ಶರೀರದ ವಿಕಾಸವಾಗುವದು. ಆದರೆ, ಇಂಥ ವಾಙ್ಮಯದಲ್ಲಿ ಪ್ರಾಣಶಕ್ತಿಯು ಸಂಚಾರವು ಸಾಕಷ್ಟು ಇರದಿದ್ದರೆ, ಈಗಿನ ನಮ್ಮ ನಿರ್ಜೀವಸಂಪ್ರದಾಯಪುಸ್ತಕಗಳಂತೆ ಅವು ನಿಷ್ಪ್ರಯೋಜಕವಾಗುವವು. ಯಾವತ್ತು ವಾಙ್ಮಯಕ್ಕೆ ಪ್ರಾಣವೇ ಮುಖ್ಯ. ಆದ ಕಾರಣ ನಮ್ಮ ಯಾವತ್ತು ತರಹದ ವಾಙ್ಮಯದಲ್ಲಿ ಪ್ರಾಣಸಂಚಾರವಾಗುವಂತೆ ನಾವು ಎಚ್ಚರವಹಿಸಬೇಕು. ಆದರೆ ಮನುಷ್ಯನು ಪ್ರಾಣವನ್ನಷ್ಟೆ ಹಿಡಿದುಕೊಂಡು ಜೀವಿಸಿದರೆ, ಅದು ಹೇಗೆ ಉತ್ಕೃಷ್ಟ ಜೀವನವಾಗುವುದಿಲ್ಲವೋ ಹಾಗೆ, ವಾಙ್ಮಯದಲ್ಲಿ ಮನಸ್ಸಿನ ವಿಕಾಸಕ್ಕೆ ಎಡೆಯಿರದಿದ್ದರೆ ಅದು ಉತ್ಕೃಷ್ಟ ವಾಙ್ಮಯವೆನಿಸುವುದಿಲ್ಲ. ಆದುದರಿಂದ ವಾಙ್ಮಯದ ಉನ್ನತಿಯನ್ನು ಬಯಸುವವರು ಕರ್ನಾಟಕದ ಮನಸ್ಸನ್ನು ಸಂಪೂರ್ಣವಾಗಿ ವಿಕಾಸಗೊಳಿಸುವುದಕ್ಕೆ ತಕ್ಕ ಗ್ರಂಥಗಳನ್ನು ಬರೆಯಬೇಕು. ಇದರಿಂದ ನಮ್ಮ ವಾಙ್ಮಯದಲ್ಲಿ ಮಾನಸಶಾಸ್ತ್ರ, ಚರಿತ್ರೆ, ಇತಿಹಾಸ, ಕಥೆ, ಕಾದಂಬರಿ, ನಾಟ್ಯಶಾಸ್ತ್ರ, ಅಭಿನಯಶಾಸ್ತ್ರ, ಸಂಗೀತಶಾಸ್ತ್ರ ಮುಂತಾದ ಗ್ರಂಥಗಳು ಹುಟ್ಟುವವು. ಕರ್ನಾಟಕದ ವಿಜ್ಞಾನಮಯ ಕೋಶದ ವಿಕಾಸವಾಯಿತೆಂದರೆ, ನವ್ಯಶೈಲಿ ಕಾವ್ಯಗಳು, ನಾಟಕಗಳು, ಪದಗಳು ವಿಶೇಷವಾಗಿ ಹುಟ್ಟುವವು. ಆನಂದ ಕೋಶವು ವಿಕಾಸವಾಯಿತೆಂದರೆ, ಶ್ರುತಿ ಸ್ಮೃತ್ಯಾದಿ ಧಾರ್ಮಿಕ ವಾಙ್ಮಯವು ವಿಶೇಷವಾಗಿ ಬೆಳೆಯುವವು. ವಾಙ್ಮಯದಲ್ಲಿ ಯಾವ ಗ್ರಂಥಗಳು ವಿಪುಲವಾಗಿರುವವೆಂಬುದರ ಮೇಲಿಂದ ಆ ಸಮಾಜದ ಸುಧಾರಣೆಯು ಎಷ್ಟರ ಮಟ್ಟಿಗೆ ಆಗಿರುವುದೆಂಬುದನ್ನು ತಿಳಿಯಬಹುದು. ಸಾರಾಂಶವೇನಂದರೆ- ವಾಙ್ಮಯವು ಸುಧಾರಣೆಯನ್ನೆಳೆಯುವ ಉತ್ಕೃಷ್ಟತಾಮಾಪಕ ಯಂತ್ರವು. ಯಾವ ಸಮಾಜದಲ್ಲಿ ಉದಾತ್ತವಾದ ವಾಙ್ಮಯವಿಲ್ಲವೋ ಆ ಸಮಾಜವು ಹೀನ ಸಮಾಜವೆಂದು ತಿಳಿಯಬೇಕು. ಮತ್ತು ಅದರಲ್ಲಿರುವ ಗ್ರಂಥಗಳ ಮೇಲಿಂದ ಅದರ ಶ್ರೇಷ್ಠತೆಯನ್ನು ಗೊತ್ತುಪಡಿಸಬಹುದು.

ಸಾತ್ವಿಕ, ರಾಜಸ, ತಾಮಸ ಬೇಧ

ಇಲ್ಲಿಯವರೆಗೆ ನಾವು ಹೇಳಿದುದು ಶುದ್ಧ ವಾಙ್ಮಯದ ವಿಷಯವು. ಅದರೆ ಸಮಾಜದಲ್ಲಿ ಯಾವಾಗಲೂ ಶುದ್ಧ ವಾಙ್ಮಯವೇ ರಚಿಕವಾಗುತ್ತಿರುವುದಿಲ್ಲ. ಏಕೆಂದರೆ ಈ ಜಗತ್ತು ಸಾತ್ವಿಕ, ರಾಜಸ, ತಾಮಸವೆಂಬ ತ್ರಿವಿಧವಾದ ಜೀವರುಗಳಿಂದ ತುಂಬಿದೆ. ಆಯಾ ಜನರು ತಮ್ಮ ತಮ್ಮ ಸ್ವಭಾವಕ್ಕನುಸರಿಸಿ ಗ್ರಂಥ ಬರೆಯುವರು. ಆದುದರಿಂದ ಅವರವರ ಸ್ವಭಾವಕ್ಕನುಸರಿಸಿ, ವಾಙ್ಮಯದಲ್ಲಿಯೂ ಸಾತ್ವಿಕರು, ರಾಜಸರು ಮತ್ತು ತಾಮಸಗಳೆಂಬ ತ್ರಿವಿಧ ಭೇದಗಳೆಂಟಾಗುವವು. ತಾಮಸ ವೃತ್ತಿಯುಳ್ಳವನು ಭೂವಿವರಣೆಯನ್ನೇ ಬರೆಯಲಿ, ಇತಿಹಾಸವನ್ನೇ ಬರೆಯಲಿ ಅಥವಾ ಮತ್ತಾವ ಗ್ರಂಥವನ್ನೇ ಬರೆಯಲಿ, ಆತನ ಗ್ರಂಥಗಳಲ್ಲಿ ಆತನ ತಾಮಸ ವೃತ್ತಿಯು ಒಡಮೂಡದೆ ಉಳಿಯುವದಿಲ್ಲ. ನಮ್ಮ ಕನ್ನಡ ವಾಙ್ಮಯದ ಕ್ಷೇತ್ರವನ್ನವಲೋಕಿಸಿದರೆ, ಅದರಲ್ಲಿ ಈ ಬಗೆಯಾಗಿ ಮೂರೂ ವಿಧದ ವಾಙ್ಮಯಿದ್ದುದು ಕಂಡು ಬರುವುದು. ತಾಮಸ ವಾಙ್ಮಯವು ನಮ್ಮನ್ನು ಯಾವಾಗಲೂ ಅಧಃಪಾತಕ್ಕೆ ಒಯ್ಯುವದರಿಂದ, ಅದನ್ನು ಹುಡುಕಿ ತೆಗೆದು ಅದಕ್ಕೆ ನಾವು ಶಾಶ್ವತವಾದ ಸಮಾಧಿಯನ್ನು ಕಾಣಿಸಬೇಕು. ರಾಜಸ ವಾಙ್ಮಯದೊಳಗಿನ ಸಾತ್ವಿಕ ಭಾಗಕ್ಕೆ ಪ್ರೋತ್ಸಾಹನ ಕೊಡಬೇಕು. ವಾಙ್ಮಯವನ್ನು ವಿಂಗಡಿಸುವ ರೀತಿಗಳು ಅನೇಕ ವಿಧವಾಗಿವೆ. ಉದಾಹರಣಾರ್ಥವಾಗಿ. (೧) ಸ್ವತಂತ್ರ ವಾಙ್ಮಯ, ಅಸ್ವತಂತ್ರ ವಾಙ್ಮಯ (೨) ಹಳೆಗನ್ನಡ ಹೊಸಗನ್ನಡ (೩) ಗದ್ಯ-ವಾಙ್ಮಯ-ಪದ್ಯವಾಙ್ಮಯ (೪) ಲಘುವಾಙ್ಮಯ ಉದಾತ್ತವಾಙ್ಮಯ (೫) ಜನಪದಸಾಹಿತ್ಯ ಮಹಾಜನಸಾಹಿತ್ಯ (೬) ಜ್ಞಾನವಾಙ್ಮಯ ಭಕ್ತಿವಾಙ್ಮಯ (೭) ಇವೇ ಮೊದಲಾಗಿ ನಾವು ವಾಙ್ಮಯದ ಕಡೆಗೆ ಅನೇಕ ದೃಷ್ಟಿಗಳಿಂದ ನೋಡಬಹುದು. ಅನೇಕರು ಆ ದೃಷ್ಟಿಯಿಂದ ವಿಭಾಗಮಾಡಿ ಪ್ರತಿಯೊಂದು ಬಗೆಯ ವಾಙ್ಮಯವನ್ನು ವಿಸ್ತಾರಗೊಳಿಸುವದಕ್ಕೆ ಅನೇಕ ಉಪಾಯಗಳನ್ನು ಈ ಮೊದಲೇ ಸೂಚಿಸಿರುವದರಿಂದ, ನಾನು ಆ ವಿವರವನ್ನು ಇಲ್ಲಿ ಹೇಳುವ ಕಾರಣವಿಲ್ಲ. ಆದರೆ ವಾಙ್ಮಯದಲ್ಲಿ ಇದಕ್ಕೂ ಮಹತ್ವದ ವಿಭಾಗವೆಂದರೆ ಸಾತ್ವಿಕ ರಾಜಸ ಮತ್ತ ತಾಮಸ ಎಂಬುದೇ ಎಂದು ನನ್ನ ಅಭಿಪ್ರಾಯ. ಏಕೆಂದರೆ, ಮನುಷ್ಯನ ಅಥವಾ ಸಮಾಜದ ಶಾಶ್ವತ ಸುಖಕ್ಕೆ ಅಥವಾ ದುಃಖಕ್ಕೆ ಕಾರಣವಾಗುವುದು ಈ ತರಹದ ವಿಭಾಗವೇ.

—

ಉಸುಕಿನಲ್ಲಿ ಹರಗಿ ಬೆಳೆಯುವರೇ?

ವಿಲಾಯತಿಗೆ ದೊರಟುಂಥ ಮತ್ತು ಈ ವಾರದಲ್ಲಿ ಹೊರಡುವಂಥ ಹಿಂದೂ ದೇಶದ ಪ್ರತಿನಿಧಿಗಳೆಂದು ಪ್ರಾಂಡರೀಕ ವಾಸುದೇವನಂತೆ ಕೇಳಿಕೊಳ್ಳುವ ಜನರು ಉಸುಕಿನಲ್ಲಿ ಹರಿಗಿ ಬಿತ್ತಿ ಬೆಳೆಯುವರೇ? ಎಂಬ ಪ್ರಶ್ನೆವನ್ನು ಹಲ ಕೆಲವರು ಮಾಡಿದ್ದಾರೆ. ನಾವು ಈ ದೇಶದ ಪ್ರತಿನಿಧಿಗಳಲ್ಲೆಂದು ನಿರ್ಭಿಡೆಯಿಂದ ಹೇಳುವಂಥವರು ಡಾಕ್ಟರ ಮುಂಜೆಯವರೊಬ್ಬರೇ ಆಗಿದ್ದಾರೆ.

,, ನಾನು ಸ್ವಂತವಾಗಿ ಹೋಗುತ್ತೇನೆ ಯಾವದೇ ಪ್ರಾತಿನಿಧಿತ್ವವಿರುವದಿಲ್ಲ. ಒಂಟಿಗನಾಗಿ ರಾಮುಂಡಟೇಬಲಿನಲ್ಲಿ ಹೋರಾಡುವೆನು. ವಸಾಹತಿನ ಸಂಪೂರ್ಣ ಸ್ವರಾಜ್ಯವೇ ನನ್ನ ಧ್ಯೇಯ. ಇದಕ್ಕಾಗಿ ಕೆಳಗಿನ ದರ್ಜೆಯನ್ನು ಹಿಂದುಸ್ಥಾನವು ಎನ್ನುವಮಾತ್ರಕ್ಕಾಗಿ ಸಹನ ಮಾಡಲಾರದು. ,,

ಎಂಬದಾಗಿ ಹಡಗವೇರುವಾಗ ಒಂದು ಸಂದೇಶವನ್ನು ಜಾಹೀರ ಮಾಡಿದ್ದಾರೆ. ಈ ತರದ ಬಿಂಡ ಕುಂಡಿನ ಭಾಷಣವನ್ನು ಯಾರೂ ಹೇಳಿಲ್ಲ. ಬರೇ ಪ್ರಾಂತಿಕ ಸ್ವಾತಂತ್ರ್ಯವಿದ ಹಿಂದುಸ್ಥಾನವು ತೃಪ್ತವಾಗಲಾರದು; ಹಿಂದುಸ್ಥಾನ ಸರಕಾರವು ಜವಾಬದಾರಿಹೀನವಾಗಿ ಪ್ರಯೋಜನವಿಲ್ಲೆಂದು ಸರ ಸಪ್ರುಸಾಹೇಬರು ಅಂದಿದ್ದಾರೆ. ಬ್ರಾಹ್ಮಣೇತರರ ಪ್ರತಿನಿಧಿಗಳಾದ ಸರ ಪಟ್ಟಣಿ ಮತ್ತು ರಾಮಸ್ವಾಮಿಯವರಂತೂ ಅಲಾರ್ಡ ಆಯರ್ವಿನ ಮತ್ತು ಮೆಬೆನ್ನ ಬೆಜ್ಜವುಡ್ಡ ಸಾಹೇಬರ ಹೇಳಿಕೆಗಳನ್ನು ಇಡೀಗೀ ಪುರದಂತೆ ತಲೆಯ ಮೇಲಿಟ್ಟುಕೊಂಡಿದ್ದಾರೆ. ನೀವು ವಿಲಾಯತಿಗೆ ಹೊಂಡುವಾಗ ಅಲ್ಲಿ ನೀವಾವ ಕೃತ್ಯವಮಾಡುವಿರೆಂಬದನ್ನು ಹೇಳಿದ ಒಂದು ಲೇಖನವನ್ನು ಮುದ್ರಿಸಿರಂದು ರಾ ಬ ಕಂ ಳಿಯವರಿಗೆ ಅವರ ಅಸ್ತಕೋಟಿಯಲ್ಲಿದ್ದ ಕರ್ನಾಟಕ ಟಾಯಿಮ್ಸವು ಅಂದಿತು. ರಾ. ಬ. ರವರು ಇದರ ಬೇಕೆಳೆಯಂತೆ ನಡೆಯಲೇ ಇಲ್ಲ. ಅಂಥದೊಂದು ಸರಾಕ್ಕಮದ ಭಾಷಣಮಾಡಿದ್ದರೆ- ಧಾರವಾಡ ಹುಬ್ಬಳ್ಳಿಯ ನಾಗರಿಕರು ಪ್ರಚಂಡ ಮೆರವಣಿಗೆ ಹೊಂಡಿಸಿ, ನಿರೋಪ ಕೊಡುತ್ತಿದ್ದರು. ಆಗಾಡಿ, ಪಿಭಾಣಿಯಿಲ್ಲದೆ, ತೀರ ಅಪ್ರಸಿದ್ಧರಂತೆ ಹೋಗುವ ಹೊತ್ತೇ ಬರುತ್ತಿದ್ದಲ್ಲ. ಯಜ್ಞದ ಕುದುರೆಯಂತೆ ಹೋಗುತ್ತಿದ್ದರು. ಇದೊಂದರಿಂದಲೇ ಜನರು ತಮ್ಮ ಯೋಗ್ಯತೆಯ ಪರೀಕ್ಷೆಯನ್ನು ಹೇಗೆ ಮಾಡಿದ್ದಾರೆಂಬದನ್ನು ತಿಳಕೊಳ್ಳಬೇಕು.

ಹಿಂದುಸ್ಥಾನದಲ್ಲಿ ಬ್ಯಾರಿಸ್ಟರ ಜಯಕರ ಸರ ಸಪ್ರುಸಾಹೇಬರು ಒಡಂಬಡಿಕೆ ಮಾಡಿಕೊಳ್ಳಬೇಕೆಂದು ಕಾಂಗ್ರೆಸದವರ ಮನಪೊಲಿಸಲಿಕ್ಕೆ, ಅವರ ಕುತ್ತಿಗೆಗೆ ಉರ್ಲಿ ಹಾಕಲಿಕ್ಕೆ ಪ್ರಯತ್ನಿಸಿದರಲ್ಲದೆ- ಅಲಾರ್ಡ ಆಯರ್ವಿನ ಮತ್ತು ಅವರ ಪ್ರಭಾವಳಿಯಲ್ಲಿದ್ದ ಜನರ ಮನಪೊಲಿಸಲಿಕ್ಕಲ್ಲ. ಅಲ್ಲಿ ಅವರು ನೆಲಕ್ಕೆ ಕಯ್ಯೂರಿಸಿ ಂಂಲೇ ಹೇಳುವಂತಾಗಿದೆ. ಇವರು ಬೇಕಾದಷ್ಟು ದೊಡ್ಡಸಂಖ್ಯೆಯವರಾಗಲಿ; ಮೆಸರ್ಸ ಜಯಕರ, ಜೆಂಬುಲಿಲೇನ, ಲಾಯರ್ಜಾರ್ಜ, ಅಲಾರ್ಡ ರಿಂಡಿಂಗಪಾ ಹೇಬರನ್ನು ಒಲಿಸಿಕೊಳ್ಳುವರೇ? ಮೆ ಜಯಕರ ಸಾಹೇಬರು ರಾಜಕಾರಣ ಬಿಡತಕ್ಕವರಿದ್ದಾರೆ. ಆದರೆ ಹಿಂದುಸ್ಥಾನದ ಈಗಿನ ಗೊಂದಲ ತೀರ್ಮಾನವನ್ನ ಬಿಡುವದಿಲ್ಲೆಂದು ಅಡ ತೀರಿಸಿದ್ದಾರೆ. ಈ ಸಾಹೇಬರು ಒಪ್ಪುವಂಥ ಅಧಿಕಾರಗಳನ್ನೇ ಇವರು ತರುವರಲ್ಲದೆ, ತಾವು ಇಲ್ಲಿಂದ ಬಯಸಿಕೊಂಡು ಹೋಗುವಂಥವುಗಳನ್ನು ಸಹಸಾ ತರಲಾರರು. ಅದುದರಿಂದಲೇ ಇವರು ಉಸುಕಿನಲ್ಲಿ ನೇಗಿಲ ಹೊಡೆದು, ಹುಳ ಬಿತ್ತಿ, ಬೆಳೆ ತರುವರೆಂದು ಜನರು ಟೀಕೆ ಮಾಡಿದರೆ- ಅದಕ್ಕೆ ಕುತ್ಸಿತವೆಂದು ಅನ್ನಲಾಗದು.

—

ಶಿಗ್ಗಾವಿಯಲ್ಲಿ ರಾಜನಿಷ್ಠೆಯ ದರಬಾರ

—(೮)—

ಕಾಂಗ್ರೆಸದವರ ಹಾತಾಳೆ

ಮತ್ತು ವ್ಯಾಖ್ಯಾನ

—(೨)—

ಶನಿವಾರ ೧೧ನೆಯ ತಾರೀಖಿನ ದಿವಸ ಶಿಗ್ಗಾವಿಯಲ್ಲಿ ರಾಜನಿಷ್ಠೆಯ ದರಬಾರವಾಗುವದು. ಈ ದರಬಾರಕ್ಕೆ ಯಾರೂ ಹೋಗಬಾರದೆಂದು ಕಾಂಗ್ರೆಸದವರು ಆಯಾ ತಾಲೂಕಿನ ತುಂಬ ಡಳವಳಿ, ಹಾತಾಳೆ ಮತ್ತು ಸಭೆಗಳನ್ನು ಮಾಡುವ ಏರ್ಪಾಟು ಮಾಡಿದ್ದಾರೆಂದು ತಿಳಿಯುತ್ತದೆ.

—

ಬೆಳಗಾವಿಯಲ್ಲಿ ಉಪ್ಪಿನ ಕಾಯಿದೆಭಂಗ.

—(೦)—

ದಸರೆಯ ದಿವಸ ಬೆಳಗಾವಿಯಲ್ಲಿ ಊರ ತುಂಬ ನಗರಸಂಕೀರ್ತನೆಗಳಾಗಿ ಶ್ರೀ. ಕೃಷ್ಣಾಜೀವಿ ಪಣಜಿಯವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಂದನೆ ಯಾಯಿತು. ಆಗ ನಂಗೆಯಲ್ಲಿ ಉಪ್ಪಿನ ಕಾಯಿದೆಭಂಗದ ಉಪ್ಪನ್ನು ಮಾರಲಾರಂಭಿಸಿದರು. ಜನರು ದೊಡ್ಡ ದೊಡ್ಡ ಬೆಲೆ ಕೊಟ್ಟು ಉಪ್ಪು ಕೊಂಡರು. ಅನಂತರ ಬಾಯಿಯ ತಾರೀಖಿನ ದಿವಸ ಹತ್ತು ಸಾವಿರ ಜನರು ನಾವದಾರ ಬೆಳಮುಗಳ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಂದನೆ ಮಾಡಿದರು. ಇದು ಕಪಲೇಶ್ವರದಲ್ಲಾಯಿತು. ಆಗ ಆ ಸಟ್ಟಿನವರು ಮತ್ತೆ ದೀಪಗಳನ್ನು ಮನೋಹರವಾಗಿ ಶೃಂಗರಿಸಿದ್ದರು.

—

ಟ್ಟು ನನ್ನ ಕರಕೊಂಡು ಹೋಗಬೇಕು ಹಾಗೆ ಮಾಡದೆ ಇದ್ರೆ ಇದೇ ಸೋಲಾಪತ್ರ ಅಂತ ತಿಳಿದು ನಾನು ಎಡಕನದವನನ್ನು ಉಡಿಕೆ ಆಗತೇನೆ ನನ್ನ ಮೇಲೆ ನಿನ್ನ ಯಾವ ಪ್ರಕಾರದ ಹಕ್ಕ ಇಲ್ಲಾ ನಾನು ಇದ್ದಲ್ಲಿ ಒಂದು ದಾಂಡಗಾಯಿ ಮಾಡಿದರೆ ಕಾಯುವ ಪ್ರಕಾರ ನಿನ್ನ ಮೇಲೆ ಫಿರ್ಯಾದ ಮಾಡತೇನೆ ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ತಿಳಿಯೋದು ಸವದತ್ತಿ ತಾ|| ೭-೧೦-೩೦ ಇಸ್ವಿ

ಈ ಎಚ್ಚರಿಕೆ ಹೆಬ್ಬಟ್ಟಿನ ಗುರ್ತು ಯಲ್ಲವ್ವಾ ಕೋಂ ತಿಪ್ಪಣ್ಣ ಕಾನೋಜಿ ಸಾ|| ಸವದತ್ತಿ ಇಕಿ ಕೈದು ಇರುತ್ತದೆ

ನೋಟೀಸಿಗೆ ಉತ್ತರ

ಗಂಗಿ ಕೋಮ ಭೀಮಪ್ಪಾ ಅಟಗಾಲ ಸಾ|| ಸವದತ್ತಿ ಈಕಿಗೆ-

ಕೆಳಗೆ ಸಹಿಮಾಡಿದವನಿಂದ ಉತ್ತರ ಕೊಡೋದೇನಂದರೆ ನೀನು ಧಾರವಾಡ ರಾಜಹಂಸ ಪತ್ರದಲ್ಲಿ ತಾ|| ೨೩-೯-೩೦ ದಿನಸ ಕೊಟ್ಟ ನೋಟೀಸ ಮುಟ್ಟಿ ಮಜಕೂರ ತಿಳಿಯಿತು ಅದರಲ್ಲಿ ಬರೆದ ಮಜಕೂರು ಅಜೇ ಸುಳ್ಳು ಅದೆ ನೀನು ನನ್ನ ಲಗ್ನದ ಹೆಂಡತಿ ಇದ್ದು ಬಾಳ್ವೆಮಾಡತಾ ಮನಿಯಲ್ಲಿ ಇದ್ದಿ ಅಜಮಾಸು ೪-೫ ತಿಂಗಳ ಹಿಂದೆ ನಾನು ಊರಿಗೆ ಹೋದಾಗ್ಯೆ ನನಗೆ ಕೇಳದೆ ನಿನ್ನ ಮೈ ಮೇಲೆ ನಾನು ಇಟ್ಟ ದಾಗೀನೆ ಸಹಿತ ನಿನ್ನ ತವರಮನಿಗೆ ಹೋದಿ ದಾಗೀನೆಗಳ ವಿವರ-

ಭಂಗಾರದ ಬಳೆ ತೊಲಿ ೩	ಕಿ||	ರು| ೭೫
,, ಸರದಾಳಿ	೧||	೩೦
,, ಗುಂಡಿನಟೀಕಿ	೧||	೩೦
ಬೆಳ್ಳೀ ತೋಳಬಂದಿ ಜೋಡ	೧		೪೨
ಹೊಸಾ ಸೀರಿ ಒಂದು			೨೧
			೧೮೦

ಮೇಲೆ ಬರಿದ ಪ್ರಕಾರ ದಾಗೀನೆ ವ ಸೀರಿ ಸಹಿತ ತಗೊಂಡು ಹೋದಿ ಹೇಳಿಕಳಿಸಿದರೆ ಬರಲಿಲ್ಲ ನಾನು ಸ್ವಇಚ್ಛಾ ಕರಿಲಿಕ್ಕೆ ಬಂದರೆ ಪಂಚಾಯ್ತಿ ಮಾಡಿ ಬಂತೇನಿ ಅಂದಿ ಬರಲಿಲ್ಲ ನಾನು ನಿನ್ನ ಇಟಗೊಂಡು ಬಾಳ್ವೆಮಾಡಲಿಕ್ಕೆ ಕೆಬೂಲ ಇರತೇನೆ ಈ ನೋಟೀಸ ಮುಟ್ಟಿದ ೭ ದಿವಸದಲ್ಲಿ ಸವರಿ ದಾಗೀನೆ ವ ಸೀರಿ ತಗೊಂಡು ಒಂದು ಬಾಳೆ ಮಾಡಬೇಕು ನೀನು ಬಾರದೆ ಇದ್ರೆ ಉಡಕಿ ಆದರೆ ನಿನ್ನ ಮೇಲ ವ ಉಡಿಕಿ ಆದವನ ಮೇಲೆ ಅಗರ ಯಾರ ತಾಬೆದಲ್ಲಿ ಇರತಿ ಅವನ ಮೇಲೆ ಫೌಜದಾರಿಯಲ್ಲಿ ಫಿರ್ಯಾದಿ ಮಾಡತೇನೆ ೪-೫ ತಿಂಗಳಲ್ಲಿ ಸಾಲಾ ಮಾಡಲಿಕ್ಕೆ ಕಾರಣ ಇಲ್ಲಾ ಆದ್ದರಿಂದ ನಿನ್ನ ಸಾಲಕ್ಕೆ ನಾನು ಪಾತ್ರನಲ್ಲಾ ಈ ಖರ್ಚು ನಿನ್ನ ಮೇಲೆ ಅದೆ ತಿಳಿಯುವದು ಸವದತ್ತಿ ತಾ|| ೬-೧೦-೩೦

ಭೀಮಪ್ಪಾ ಪಕೀರಪ್ಪಾ ಅಟಗಾಲ

ವಿ ಧಾರವಾಡ ಅರ್ಬನ ಕೊ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ್ಟ ಸೊಸಾಯಿಟಿಯ ಅಪ್ಪ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯ ಎಂಟು ಲಕ್ಷದ ಮೇಲುಂಟು. ಜಕ ಹುಂಡಿ ಹೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜನ್ಮಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮುಚ್ಚ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಕತ್ತೀ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎಂ. ಬಿ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೩ ತಿಂಗಳಿಗೆ	ರೂ.	೧೩-೮-೦
೬ ,,		೭-೦-೦
೩ ,,		೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ		೩-೧೩-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ಬಜಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವಾನಿ (ಟ) ಪೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊತ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಜಿಲ್ಲರ ಫರನೀಚರ ಕಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನ ಕೊಳ್ಳುವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ: -- ಎಮ. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ,
ಶಾಳಾ ನಂ ೦ ೧. ಗದಗ ಬೆಟಗೇರಿ

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 6448

ವಿದ್ಯಾಕಿರಣ

ನಿತ್ಯ ಪತ್ರಿಕೆ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖ ೯ನೇ ಅಕ್ಟೋಬರ ೧೯೩೦ (ಸಂಚಿಕೆ ೨೨೩

೧೬ನೆಯ ಕರ್ನಾಟಕ ಸಾಹಿತ್ಯ ಪರಿಷತ್ತು

ಅಧ್ಯಕ್ಷ ಶ್ರೀ. ಆಲೂರ ವೆಂಕಟರಾಯರ

ಭಾ ಷ ಣ

ಮಧ್ಯಭಾಗ

ವಾಙ್ಮಯದಲ್ಲಿ ನಾಲ್ಕು ಭಾಗ-

ಮೇಲಿನ ವಿವೇಚನೆಯಿಂದ ವಾಙ್ಮಯದ ಅಂತಃಪ್ರಭಾವವು ಬೆಳೆಯಬೇಕಾದರೆ ಯಾವ ಯಾವ ರಂಗತಿಗಳ ಅವಶ್ಯಕತೆಯಿರುತ್ತದೆಂಬುದು ಗೊತ್ತಾಗುವುದು. ಆ ಸಂಗತಿಗಳು ಯಾವುವೆಂದರೆ, (೧) ವಾಙ್ಮಯವನ್ನು ಹುಟ್ಟಿಸುವದು. ವಿಶ್ವಸಂಸ್ಕೃತಿಯನ್ನೂ ಕೂಗೊಂಡ ರಾಷ್ಟ್ರೀಯತ್ವವನ್ನೂ ಕರ್ನಾಟಕತ್ವವನ್ನೂ ಅನುಸಂಧಾನಮಾಡಿ ಗ್ರಂಥಗಳನ್ನು ಬರೆಯಬೇಕು. (೨) ವಿಶುದ್ಧವಾದ ಮನಸಿನಿಂದ ಗ್ರಂಥಬರೆಯುವುದೂ ಒಂದು ಪ್ರಕಾರವಾಗಿ ಪರಮಾತ್ಮನ ಸೇವೆಯೆಂಬ ಭಾವನೆಯಿಂದ ಪ್ರೇರಿತರಾಗಿ ತಾವು ಬರೆಯುವ ಗ್ರಂಥದ ವಿಷಯವನ್ನು ನಿಶ್ಚಿತವಾಗಿ ಅಭ್ಯಾಸಮಾಡಿ ಗ್ರಂಥ ಬರೆದು ಜ್ಞಾನದ ಪ್ರಚಾರವನ್ನು ಮಾಡಬೇಕು. (೩) ಗ್ರಂಥಗಳನ್ನು ಬರೆಯುವವರು ಕರ್ನಾಟಕ ಪುರುಷನ ಶರೀರ, ಮನಸು ಮತ್ತು ಆತ್ಮ ಇವು ಭಿನ್ನವಾಗಿ ವಿಕಾಸಹೊಂದಲಿಕ್ಕೆ ಅನುಕೂಲವಾಗುವಂಥ ಗ್ರಂಥಗಳನ್ನು ಬರೆಯಬೇಕು. (೪) ಈ ಜಗತ್ತು ತ್ರಿವಿಧವಾದ ಜೀವರುಗಳಿಂದ ತುಂಬಿರುವದರಿಂದ, ಯಾವಾಗಲೂ ಶುದ್ಧ ವಾಙ್ಮಯವು ಹೊಂದುತ್ತಿರುವುದು ಶಕ್ಯವಿಲ್ಲವಾದುದರಿಂದ, ಸಮಾಜವು ತಾಮಸವಾಙ್ಮಯವನ್ನು ಹುಡುಕಿ ತೆಗೆದು ಅದನ್ನು ಹೊಳೆಮಾಡಿಬೇಕು. ಹೀಗೆ ಮಾಡುವುದರಿಂದ, ವಾಙ್ಮಯದ ಅಂತಃಪ್ರಭಾವವು ಬೆಳೆಯುತ್ತದೆ.

ಇನ್ನು ಇಂತಹ ಅಂತಃಪ್ರಭಾವವುಳ್ಳ ವಾಙ್ಮಯದಲ್ಲಿ ನಾವು ನಾಲ್ಕು ಸ್ಥಾಲಭಾಗಗಳನ್ನು ಮಾಡಬಹುದು. ಅವಾವವೆಂದರೆ (೧) ಪ್ರಾಣವಂತವಾಙ್ಮಯ (೨) ವೀರ್ಯವಂತ ವಾಙ್ಮಯ (೩) ತೇಜಸ್ವಿವಾಙ್ಮಯ ಮತ್ತು (೪) ಸ್ವಾನಂದವಾಙ್ಮಯವೆಂದರೆ ಸತ್ವರಜತಮೋಗುಣಗಳಿಂದ ವಿಸರಿದ ತ್ರಿಗುಣಾತೀತನಿಂದ ಅಥವಾ ಅವರೋಕ್ಷಜ್ಞಾನಿಯಿಂದ ಹುಟ್ಟಿದ ವಾಙ್ಮಯ, ಇಂಥದನ್ನು ಕೇವಲ ವಾಙ್ಮಯಭಕ್ತನಿಗುಮಾತ್ರ. ಗ್ರಂಥಗಳನ್ನು ಬರೆಯಬೇಕೆಂದು ಅತನು ಗ್ರಂಥಗಳನ್ನು ಬರೆಯಬೇಕೆಂದು ಅತನು ಗ್ರಂಥಗಳನ್ನು ಬರೆಯುವುದಿಲ್ಲ, ಪ್ರಕೃತಿಯವನು ಹೇಗೆ ಲೀಲೆಯಿಂದ ನೃತ್ಯಗಾಯನಗಳನ್ನು ಮಾಡುತ್ತಿರುತ್ತಾನೋ ಹಾಗೆ ಈ ಅವರೋಕ್ಷಜ್ಞಾನಿಯು ಈ ವಾಙ್ಮಯಯೋಗಿಯು ಲೀಲೆಯಿಂದ ಗ್ರಂಥಗಳನ್ನು ಬರೆಯುತ್ತಾನೆ. ಈ ತರದ ಸ್ವಾನಂದವಾಙ್ಮಯದಲ್ಲಿಯೂ ತಾರತಮ್ಯಗಳಿವೆ ಅವುಗಳಲ್ಲಿ ಸ್ಥೂಲವಾಗಿ ಮೂರು ವಿಭಾಗಗಳನ್ನು ಮಾಡಬಹುದು ಅವು ಯಾವುವೆಂದರೆ (೧) ಸ್ವಯಂಭೂ ಶಂದರೆ ಉದ್ಭವ ಅಥವಾ ಒಡವಡಿದ ವಾಙ್ಮಯ (೨) ಹೃದಯಾಕಾಶವಾಣಿಯಿಂದ ಉದ್ಭವಿಸಿದ ವಾಙ್ಮಯ ಅಥವಾ ಪರಮಾತ್ಮಪ್ರೇರಿತ ವಾಙ್ಮಯ. ಈ ತಾರತಮ್ಯ ಅತ್ಯಂತ ಉನ್ನತಶಿಖರಕ್ಕೇರಿದ ವಾಙ್ಮಯವು ಮೊದಲಿನ ಮೂರು ಕೋಶಗಳನ್ನು ದಾಟಿ ವಿಜ್ಞಾನ ಅಥವಾ ಆನಂದಕೋಶಗಳಲ್ಲಿ ಸೇರಿ ಅನುಭವಪಡುತ್ತಿರುವದರಿಂದಲೇ ಹೊಂದಬೇಕಾಗುತ್ತದೆ. ಏಕೆಂದರೆ ಅಲ್ಲಿ ಬಣ ಬುದ್ಧಿಯ ಅಥವಾ ತರ್ಕದ ಆಟವು ಸಾಗುವದಿಲ್ಲ. ಬುದ್ಧಿ ವಿದ್ಯಾಬಲದಿ ಹೇಳಿದ ಶಬ್ದ ಕಾವ್ಯವಿದಲ್ಲ; ಶಕ್ತಿಸಂಪತ್ತಿಗಳನು ತಿಳಿದ ಮಾನವಲ್ಲ. ಬುಧರಿಂದ ||ಪದ್ಯವಲ್ಲಭ ತಾನೆ ಹೃದಯದೊಳಿನ್ದು ನುಡಿಸುವ ತೆರದಿ ನುಡಿದೆ.ಪದ್ಯಗಳನ ....." ಎಂದು ಜಗನ್ನಾಥರಾಯರು ಉಸುರಿದ ಉಜ್ಜ್ವಲವಾದ ವಾತಾವರಣದಲ್ಲಿ ನಮ್ಮ ಶರಣರ ದಾಸರ ಸಾಹಿತ್ಯವೂ ,, ಭಂತೇಶವೈಭವ, ಶೂನ್ಯಸಂಪಾದನೆ "ಗಳಂಥ ಗ್ರಂಥಗಳೂ ಹುಟ್ಟಿರುವವು.

ವಾಙ್ಮಯದಲ್ಲಿ ವಿಧಿಭಂಗ-

ವಾಙ್ಮಯದಲ್ಲಿ ನಾವು ಪುರಾತನರು ಹಾಕಿ ಕೊಟ್ಟ ಕಟ್ಟುಗಳನ್ನು ಎಷ್ಟರ ಮಟ್ಟಿಗೆ ಪಾಲಿಸಬೇಕೆಂಬ ಪ್ರಶ್ನೆಯು ಪದೇ ಪದೇ ಚರ್ಚಿಸಲ್ಪಡುತ್ತದೆ. ವ್ಯಾಕರಣದಿಗಳ ಕಟ್ಟನ್ನು ತಿಲವ್ರಾಯವೂ ಸಡಲಿಸದೆ, ಅವರು ಅಂಗೀಕರಿಸಿದ ಅಪವಾದಗಳ ಕ್ಷೇತ್ರವನ್ನು ತುಸುವಾದರೂ ವಿಸ್ತಾರಗೊಳಿಸದೆ, ಅವುಗಳನ್ನು ಅಕ್ಷರಶಃ ಪಾಲಿಸಬೇಕೆಂದು ಒಂದು ಪಕ್ಷ. ಇದಕ್ಕೆ ವಿರುದ್ಧವಾಗಿ, ವ್ಯಾಕರಣ ಛಂದಸ್ಸು ಮುಂತಾದವುಗಳ ಕಟ್ಟನ್ನು ಚಟ್ಟನೆ ಕಿತ್ತೊಗೆದು ಯಥೇಚ್ಛವಾಗಿ ಸ್ವಾತಂತ್ರ್ಯಸುಖವನ್ನು ಅನುಭವಿಸಬೇಕೆಂದು ಮತ್ತೊಂದು ಪಕ್ಷ. ಈ ಎರಡೂ ಪಕ್ಷಗಳು ಅತಿಶಯ ನಿಜವಿರುತ್ತವೆ ಶಾಸನಭಂಗ ಅಥವಾ ವಿಧಿಭಂಗವನ್ನು ಮಾಡುವುದು ಪಾಪವೇನೂ ಅಲ್ಲ. ಆದರೆ, ಅದನ್ನು ಮಾಡುವದರಿಗೆ ಒಂದು ಬಗೆಯ ಅಧಿಕಾರವು ಬೇಕಾಗುತ್ತದೆ. ಅಲ್ಲದೆ ಕೊನೆಯ ಉಪಾಯವೆಂದೇ ನಾವು ಅದನ್ನು ಸ್ವೀಕರಿಸಬೇಕು. ಆ ತರದ ಅಧಿಕಾರವು ಮನೋಮಯ ಕೋಶದ ದಾಟಿ ವಿಜ್ಞಾನ ಅಥವಾ ಆನಂದಮಯ ಕೋಶದಲ್ಲಿ ಇರುವವನಿಗೆ ಮಾತ್ರವೇ ಇರುತ್ತದೆ. ಅಂಥವರಿಗೆ ವಿಧಿ ಬಂಧನವಿಲ್ಲ. ಅಂಥವರು ಶಬ್ದಬ್ರಹ್ಮನನ್ನು ಅತಿವರ್ತಿಸಿದವರಾಗಿರುತ್ತಾರೆಂದರೆ ಸಲ್ಲುವುದು. ಸಾಮಾನ್ಯರು ಕಾರ್ಯಾಕಾರ್ಯವನ್ನು ನಿರ್ಣಯಿಸುವಾಗ ಶಾಸ್ತ್ರವನ್ನು ಪ್ರಮಾಣವಾಗಿ ಹಿಡಿದೇ ನಡೆಯಬೇಕು. ಆ ತರದ ಅಧಿಕಾರವಿಲ್ಲದೆ ಅಧಿಕಾರವಿರುತ್ತದೆಂದೂ ತಿಳಿಯುವುದು ಆತ್ಮವಂಚನೆಯು. ಸಾರಾಂಶವೇನಂದರೆ- ಯಾವನೂ ಬುದ್ಧಿಪೂರ್ವಕವಾಗಿ ಯಾವುದೊಂದು ಉದ್ದೇಶವನ್ನಿಟ್ಟುಕೊಂಡು ವಿಧಿಭಂಗವನ್ನು ಮಾಡಲಿಕ್ಕೆ ಹೋಗಬಾರದು. ಆತನು ತನ್ನ ವಿಷಯದಲ್ಲಿ ತನ್ಮಯನಾದಾಗ ವಿಧಿಭಂಗವು ತಾನಾಗಿಯೇ ಆದರೆ ಅಡ್ಡಿ ಇಲ್ಲ. ಇಂಥ ವಾಙ್ಮಯವೇ ಆದರ್ಶ ವಾಙ್ಮಯವು. ಇಂಥ ಪ

ರುಷರೇ ಆದರ್ಶ ಪುರುಷರು.

ವಾಙ್ಮಯದ ಅಭಿವೃದ್ಧಿಯ ಮೂಲ ತತ್ವಗಳಾವುವೆಂಬುದನ್ನು ಇಲ್ಲಿಯ ವರೆಗೆ ವಿವೇಚಿಸಿದ್ದಾಯಿತು. ಈ ಮೂಲ ತತ್ವಗಳನ್ನು ನಾನು ಇಷ್ಟು ವಿಸ್ತಾರವಾಗಿ ಹೇಳುವ ಕಾರಣವೇನಂದರೆ, ಇವುಗಳ ಅಜ್ಞಾನದ ಮೂಲಕ ಕನ್ನಡ ವಾಙ್ಮಯದ ವಿಮರ್ಶೆಯನ್ನು ಮಾಡುವುದರಲ್ಲಿ ಅನೇಕ ತಪ್ಪುಗಳುಂಟಾಗುತ್ತವೆ. ವಾಙ್ಮಯವೆಂದರೆ ಕೇವಲ ಭಾಷೆಯೆಂದು ಹಲವರ ತಿಳವಳಿಕೆ. ವಿಷಯಕ್ಕೆ ಇಂಥ ಜನರು ಮಹತ್ವವನ್ನು ಕೊಡದೆ ಭಾಷೆಗೆ ಮಹತ್ವವನ್ನು ಕೊಡುತ್ತಾರೆ. ಇದು ತಪ್ಪು. ಬ್ರಹ್ಮ ಸಂಸ್ವತಿಯರ ಲಗ್ನವಾಗಬೇಕು. ಎಂದರೆ ವಿಷಯ ಮತ್ತು ಭಾಷೆ ಇವುಗಳ ಸಮ್ಮಿಶ್ರಣವಾಗಬೇಕು. ಕನ್ನಡ ವಾಙ್ಮಯದ ವಿಮರ್ಶೆ-

ಇನ್ನು ನಾನು ಕನ್ನಡ ವಾಙ್ಮಯದ ಭೂತ ಮತ್ತು ವರ್ತಮಾನಗಳ ಕಡೆಗೆ ಹೊರಳುತ್ತೇನೆ. ಭೂತಕಾಲದ ವಾಙ್ಮಯಕ್ಕೂ ವರ್ತಮಾನಕಾಲದ ವಾಙ್ಮಯಕ್ಕೂ ಎಂದರೆ ಹಳಗನ್ನಡಕ್ಕೂ ಹೊಸಗನ್ನಡಕ್ಕೂ ಅತ್ಯಂತ ಭೇದವಿರುತ್ತದೆಂಬುದನ್ನು ನಾವು ಮೊದಲು ಲಕ್ಷ್ಯದಲ್ಲಿಡಬೇಕು. ಭೂತಕಾಲದ ವಾಙ್ಮಯವೇ ಒಂದು ವಿಧದಿಂದ ರೂಪಾಂತರವನ್ನು ಹೊಂದುತ್ತ ಹೊಂದುತ್ತ ಈಗಿನ ಹೊಸಗನ್ನಡ ರೂಪವನ್ನು ತಾಳಿರುತ್ತದೆಂಬುದು ಅಂತರ್ಜ್ಞಾನವೇನೋ ಆಹುದು. ಆದರೂ, ಕನ್ನಡದಲ್ಲಿ ಅವೆರಡು ಶರಹದ ಭಾಷೆಗಳ ನಡುವೆ ದೊಡ್ಡದೊಂದು ಕೊನ್ನಾರವು ಬಿದ್ದಿರುವುದೆಂಬುದಷ್ಟು ನಾವು ಅಲ್ಲಗಳೆದು ಫಲವಿಲ್ಲ. ಭೂತಕಾಲದ ವಾಙ್ಮಯದ ಮುಖ್ಯಭಾಗವು ಬಹುಶಃ ಪದ್ಯರೂಪದಲ್ಲಿ ಇರುವುದೇ ಇದಕ್ಕೆ ಕಾರಣವಾಗಿರಬಹುದು. ಅದು ಏನೇ ಇರಲಿ, ವರ್ತಮಾನ ಕಾಲದ ಗದ್ಯ ವಾಙ್ಮಯವನ್ನು ಹುಟ್ಟಿಸುವುದಕ್ಕೆ ಹಳಗನ್ನಡವು ಬಲು ಮಟ್ಟಿಗೆ ನೆರವಾಗಲಾರದೆಂದು ನನ್ನ ಅಭಿಪ್ರಾಯ. ಇದರಿಂದ ಹಳಗನ್ನಡವನ್ನು ನಾನು ನಿಂದಿಸುತ್ತೇನೆಂದು ತಾವು ಸರ್ವಥಾ ಭಾವಿಸಕೂಡದು. ಅದರ ಯೋಗ್ಯತೆಯನ್ನು ನಾನು ಅಲ್ಲಗಳೆಯುವುದಿಲ್ಲ. ಈಗ ನಾನು ಅವನ್ನು ಹಿಂದೇ ಹಿಂದು ದೃಷ್ಟಿಯಿಂದ ವಿಚಾರಮಾಡುತ್ತೇನೆ. ಅದಾವುದೆಂದರೆ ಭೂತಕಾಲದ ವಾಙ್ಮಯವು ವರ್ತಮಾನಕಾಲದ ಗದ್ಯ ವಾಙ್ಮಯವನು ಎಷ್ಟು ಮಟ್ಟಿಗೆ ವಿಕಾಸಗೊಳಿಸಬಹುದೆಂಬ ದೃಷ್ಟಿಯಿಂದ ಹಾಗೆ ವಿಚಾರ ಮಾಡಿದರೆ, ಹೊಸ ಗದ್ಯಶೈಲಿಗೆ ಅದು ವಿಶೇಷವಾಗಿ ಪ್ರಯೋಜನಕಾರಿಯಾಗಲಾರದು. ಹೊಸ ಗದ್ಯಶೈಲಿಯನ್ನು ನಾವು ಹೊಸದಾಗಿ ಹುಟ್ಟಿಸಬೇಕಾಗಿದೆ. ಹಳಗನ್ನಡದಲ್ಲಿಯ ಉತ್ಕೃಷ್ಟವಾದ ಮತ್ತು ಅರ್ಥಪೂರ್ಣವಾದ ಶಬ್ದಗಳು, ಶಬ್ದಸಂಯೋಜನೆಗಳು ನಮಗೆ ಉಪಯೋಗವಾಗಲಾರವು. ಕನ್ನಡ ನುಡಿಯ ಜಾತಿ, ಕುಲಗೋತ್ರಗಳನ್ನು ನಾವು ಕಂಡುಹಿಡಿಯಬಹುದು. ಅದರ ಕೈಕೇಸ್ಕರ ಕೆಲವು ಪಂಡಿತರು ಹಳಗನ್ನಡದೊಳಗಿನ ಉತ್ಕೃಷ್ಟವಾದ ಗ್ರಂಥಗಳ ಸಾರಸರ್ವಸ್ವವೆಲ್ಲವನ್ನೂ ಹೀರಿ ಅದರ ಸಹಾಯದಿಂದ ಆ ಗ್ರಂಥಗಳನ್ನು ರಸವತ್ತಾಗಿ ಹೊಸಗನ್ನಡಕ್ಕೆ ವರ್ಗಾಯಿಸಬೇಕು. ಹಳಗನ್ನಡವು ಕವಿಗಳಿಗೆ ಬಲು ಮಟ್ಟಿಗೆ ಸಹಾಯಕವಾಗುವದು. ಆದರೆ ಇಲ್ಲಿಯೂ ನಾವು ಹಿಂದು ಗತಭಾವದ ಪ್ರಶ್ನೆಯನ್ನು ಬಿಡಿಸಬೇಕಾಗಿದೆ. ಅದಾವುದೆಂದರೆ, ದಿನದಿನಕ್ಕೆ ಹೆಚ್ಚು ಹೆಚ್ಚಿಗೆ ವಿಸ್ತಾರವಾಗುತ್ತ ನಡೆದಿರುವ ಹೊಸಗನ್ನಡದ ಶೈಲಿಗೆ ಹಳಗನ್ನಡದ ಪದ್ಯಶೈಲಿಯನ್ನು ಅದಷ್ಟು ಸಮೀಪಕ್ಕೆ ತರಬೇಕು. ನಾನೇನೂ ಕವಿಯಲ್ಲ. ಆದರೆ, ಇಷ್ಟು ಮಾತ್ರ ನಾನು ಹೇಳಬಲ್ಲೆ. ಏನಂದರೆ, ಕವಿಗಳ ಈ ಪ್ರಶ್ನೆಯನ್ನು ಕೃಷ್ಟಿಕರವಾಗಿ ಬಿಡಿಸದಿದ್ದರೆ, ವರ್ತಮಾನಕಾಲದ ಗದ್ಯಪದ್ಯಗಳಲ್ಲಿರುವ ಅಂತರವು ದಿನದಿನಕ್ಕೆ ಬೆಳೆಯುವುದು.

ವರ್ತಮಾನ ಕಾಲದ ವಾಙ್ಮಯದ ಮುಖ ದೋಷವೇನಂದರೆ- ನಮ್ಮ ವಾಙ್ಮಯವು ಮುಂದೆ ಇಂಥದೊಂದು ವಿಶಿಷ್ಟವಾದ ಮಾರ್ಗವನ್ನು ಹಿಡಿದು ಸಾಗತಕ್ಕದ್ದಿರುತ್ತದೆಂಬ ವಿಷಯದಲ್ಲಿ ಏಕಸೂತ್ರವಿಲ್ಲದಿರುವುದು. ಇದರ ಮೂಲಕ, ಮನ ಒಂದವರು ಮನಬಂದಂತೆ ಬರೆಯುತ್ತಾರೆ. ಕನ್ನಡ ನಾಡಿನಲ್ಲಿ ಜಾಗ್ರತಿಯುಂಟಾಗಿರುವುದೇ ಇದಕ್ಕೆ ಕಾರಣ. ಗ್ರಂಥಕರ್ತರೂ ಗ್ರಂಥಕರ್ತರಿಗಾಗತಕ್ಕವರೂ ಒಂದೆಡೆಗೆ ಸೇರಿ, ಗದ್ಯಪದ್ಯ ವಾಙ್ಮಯದ ಧ್ಯೇಯವನ್ನು ನಿಶ್ಚಯಿಸುವುದು ಬಹಳ ಅವಶ್ಯವಿದೆ. ಪ್ರತಿಯೊಂದು ವಿಷಯದಲ್ಲಿ ಆದರ್ಶ ಪುರುಷರು ಹುಟ್ಟಿ, ಆದರ್ಶ ಗ್ರಂಥಗಳನ್ನು ಬರೆದರೆ ಸಾಮಾನ್ಯ ಜನರು ಅವನ್ನು ತಾವಾಗಿಯೇ ಹಿಂಬಾಲಿಸುವರೆಂಬುದು ನಿಜ. ಆದರೆ ಅಲ್ಲಿಯ ವರೆಗೆ ನಾವು ಕೆಲವು ಸಾಮಾನ್ಯ ನಿಯಮಗಳನ್ನಿಟ್ಟುಕೊಂಡು ನಡೆದರೆ ಒಳ್ಳೆಯದು.

ಶೆಂದಿ ಗುತ್ತೇದಾರನೇ ಪಿಕೆಟಿಂಗಕ್ಕೆ ನಿಂತನು.

—(o)—

ಹಾನಗಲ್ಲಿನಲ್ಲಿ ಶೆಂದಿಯ ಗಡೆಂಗದ ಮುಂದಿನ ಪಿಕೆಟಿಂಗವು ಯಶಸ್ವಿಯಾಗಿ ನಡೆದಿದೆ. ರೂಪಾಯಿ, ಎರಡು ರೂಪಾಯಿಗಿಂತ ಹೆಚ್ಚು ಮೂಲ್ಯವಾಗುವದಿಲ್ಲ. ಇದರಲ್ಲಿ ಹೇಳುವಂಥ ಮಹತ್ವದ ಸಂಗತಿಯೇನಂದರೆ- ಶೆಂದಿಯ ಗುತ್ತೇದಾರನೇ ಸ್ವತಃ ಪಿಕೆಟಿಂಗಮಾಡಿ, ಕುಡುಕರಿಗೆ ಕುಡಿಯಬೇಡಿರೆಂದು ಉಪದೇಶಮಾಡುವನು. ಇವನ ಸ್ವಾಮಿಯಾದ ಅನುಕಂಪನ್ನು ಬೇರೆ ಕಚೇರಿಯಲ್ಲಿ ಮಾಡಿದರೆ- ಸಾಮಿರಾದುವೇಕೆ? ಲಕ್ಷಾಧಿಕ ಕುಟುಂಬಗಳಲ್ಲಿ ಸುಖಸಾಮ್ರಾಜ್ಯ ನ್ನುಂಟುಮಾಡಿದ ಪುಣ್ಯಪಡೆಯುವರು.

ಲಮಾಣಿಗಳು ಕುಡಿತ ಬಿಟ್ಟರು.

ಘಟಪ್ರಭೆಯಲ್ಲಿ ಗಜಾನನನ ಉತ್ಸವ ಪೂರ್ತಿದಲ್ಲಿ ಯಾವ ಚಟವಳಿಯೂ ಇದ್ದಿಲ್ಲ. ಆದರೆ ಊರವರಾಗಿ ಶಿರ್ಕಿಯಲ್ಲಿ ಪಾಂಡವಾಗಿದ್ದ ಶ್ರೀ ಶಿವಲಿಂಗಪ್ಪ ಶಕ್ತೀರಪ್ಪ ಧಂಡಸಿ ಇವರು ಬಂದು ಭೋಕಜಾಗೃತಿಯನ್ನುಂಟುಮಾಡಿದರು. ಇವರು ಮುಖ್ಯವಾಗಿ ಲಮಾಣಿಗಳ ತಾಂಡೆಗಳಿಗೆ ಹೋಗಿ, ಶರಿಂದಿಯನ್ನು ಕುಡಿಯಬಾರದೆಂದು ಉಪದೇಶಮಾಡಿದರು. ಜನರು ಉತ್ಕೃಷ್ಟ ಪರಿಣಾಮವಾಗಿ ಲಮಾಣಿಗಳು ಕುಡಿಯ ಬಾರದೆಂದೂ, ಕುಡಿದವರಿಗೆ ಬಹಿಷ್ಕಾರ ಹಾಕಬೇಕೆಂದೂ ಜಾತಿಯ ನಿಯಮಗಳನ್ನು ಮಾಡಿಕೊಂಡಿದ್ದಾರೆ.

ಅಬ್ಬಿಗೇರಿಯಲ್ಲಿ ಪ್ರಭಾತಗೀತೆ.

—(o)—

ರೋಣ ತಾಲೂಕ ಅಬ್ಬಿಗೇರಿಯಲ್ಲಿ ನಗರ ಸಂಕೀರ್ತನೆಯು ಬಹು ಸಂಭ್ರಮದಿಂದ ಹೊರಡುವದು. ಜನರು ಮನೆಮನೆಗೆ ಆರತಿ ಬೆಳಗುವರು. ಕೀಳ ಬುದ್ಧಿಯವನೋರ್ವನು ಕುತ್ಸಿತಪಾಡಿದ್ದನು. ಸ್ವಯಂಸೇವಕರು ಶಾಂತವೃತ್ತಿಯಿಂದ ತಮ್ಮ ಕರ್ತವ್ಯಮಾಡಿದರು- ಆತನು ತಾಪತ್ರೆಗೊಂಡನು. ಸೀಗೆ ಹುಣ್ಣಿಮೆಯ ದಿವಸ ಹೊಲಕ್ಕೆ ಮತ್ತು ಗೌಂಗೆ ಮಾಡಿದ ಅಸ್ಪೃಶ್ಯರಲ್ಲಿ ಅಪವಿತ್ರವಾದ ವಿಶಾಪ ತ್ರಿಯ ಸಕ್ಕರೆಯನ್ನು ಉಪಯೋಗಿಸದೆ, ಬೆಲ್ಲದ ಆರತಿಯನ್ನೇ ಮಾಡಿದರು.

ಬೊಮ್ಮನಹಳ್ಳಿಯಲ್ಲಿ ಒಬಿಸ್ಕಾರ.

—(o)—

ಬೊಮ್ಮನಹಳ್ಳಿಯಲ್ಲಿ ಕಾಂಗ್ರೆಸ ಕಮೀಟಿಯು ಸ್ಥಾಪಿಸಲ್ಪಟ್ಟಿತು. ಕುಡುಕರು ತಂಕಮ್ಮೊಳಗೆ ಕುಡಿಯಬಾರದೆಂದು ಪ್ರತಿಜ್ಞೆಮಾಡಿಕೊಂಡರು. ಕಿರಾಣಿ ಅಂಗಡಿಯವರು ಜನರನ್ನು ಸತ್ಕರಿಸಿ ತಿನ್ನಲಿಕ್ಕೆಲ್ಲೆಂದು ಕಾಂಗ್ರೆಸ ಕಮೀಟಿಗೆ ಲೇಖ ಬರೆಕೊಟ್ಟರು. ದಸರೆಯ ದಿವಸ ನಿತ್ಯಕ್ಕಿಂತ ಹೆಚ್ಚಾದ ಉತ್ಸಾಹದಿಂದ ನಗರಸಂಕೀರ್ತನೆಯಾಗಿ, ಮಹಾತ್ಮರ ಭಾಷಣಪಟದೊಂದಿಗೆ ಸೀಮೋಲ್ಲಂಘನವಾಯಿತು.

ಸೂಡಂಬಿಯಲ್ಲಿ ಹರತಾಳ.

—(೦)—

ಶ್ರೀ. ಹೊಸಮನೆಯ ಪರಮಣ್ಣನವರನ್ನು ದಸ್ತಗಿರ ಮಾಡಿದ್ದರ ನಿಷೇಧಕ್ಕಾಗಿ ಹೊಳೇಕೇರೂರ ತಾಲೂಕ ಸೂಡಂಬಿ ನಿವಾಸಿಗಳು ಹರತಾಳ ಮಾಡಿದರು. ಅಂದು ಊರೊಳಗೆ ಯಾವ ಪದಾರ್ಥದ ಮಾರಾಟವಾಗಲಿಲ್ಲ. ಸ್ತ್ರೀಪುರುಷರಾರೂ ಏನೊಂದು ಕೆಲಸಮಾಡಲಿಲ್ಲ.

...ಕ್ಕೂರಲ್ಲಿ ಪೋಲಿಸರಿಗೆ ಪಂಚರೇ ಸಿಗಲಿಲ್ಲ.

ಈಚೆದ ವಾರದಲ್ಲಿ ಸತ್ಯಾಗ್ರಹ ಮಂಡಲದ ಸೇನಾಪತಿ ಶ್ರೀ ಮುನವಳ್ಳಿ ಸೇವಿ ಚಂದ್ರರೂ ಸಹಕಾರಿ ಶ್ರೀ ಧ...ಳೆ ರಾಮರಾಯರೂ ಬೆಳಗಾವಿ, ಗಂಕೇಶ್ವರ, ನಿಪ್ಪಾಣಿ ಮೊದಲಾದ ಕಡೆಗೆ ಹೋಗಿ ಅಲ್ಲಿಯ ಅಂದೋಲನ ನಿರೀಕ್ಷಣ ಮಾಡಿ ಬಂದರು ಹಿಕಟಿಂಗ ಸಲುವಾಗಿ ಕಾರಾಗೃಹಕ್ಕೆ ಹೋಗಿ ಬಂದ ಶ್ರೀ ಧ...ಳೆ ಮುಂತಾದ ನಾಲ್ವರ ದಂಡ ವಸೂಲ ಮಾಡಬೇಕೆಂದು ಪೋಲೀಸರು ಒತ್ತೀ ವಾರಂಟು ತರಲು, ಅವರಿಗೆ ಒಬ್ಬ ಪಂಚನೂ ದೊರೆಯದ್ದರಿಂದ ಜಪ್ತಿಯನ್ನು ಮುಂದೆ ಹಾಕಿರುವರೆಂದು ತಿಳಿದ್ದಾಗುವದು. ವಿಜಯಾದಶಮಿಯಿಂದ ಊರೊಳಗೆಲ್ಲ ಮನೆ ಮನೆಗೆ ರಾಷ್ಟ್ರೀಯ ಧ್ವಜವನ್ನು ಹಚ್ಚುವದು ಬಲವಾಗಿ ನಡೆದಿದೆ. ದಸರೆಯ ದಿವಸದಂದು ಗಾಂಧೀ ಫೋಟೋ ಸಹ ದೊಡ್ಡ ಮೆರವಣಿಗೆ ಕೊಟ್ಟು ಶೀವೋಲ್ಲಂಘನ ಶಮೀ ಪೂಜಾ ಮೊದಲಾದವುಗಳು ಜರುಗಿ ಸಡಗರದಿಂದ ಸೀಮೋಲ್ಲಂಘನವು ಅಲ್ಲಿಯೊಂದು ಸತ್ಯಾಗ್ರಹ ಶಿಬಿರವು ಸ್ಥಾಪಿಸಲ್ಪಟ್ಟಿದೆ.

ಸುಂಕನಾನಾ ಫರಾರಿಯು ಮಾರವಾಡಿಗಳ ಮೂಗು ಕೊಯ್ದನು.

—(೧)—

ನಾಸಿಕ ಜಿಲ್ಲೆಯಲ್ಲಿ ಮಾರವಾಡಿಗಳ ಜನ್ಮವೈರಿಯಾದ ನಾನಾಫರಾರಿಯು ಸದ್ದು ಒಂದು ಮಂಗಳಿಂದ ಅಡಗಿತ್ತು. ಈತನು ಪುನಃ ಪ್ರಕಟನಾಗಿ, ತಾನು ಮತ್ತು ತನ್ನ ಜನರು ಸೇರಿ, ಎರಡು ಹಳ್ಳಿಗಳಲ್ಲಿ ದರೋಡೆ ಮಾಡಿ, ಇಬ್ಬರು ಮಾರವಾಡಿಗಳ ಮೂಗು ಕೊಯ್ದು ಅವರ ಮನೆಗಳಲ್ಲಿ ದೊರೆತ ಧನಕನಕಗಳನ್ನು ಬೈದನು. ಸರಕಾರದವರು ಅಸುರಾರಿಗಳನ್ನು ಶಿಕ್ಷಿಸುವದಕ್ಕಾಗಿ ಸಿದ್ಧಮಾಡಿದ ಕಿಜರ ಪೋಲಿಸರನ್ನು ಒಂದೇಸಲ ತಿಂಗಳು ನಾನಾ ಸಮಾಚಾರಕ್ಕಾಗಿ ಕಳಿಸಿದರೆ. ಅಸುರಕಾರಿಗಳು ಸಂಕಷ್ಟಕ್ಕೆ ಭಾವು ಎನ್ನುವರು.

ರಾ. ಬ. ಕಂಬಳಿಯವರು ವಿಲಾಯತಿಗೆ ಹೋಗುವದಿಲ್ಲ.

—(೦)—

ಗೃಹಕೃತ್ಯದ ಅಸ ನುಕೂಲತೆಯಮೂಲಕ ರಾ. ಬ. ಕಂಬಳಿಯವರು ತನಗೆ ವಿಲಾಯತಿಗೆ ಹೋಗುವದಾಗುವದಿಲ್ಲೆಂದು ಹಿಂದುಸ್ತಾನ ಮತ್ತು ಮುಂಬಯಿ ಸರಕಾರಕ್ಕೆ ತಿಳಿಸಿದ್ದಾರೆ. ರಾಜಕಾರಣ ಪಟುಗಳಿಗೆ ಯಾವದೊಂದು ಗುಪ್ತಕೆಲಸ ನಡೆದಾಗಯಾವದೊಂದು ದೊಡ್ಡ ಪ್ರಸಂಗ ತಪ್ಪಿಸಬೇಕಾಗುವ ಸಮಯ ಬಂದರೆ ಬೇನೆ, ಬೇಸರಿಕೆ, ಗೃಹಕೃತ್ಯ ಅಡ್ಡ ಬರುವದು ವಾಡಿಕೆಯಾಗಿದೆ. ದಿವಾನಗಿರಿಯೇ ಈ ಗೃಹಕೃತ್ಯವಾಗಿರಬೇಕು.

ಹುಬ್ಬಳ್ಳಿಯ ಮುನಸಫಕೋರ್ಟಿನಲ್ಲಿ ದರೋಡೆ

ಕಾವಲಗಾರನಿಗೆ ಭಯಂಕರ ಹೊಡತ.

—)(೦)(—

ಏಳುನಾಣಿದರ ಜೆಂದಿಗೆಯ ಹಾಸಿಯು.

—(೮)—

ಮೊನ್ನೆಯ ದಿವಸ ಮಧ್ಯರಾತ್ರಿಯಲ್ಲಿ ಗ್ರಹಣ ಹಿಡಿಯುವ ಸಮಯದಲ್ಲಿ ದರೋಡೆಗಾರರು ಹುಬ್ಬಳ್ಳಿಯಲ್ಲಿ ಸಬ್ಜಜ್ಜ ಕೋರ್ಟಿಗೆ ಹೋಗಿ, ಅಲ್ಲಿದ್ದ ಕಾವಲಗಾರನನ್ನು ಗಾಯಮುಂತಾದ ಹೊಡೆದು, ನಾಲ್ಕುಜನ ಕೋಣೆಯಲ್ಲಿರುವ ಸೇಫನ್ನು ಒಡೆದು, ಅದರಲ್ಲಿದ್ದ ಏಳು ಸಾವಿರ ಬೆಲೆಯಾಗುವ ಒಡವೆ ಮತ್ತು ನಗದು ನಾಣ್ಯಗಳನ್ನು ತಕ್ಕೊಂಡು ಪಲಾಯನ ಹೇಳಿಸಿದ್ದಾರೆ. ಈ ಸುದ್ದಿಯು ಬೆಳಗಾಗ.ವದರೊಳಗೆ ಧಾರವಾಡಕ್ಕೆ ಬಂತು. ಜಡ್ಜರಾದ ಮೆ. ಲೋಕೂರವರು ಕೂಡಲೆ ಅಲ್ಲಿಗೆ ಹೋಗಿ ನಡೆದ ಅನಾಹುತವನ್ನು ನೋಡಿಕೊಂಡು ಬಂದರು.

ಲಾಹೋರದಲ್ಲಿ ಮೂವರಿಗೆ ಗಲ್ಲು.

—o*o—

ಲಾಹೋರದಲ್ಲಾದ ಸ್ಯಾಂಡಹರ್ಸ್ಟಸಾಹೇಬನ ಕೊಲೆಯ ಪ್ರಕರಣದಲ್ಲಿ ಭಗತಸಿಂಗ, ರಾಜಗುರು ಮತ್ತು ಸುಖದೇವ ಇವರಿಗೆ ಗಲ್ಲಿನ ಶಿಕ್ಷೆಯಾಯಿತು. ಇವರ ಹೊರ್ಶ್ ಮೂವರಿಗೆ ಕರೇಸೀರ, ಇಬ್ಬರಿಗೆ ಏಳುವರ್ಷವಾಗಿ ಮೂವರು ಬಂಧಮುಕ್ತರಾದರು.

ಜಾಹೀರ ನೋಟೀಸು

ಬಸಪ್ಪಾ ಜನಬಸಪ್ಪಾ ಬೆನಸನಕೊಂಡದವರ ಸಾ|| ಮೇದೂರ ತಾ|| ಕೋಡ ನಾನು ಕೊಡುವ ಜಾಹೀರ ನೋಟೀಸಯೇನಂದರೆ.

ನನ್ನ ಖಾಸ ಕಕ್ಕನ ಹೆಂಡತಿ ಗವಿಸಿದ್ದವ್ವ ಕೋಂ ಕರಿಯಪ್ಪಾ ಬೆನಸನಕೊಂಡದವರ ಸಾ|| ಮೇದೂರ ಈಕೆಯು ಮುದಿಕಿ ಆಗಿರುತ್ತಾಳೆ ಮತ್ತು ಕಾಹಿಲೇ ಜೋರು ಆಗಿ ಸೆಲಾಕಟ್ಟಿರುತ್ತಾಳೆ ಇವಳಿಗೆ ಬುದ್ಧಿ ಸ್ವತಂತ್ರ ಪುಳಿದಿಲ್ಲಾ ಈಕೆ ತಾಬಾದಲ್ಲಿ ಪಿತ್ರಾರ್ಜಿತ ಆಸ್ತಿ ಹೊಲಗಳು ಇರುತ್ತವೆ. ಅವು ಈಕೆ ಶಬಜಾಖಾತೆ ಇರುತ್ತವೆ. ಈ ಆಸ್ತಿಯ ತ್ತಿಹಾಳಬೇಕಂತಾ ಇಲ್ಲದ್ದೊಂದು ಬಲಾಸಪಟ್ಟು ಇದೇ ಮೇದೂರ ಗ್ರಾಮದವರು ಖರೀದಿ ಮಾಡಿದ ಗೈರೆ ಕಗೂಬೇಕಂತಾ ನಡಿತಿರುತ್ತಾರೆ

ಈಕೆ ಗಂಡ ಸತ್ತು ೧೫-೧೬ ವರ್ಷ ಆಯ್ತು ಗಂಡ ಸಾಲ ವಗೈರೆ ಯೇನೂ ಮಾಡಿಲ್ಲಾ ಮತ್ತು ಖರೀದಿ ವಗೈರೆ ಮಾಡಿಕೊಡುವ ಕಾರಣ ಇಲ್ಲಾ

ಕಾರಣಾ ಸದರ ಗವಿಸಿದ್ದವ್ವನಿಂದಾ ಯಾರೂ ಈಕೆ ಆಸ್ತಿ ಖರೀದಿ ವಗೈರೆ ಕಗೂಬಾರದು ಜರ ಕಗೊಂಡರೆ ಅದು ನಿಮಗೆ ಕಾಯದೇಶೀರ ದಕ್ಕಲಾರದು ಈಗಿನ ನಾನ ಖಾಸ ಭಾವನ ಮಗ ಇರುತ್ತೇನೆ ಅಂದರೆ ಸರಳ ವಾರಸದಾರ ಇರುತ್ತೇನೆ ಈಕೆ ಹೊಟ್ಟೆಯಲ್ಲಿ ಗಂಡು ವ ಹೆಣ್ಣು ಮಕ್ಕಳು ಯಾರೂ ಇಲ್ಲಾ ತಿಳಿಯೋದು ತಾ|| ೩-೧೦-೩೦ ಇಸ್ವಿ

ಬಸಪ್ಪ ಬಸಪ್ಪ ಬೆನಸನಕೊಂಡದ ಸಾ|| ಮೇದೂರ

ನೋಟೀಸು

ರಾ|| ತಿಪ್ಪಾ ತುದಿ ಫಕ್ಕೀರಪ್ಪಾ ಕಾನೋಬಿ ಸಾ|| ಹಾರೋಬೀಡಿ ಇವನಿಗೆ-

ಕೆಳಗೆ ಬರೆದ ಹೆಬ್ಬಟ್ಟಿನ ಗುರ್ತಾ ಮಾಡುವಳಿ ಕಡಿಂದ ನೋಟೀಸ ಕೊಡೋದೇನಂದರೆ ನೀನು ನನ್ನ ಲಗ್ನದ ಗಂಡಸಿರುತ್ತಿ ನೀನು ಘಟಿಂಗ ಜಾರ ಸಂಗತಿ ಹಿಡಿದು ಗಾಂಜಿ ವಗೈರೆ ತೀದಿ ನನಗೆ ಶೀರದೆ ೪-೫ ತಿಂಗಳ ಹಿಂದೆ ನನಗೆ ವೈಮೂರಿ ಬಡದು ಉಟ್ಟಿ ತೀರೀಲೆ ಹೊಗೆ ಹಾಕಿದ ನಾನು ತವರ ಮನೆಯಲ್ಲಿ ಇರೋದೆ ನಾನು ಹೇಳಿ ಕಳಿಸಿದರೆ ಬಂಕೊಂಡು ಹೋಗದಲ್ಲಿ ಇದ್ದರಿಂದ ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಬಾಳವೆ ಮಾಡೋದು ಬ್ಯಾಡಾ ಹಿಂಗೆ ತೋಂತದೆ ಕಾರಣ ಈ ನೋಟೀಸು ಕೊಡೆಂಖಾಗ ಬಿತ್ತು ಈ ನೋಟೀಸ ಮುಟ್ಟದ ೩ ದಿವಸದಲ್ಲಿ ನನಗೆ ಹೆಂಡಿಯಂತೆ ಜನ್ಮಾಗಿ ಇಟಗೊಂಡು ಬಾಳ್ವೆ ಮಾಡತೇನಂತ ಯೋಗ್ಯ ಜಾಮೀನು ಕೊ

ನದ ಗುತ್ತಿಗೆ ಇದ್ದಂತೆ ಹೇಳುತ್ತಾನೆ. ಪ್ರತಿಯೊಬ್ಬನು ತನ್ನ ದೇಶವನ್ನು ಪ್ರೀತಿಸುತ್ತಾನೆ. ಅರೋಪಿಯು ದೇಶಾಭಿಮಾನವಲ್ಲದಂಥ ರೀತಿಯಿಂದ ನಡೆಯುತ್ತಾನೆ. ಈ ದೇಶಾಭಿಮಾನವು ರಾಷ್ಟ್ರದ ಹಾನಿಗೇ ಕಾರಣವಾಗಿರುತ್ತದೆ. ಎಂದರು.

ದೇಶಾಭಿಮಾನದ ವ್ಯಾಖ್ಯೆ ಮತ್ತು ಫಲದ ದೆಸೆಯಿಂದ ಇಬ್ಬರ ನಡುವೆ ಮತಭೇದವಾದರೆ- ನಿರ್ಣಯವು ಮೂರನೆಯವರ ಕಡೆಗೆ ಹೋಗಬೇಕಾದ್ದು. ಅಧಿಕಾರದ ಕುರ್ಚಿಯ ಮೇಲೆ ಕೂತಿರುತ್ತೇವೆಂದು ಮ್ಯಾಜಿಸ್ಟ್ರೇಟರಿಗೆ ತೀರ್ಪ್ಪು ಕೊಡಲು ಹೇಗೆ ಮತ ಸ್ವಾತಂತ್ರ್ಯ ಬರುವದು!

ಕುಡುಕರಿಗೆ ಸಹಾಯ.

—೦೫೦—

ರಾಣೇಬೆನ್ನೂರ ತಾಲೂಕಿನ ಕಜ್ಜರಿ ಗ್ರಾಮದಲ್ಲಿ ಗಡಂಗದ ಮುಂದೆ ಪಿಕೆಟಿಂಗ ನಡೆಯುತ್ತದೆ. ಇದಕ್ಕೆ ವಿರುದ್ಧವಾಗಿ ಭೀಮನಗೌಡ ಮಳ್ಳನಗೌಡ ದುರಗಪ್ಪ ಎಂಬವನು ಮನೆಮನೆಗೆ ಹೋಗಿ, ಕುಡುಕರನ್ನು ಹಿಡಿದು, ಗಡಂಗಕ್ಕೆ ತರುವನು. ಸುರಾರಾಕ್ಷಸನ ಪ್ರೀತಿಯ ಶಿಷ್ಯನೇ ಸೈ!!

ಮುರಗೋಡದಲ್ಲಿ ಪೋಲಿಸ ಗೌಡ ಮತ್ತು ಸಿಪಾಯರ ರಾಜೀನಾಮೆ

——(೨)——

ಮುರಗೋಡದಲ್ಲಿ ಈಗ ಸರಕಾರದವರು ನಡೆಯಿಸಿರುವ ದಬ್ಬಾಳಿಕೆಯನ್ನು ನಿಷೇಧಿಸಿ ಅಲ್ಲಿಯ ಪೋಲೀಸ ಪಾಟೀಲರೂ ಮತ್ತೆ ಇಬ್ಬರು ಕಾನಸ್ಟೇಬಲರೂ ರಾಜೀನಾಮೆ ಕೊಟ್ಟರು.

ಮಳೆಯು-

ಕಳೆದ ನಾಲ್ಕು ದಿವಸಗಳಿಂದ ಕರ್ನಾಟಕದಲ್ಲಿ ಸೊಲ್ಲಾಪೂರದಿಂದ, ಮೈಸೂರಿನ ತನಕ ಮಳೆಯಾದ ವರ್ತಮಾನವು ಬಂದಿದೆ. ಸೊಲ್ಲಾಪೂರ ಮತ್ತು ಮೈಸೂರಲ್ಲಿ ವಿಪರಿತವಾಗಿ ಸುರಿಯಿತು. ಸೊಲ್ಲಾಪೂರದಲ್ಲಿ ನೇಯಕಾರರು ಬಹಳ ಹಾನಿಗೆ ಗುರಿಯಾದರು. ಇಂಥ ಮಳೆಯು ಮಧ್ಯದೇಶದಾದ ಧಾರವಾಡದಲ್ಲಾಗಲಿಲ್ಲ. ಬೆಳೆಗೆ ಒಳ್ಳೆ ಪ್ರಯೋಜನಕಾರಿಯಾಗಿ ಉತ್ಕೃಷ್ಟ ಹಸಿ ಮಳೆ ಸುರಿಯಾಗಿರುತ್ತದೆ. ನೀರಮಳೆಯಿಲ್ಲ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹಳೆಯ ಉಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇಗನೆ ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನೂರ್ಧರ ಔಷಧ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮುಂಗಡರೂಪಾಗಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸಬೇಕು.

ವಿಳಾಸ:— ಶ್ರೀ. ಬಾಪಶಿಂಪಾಯಿ ದೀಕ್ಷಿತ
C/o ಸುಧ್ಯಾಂಕಿ ಧಾರವಾಡ

ಈ ಔಷಧ ಬೇಕುವಾಗ್ಗೆ ಮಾತ ವಿಳಾಸದಲ್ಲಿ ಕಾಗದ ಬರೆದು ಕೇಳಿಕೆಯನ್ನು ಮಾಡಿಕೊಳ್ಳಬೇಕು.

ಶ್ರೀ ಗಂಗಾಧರರಾವ ದೇಶಪಾಂಡೆಯವರು ಇಂದು ಬಂಧ ಮುಕ್ತರಾಗುವರು. ಕೂಡಲೆ ಶ್ರೀ: ರಾಜಗೋಪಾಳಾಚಾರ್ಯರನ್ನು ಕಾಣಲು ಬಳ್ಳಾರಿಗೆ ಹೋಗುವರು.

ಹುಬ್ಬಳ್ಳಿಯ ಮುನಸಫ ಕೋರ್ಟಿನ ದರೋಡೆಯಲ್ಲಿ ಹೊಡಿಸಿಕೊಂಡ ಕಾವಲಗಾರನು ಸತ್ತು ಹೋದನು.

ಶ್ರೀ. ದಿವಾಕರ ರಂಗರಾಯರು ೧೭ನೆಯ ತಾರೀಖಿನ ದಿವಸ ಬಡುಗಡೆ ಹೊಂದುವರು.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ
ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳುತ್ತಿದ್ದವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ಟರ
ಶಾಳಾ ನಂಬರ ೧. ಗದಗ ಬೆಟಗೇರಿ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ತಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವಾನಿ (ಟ) ಪುಟಿನ ಜವಕ್ಕ ಕೂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟೆಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೂಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರಿಕೆ ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಜಾಯ್ ಬಾಳಾಜಾಯ್ ಹೊಸಕೇರಿ.

ವರ್ಷ ೧೧ ಧಾರವಾಡ ಶುಕ್ರವಾರ ತಾರೀಖು ೧೦ನೇ ಅಕ್ಟೋಬರ ೧೯೩೦ (ಸಂಚಿಕೆ ೨೨೩

ಮಾರಾಟಕ್ಕೆ ಸಿದ್ಧವಾಗಿದೆ-

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಸಿದ್ಧಾವದೂತರ ಅಸಲರ್ಜಿ, ಶ್ರೀ. ಅರೂಢಸ್ವಾಮಿಗಳ ಕೃಷಿಯುಕ್ತ ಮತ್ತು ಪುನಃಸ್ಮರಣಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕದ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕುಸುವೆನಿಸುವವು, ಆದ್ದರಿಂದ ಗ್ರಾಹಕರು ಶ್ವರಿ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಎರಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು-

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಇಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಒಂದುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಕೋಕ ತಗೆದುಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್‌ವ ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ-ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಯ ಎಂಟು ಲಕ್ಷದ ಮೇಲುಂಟು. ಚಲಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರವ ಡಿವಾಜಿಟಗಳಿಗೆ ಹನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವತ್ತೀ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೨-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

೧೬ನೆಯ ಕರ್ನಾಟಕ ಸಾಹಿತ್ಯ ಪರಿಷತ್ತು

ಅಧ್ಯಕ್ಷ ಶ್ರೀ, ಆಲೂರ ವೆಂಕಟರಾಯರ

ಭಾ ಷ ಣ

ಉತ್ತರಾರ್ಧ

ಬಾಳಿಗೆ ---ಡೆಯಕ್ಕೆ ಪ್ರಶ್ನೆಗಳು.-

ಕನ್ನಡ ವಾಙ್ಮಯ ಭಕ್ತರು ಒಟ್ಟುಗೂಡಿ ಬಿಡಿಸಬೇಕ್ಕ ಪ್ರಶ್ನೆಗಳು ಅನೇಕವಾಗಿವೆ. (೧) ನಾಟಕದಲ್ಲಿಯ ಭಾಷೆಯು ಎಂಥದಿರಬೇಕು? (೨) ಪುಸ್ತಕಗಳನ್ನು, ಮಾತಾಡುವ ಪದ್ಧತಿಯಲ್ಲಿ ಮುದ್ರಿಸಬೇಕೋ ಹೇಗೆ? (೩) ಕವಿತೆಗಳಲ್ಲಿ ವ್ರತ್ತ, ಛಂದಸು; ಇವುಗಳ ವಿಷಯವಾಗಿ ಉದ್ಭವಿಸಿದ ಮತಭೇದದ ತೊಡಕನ್ನು ಹೇಗೆ ಬಿಡಿಸಬೇಕು? (೪) ವ್ರತ್ತಗ್ರಂಥಗಳಲ್ಲಿ ಸ್ತ್ರೀಯರ ಮತ್ತು ಹಳ್ಳಿವಾಡವರ ಭಾಷೆಯನ್ನು ಹೇಗೆ ಉಪಯೋಗಿಸಬೇಕು? (೫) ಅಂಕಿತನಾಮಗಳನ್ನು ಬರೆಯುವದರಲ್ಲಿ ಏಕರೂಪತೆ (೬) ಸಂಸ್ಕೃತ ಅಪಭ್ರಂಶಗಳನ್ನು ಯಾವ ಲಿಪಿಯಲ್ಲಿ ಬರೆಯಬೇಕು? (೭) ಶಾಸ್ತ್ರೀಯ ಪರಿಭಾಷೆಯನ್ನು ನಿಶ್ಚಯಿಸುವದು. (೮) ವ್ಯಾಕರಣ ವಿಷಯಗಳನ್ನು ಸಿದ್ಧಪಡಿಸುವದು; ಬಂಕಳ್ಳರಗಳಲ್ಲಿ ಏಕರೂಪತೆ. (೯) ನಾಮಲೇಖದಲ್ಲಿ ಏಕರೂಪತೆ. (೧೦) ಪಠ್ಯಪುಸ್ತಕಗಳ ವಿಚಾರ. ಇವೇ ಮುಂತಾದ ವಿಷಯಗಳನ್ನು ನಾವು ಸಹಜವಾಗಿ ನಿರ್ಣಯಿಸಿ ಆಚರಣೆಯಲ್ಲಿ ತರಲಿಕ್ಕೆ ಪ್ರಯತ್ನಿಸಬಹುದು. ಇವಲ್ಲದೆ (೧) ಟಾಯಿಪ ಕಾಯಟೆಂಗ ಯಂತ್ರಕ್ಕೆ ಕನ್ನಡ ಲಿಪಿ (೨) ಮುದ್ರಣಾಲಯಗಳಿಗೆ ಜನಮಳಲವಾಗುವಂತೆ ಟಾಯಿಪುಗಳಲ್ಲಿ ಬದಲಾವಣೆ (೩) ಬರಹಕ್ಕರಗಳಲ್ಲಿ ಸುಧಾರಣೆ (೪) ಲಘುಲೇಖನ ಪದ್ಧತಿ (೫) ವಾಡಾಯ ಅಕ್ಷರಗಳ ಲೇಖನಪುಸ್ತಕ ಘಾಲೆ. ಇವೇ ಮುಂತಾದ ಹೊಸ ಪ್ರಶ್ನೆಗಳ ವಿಷಯವಾಗಿಯೂ ವಿಚಾರವು ಅವಶ್ಯವಿದೆ.

೨ ಬ್ರಹಿವ್ಯಾಪ್ತಿ-

ಇದು ವರೆಗೆ ಕನ್ನಡ ವಾಙ್ಮಯವನ್ನು ನಾನು ಅಂತರ್ದೃಷ್ಟಿಯಿಂದ ಯೋಚಿಸಿದೆನು. ಆದರೆ ವಾಙ್ಮಯದ ಪೂರ್ಣ ವಿಕಾಸಕ್ಕೆ ಇಷ್ಟೇ ಸಾಲದು. ಅದರ ವ್ಯಾಪಕತೆಯನ್ನು ಕುರಿತು ನಾವು ಯೋಚಿಸಲೇ ಬೇಕು. ಕರ್ನಾಟಕಕ್ಕಂತೆ ಈ ವ್ಯಾಪಕತೆಯ ಪ್ರಶ್ನೆಯ ಮಹತ್ವವು ಬಹಳವಿದೆ. ಕರ್ನಾಟಕವು ಎಲ್ಲ ಕಡೆಯಲ್ಲಿಯೂ ಕರಗುತ್ತ ನಡೆದಿದೆ. ನಾಲ್ಕು ದಿಕ್ಕುಗಳಲ್ಲಿ ನಮ್ಮ ಪ್ರದೇಶವು ಸಂಕುಚಿತವಾಗುತ್ತ ನಡೆದಿದೆ. ಗಡಿನಾಡಿನ ಗೋಳನ್ನು ನಾವು ಆಲಿಸಬಾರದೇನೋ? ಕರ್ನಾಟಕದಂಬುದೊಂದು ಜನಾಂಗವು, ಅದಕ್ಕೆ ಒಂದೇ ಒಂದು ತೀರ ಮನಸ್ಸು ಮತ್ತು ಆತ್ಮಗೆರುತ್ತವೆಂಬ ಭಾವನೆಯು ಎಲ್ಲಿಯವರೆಗೆ ನಮ್ಮಲ್ಲಿ ಉತ್ಪನ್ನವಾಗಿಲ್ಲವೋ ಅಲ್ಲಿಯವರೆಗೆ ನಮ್ಮ ಕನ್ನಡ ನುಡಿಯ ಅಭಿವೃದ್ಧಿಯು ಭರದಿಂದ ಸಾಗಲಾರದು. ಮನುಷ್ಯನ ಬಾಯಿಯಲ್ಲಿ ನಾಲಿಗೆಯಿರುವದೇನೋ ನಿಜ; ಆದರೆ ನಾಲಿಗೆಯು ಬಾಯಿಯ ಸೊತ್ತಲ್ಲ. ಕಾಲಿಗೂ ನಾಲಿಗೆಯಿರುವುದು. ಕೈಗೂ ನಾಲಿಗೆಯಿರುವುದು, ಕಿವಿಗೂ ನಾಲಿಗೆಯಿರುವುದು, ತಲೆಗೂ ನಾಲಿಗೆಯಿರುವುದು. ಬಾಯಿಯೊಳಗಿನ ನಾಲಿಗೆಯೇ ಇವುಗಳ ನಾಲಿಗೆ. ಆದಕಾರಣ, ಅನೇಕ ಅವಯವಗಳಲ್ಲಿ ಬಾದ ದುಃಖಗಳನ್ನು ನಾಲಿಗೆಯು ಉಸುರಲೇ ಬೇಕು. ತಲೆಯದು ಯಾವ ಭಾಗದಲ್ಲಿಯೇ ದುಃಖವಾಗಿರಲಿ, ಅದು ನನ್ನ ದುಃಖವು ಎಂಬುವಷ್ಟು ನಮ್ಮ ಸಂವೇದನಾಶಕ್ತಿಯು ತೀಕ್ಷ್ಣವಾಗಬೇಕು. ಹೀಗೆ ಅದು ಈಗ ನಮ್ಮಲ್ಲಿ ಉಂಟಾಗಿರುವದೇನೋ? ಇಲ್ಲ. ನಾವು ಹಂಪನರನ್ನರ ಉತ್ಸವಗಳನ್ನು ಮಾಡುತ್ತೇವೆಂದೇನೋ ನಿಜ. ಆದರೆ ಪಂಪರನ್ನರ ಧಾಮಸ್ಥಳಗಳು ಕನ್ನಡಿಗರ ಕೈಬಿಟ್ಟು ಹೋಗುತ್ತವೆಂಬುದರ ಅರಿವು ನಮಗಿರುವುದಿಲ್ಲ. ಇದು, ಗೋವುಗಳನ್ನು ಅನ್ಯರು ಸೆಳೆಯುತ್ತಿರುವಾಗ, ಅವುಗಳನ್ನು ಸಂರಕ್ಷಿಸಿಕೊಳ್ಳುವುದಕ್ಕೆ ತಿಲವ್ಯಾಯವೂ ಪ್ರಯತ್ನ ಪಡದೆ, ಮನೆಯಲ್ಲಿ ಬಂಧಾರದ ಸೋವುಗಳನ್ನು ಮಾಡಿ ಮೂಜೆಯನ್ನು ಮಾಡುತ್ತ ಕುಳಿತಂತೆ ಅಲ್ಲವೆ?

ಗಡಿನಾಡುಗಳ ವಿಷಯವಾಗಿ ನಂದಿಗೂ ಈ ತರಹದ ಜಗಳಗಳು ಇರಕ್ಕುವೇ. ಹಿಂದಕ್ಕೆ ತುರುಗಾಳಗಗಳಲ್ಲಿ ತುರುಗಳನ್ನು ಸಂರಕ್ಷಿಸುವದಕ್ಕೋಸ್ಕರ ವೀರಗಲ್ಲಿಗಳ ಸಲುವಾಗಿ ವೀರಪಲ್ಲುಗಳು ನೆಡಿಸಲ್ಪಟ್ಟಿವೆ. ಈಗಿನ ದಿವಸಗಳಲ್ಲಿ, ಗಡಿನಾಡುಗಳಲ್ಲಿಯ ನಮ್ಮ ಗ್ರಾಮಗಳೆಂಬ ಗೋವುಗಳನ್ನು ಬಡುಕಿಸುವ ಕಲ್ಲಿಗಳು ಹುಟ್ಟಬಾರದೇ ?

ಉದಾಹರಣಾರ್ಥವಾಗಿ ಅನಂತಪುರ ಜಿಲ್ಲೆಯಲ್ಲಿಯ ಗುತ್ತಿ ಮತ್ತು ಹಿಂದೂಪುರ ತಾಲೂಕಿನಲ್ಲಿಯ ೧) ಗುತ್ತಿ ೨) ಕೊಣಕೊಂಡ್ಲ ೩) ಬಿಚನಾಗಪಲ್ಲಿ ೪) ಜಾಲೂರ ೫) ಚೋಳಸಮುದ್ರ ೬) ಗೋರೇಪಲ್ಲಿ ೭) ಹಿಂದೂಪುರ ೮) ಕಗ್ಗಲ್ಲು ೯) ಕಿಡಕೇರಿ ೧೦) ಕೊಡಗೇಪಲ್ಲಿ ೧೧) ಕೊಟ್ಟೂರ ೧೨) ಚೇಪಾಕ್ಷಿ ೧೩) ಮೂಗೂರ ೧೪) ಮಾವೇಪಲ್ಲಿ ೧೫) ಮಾನವಾಂದ್ರ ೧೬) ಪಂಚಿ ೧೭) ಪುಲಿಗುಂಟ ೧೮) ಪನಪೋರು; ಕದಿರಿ ತಾಲೂಕಿನಲ್ಲಿಯ:— ೧) ಕದಿರಿ ೨) ಎರಡುಳೇರೆ ೩) ಕ್ಯಾಬದೂರ ೪) ವೆಲ್ಲಕಲೇಡ; ಪೆನಗುಂಡ ತಾಲೂಕಿನಲ್ಲಿಯ:— ೧) ಬುಕ್ಕಪಟ್ಟಣ ೨ ಪೆನಗೊಂಡ ೩) ಮೆಲಾಕುರ್ಲೆ ತಾಡಪತ್ರಿ ತಾಲೂಕಿನ:— ೧) ತಾಡಪತ್ರಿ ಧರ್ಮಾವರ ತಾಲೂಕಿನ:— ೧) ದಾಂದಲೂರು

ಚಿತ್ತೂರ ಜಿಲ್ಲೆಯಲ್ಲಿ ಮದನಪಲ್ಲಿ ತಾಲೂಕಿನಲ್ಲಿ ಚಿಲ್ಲಪಲ್ಲಿ, ಮದನಪಲ್ಲಿ, ಮಲ್ಲೆಳ, ಪೆದ್ದತಿಪ್ಪ ಸಮುದ್ರ, ಅಲೇಪಲ್ಲಿ ಎಂಬವೂ ಪಲ್ಮನೇರ ತಾಲೂಕಿನಲ್ಲಿ ಕಾಂಡಪಲ್ಲಿ ಕಳಕಟ್ಟೂರ ಎಂಬವೂ ಪುಂಗನೂರು ತಾಲೂಕಿನಲ್ಲಿ ಡಲಮಂಗಲ, ಬುಡಿದಿಪಲ್ಲಿ ಎಂಬಾಡಿ, ಕರ್ಷಣಿಪಲ್ಲಿ; ಮುದುಗಲ್ಲಪಲ್ಲಿ ಮೂಗವಾಡಿ, ನೆಲ್ಲಾಳ, ಪುದುಪಟ್ಟ, ಪುಂಗನೂರು ಎಂಬ ಗ್ರಾಮಗಳೂ ಕೊಯಿಮುತ್ತೂರದ ಅವನಾಸಿ ತಾಲೂಕಿನಲ್ಲಿ ಅವನಾಸಿ ಮುಂತಾದ ಗ್ರಾಮಗಳೂ ಗೋಧಿಟ್ಟಿಭಾಳ್ಳದಲ್ಲಿ ಪಣ್ಣಾಯಕನಕಟ್ಟೂರು, ಶಿಷಾಳ್ಯ ಮುಂತಾದವುಗಳೂ ಕೊಳೆಗಾಲ ತಾಲೂಕೂ, ಕಡನಾ ಜಿಲ್ಲೆಯಲ್ಲಿ ಬೆಂತಲ ಪತ್ತೂರು, ಗೋಟೂರು, ಗುರಪಾಂಡ, ಪುಷ್ಪಗಿರಿ ಜಮ್ಮಲಮಡಗು ತಾಲೂಕಿನಲ್ಲಿ ಡಾನವುಲಪಾಡ, ದೇವಗುಡಿ ಪೆದ್ದಮುದಿಯಾಕಿರು, ಕಮಲಾಪುರ ತಾಲೂಕಿನಲ್ಲಿ ಚಾಕೂರು ಮುಂತಾದವುಗಳೂ ಪ್ರೊದಟೂರ ತಾಲೂಕಿನಲ್ಲಿ ರಾಮೇಶ್ವರ ತಂಗಟೂರು ಮುಂತಾದವುಗಳೂ ಇವುಗಳಲ್ಲದೇ ಸೇಲಂ ಜಿಲ್ಲೆಯಲ್ಲಿಯೂ, ಕೊಲ್ಲಾಪೂರ ಮಿರಜೆ ಮುಂತಾದ ಸಂಸ್ಥಾನಗಳಲ್ಲಿಯೂ ನೂರಾರು ಗ್ರಾಮಗಳು ಅಜ್ಞಾನ್ನಡಗ್ರಾಮಗಳಿದ್ದು ನಮ್ಮ ಔದಾಸೀನ್ಯದಿಂದ ಇವುಗಳಲ್ಲಿ ಅನೇಕ ಗ್ರಾಮಗಳು ಈಗಾಗಲೆ ನಮ್ಮ ಕೈಬಿಟ್ಟಿವೆ, ಮತ್ತು ಅನೇಕ ಗ್ರಾಮಗಳು ಕೈಬಿಟ್ಟು ಹೋಗುತ್ತಲಿವೆ, ಇದನ್ನು ಕೇಳಿ ಯಾವ ಕರ್ನಾಟಕಾಭಿಮಾನಿಯ ಹೃದಯವು ಜರ್ರನೆ ಜರಕೊಳ್ಳಲಿಕ್ಕಿಲ್ಲ !

ವಾಙ್ಮಯವನ್ನು ಬೆಳೆಸುವುದೆಂದರೆ ಭಕ್ತಿಪ್ರಧಾನ ಗ್ರಂಥಗಳನ್ನು ಬರೆದರೆ ತೀರಿತೆಂದು ಕೇವರ ತಿಳುವಳಿಕೆ. ಇದು ತಪ್ಪು. ಪೂಜಾರಿಯು ಪರಿವಾರಸಮೇತನಾಗಿಯೇ ಪೂಜೆಯನ್ನು ಸಾಂಗಗೊಳಿಸುವಂತೆ ಭಾವ ನಮ್ಮ ಪರಿವಾರಸಮೇತರಾಗಿಯೇ ವಾಗ್ದೇವತೆಯ ಪೂಜೆಯನ್ನು ಸಾಂಗಗೊಳಿಸಬೇಕಾಗುತ್ತದೆ. ಮುದ್ರಣಕ, ಪುಸ್ತಕ ಮಾರುವವರು ಇವರೇ ಮುಂತಾದವರು ನಮ್ಮ ಪರಿವಾರ. ಲಘುಪುಸ್ತಕಮಾಲೆ, ಮಧ್ಯಮ ಪುಸ್ತಕಮಾಲೆ, ಉದ್ಗ್ರಂಥಮಾಲೆ ಮುಂತಾದವುಗಳನ್ನು ಹೊರಡಿಸಿ ನಾವು ವಾಙ್ಮಯದ ಪ್ರಕಾಶವನ್ನು ಮಾಡಬೇಕು. ಕರ್ನಾಟಕವನ್ನೆಲ್ಲ ವಾಙ್ಮಯಾಲಯಗಳ ಜಾಲಗಳಿಂದ

ಪ ಕುಂಬಿಬಡಬೇಕು. ಪಾಶವಾಲಯಗಳೆಂದರೆ ಕರ್ನಾಟಕತ್ವದ ವಿದ್ಯುಚ್ಛಕ್ತಿಯನ್ನೊಯ್ಯುವ ತಂತಿಗಂಬಗಳು. ಅದರೆ ಇವೆಲ್ಲ ಕಾರ್ಯಗಳು ಜರುಗಬೇಕಾದರೆ, ನಾವು ಮುಂದೆ ಅಭಿಮಾನವನ್ನು ಜಾಗ್ರತಪಡಿಸಬೇಕು; ಅದಕ್ಕೋಸ್ಕರ ಪ್ರಚಾರಕರು ಸಶಕ್ತರಾಗಿ ಕರ್ನಾಟಕವನ್ನು ಸುತ್ತುತ್ತಿರಬೇಕು.

ಚತುರ್ಮುಖವಾದ ಕರ್ನಾಟಕವು ಏಕಮುಖವಾಗಬೇಕಾಗಿದೆ. ಈಗ ಅದರ ನಾಲ್ಕು ಪೋರಿಗಳನ್ನು ಏಕಮುಖವಾಗಿ ಮಾಡುವುದಕ್ಕೋಸ್ಕರ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವು ಅವಶ್ಯವಾಗಿ ಬೇಕಾಗಿದೆ. ಈಗ ನಮ್ಮ ಪ್ರಾಂತವು ನಾಲ್ಕು ವಿಶ್ವವಿದ್ಯಾಲಯಗಳಿಗೆ ಅಧೀನವಾಗಿದೆ. ನಾಲ್ಕು ಕಡೆಗೆ ನಾಲ್ಕು ತರದ ಪಠ್ಯಪುಸ್ತಕಗಳು, ನಾಲ್ಕು ತರಹದ ಶೈಲಿಗಳು. ಈ ಪರಿಸ್ಥಿತಿಯು ಎಲ್ಲಿಯವರೆಗೆ ದೂರವಾಗಿಲ್ಲವೋ ಅಲ್ಲಿಯವರೆಗೆ ನಮ್ಮ ಭಾಷೆಯ ಗಂಡಾಂತರವು ತಪ್ಪಿಲ್ಲ. ಈ ಗಂಡಾಂತರದ ಕಲ್ಪನೆಯು ನಮ್ಮ ವಾಙ್ಮಯಧುರಂಧರರಲ್ಲಿ ಸಾಕಷ್ಟು ಇಲ್ಲದಿರುವುದು ಶೋಚನೀಯವಾದ ಸಂಗತಿ. ಕರ್ನಾಟಕದ ಸಂಸ್ಕೃತಿಯಲ್ಲಿ ಏಕರೂಪತೆಯುಂಟಾಗಬೇಕಾದರೆ ನಾವು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸದೆ ಗತ್ಯಂತರವಿಲ್ಲ. ಅದು ಸ್ಥಾಪಿತವಾಗುವವರೆಗೆ ನಮ್ಮ ಕನ್ನಡ ವಾಙ್ಮಯದ ಅಭಿವೃದ್ಧಿಯು ಕುಂಟುತ್ತಲೇ ಸಾಗುವುದು. ಅದು ದರಿಂದ ಕನ್ನಡಿಗರೇ ಎಳರಿ, ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದಕ್ಕೋಸ್ಕರ ಟೊಂಕಕಟ್ಟಿರಿ. ಏಕಂದರೆ ಅದೇ ನಮ್ಮ ಸಾಹಿತ್ಯದೇವತೆಯ ಮುಖ್ಯ ಪೀಠ. ಅಖಂಡ ಕರ್ನಾಟಕ ವಿಶ್ವವಿದ್ಯಾಲಯವಿಲ್ಲದವರೆಗೆ ನಮ್ಮ ಸಾಹಿತ್ಯದೇವತೆ ಅದಭ್ರಷ್ಟೆ. ಅಧಾದ ಮೇಲೆಯೆ ಅವಳ ಪ್ರಾಣಪ್ರತಿಷ್ಠೆ.

॥ ಜಯಕರ್ನಾಟಕ ಮಾತೆ ॥

ಸ್ಟಾಯಕ್ಲೋಪ್ಸ್ಕಾಯಿಲದ ದೈಸೆಯಿಂದ ಝಡತಿ

—(೦)—

ಸ್ವರಾಜ್ಯವೆಂಬುದೊಂದು ಕರಪತ್ರವು ಕನ್ನಡದಲ್ಲಿ ಹೊರಡುತ್ತಿದೆ. ಅದು ಹುಬ್ಬಳ್ಳಿಯಲ್ಲಿಯೇ ಅಚ್ಚಾಗುತ್ತಿರಬೇಕೆಂಬ ಸಂತಯದಿಂದ, ಪೈಲಿಸರು ಅಲ್ಲಿಯ ಸೇವಾದಲ, ಕಾಂಗ್ರೆಸ ಆಫೀಸ, ಹ್ಯಾಲಂಟಿಯರ ಕ್ಯಾಂಪ ಕರ್ನಾಟಕ ಪೆಪಿಗ ಪ್ರೆಸ ಮತ್ತು ಶ್ರೀ. ಶೇಷಡೆ ರಾಮರಾಯರ ಮನೆಗೆ ಝಡತಿಗಾಗಿ ಹೋದರು. ಎಲ್ಲಿಯೂ ಸ್ವರಾಜ್ಯ ಮುದ್ರಿಸುವ ಸ್ಟಾಯಕ್ಲೋಪ್ಸ್ಕಾಯಿಲ ಸಿಗಲಿಲ್ಲ.

ರಾ. ಬ. ಕಂಬಳಿಯವರ ದಿವಾನಗಿರಿಗೆ ಬಂದ ವಿಘ್ನ.

ಮನೆಯ ದೀಪವೆಂದು ಮುದ್ದು ಕೊಡಬಹುದೇ?

—(೦)—

ರಾ. ಬ. ಕಂಬಳಿಯವರು ದಿವಾನಪದವಿ ಅಲೆಯಿಂದ ರಾಮಂಡಚೇಬಲಕ್ಕೆ ಹೋಗುವದನ್ನು ಬಿಟ್ಟರು. ಗೃಹಕೃತ್ಯದ ಕೊಂದರೆಯು ಮೂಲಕ ವಿಲಾಯತಿಗೆ ಹೋಗಲಾರೆವೆಂದು ಹೇಳುವದಕ್ಕೆ ಇದೇ ಕಾರಣವು. ರಾ. ಬ. ರವರು ರಾಮಂಡಚೇಬಲಕ್ಕೆ ಹೋಗುವದರಿಂದ, ಕರ್ನಾಟಕ ವಿಶೀಕರಣದ ಪ್ರಶ್ನೆವನ್ನು ಹೊರಡಿಸಿ, ಬ್ರಿಟಿಶ ಕರ್ನಾಟಕವನ್ನೆಲ್ಲ ಛಿಂದಾಗೊಡಿಸುವರೆಂದು ಅವರಭೊಂದು ಹೊಟ್ಟೆಯ ಪತ್ರಪು ತುಕಡಿ ಹಿಡಿಯಿತು. ರಾ. ಬ. ರವರು ದಿವಾನರಾಗುವ ಸ್ವಾರ್ಥದ ಮುಂದೆ ಕರ್ನಾಟಕ ವಿಶೀಕರಣದಂಥ ಅತ್ಯಂತ ಗಹನ ಕರ್ತವ್ಯವನ್ನು ತ್ಯಜಿಸಿ, ಅದನ್ನು ನಡುನೀರೊಡಗೇ ಬಿಟ್ಟು, ಬಿಟ್ಟರು. ರಾ. ಬ. ಕಂಬಳಿಯವರು ಈ ಪ್ರಶ್ನವನ್ನು ತಮ್ಮದಾಗಿ ಜಾವಾಗಲು ನಡೆಯಲಿಲ್ಲ. ಅಬಗ್ಗೆ ಲೇಖ ಬರೆದು, ಡಳಿಡಳಿಮಾಡಿ, ಕೌನ್ಸಿಲದಲ್ಲಿ ರವಪ್ರಾದರೂ ಕೆಲಸಮಾಡಿಲ್ಲ. ಬೆಳಗಾವಿಯಲ್ಲಿ ಅಧ್ಯಕ್ಷರಾದ್ದರ ಹೊರ್ಸು, ಕಳೆದಾರು ವರ್ಷಗಳಲ್ಲಿ ಯಾವ ಪರಾಕ್ರಮ ಮಾಡಿದ್ದಾತೆಂಬದನ್ನು ಬೇಕಾದವರು ಹೇಳಲಿ; ಪ್ರತಿಜ್ಞೆಯಿಂದ ಹೇಳಲಿ; ಮುಂಬಯಿ ಕೌನ್ಸಿಲದಲ್ಲಿ ಈ ಕರಾವುತಂದವರು ಶ್ರೀ. ಜೋಗರಾಯರು. ಇದಕ್ಕೆ ಹೋಟು ಕೊಡಲಿಕ್ಕೆ ಅನಿರ್ವಾಹವಾಗಿ ರಾ. ಬ. ರವರು ಹುಬ್ಬಳ್ಳಿಯಿಂದ ಹೋದರೆಂಬದು ಸುತಿಕ್ಷ್ಣರಿಗೆಲ್ಲ ಗೊತ್ತಿದ್ದ ಮಾತು. ರಾ. ಬ. ರವರು ವಿಲಾಯತಿಗೆ ಹೋಗಿದ್ದರೂ, ಈ ಪ್ರಶ್ನೆ ಪೆತ್ತುತ್ತಿದ್ದಿಲ್ಲ. ಏಕಂದರೆ- ಸರಕಾರಕ್ಕೆ ಇದು ಬೇಡಾದ ವಿಷಯವು. ಸರಕಾರಕ್ಕೆ ವಿಷವಾದದ್ದು ರಾ. ಬ. ರವರಿಗೂ ವಿಷವೇ !! ಸುದಿಯ ಮೇಲೆಗೆ ನಾಥಿನ ರಜನೆಯಾಗಬೇಕಾಗಿದ್ದರೆ- ಛಿಡಿಸಾವನ್ನು ಸ್ವಕಂತ್ರ ಮಾಡಬೇಕೆಂದು ಸಾಯುವನ್ನ ಸಾಥೇಬರು ತಮ್ಮ ರಿಪೋರ್ಟನಲ್ಲಿಯೇ ಬರೆಯುತ್ತಿದ್ದರು. ಆ ಪ್ರಸಂಗವನ್ನೇ ಎತ್ತದ ಅಳರಸರು ರಾಮಂಡಚೇಬಲದಲ್ಲಿ ವಿಶೀಕರಣದ ಪ್ರಶ್ನಕ್ಕೆ ಮಹತ್ವ ಕೊಡುವರೇ ! ಧಾರವಾಡ ಹುಬ್ಬಳ್ಳಿಯ ಕೂಗು ಸ್ವರ್ಗಕ್ಕೆ ಹೋಗುವದುಂಟೇ ?

ರಾ. ಬ. ರವರು ಸ್ವಾರ್ಥದ ಮುಂದೆ ದೇಶಕಾರ್ಯಕ್ಕೆ ಜಲಾಂಜಲಿ ಕೊಟ್ಟದ್ದರ ಜಂಕ್ಯ ಪರಿಣಾಮವು ಇವರಿಗೆ ಸುಖವಾಗುವಂತೆ ಸ್ಥುರಾಟಬ ಬ್ರಾಹ್ಮಣೇತರರು ಇಟ್ಟಿಸುವಂತೆ ತೋರುತ್ತಿದಿಲ್ಲ. ಬ್ರಾಹ್ಮಣೇತರರು ಇವರನ್ನು ತಮ್ಮ ಮುಖಂಡರಾಗಿ ಅರಿಸಿದರೆಂದು ಹೋದ ವಾರದಲ್ಲಿ ಪ್ರಸಿದ್ಧವಾದ ತಾರಿನಲ್ಲಿ ದೂರಿನ ಗುಡ್ಡ ಕಣ್ಣಿಗೆ ನುಣ್ಣಗೆವೆಂಬಂತಾಗಿದೆ- ಇವರ ಸಂಖ್ಯೆಯೇ ಮೊದಲು ೧೩ ಇವರಲ್ಲಿ ಎಳು ಜನರು ಇವರಿಗೆ ಪ್ರತಿಕೂಲರಾಗಿದ್ದಾರೆ ಕರ್ನಾಟಕದ ಅರು ಜನ ಮೆಂಬರರಲ್ಲಿ ತಮ್ಮನ್ನು ಕೂಡಿಸಿ, ಇವರು ಮೂವರೇ ! ಮುತ್ತಳಗಿಡಕ್ಕೆ ಮೂರೇ ಎಳೆ ಇರುವಂತೆ !! ಶ್ರೀ. ಜೋಗ, ಕರ್ಕಿ ಮತ್ತು ಚಿಕ್ಕೋಡಿಯವರು ಇವರ ಬಣಕ್ಕೆ ಸೇರಿಲ್ಲ. ಇದಲ್ಲದೆ ಶ್ರೀ. ಚಿಕ್ಕೋಡಿಯವರು ದಿವಾನರಾಗಬೇಕೆಂದು ಸಂಯುಕ್ತ ರಾಷ್ಟ್ರೀಯ ಮಂಡಲದಲ್ಲಿ ಸೇರಿ, ಅದಕ್ಕಾಗಿ ಹೆಚ್ಚು ಜನ ಮೆಂಬರರನ್ನು ತಮ್ಮ ಪಕ್ಷಕ್ಕೆ ಕೂಡಿಸುತ್ತಲಿದ್ದಾರೆ. ಹತ್ತು ಮುಳ್ಳಿನ್ನು ಹೊತ್ತಗಬ್ಬಿದ್ದ ಜೋಳಗೇ ಮಯಾದೆಯಿಲ್ಲದೆ, ಬೀಳಲಾಗಿ ಉಳಿದದ್ದಕ್ಕೆ ಮಯಾದೆ ಇರುವದಿಲ್ಲೆಂಬದನ್ನು ನಾವು ಮೂರು ವರ್ಷಗಳ ಹಿಂದೆ ಬರೆದಿರುತ್ತೇವೆ. ಆ ಪ್ರಕಾರ ರಾ. ಬ. ಕಂಬಳಿಯವರು ಬರೇ ಅರು ಹೋಟುಗಳ ಧನಿಯಾದರೆ- ದಿವಾನಗಿರಿಯು ದೊರೆಯುವದು ಹೇಗೆ ? ಸಂಸ್ಥಾನವು ಈ ಅಧಿಕಾರ ಕೊಡುವಾಗ ತನ್ನ ಪಕ್ಷಕ್ಕೆ ಬಹುಮತವಾಗುವದನ್ನು ನೋಡುತ್ತದೆ. ಬರೇ ಬುದ್ಧಿವಂತನೆಂದು ಜಾರ್ಜ ವಾಶಿಂಗಟನ್ನನನ್ನು ಸಭ ಮುಂದೆ ಕರೆಯುವದು. ಈ ಪ್ರಕಾರ ಬೆಂಬಲವಿಲ್ಲದವರನ್ನು ಬಹುಮಾನಿಸುವದಿಲ್ಲ ಮನೆಯ ದೀಪವೆಂದು ಯಾರೂ ಮುದ್ದು ಕೊಡುವದಿಲ್ಲ. ಈ ಮೂಲಕ ರಾ. ಬ. ರವರ ದಿವಾನಗಿರಿಯು ಛಳಮಳಿಸಲಾರಂಭಿಸಿ ದಿಗ್ಭ್ರಮೆತ ಅಪಕಳನಗಳಾಗುತ್ತಿರುವವು.

ಒಬ್ಬ ಸ್ವದೇಶಾಭಿಮಾನಿಯಿಂದ ಮತ್ತೊಬ್ಬ ಸ್ವದೇಶಾಭಿಮಾನಿಗೆ ಶಿಕ್ಷೆ.

—)(೦)(—

ಮುಂಬಯಿಯಲ್ಲಿ ಕಾಯುದೆಭಂಗದ ಒಂಭತ್ತನೆಯ ಯುದ್ಧಮಂಡಲಕ್ಕೆ ಸೋಮವಾರ ದಿವಸ ಶಿಕ್ಷೆಯಾಯಿತು. ಇವರಲ್ಲಿ ಯುದ್ಧಖಾತೆಯ ಉಪಾಧ್ಯಕ್ಷರಾದ ಮೆ. ಅಬ್ದುಲ ರಹಮಾನ ಸುಲೇಮಾನ ಕಾತಮ ಮಿಫಾಸಾಹೇಬರಿಗೆ ಅರು ತಿಂಗಳ ಶಿಕ್ಷೆಯಾಯಿತು. ಶಿಕ್ಷೆ ಕೊಡುವ ಮೊದಲು- ಮ್ಯಾಜಿಸ್ಟ್ರೇಟರು ಇವರಿಗೆ ನಿಮಗೇನಾದರೂ ಹೇಳತಕ್ಕದ್ದಿದ್ದರೆ- ಹೇಳಿರೆನ್ನಲು

ದೇಶಾಭಿಮಾನವು ಅಪರಾಧವಾದರೆ- ನಾನು ಅಪರಾಧಿಯು. ಅಪರಾಧವಾಗದಿದ್ದರೆ- ಅಪರಾಧಿಯಲ್ಲ,

ಎಂಬುದಾಗಿ ಉತ್ತರ ಕೊಟ್ಟರು. ಆಗ ಮ್ಯಾಜಿಸ್ಟ್ರೇಟರು-

ಇರೋಷಿಯು ತನಗೊಬ್ಬನಿಗೇ ದೇಶಾಭಿಮಾ

ದ್ಯಕ್ಷತೆಯಲ್ಲಿ ಬಹು ಹೃದಯಂಗಮವಾಗಿ ಆಯಿತು. ಸಭೆಯಲ್ಲಿ ಸೇರಿಗುಂದದಲ್ಲಾದ ರ ಜನಿಷ್ಟೆಯ ಸಭೆಯ ನಿಷೇಧ, ಗದಗಿನ ಶ್ರೀಯುತ ಡಾ. ವೆಂಕಟರಾವ ಹುಯಿಲಗೋಳ ಇವರಿಗೆ ಶಿಕ್ಷೆಯಾದ ಒಗ್ಗೆ ಷೆ ಧ, ಹೀಗೆ ಎರಡು ಠರಾವುಗಳು ಸರ್ವಾನುಮತದಿಂದ ಪಾಸಾದವು.

ಸ್ವದೇಶೀ ಸಪ್ತಾಹದಲ್ಲಿ ಮಾಡತಕ್ಕ ಕಾರ್ಯಗಳು.

೧ ಖಾದೀ ಒಟ್ಟಿಯನ್ನು ಮನೆಮನೆಗೆ ಹೋಗಿ ಮಾರುವುದು.

೨ ಪರದೇಶೀ ಒಟ್ಟಿಯನ್ನು ಕಲೆಹಾಕುವದು.

೩ ರಾಷ್ಟ್ರೀಯ ನಿಶಾಗಳನ್ನು ಪ್ರತಿಯೊಂದು ಮನೆಗಳ ಮೇಲೆ ಹಚ್ಚುವದು.

೪ ಸಭೆ, ಧ್ವಜವಂದನೆ, ಪ್ರಭಾತಫೇರಿಯ ಕಾರ್ಯಗಳು.

೫ ಪಿಕೆಟಿಂಗ.

ಈ ಮೇಲ್ಕಂಡ ಕಾರ್ಯಗಳನ್ನು ಮಾಡಲಿಕ್ಕೆ ಸಿದ್ಧರಿದ್ದ ಸ್ವಯಂಸೇವಕರು ತಮ್ಮ ಹೆಸರುಗಳನ್ನು ಕಾಂಗ್ರೆಸ ಕಚೇರಿಯಲ್ಲಿ ೧೨-೧೦-೪೦ ಶಾ ೬ ಖು ಸಂಜೆಯೊಳಗಾಗಿ ಬರೆಯಿಸಿ ಅಬಗ್ಗೆ ಬ್ಯಾಜಗಳನ್ನು ತೆಗೆದುಕೊಂಡು ಹೋಗಬೇಕು.

ಧಾರವಾಡ : ಅಧ್ಯಕ್ಷ

೧೦-೧೦-೪೦ ಸ್ವದೇಶಿ ಸಪ್ತಾಹ.

ಮೃತ್ಯು-

ರೋಣದಲ್ಲಿ ರಾಷ್ಟ್ರೀಯ ಚಳವಳಿಯಲ್ಲಿ ಭಾಗ ತೆಗೆದುಕೊಂಡು ಸ್ವದೇಶಿಜಾಗ್ರತಿಮಾಡುತ್ತಿದ್ದ ಶ್ರೀ. ಚಿದಂಬರರಾವ ವಿಠ್ಠಲಾಪ್ಪರಾವ ಕುಲಕರ್ಣಿಯವರು ಗ್ರಹಣದ ಕಸೆಯಿಂದ ಕೆರೆಗೆ ಸ್ನಾನಕ್ಕೆ ಹೋದಾಗ, ಮುಣಗಿ ಪರಲೋಕವಾಸಿಯಾದರೆಂದು ದುಃಖಿಸುವದಕ್ಕೆ ಅತ್ಯಂತವಾಗಿ ವಿಷಾದಿಸುತ್ತೇವೆ. ಒಬ್ಬ ಸುಶಿಕ್ಷಿತ ರಾಷ್ಟ್ರಸೇವೆಕನನ್ನು ಕಳೆದುಕೊಂಡ ಒಗ್ಗೆ ರೋಣ ತಾಲೂಕವೇ ದುಃಖದಲ್ಲಿ ಮುಳುಗಿರುತ್ತದೆ.

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಸ್ವಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ಹಿ. ಪಿ. ಸ್ವೀಕಾರಮಾಡಿ ವಿಜಯನನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಅನೇಕ ವಿಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೇ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸೈನ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕುದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ವಬ್ಯಾಂಕ ಧಾರವಾಡ

ಈ ಔಷಧ ಬೇಕುವಾಗ್ಗೆ ಯಾವ ವರ್ತಮಾನಪತ್ರಿಕೆ ಜಾಹಿರಾತ ನೋಡಿದ ಕೂಡಲೆ ಬರೆದಿರಿಯೆಂದು ನಮಿರುವಿರಿಮೆಂದು ಬರೆಯಬೇಕು.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲ ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲ ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲ ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರವೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ಟರ
ಶಾಳಾ ನಂಬರ ೧. ಗದಗ ಪೆಟಗೇರಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಸಾಲಿಗೆ ಒಂದ. ರೂಪಾಯಿ. ಮತ್ತೆ ಸಾಲಿಗೆ ಒಂದೊಂದ. ಸಾಲಿಗೆ ಒಂದೂವರ ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಒಂದ ಆಣೆ ಸಂಗಡ ಸ್ಟ್ಯಾಂಪ ಪೇಪರ, ಲೋಕಲಬೋರ್ಡ ಟೆಕ್ಸ ಸ್ಟಿಕ್ಕರ ಮಿಂತಾದವ ಸಾಲಿಗೆ ಒಂದ ಆಣೆ ಇಂಗ್ಲಿಷ ಸಂಗಡ ಸ್ಟ್ಯಾಂಪ ಪೇಪ

ನಿತ್ಯ ಪತ್ರಿಕೆ ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಸಕೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೧೧ನೇ ಅಕ್ಟೋಬರ ೧೯೩೦ (ಸಂಚಿಕೆ ೨೮೪

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ ಇದರಲ್ಲಿ ವಾದಿ ಶ್ರೀ. ಸಿದ್ಧಾವದೂತರ ಅಸೋಬೆ, ಶ್ರೀ ಅರೂಢ ಸ್ವಾಮಿಗಳ ಕೈಫಿಯತು ಮತ್ತು ಮಾನಸಫಲಾದ ಶ್ರೀ. ಸಚಿನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತವಾದಿ, ಪ್ರತಿವಾದಿ, ಹಾಗು ಮಾನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಮ್ಮವೆನಿಸುವವು, ಆದ್ದರಿಂದ ಗ್ರಾಹಕರು ಕ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ವಿ. ಪಿ. ಖರ್ಚ ಬೇರೆ ಒಂದೇಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಏಡಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ವಿ. ಪಿ ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರ ಲಾಲ ನೆಹರು, ಡಾಕ್ಟರ ಕರ್ಣಾಕರ ಮತ್ತು ದೇವಿ ಸರೋಜಿನಿ ನಾಯಡ ಇವರ ಭಾವಚಿತ್ರಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಒರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಒಂಥುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ತೋಳ ತಕೆಳ್ಳುವವರಿಗೆ ನೂರಕ್ಕೆ ಭರ್ವೂಂ ಕಮೀಶನ ದೊರೆಯುವದು.

ಜಿ. ಹ್ವಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್‌ವ ಕಾರ್ಕಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಿಯ ಎಂಟು ಲಕ್ಷದ ಮೇಲುಂಟು. ಚಿಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿವಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿವಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಜ್ಞ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಡಾಗೀನೆಗಳನ್ನು ಇಟ್ಟೀ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಆಶ್ವೀಜ ವಧ್ಯ ೩

ರಾ. ಬ. ಕಂಬಳಿಯವರ ಮೇಲೆ ಕೆಂಚನ ಕೋಲ್ಬಾಣಗಳ ಪ್ರಯೋಗ.

ರಾ. ಬ. ಕಂಬಳಿಯವರು ದಿವಾನರಾಗಲು ಯೋಗ್ಯರಾಗಿಲ್ಲೆಂಬರ್ಥದ ಒಂದು ಲೇಖವನ್ನು ಕುಣಬಿ ಎಂಬವನು ಮುಂಬಯಿಯ ಟಾಯಿಮ್ಸ ಆಫ್ ಇಂಡಿಯಾ ಪತ್ರದಲ್ಲಿ ಪ್ರಸಿದ್ಧ ಮಾಡಿದ್ದಾನೆ ಕುಣಬಿ ಶಬ್ದವು ಮರಾಟಿಯ. ಅದರ ಕನ್ನಡ ತರ್ಜುಮೆಯು ಕೆಂಚವೆಂದಾಗುತ್ತದೆ. ಕೆಂಚನು ಇಂದೇ ಆ ಪತ್ರದಲ್ಲಿ ಪ್ರಕಟನಾಗಿಲ್ಲ. ರೈತರ ಪ್ರತ್ಯಕ್ಷ ಹಿತಸಂಬಂಧ ಬಂದಾಗಿಲ್ಲ ಈ ಹೆಸರಿನಿಂದ ಲೇಖ ಬರೆಯುವನು. ಅವನೋರ್ವ ರಾಜಕಾರಣಪಟುವಾಗಿದ್ದಾನೆ. ಈತನು ಬ್ರಾಹ್ಮಣೇತರರ ಮುಂದಾಳು ಮತ್ತು ದಿವಾನರಾಗುವದಕ್ಕೆ ರಾ. ಬ. ಕಂಬಳಿಯವರು ಸಮರ್ಥರಾಗಿರುತ್ತಾರೇ? ಎಂಬ ವಿಷಯವಾಗಿ ತನ್ನ ಸ್ಪಷ್ಟ ಮತವನ್ನು ಹೇಳಿದ್ದಾನೆ. ಸಾರಾಂಶವಿಂದ ಅದನ್ನು ಕರ್ನಾಟಕದ ವಾಚಕರಿಗಾಗಿ ಇದರಡಿ ಕೊಡುತ್ತೇವೆ.

ಈಗ ನಡೆದ ಜೇಷ್ಟೆ ನೋಡಿರಿ. ಪುಣೆಯಲ್ಲಿ ಸೇರಿದ್ದ ೧೪ ಬ್ರಾಹ್ಮಣೇತರರು ನಮಗೆ ಇದನ್ನು ಹಿಡಿಸಲಾರದೆ ನಗುವಷ್ಟು ಮಾಡಿಕೊಟ್ಟಿದ್ದಾರೆ. ಇವರು ಆ ಮಾನ್ಯರಾದ ರಾ. ಬ. ಕಂಬಳಿಯವರಿಗೆ ತಮ್ಮ ಪಂಗಡದ ಪ್ರಮುಖತ್ವದ ಮಾಲೆ ಹಾಕಿದ್ದಾರೆ. ಆಕಟ! ಈ ೧೪ ಜನರಲ್ಲಿ ಸಮ ಮತೈಕ್ಯವಿರಲಿಲ್ಲ. ಒಬ್ಬ ಮರಾಠಾ ಗೃಹಸ್ಥನು ಏನು, ಮತ್ತು ರಾ. ಬ. ಕಂಬಳಿಯವರು ಅರು ಹೋಟಗಳನ್ನು ದೊರಕಿಸುವರು. ಈ ಆರರಲ್ಲಿ ಮೂವರು ದಿವಾನ ಜಾಧವರಾಯರ ಹಸ್ತಕರಾದಂಥವರು. ಅಂದರೆ- ರಾ. ಬ. ಕಂಬಳಿಯವರಿಗೆ ಕರ್ನಾಟಕದ ಎರಡೇ ಮತಗಳು ದೊರೆತವು. ತಮ್ಮದೊಂದು ಕೂಡಿ ಮೂರು. ಇಂಥ ಪ್ರಮುಖತ್ವವು ರಾ ಬ. ಕಂಬಳಿಯವರನ್ನು ದಿವಾನಪದವಿಗೊಯ್ಯುವದಂತೆ!! ರಾಜ್ಯಭಾರ ಸಾಗುವದಕ್ಕಾಗಿ ಸರಕಾರವು ಮಂತ್ರಿಗಳಿಂದ ಸಾಕನಿಸುವನ್ನು ಮತಗಳನ್ನು ಅಪೇಕ್ಷಿಸುತ್ತದೆ. ಮರಾಟರು ಮತ್ತು ಮರಾಟರಾಗದಂಥ ಬ್ರಾಹ್ಮಣೇತರರು ಕರ್ನಾಟಕದ ಇಬ್ಬರ ಹೊರ್ತು ಗಂಧಕದ್ದಸಿಟ್ಟುಸುರು ಬಿಡುತ್ತಿದ್ದಾಗಲೆ ಇದರಿಂದ ರಾ. ಬ. ಕಂಬಳಿಯವರು ದಿವಾನಗಿರಿಯ ದೆಸೆಯಿಂದ ತಮ್ಮ ಬೆನ್ನ ಮೇಲೆ ಆ ಹದಿನಾಲ್ಕೂ ಮತಗಳನ್ನು ಭದ್ರವಾಗಿ ಕಟ್ಟಿಕೊಂಡಿದ್ದಾರೆಂದು ಕಂಡು ಬರುವದೇ? ತಾವು ಮುಂಬಯಿ ಬ್ರಾಹ್ಮಣೇತರ ಪಂಗಡದ ಮುಖಂಡರಿದ್ದೇವೆಂದು ಹೇಳಿಕೊಳ್ಳುವದಕ್ಕೆ ರಾ. ಬ. ಕಂಬಳಿಯವರಿಗೆ ನಿಜವಾಗಿ ಧೈರ್ಯವಿಲ್ಲದೆ ಕೂಡ ಇರುವದೇ ಇಲ್ಲ. ಜಾಧವರಾಯರು ಬೇಕಾದವನನ್ನು ಮುಂದೆ ಮಾಡಲಿ; ಅತನ ಪ್ರಯತ್ನದಲ್ಲಿ ಪರಾಜಯವು ಕಟ್ಟಿಟ್ಟ ಮಾತು. ಪುಣೆಯಲ್ಲಿ ಶ್ರೀ. ಜೇಧೆಯವರ ಮನೆಯಲ್ಲಿ ಕೂಡಿದ್ದ ಸಭೆಯೇ ಒಂದು ಸಾಕ್ಷಿಯು. ಜೇಧೆ ಕಂಪನಿಯವರು ಸೇಕ್ರೆಟರಿ ಜಾಧವಳಕರರನ್ನು ಸಸ್ಪಿಂಡ ಮಾಡಿದ್ದಲ್ಲದೆ, ಜಾಧವಳಕರರ ಪಕ್ಷಪಾತ್ರಿದ್ದ ಜಾಧವರಾಯರನ್ನು ವಾಂತಿಡನದಿಂದ ನಿರ್ಗಿಣ್ಯ ಮಾಡಿದ್ದಾರೆ.

ನಾನು ರಾ. ಬ. ರ ಮೇರ ನ್ನ ಕ್ಷ ಚಿತವಾಗಿ ಕಂಡಿದ್ದೇನೆ. ಕೌನ್ಸಿಲದಲ್ಲಿ ಅವರು ಮಾಡಿದ ಕೆಲಸಗಳ ವಿಷಯಕವಾದ ನನ್ನ ನೆನಪು ಮಾತ್ರ ಮರೆತು ಹೋಗುವಂತಿಲ್ಲ. ಕೌನ್ಸಿಲದ ಕೆಲಸಗಳ ಬಗ್ಗೆ ಇವರು ತೋರಿಸುತ್ತಾ ಬಂದ ಉದಾಸೀನ ಭಾವವನ್ನು ಲಕ್ಷದಲ್ಲಿಡುವಂತಿದೆ. ಕೌನ್ಸಿಲದಲ್ಲಿ ಇವರು ಇಂಥದೊಂದು ಸ್ಮರಣದಲ್ಲಿಡುವಂಥ ಸಂಘಟನೆಯ ಕೆಲಸ ಮಾಡಿದರೆಂದು ಯಾರಾದರೂ ಹೇಳಿದರೆ-ನನಗೆ ಅತ್ಯಂತ ಆನಂದವಾಗುವದು. ಬ್ರಾಹ್ಮಣೇತರ ಪಕ್ಷದ ಹಿತಕ್ಕಾಗಿ ಎಂದಾದರೂ ಒಂದಾದರೂ ಯೋಜನೆಯನ್ನು ಹೇಳಿದರೇ? ಬೆಳಗಾವಿ ಮತ್ತು ಹುಬ್ಬಳ್ಳಿಯ ಹೊರ್ತು, ಬ್ರಾಹ್ಮಣೇತರರ ಎಷ್ಟು ಪರಿಷತ್ತುಗಳಿಗೆ ಹೋಗಿದ್ದರೆಂಬದನ್ನು ಹೇಳಲಿ; ಬ್ರಾಹ್ಮಣೇತರ ಪಕ್ಷದ ಅಭಿವೃದ್ಧಿ ಮತ್ತು ಸುಧಾರಣೆಗಾಗಿ ಯಾವ ಪ್ರಯತ್ನ ಮತ್ತು ಕರ್ತವ್ಯ ಮಾಡಿದರೆಂಬದನ್ನು ಹೇಳಲಿ. ೧೯೨೪-೨೫ ಮತ್ತು ೨೬ನೆಯ ವರ್ಷಗಳಲ್ಲಿ ಇವರು ಕೌನ್ಸಿಲದಲ್ಲಿ ಬ್ರಾಹ್ಮಣೇತರರ ಚಾಲಕರಾಗಿದ್ದರು. ಆಗ ಸಹ ಇವರು ಬ್ರಾಹ್ಮಣೇತರ ಪಕ್ಷದ ಕಮೀಟಿಗಳಿಗೆ ಬರುವ ಬುದ್ಧಿಯನ್ನೇ ಮಾಡಲಿಲ್ಲ. ನಿಜವಾಗಿ ಎಲ್ಲ ಕೆಲಸವನ್ನು ಲ್ಯಾಡಹೋಕೇಟ ಎಮ. ಸರ್ವೆಯವರು ಮಾಡಿದರು. ರಾ. ಬ. ರವರು ಡಿಪ್ಯುಟಿ ಪ್ರೆಸಿಡೆಂಟರಾದ್ದರಿಂದ ದಿವಾನಗಿರಿಯ ದಾರಿಯು ಸುಸೂತ್ರವಾಯಿತೆಂದು ತಿಳಿಯುತ್ತಾರೆ. ದಿವಾನ ಬಹಾದ್ದೂರ ದೇಸಾಯಿ ಮತ್ತು ಎಮ. ಸಹಲಜಾನಿಯವರೂ ಡಿಪ್ಯುಟಿ ಪ್ರೆಸಿಡೆಂಟರಾಗಿದ್ದರು. ಅವರು ಲೋಕಪಕ್ಷವಿಡಿದು, ಕೌನ್ಸಿಲದಲ್ಲಿ ಹೋರಾಡುವ ಸಮಯವನ್ನು ಯಾವಾಗಲು ವ್ಯರ್ಥವಾಗಿ ಕಳೆಯಲಿಲ್ಲ. ಆದರೆ ರಾ. ಬ. ಕಂಬಳಿಯವರನ್ನು ನೋಡಿರಿ. ಶಕ್ತಿ ಎಂಬುವಾಹಿದೆ ಜಾಯಿ ಮುಚ್ಚಿಕೊಂಡು ಕೂತರು.

ಬ್ರಾಹ್ಮಣೇತರ ಪಕ್ಷದ ಮುಖಂಡನಾಗಬೇಕೆಂಬವನಿಂದ ನಾವು ಹೆಚ್ಚಿಗೆ ಕೆಲಸವನ್ನು ಅಪೇಕ್ಷಿಸುತ್ತೇವೆ. ಇದು ಅಳಿ ಅಥವಾ ಉಳಿ ಎನ್ನುವಂಥ ಗಹನ ಕೆಲಸವಾಗಿದೆ. ನಮ್ಮ ವಿದ್ಯಾರ್ಥಿಕಳಕೊಂಡಂಥ ಗೃಹಸ್ಥನನ್ನು ತಮ್ಮ ಮುಖಂಡನಾಗಿ ಮಾಡಬೇಕೆನ್ನುತ್ತಾರಲ್ಲ? ಅಡ್ಡ ತಿಡ್ಡ ಜಗ್ಗಿ ಕೂಡಿಸಿದ ಆರು ಹೋಟಗಳಿಂದ ಲೀಡರನಾಗಬೇಕೆನ್ನುವದು ದೊಡ್ಡ ಫಾರ್ಸ್ ಆಗುತ್ತದೆ. ಹೊಟ್ಟೆಗಿಲ್ಲದೆ ಬಳಲುವಂಥ ಒಕ್ಕಲಿಗರ ಹಿತರಕ್ಷಣೆಗಾಗಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಉತ್ಕೃಷ್ಟ ರೀತಿಯಿಂದ ಕೆಲಸಮಾಡುವಂಥ ಬುದ್ಧಿವಂತನು ನಮಗೆ ಬೆಕಾಗಿರುತ್ತಾನೆ ಬರೇ ಹೊಂದಕ್ಕೆ ಸಿಂಗರಿಸಿ ಕೂಡಿಸುವ ಗೊಂಬೆ ಬೇಕಾಗಿಲ್ಲ. ಕೌನ್ಸಿಲದಲ್ಲಿ ನಡೆಯುವ ಕೆಲಸಗಳನ್ನು ದಿನಾಲು ನೋಡುತ್ತಾ, ಅವುಗಳನ್ನು ಅಭ್ಯಾಸಿಸುತ್ತಾ ಬೇರೆ ಮೆಂಬರರಿಗೆ ಕೆಲಸಮಾಡಲು ಉತ್ತೇಜನ ಕೊಡುವಂಥ ಗಟ್ಟಿಗನು ನಮಗೆ ಬೇಕಾಗಿದೆ. ಈ ರೀತಿಯಾಗಿ ರಾಜ್ಯಕಾರಭಾರ ಒಳ್ಳೆಯರಾಗಿರುವಂತೆ ರಾ. ಬ. ಕಂಬಳಿಯವರು ಈ ವರೆಗೆ ಎಲ್ಲಿಯೂ ಕೃತಿಯಿಂದ ತೋರಿಸಿಕೊಂಡಿಲ್ಲ. ಜೇನಹುಟ್ಟಿನಲ್ಲಿರುವ ಗಂಡ ಜೇನುನೊಣ ತೂಕಡಿಸುವ ಪ್ರಾಣಿಯು ಅಗತ್ಯವು ನಮಗಿರುವದೇ ಇಲ್ಲ.

ರಾ ಬ. ಕಂಬಳಿಯವರ ದೆಸೆಯಿಂದ ಮಾರಗೆ ಯಾವದೇ ಅಪರಾಧವಿಲ್ಲ; ಅದರಿಂದ ಅವನನ್ನು ಮುಖಂಡ ಮಾಡಿ, ಮೂಕನಂತೆ ಕೂಡ್ರಿಸೋಣವಲ್ಲಿಯೂ ಹೇಳ್ವಿ. ಬ್ರಾಹ್ಮಣೇತರರಲ್ಲಿ ಮನಃಪೂರ್ವಕವಾಗಿ ಶ್ರಮ ಪಡಿಸಿ, ಅಶಕ್ತಿಯಿಂದ ಕೆಲಸ ಮಾಡುವಂಥವರು ಅನೇಕರಿದ್ದಾರೆ ರಾ ಬ. ಕಂಬಳಿಯವರು ಈ ವರೆಗಿನ ನಡತೆಯೇ ಅವರಲ್ಲಿ ಅಡಗಿತದ ಅಂಶವಿಲ್ಲೆಂಬದನ್ನು ತೋರಿಸುತ್ತದೆ. ತಮ್ಮನ್ನು ಚಿವರಿಕೊಳ್ಳುವ ಹಸಿದ ತೋಳಗಳನ್ನೂ ಕಚ್ಚುವ ಕುನ್ನಿಗಳನ್ನೂ ಹಿಡಿದು, ಬಾಯಿ ಗುಂಪನಲ್ಲಿ ತರುವಂಥನಾಮರ್ಥ್ಯವು ರಾ ಬ. ಕಂಬಳಿಯವರಲ್ಲಿಲ್ಲಂಬಂಟೆ? ಆದ್ದರಿಂದ ನಿಮ್ಮ ಹಿಂದಿನ ದಾಖಲೆ ಮತ್ತು ಬುದ್ಧಿಯು ಅಶಕ್ಯವೆಂದು ಹೇಳುವಂಥ ಕೆಲಸ (ದಿವಾನಗಿರಿ) ದಲ್ಲಿ ಕೈ ಹಾಕಬೇಡರೆಂದು ನಾನು ರಾ ಬ. ಕಂಬಳಿಯವರಿಗೆ ವಿನಯಪೂರ್ವಕವಾಗಿ ವಿನಂತಿಮಾಡಿಕೊಳ್ಳುತ್ತೇನೆ.

ದೇ॰ ದೇಶಪಾಂಡೆ ಗಂಗಾಧರರಾಯರ ಅಪೂರ್ವ ಸನ್ಮಾನ

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡ ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಇಟ್ಟನಲ್ಲಿ ಹಾಕಿ ಇಡಲು ಒರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಕೋಳ ತಗೆದುಕೊಳ್ಳುವವರಿಗೆ ನೂರಕ್ಕೆ ಭರವೂ ಕಮೀಶನ ದೊರೆಯ ಇದು.

ಜೆ. ವ್ಹಿ. ನವರತ್ನ,

ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಯ ಎಂಟು ಲಕ್ಷದ ಮೇಲುಂಟು. ಚಳಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜಾಸ್ತಿಗಿ ಬಡ್ಡಿ ಕೊಡಲಾಯಿತು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರೆ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಕತ್ತೀ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ತಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ಸಿಗ್ಗಾವಿಯಲ್ಲಿ ಸರಕಾರಿ ದರ್ಬಾರ

ಮೆ. ಕಲೆಕ್ಟರಸಾಹೇಬರ ಭಾಷಣ

ಹೋದ ಗಿಗನೆಯ ತಾರೀಖಿನ ದಿವಸ ಸಿಗ್ಗಾವಿಯಲ್ಲಿ ಕೂಡಿದ ದರಬಾರದಲ್ಲಿ ಮೆ. ಕಲೆಕ್ಟರಸಾಹೇಬರು ಮುಂದೆ ಕೊಟ್ಟಂತೆ ಭಾಷಣ ಮಾಡಿದರು.

ಹಿಂದುಸ್ಥಾನದಲ್ಲಿ ತಾಳುಕಡಿಯ ಧಾರಣೆಯು ಕಡಿಮೆಯಾಗಿದೆ. ಹತ್ತಿಯ ಧಾರಣೆಯಂತೂ ಅಗದೀ ಕಡಿಮೆಯಾಗಿದೆ. ಇದರಿಂದ ಜನರ ಕೈಯ್ಯಲ್ಲಿ ಅಗದೀ ದುಡ್ಡಿಲ್ಲದಂತಾಗಿದೆ. ಜನರಲ್ಲಿ ದುಡ್ಡಿಲ್ಲದ್ದರಿಂದ ಜನರು ತರೇ ತಿಂದಿ, ಕುಡಿಯುಲಿಕ್ಕೆ ಬರುತ್ತದಿಲ್ಲೆಂದು ಕೆಲ ತಿಂದಿ, ಶರೆಯ ಕಾಂಟ್ರಾಕ್ಟರರು ಹೇಳಿದ್ದಾರೆ. ಇದರ ಮೇಲಿಂದ ಜನರ ಆರ್ಥಿಕ ಸ್ಥಿತಿಯು ಬಹಳೇ ಕೆಟ್ಟಿರುತ್ತದೆಂದು ಸಿದ್ಧವಾಗುತ್ತದೆ. ಈ ರೀತಿ ಸಾಂಪತ್ತಿಕ ಸ್ಥಿತಿಯು ಕೆಡಲಿಕ್ಕೆ ಎರಡು ಕಾರಣಗಳಾಗಿರುತ್ತವೆ.

೧ ಜಗತ್ತಿನಲ್ಲಿ ಯೂರೋಪ್ಯ ದೇಶಗಳಲ್ಲಿ ಕಾಳಿನ ಧಾರಣೆಯು ಬಿದ್ದಿರುತ್ತದೆ.

೨ ಹಿಂದುಸ್ಥಾನದ ಕುಂಬ ಹಬ್ಬಿದ ಕಾಯ್ದೆ ಭಂಗದ ಚಳವಳಿಯು

ಮೊದಲನೆಯ ಕಾರಣದ ಬಗ್ಗೆ ವಿಚಾರ ಮಾಡಿದರೆ- ಜಗತ್ತಿನಲ್ಲಿ ಯೂರೋಪ್ಯ ರಾಜ್ಯಗಳಲ್ಲಿ ತಾಳುಕಡಿಯ ಧಾರಣೆಯು ನೂರಕ್ಕೆ ೨೬ರಂತೆ ಕಡಿಮೆಯಾಗಿದೆ. ಹಿಂದುಸ್ಥಾನದಲ್ಲಿಯೂ ಇದೇ ಪ್ರಮಾಣದಿಂದ ನೂರಕ್ಕೆ ೨೬ರಂತೆ ಕಡಿಮೆಯಾಗಿದೆ. ಹತ್ತಿಯ ಧಾರಣೆಯು ಇಜಿಪ್ತದಲ್ಲಿ ನೂರಕ್ಕೆ ೨೬ರಂತೆ ಇಳಿದಿದೆ. ಆದರೆ ಹಿಂದುಸ್ಥಾನದಲ್ಲಿ ನೂರಕ್ಕೆ ೫೧ರಂತೆ ಕಡಿಮೆಯಾಗಿದೆ. ಈ ಪ್ರಕಾರ ಹತ್ತಿಯ ಧಾರಣೆಯು ಕಡಿಮೆಯಾಗಲಿಕ್ಕೆ ಕಾಯ್ದೆಭಂಗದ ಚಳವಳಿಯೇ ಕಾರಣವು. ಹೇಗಂದರೆ- ಮುಂಬಯಿಯಲ್ಲಿ ವೇಲಿಂದ ವೇಲಾಗುವ ಹರಕಾಳಗಳಿಂದಲೂ, ವ್ಯಾಪಾರಸ್ಥರು ಈ ಚಳವಳಿಯಲ್ಲಿ ಸೇರಿ, ಸರಕ್ಕೆ ಹುಟ್ಟಿಸುವ ಶಕ್ತಿಯನ್ನೂ ಮತ್ತು ಅದನ್ನು ಅರಗಿಸುವ ಶಕ್ತಿಯನ್ನೂ ಈ ಚಳವಳಿಯಲ್ಲಿ ಕಳೆದುಕೊಂಡಿರುವದರಿಂದಲೂ ಎಷ್ಟೋ ಗಿರಣಿಗಳು ಬಂದಾಗಿರುತ್ತವೆ. ಅಥವಾ ವಾರದಲ್ಲಿ ಸ್ವಲ್ಪ ದಿವಸ ಕೆಲಸದಿಯತ್ತವೆ. ಇದರಿಂದ ಕುಸು ಬಂಡವಳವಿದ್ದ ಕಂಪನಿಗಳು ಹತ್ತೀ ಕೊಳ್ಳುವದನ್ನು ಬಿಟ್ಟಿರುತ್ತವೆ. ಇದರ ಕೂಡ ಬಹಿಷ್ಕಾರದ ಮೂಲಕ ಸ್ವದೇಶದ ಮಾಲು ಬಂದರದಲ್ಲಿಯೇ ಬಿದ್ದು ಹೋಗಿದೆ. ಸ್ವಲ್ಪ ಆಗಿಲ್ಲ. ಮಾಲು ಯಾವಾ ಕೊಳ್ಳದಾಗಿದ್ದಾರೆ. ಇದರಿಂದ ಹತ್ತೀ ಧಾರಣೆಯು ಇಳಿದಿದೆ. ಧಾರವಾಡ ಜಿಲ್ಲೆಯ ಮುಖ್ಯ ಬೆಳೆಯು ಹತ್ತಿ ಇರುವದರಿಂದ ನೀವೆಲ್ಲರೂ ಇದರ ಬಗ್ಗೆ ವಿಚಾರ ಮಾಡತಕ್ಕದ್ದು.

ಈ ಚಳವಳಿಯು ಅನವಶ್ಯಕವಿದೆ. ಏಕಂದರೆ- ಇಂಗ್ಲಂಡದ ಜನರು ನಿಮಗೆ ಸ್ವರಾಜ್ಯ ಕೊಡಲಿಕ್ಕೆ ಸಿದ್ಧರಿದ್ದಾರೆ. ಇಂಗ್ಲಂಡದ ಒಂದು ವರ್ತಮಾನಪತ್ರದ ಅವತರಣವನ್ನು ಓದುತ್ತೇನೆ.

"Federations of the United States of India" ಎಂಬ ಹೆಸರಿನಿಂದ ನಿಮಗೆ ನಾವು ವಸಾಹಾತಿನ ಸ್ವರಾಜ್ಯ ಕೊಡಲಿಕ್ಕೆ ಸಿದ್ಧರಿದ್ದೇವೆ. ಹೀಗಿರಲಾಗಿ ನೀವು ಈ ಕಾಯ್ದೆಭಂಗದ ಚಳವಳಿಯನ್ನು ಮಾಡುವ ಕಾರಣವೇನು ? ಇದರಿಂದ ಇಂಗ್ಲಂಡದಲ್ಲಿರುವ ಹಿಂದುಸ್ಥಾನದ ಸ್ನೇಹಿತರಿಗೆ ಬೇಂಬಲವೇನೂ ಸಿಗುವದಿಲ್ಲ. ಇಷ್ಟೇ ಅಲ್ಲ ; ಈಗ ಸಹಾನುಭೂತಿ ಇದ್ದವರು ಸಹ ನಿಮಗೆ ವಿರುದ್ಧವಾಗುವರು. ,, ಎಂದು ಈ ವರ್ತಮಾನಪತ್ರವು ಬರೆದಿರುತ್ತದೆ. ಇದರ ಮೇಲಿಂದ ಈ ಚಳವಳಿಯು ಅನವಶ್ಯಕವೆಂದು ಸಿದ್ಧವಾಯಿತು.

ಕಾಂಗ್ರೆಸದವರ ಕೂಡ ರಾಜಿಪಾಗಬೇಕೆಂದು ಹತ್ತಾಯಿಸರ್ದಾರುರು ಸರ ಸತ್ರ, ಬ್ಯಾರಿಸ್ಟರ ಜಯಕರರ ಮುಖ್ಯಾಂತರವಾಗಿ ನಡೆಸಿದ ಪ್ರಯತ್ನಗಳ ಬಗ್ಗೆ ಸ್ವಲ್ಪ ಹೇಳುತ್ತೇನೆ. ಮಿ ಗಾಂಧಿಯವರು ಅಶಕ್ಯ ಬೇಡಿಕೆಗಳನ್ನು ಬೇಡಿದರು. ೧೧ ಮುದ್ದೆಗಳನ್ನು ಮುಂದಿಟ್ಟರು. ಇವುಗಳಲ್ಲಿ ಕೆಲವನ್ನು ಕುರಿತು ವಿಚಾರ ಮಾಡುವಾ-

,, ಭೂಮಿಯ ಶಿಂದಾಯವನ್ನು ನೂರಕ್ಕೆ ೫೦ರಂತೆ ಕಡಿಮೆ ಮಾಡಬೇಕು. ,,

ಇವತ್ತಿನ ವರೆಗೆ ಶಾಸ್ತ್ರಿಲಗಳಲ್ಲಿ ಶೇಂಗೆಯನ್ನು ಕಡಿಮೆ ಮಾಡಬೇಕೆಂದು ಕೆಲವು ಠರಾವುಗಳು ಬಂದವು. ಆದರೆ ಇಷ್ಟು ದೊಡ್ಡ ಪ್ರಮಾಣದಿಂದ ಕಡಿಮೆ ಮಾಡಬೇಕೆಂದು ಯಾರೂ ಬೇಡಿಲ್ಲ. ಸರಕಾರಿಕ್ಕರತಕ್ಕ ೧೬ ಕೋಟಿಯ ಉತ್ಪನ್ನದಲ್ಲಿ ೩೨ ಕೋಟಿಯು ತೆರಿಗೆಯಿಂದಿರುತ್ತದೆ. ಇದು ಕಡ್ಡಿಮೆಯಾದರೆ ಆಡಳಿತ ನಡೆಯುವದೆಂತು? ಉಗಂಡಾ ಅಬಕಾರಿ ಮತ್ತು ಇನ್ನುಳಿ ಖಾತೆಗಳ ಉತ್ಪನ್ನವು ನಿಮಗಕ್ಕೆ ಶೂರಂತೆ ಕಡಿಮೆಯಾಗಿದೆ. ಈ ರೀತಿ ಹುಟ್ಟುವಳಿಯು ಕಡಿಮೆಯಾಗಿ, ವೆಚ್ಚವನ್ನು ಕಾಯ್ದುಗೂಡಿಸಬೇಕಾದರೆ- ವೆಚ್ಚವನ್ನಾದರೂ ಕಡಿಮೆ ಮಾಡಬೇಕು. ಅಥವಾ ಕಂದಾಯವಾದರೂ ಹೆಚ್ಚಿಸಬೇಕು. ಮೊದಲು ಕಡಿಮೆ ಮಾಡಬೇಕಾದರೆ- ದಿಂಡು ಮತ್ತು ಪೋಲಿಸರನ್ನು ಕಡಿಮೆ ಮಾಡಿದರೆ- ಪ್ರಜೆಗಳಿಗಿಂತ ಹೆಚ್ಚಿಗಾದಿಸವ್ವಕಾದ ಏಮಗೆ-ಬಂದೋಬಸ್ತನ್ನು ಕಡಿಮೆಯಾಗಿ, ನಿಮಗೆ ಬಹಳ ತ್ರಾಸ ಪಾಗುವದು. ದಂಡನ್ನು ಕಡಿಮೆ ಮಾಡಿದರೆ- ಸ್ವಶಹದ್ದಿನಲ್ಲಿರುವ ಕುಂಬ ಜನರು ಸೇರದಲ್ಲಿ ಒಳಗುಗ್ಗಿ ಬಹಳ ತ್ರಾಸ ಕೊಡುವರು. ಇದರ ಬಳಿಕ ಎರಡೂ ಖಾತೆಗಳನ್ನು ಕಡಿಮೆ ಮಾಡಲಿಕ್ಕೆ ಬರುವದಿಲ್ಲ. ವೆಚ್ಚ ಬಾಯಿಗೂಡಿಸಬೇಕಾಗುವದು. ಇದರಿಂದ ನಿಮಗೇ ತ್ರಾಸವಾಗುವದು.

೨ ಹಿಂದುಸ್ಥಾನ ಸರಕಾರದವರು ಈಗ ಮಾಡಿದ ಸಾಲವನ್ನು ಮುಂದಿನ ಸ್ವರಾಜ್ಯ ಸರಕಾರದವರು ತೀರಿಸುವದಿಲ್ಲೆಂದು ಗಾಂಧಿಯವರು ಹೇಳುತ್ತಾರೆ. ಇದೆಷ್ಟು ಕಪ್ಪೆಂಬದನ್ನು ನೋಡಿರಿ. ಕಾದೆ ಮಾಡಿದ ಸಾಲವನ್ನು ಮಗನು ತೀರಿಸುವದಿಲ್ಲೆನ್ನುವದು ಅಧರ್ಮವಾಗುತ್ತದೆ. ಮುಂದೆ ಸ್ವರಾಜ್ಯ ಸರಕಾರಕ್ಕೆ ಏನಾದರೂ ಕೆಲಸ ಮಾಡಲಿಕ್ಕೆ ಸಾಲಬೇಕಾದರೆ- ಎರಡನೆಯ ದೇಶದವರು ಹೇಗೆ ಸಾಲ ಕೊಟ್ಟಾರು ? ಮತ್ತು ಈಗಿರುವ ಸಾಲದಲ್ಲಿ ಸಾಲ ಕೊಟ್ಟವರು ಎಷ್ಟೋ ಜನರು ಹಿಂದುಸ್ಥಾನದವರೇ ಇದ್ದಾರೆ. ಇದೆಲ್ಲ ಸಾಲ ಮುಣುಗಿ ಹೋಗಬೇಕೆಂದು ನೀವೆನ್ನುತ್ತೀರಾ ? ಇದಲ್ಲದೆ ಕಾಂಗ್ರೆಸದವರು ಬ್ರಾಹ್ಮಣೇತರ ಮತ್ತು ಇತರ ಜನರ ಹಿತ ನೋಡದೆ, ಕಾಂಗ್ರೆಸದವರು ತಾವೇ ಅಧಿಕಾರ ನೋಡಬೇಕೆನ್ನುತ್ತಾರೆ.

೩ ಇನ್ನು ಕಾಂಗ್ರೆಸದವರ ವರ್ತನವು ಎಷ್ಟು ಅಸಭ್ಯತನ (ungentlemanly) ದ್ದಾಗಿದೆಂಬದನ್ನು ನೋಡಿರಿ. ಇತ್ತಿನ ಸಭೆಯಲ್ಲಿ ಅವರು ನಡೆಸಿದ ಗದ್ದಲದಿಂದತೇ ನೋಡಿಕೊಳ್ಳಿರಿ. ಅವರು ಎಷ್ಟೋ ಸಭೆಗಳನ್ನು ಮಾಡುತ್ತಾರೆ ಅವನ್ನು ನಾವು ಮಾಡಗೊಡುತ್ತೇವೆ. ಆದರೆ ಅವರು ಪ್ರಿಕಟಿಂಗ ಮಾಡಿ, ನಮ್ಮ ಸಭೆಗೇಳಿ ತೊಂದರೆ ಕೊಡಬೇಕು ? ಅಪಮಾನಮಾಡಬೇಕು? ಸೌಜನ್ಯದಿಂದ ಸೌಜನ್ಯ ಹುಟ್ಟುತ್ತದೆಂಬದನ್ನು ತಿಳಿದು, ಕಾಂಗ್ರೆಸದವರು ಹಾಗೆ ನಡೆಯಬೇಕು. ಈಗ ಕಲೆಕ್ಟರರಂಥ ಅಧಿಕಾರಿಗೆ ಅವರು ಅಪಮಾನ ಮಾಡಲಿಕ್ಕೆ ಕಲಿತರೆಂದರೆ- ಮುಂದೆ ಸ್ವರಾಜ್ಯ ಸರಕಾರದಿಂದ ನೇಮಿಸಲ್ಪಟ್ಟ ಕಲೆಕ್ಟರನಿಗೂ ಅಪಮಾನ ಮಾಡಲಿಕ್ಕೆ ಹೆದರುವದಿಲ್ಲ. ಮತ್ತು ಒಮ್ಮೆ ಕಾಯ್ದೆ ಮುರಿಯಲಿಕ್ಕೆ ಕಲಿತರೆಂದರೆ- ಮುಂದೆ ಸ್ವರಾಜ್ಯ ಸರಕಾರದ ಕಾಯ್ದೆಯನ್ನು ಮುರಿಯಲಿಕ್ಕೆ ಸಣ್ಣ ಹಿಂಜರಿಯುವದಿಲ್ಲ.

ಪಂಡಿತ ಜವಾಹಿರಲಾಲರ ಸಂದೇಶ.

ಪಂಡಿತ ಜವಾಹಿರಲಾಲರನ್ನು ಶನಿವಾರ ಅ ಧಿಕಾರಿಗಳಿಗೆ ಸಂಸ್ಕಾರದವರು ತಾವಾಗಿ ಅವರ ಅ ಂದ ಘುವನಕ್ಕೆ ಮುಟ್ಟಿಸಿದರು. ಈಗ ಮಹೆಯ ರಾರೂ ಇದ್ದಿಲ್ಲ. ಅಖಿಲ ಇಂಡಿಯಾ ಕಾಂಗ್ರೆಸ ಕಮೀಟಿಯ ಸೇಕ್ರೆಟರಿ ಪಂಡಿತ ಗೋವಿಂದ ವಲ್ಲಭಾಯಿವರೊಬ್ಬರೇ ಅಲ್ಲಿದ್ದ ಕಚೇರಿಯಲ್ಲಿದ್ದ ರು. ಇವರು ಪಂಡಿತರ ಸ್ವಾಗತ ಮಾಡಿ, ಶ್ರೀ. ಪಾ|| ಉಮಾನೆಹರು ಮೊದಲಾದ ಮನೆಯ ಜನರಿ ಗೆ ಬೇಳಕಳಿಸಿದರು. ಅವರೂ ಬಂದರು. ಉಳಿ ದ ನೂರಾರು ಜನರು ಬಂದರು. ಅನಂದವೇ ಅ ಂದವಾಯಿತು. ವರ್ತಮಾನಪತ್ರಗಳ ಸುದ್ದಿಗಾ ರರು ಬಂದು ನಮಗೆ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವಿರಾ ಎಂದನ್ನಲು ಕೇಳಕಕ್ಕದ್ದನ್ನೆಲ್ಲ ಅರ್ಥ ಮಾಡಿಕೊಂಡಿದ್ದೆನ್ನಲ್ಲ ಕೇಳಿರೆಂದರು. ನೀವೆಷ್ಟು ದಿವಸ ವಿ ಶ್ರಾಂತಿ ತಕ್ಕೊಳ್ಳುವಿರೆಂದು ಪ್ರಶ್ನೆ ಮಾಡಲು- ಈ ವಾರು ತಿಂಗಳು ವಿಶ್ರಾಂತಿಗಲಿಲ್ಲೇನೆಂದು ಉತ್ತರ ಕೊ ಟ್ಟರು. ಅಲ್ಲಿಗೆ ಮುಗಿಯಿತು.

ಪಂಡಿತರು ಹಿಂದುಸ್ಥಾನವನ್ನುದ್ದೇಶಿಸಿ ಒಂ ದು ಸಂದೇಶವನ್ನು ಪ್ರಸಿದ್ಧ ಮಾಡಿದ್ದು ಅದರ ಇಂ ಗ್ಲಿಷಣೆಯು ಮುಂದೆ ಕೊಟ್ಟಿರುತ್ತದೆ.

ಈ ಪರ್ಯಂತರ ಅಖಿಲ ಇಂಡಿಯಾ ಕಾಂಗ್ರೆಸ ಕಮೀಟಿಗಳ ಯಾವ ಯಾವ ಅಧ್ಯಕ್ಷರು ಸ್ವಾ ತಂತ್ರ್ಯ ಚಳವಳಿಯನ್ನು ಧೈರ್ಯದಿಂದ ಬಿಟ್ಟು ದಿ ಸದೆ ನಡಿಸಿದರು; ಅವರೆಲ್ಲರ ದೆಸೆಯಿಂದ ನಾನು ಅದವರನ್ನು ವ್ಯಕ್ತಪಡಿಸುತ್ತೇನೆ. ಈಗಿನ ಬಿಕ್ಕಟ್ಟಿ ನ ಪರಿಸ್ಥಿತಿಯಲ್ಲಿ ಹಿಂದವಾತೆಯ ಸುಪ್ರಸನ್ನತೆಯನ್ನು ಕೊಳ್ಳುವಂಥ ಸಾಮರ್ಥ್ಯವನ್ನು ದೇವರು ನನಗೆ ಕೊ ಡಲೆಂದು ಪ್ರಾರ್ಥಿಸುತ್ತೇನೆ ಈ ವರೆಗೆ ಹಿಂದು ಸ್ಥಾನವು ಬದ್ಧುಕಲ್ಪಿಂದು ನೂರಾರು ಜನರು ಪ್ರಾ ಣತ್ಯಾಗಮಾಡಿದ್ದಾರೆ; ನಾವಿಕಾರು ಜನರು ಶಾ ರೀರಿಕ ಯಾತನೆಗಳನ್ನು ಸಹಿಸಿದ್ದಾರೆ. ೪೦-೫೦ ಸಾವಿರ ಜನರು ತುರಂಗದಲ್ಲಿ ಕೊಳೆಯುತ್ತಿದ್ದಾರೆ. ನನ್ನ ದೇಶಬಾಂಧವರು ಮಾಡಿದ ಈ ಘನವಾದ ಸ್ವಾರ್ಥತ್ಯಾಗ ನೋಡಿ ನನ್ನ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಈಗಿನ ಯುದ್ಧವನ್ನು ಮುಂದೆ ನಡಿಸಲು ನನಗೆ ಇಮ್ಮಡಿ ಕಳವು ಬಂದಿರುತ್ತದೆ.,

ಪಂಡಿತರು ತಂದೆಯವರನ್ನು ಕಾಣಲು ಮ ಹೂರಿಗೆ ಹೋಗಿ, ಅಲ್ಲಿಂದ ದಿಲ್ಲಿಗೆ ಬಂದು, ಮುಂ ಬಯಿಗೆ ಬರತಕ್ಕವರಿದ್ದಾರೆ

ಹುಬ್ಬಳ್ಳಿಯಲ್ಲಿ ಮುಸಲ್ಮಾನರು ನಗರ ಸಂ ಕೀರ್ತನೆ ಹೊರಡಿಸಲಾರಂಭಿಸಿದ್ದಾರೆ. ಇದಕ್ಕೆ ಅ ಜದ ಸ್ಥೇರಿ ಎಂಬ ಹೆಸರಿಟ್ಟಿದ್ದಾರೆ. ಇವರೆಲ್ಲರೂ ಖಾದೀ ಧಾರಣ ಮಾಡುತ್ತಾರೆ.

ಬಾಗಲಕೋಟೆಯ ವಕೀಲರ ಮೇಲೆ ನೋಟೀಸು.

—೦—

ಬಾಗಲಕೋಟೆಯಲ್ಲಿ ಕೌನ್ಸಿಲ ಚುನಾವಣೆ ದಿವಸ ಮ್ಯಾಜಿಸ್ಟ್ರೇಟರು ಬಹುಸ್ಕಾರವಾದಿಗಳ ಮೇಲೆ ೧೪೪ ಕಲಮಿನನ್ವಯ ಪಿಕೆಟಿಂಗ ವಾಡ ಬಾರದೆಂದು ಹುಕುಮು ಮಾಡಿದ್ದನ್ನು ಮುರಿದರ ಷ್ಟೇ; ಈಗ ಆ ಹುಕುಮು ಮುರಿದವರಿಗೆ ನಿಮ್ಮ ಮೇಲೇಕೆ ಕೆಲಸ ನಡಿಸಬಾರದೆಂದು ಮ್ಯಾಜಿಸ್ಟ್ರೇಟ ರು ನಮ್ಮನ್ನು ಕೇಳಿದ್ದಾರೆ. ಅವರು-

೧ ಶ್ರೀ. ಜಯರಾವ ನರಗುಂದ ವಕೀಲ
೨ ,, ಶ್ರೀನಿವಾಸರಾವ ನೀರಲಕೇರಿ
೩ ,, ಕೃಷ್ಣರಾವ ಜೋಶಿ
೪ ,, ಲಿಂಗಯ್ಯಾ ಜಂಗಿನ
೫ ,, ಶ್ರೀ. ಗೋವರ್ಧನ

ಸಾಂಗಲಿ ಸಂಸ್ಥಾನದಲ್ಲಿ ಕೋಟಿ ಸಂಖ್ಯೆಯಿಂದ ಹುಗಿದ ದ್ರವ್ಯ.

—(೦)—

ಸಾಂಗಲಿ ಸಂಸ್ಥಾನ ಮಾರಿಹಾಳ ಗ್ರಾಮದ ಲ್ಲಿ ಹಿಂದು ತ್ರಿಲಾಲೇಖವುಂಟು. ಅದರ ಬುಡದಲ್ಲಿ ಕೋಟಿ ಸಂಖ್ಯೆಯಿಂದ ದ್ರವ್ಯವುಂಟು. ಅದನ್ನು ಅಗಿಯಲಿಕ್ಕೆ ಅಪ್ಪಣೆ ಕೊಡಿರೆಂದು ಓರ್ವ ವೀರಶೈ ವ ಜಂಗಮರು ಯಜಮಾನರಿಗೆ ಕೇಳಿಕೊಂಡರು. ಸಂಸ್ಥಾನಕ್ಕೆ ೩ ಭಾಗ ಮತ್ತು ಜಂಗಮರಿಗೆ ಒಂದು ಭಾಗ ಹೆಂದು ಗೊತ್ತಾಗಿ ಹೋದ ೧೧ನೆಯ ತಾರೀ ಖಿನಿಂದ ಅಗಿಯುವ ಕೆಲಸ ಪ್ರಾರಂಭವಾಗಿದೆ. ಮೊದಲು ಅಲ್ಲಿ ಮೂರು ಪಕ್ಷಗಳ ಬಲೀ ಕೊಟ್ಟು ಅಗಿಯಲಿಕ್ಕೆ ಪ್ರಾರಂಭಿಸಿದರು. ಈ ಕೆಲಸವು ದಿ ವಾನರ ಸಮಕ್ಷಮ ನಡೆದಿದೆ.

ಡೊಂಬರು ಕೌನ್ಸಿಲ ಮೆಂಬರರಾದರು.

—(೦)—

ಶಾಸಿಯ ಚುನಾವಣೆಯಿಂದಾದ ಕೌನ್ಸಿಲ ಚುನಾ ವಣೆಯಲ್ಲಿ ಜಗನ್ನಾಥಪ್ರಸಾದ ಮತ್ತು ಭೇಕೂ ಸಾ ಎಂಬೀವರು ಡೊಂಬರು ಕೌನ್ಸಿಲ ಮೆಂಬರ ರಾಗಿ ಆರಿಸಲ್ಪಟ್ಟರು. ಇವರ ಪ್ರತಿಸ್ಪರ್ಧಿಗಳ ಲ್ಲಿ ಒಬ್ಬರು ರಾವಸಾಹೇಬರಾಗಿದ್ದರು. ರಾವಸಾ ಹೇಬರಿಗೆ ಬಹಳೇ ಕುಸು ಮತಗಳು ಬಿದ್ದದರಿಂದ, ಅವರ ಅಮಾನತ ಹಣವು ಕೈದಿಟ್ಟಿತು. ಚುನಾವ ಣೆಮುಗಾದನಂತರ ಡೊಂಬರ ಪ್ರಚಂಡ ಮೆರವಣಿಗೆ ತೆಗೆದರು.

ಶ್ರೀ ದಿವಾಕರರಾಯರು ಪೂರ್ಣ ಏಳು ತಿಂ ಗಳ ಶಿಕ್ಷೆ ಅನುಭವಿಸಿ, ನವೆಂಬರ ತಿಂಗಳ ೭ನೆ ಯ ತಾರೀಖಿನ ದಿವಸ ಬಂಧಮುಕ್ತರಾಗುವರೆಂದು ನಿನ್ನೆ ಸಾಯಂಕಾಲದಲ್ಲಿ ಬಂದ ವರ್ತಮಾನವಾಗಿ ;

ಡಾ. ಹುಯಿಲಗೋಳರ ಮೇಲೆ ಮತ್ತೊಂದು ವಾರಂಟು.

(ನಿನ್ನೆಯ ವಾರಪತ್ರಿಕೆ)

ಗದಗಿನ ಸುಪ್ರಸಿದ್ಧ ಡಾಕ್ಟರರಾದ ವೆಂಕಟ ರಾವ ಹುಯಿಲಗೋಳ ಇವರ ಮೇಲೆ ೧೮೮೩ ನೇ ಸಿ ಕೋ ಪ್ರಕಾರ ಮತ್ತೊಂದು ವಾರಂಟು ಹೊ ರಟಿರುತ್ತದೆ. ಅವರು ಸದ್ಯಕ್ಕೆ ಹಿಂಡಲಗಿ ಜೇಲಿ ನಲ್ಲಿ ೫ ವಾರಗಳ ಶಿಕ್ಷೆಯನ್ನು ಅನುಭವಿಸುತ್ತಲಿ ರುತ್ತಾರೆ.

ಕಾರವಾರ ಜಿಲ್ಲೆಯೊಳಗಿನ ಎಲ್ಲಾಪೂ ರ ತಾಲೂಕಿನೊಳಗಿನ ಹದಿನೇಳು ಜನ ಪಾಟೀಲರು ರಾಜೀನಾಮೆ ಕೊಟ್ಟಿರುವರು. ಇನ್ನೂ ಅನೇಕ ರು ಕೊಡಲಿರುವರು. ಜಂಗಲ ಸತ್ಯಾಗ್ರಹವು ಜೋ ರಿನಿಂದ ಸಾಗಿದೆ.

ಬೆಳಗಾವ ಜಿಲ್ಲಾ ಮುನವಳ್ಳಿ ಗ್ರಾಮದಲ್ಲಿ ಹತ್ತು ಜನ ಕುರುಬರನ್ನು ಹುಲಿಬನ್ನಿ ಕೊಡಲು ನಿ ರಾಕರಿಸಿದ್ದಕ್ಕಾಗಿ ಹಿಡಿದಿರುವರು. ಅವರಲ್ಲಿ ೭೦ ವಕುಷದ ಮುದುಕರೂ ಇರುವರು. ಅವರ ಬ ಟ್ಟೇದ ಮುಡ್ಡತು ಬೈಲಹೊಂಗಲ ಕೋರ್ಟಿನ್ನಿ ಇ ದೇ ಜಿಲ್ಲೆ ಅದೆ.

ಡಾ. ಕಬ್ಬುರವರ ಮೇಲೆ ನೋಟೀಸು

ಕಾರವಾರ ಜಿಲ್ಲಾ ಶಿರಸಿ ತಾಲೂಕಿನಲ್ಲಿ ಸ ತ್ಯಾಗ್ರಹ ಕಾರ್ಯಮಾಡುತ್ತಲಿದ್ದ ಧಾರವಾಡದ ಡಾ. ಕಬ್ಬುರ ನಾರಾಯಣರಾಯರು ಮತ್ತು ಶ್ರೀ. ವಂಬೇಡಿ ಮತ್ತು ೫ ಜನ ಸತ್ಯಾಗ್ರಹಿಗಳ ಮೇಲೆ ಡಿ. ಪೋ. ಆಕ್ಟ ಪ್ರಕಾರ ೨೪ ತಾಸಿನಲ್ಲಿ ಸ್ಥಳಾಂ ತರವಾಗಬೇಕೆಂದು ನೋಟೀಸು ಬಜಾಯಿಸಿರುತ್ತಾ ರೆ ಶ್ರೀ. ವಂಬೇಡಿ ಮತ್ತು ಇಬ್ಬರು ಸತ್ಯಾಗ್ರಹಿ ಗಳನ್ನು ಈಗಾಗಲೇ ಹಿಡಿದಿರುತ್ತಾರೆ.

ಶ್ರೀ. ಹಣಮಂತರಾವ ಕೌಜಲಗಿ ಯವರನ್ನು ಹಿಡಿದರು.

ಹೋದ ತಾ|| ೧೧-೧೨-೧೦ನೇ ದಿವಸ ಶ್ರೀ. ಹಣಮಂತರಾವ ಕೌಜಲಗಿಯವರನ್ನು ಬೆಳಗಾವ ಜಿ ಲ್ಲಾ ಖಾನಾಪುರದಲ್ಲಿ ಭಾಷಣ ಮಾಡಿದ ಬಗ್ಗೆ ೧೮೮ ಕಲಮಿನ ಪ್ರಕಾರ ಪುನೆಯಲ್ಲಿ ಹಿಡಿದಿರುವರು.

ಶಿಗ್ಗಾವಿಯಲ್ಲಿ ದರಬಾರು.

ಧಾರವಾಡದ ಕಲೆಕ್ಟರಸಾಹೇಬರು ೧೧ ನೇ ತಾರೀಖಿನ ದಿವಸ ದರಬಾರು ನಡೆಸಿದರು. ಅದು ಯಶಸ್ವಿಯಾಗುವದಕ್ಕಾಗಿ ಸರಕಾರೀ ಅಮಲದಾರ ರು ಸುತ್ತಲಿಗೆ ದರಬಾರಿಗೆ ಬಂದೇಕೆಂದು ಒತ್ತಾಯ ಪಡಿಸುತ್ತಲಿದ್ದರು. ಕೆಲವು ಕಡೆಗೆ ವತನದಾರರ ವತನಗಳನ್ನು, ಹಂಚಾರಕ್ಕೆ ಬಾಗದಿದ್ದಲ್ಲಿ, ಕಿತ್ತು ಹಾಕುವೆವೆಂದು ಬೆದರಿಕೆ ಹಾಕಿದ್ದರು. ಕಾಂಗ್ರೇಸಸ್ಥ ಘುಂಟೇವಳರು ದರಬಾರ ಬಾಗಿಲಿಗೆ ಪಿಕೆಟಿಂಗ ಮಾ

, ರಾಷ್ಟ್ರೀಯ ನಿಶಾನೆಯನ್ನು ಕೆತ್ತಿ ಹಾಕಿ ತಿ ನೇರನ್ನು ಹಿಡಕೊಂಡು ಹೋದರು.

ಲಾಹೋರಿನಲ್ಲಿ ಪೋಲಿಸರು ವಂದೇ ಮಾತರ ಮುದ್ರಾಲಯಕ್ಕೆ ಹೋಗಿ, ಅಲ್ಲಿದ್ದ ಭಗತಸಿಂ ಮತ್ತು ಬೇರೆ ಒಳಸಂಚುಗಾರರ ಭಾವಪಠಗಳನ್ನು ಜಪ್ತ ಮಾಡಿಕೊಂಡು ಹೋದರು.

ವಂದೇ ಮಾತರಂ

——(೦)——

ಬಹಿಷ್ಕಾರದ ಕೋಲಾಹಲವು

——(೨)——

ಇತ್ತಲಾಗಿ ವೈಷ್ಣವ ಬ್ರಾಹ್ಮಣರಲ್ಲಿ ಅಂದರೆ ಶ್ರೀ ಮಧ್ವಮತದ ಅನುಯಾಯಿಗಳಲ್ಲಿ ಬಹಿಷ್ಕಾರದ ಕೋಲಾಹಲವು ಒಳ್ಳೇ ರಭಸದಿಂದ ನಡೆದಿದೆ. ಈ ಬಹಿಷ್ಕಾರದ ಕೋಲಾಹಲವನ್ನು ಎಬ್ಬಿಸುವವರಿಗೆ ವೈಷ್ಣವ ಸಮಾಜದಲ್ಲಿ ಯಾರೂ ಹೇಳುವವರು ಮತ್ತು ಕೇಳುವವರು ಇಲ್ಲವೆಂದು ವ್ಯಾಪ್ತವಾಗಿ ಕಂಡು ಬರುತ್ತದೆ. ಧರ್ಮಾಧರ್ಮ ವಿಚಾರಣೆಯೂ, ಆಚಾರ ವಿಚಾರ ಪ್ರಶ್ನೆಯೂ ಮಾನಾಪಮಾನಗಳ ಪ್ರಶ್ನೆ ಸೃಷ್ಟಿಯೂ ಕೇವಲ ಈ ಕೆಲವು ವೈಷ್ಣವರ ಹಸ್ತದಲ್ಲಿ ಶಿಲುಕಿದಂತೆ ಕಾಣುತ್ತದೆ. ಅವರ ಇಚ್ಛೆಯೇ ಅವರ ಆಡಳಿತಿಯಾಗಿದೆ. ಇರಲಿ.

ಇದನ್ನು ಸಂಪೂರ್ಣವಾಗಿ ನಾಶಗೊಳಿಸುವವರ ಸಲುವಾಗಿ ಒಂದು ವೈಷ್ಣವ ಸದ್ಗೃಹಸ್ಥರ ಸಂಘವು ಅತ್ಯವಶ್ಯಕವಾಗಿ ಬೇಕೆಂದು ಹೇಳುವ ಕಾರಣವಿಲ್ಲ. ಇಲ್ಲದೆ ಹೋದರೆ ವೈಷ್ಣವ ಸಮಾಜದಲ್ಲಿ ವಿಪರೀತ ವಿಚಾರ ತರಂಗಗಳು ಉದ್ಭವಿಸಿ ಕೇವಲ ಅನರ್ಥಕ್ಕೆ ಕಾರಣವಾಗುವದು ಸಹಜವು. ಅದರಲ್ಲಿ ವೈಷ್ಣವ ತರುಣರ ಮನಸ್ಸಿನಲ್ಲಿದ್ದ ಅಲ್ಪ ಸ್ವಲ್ಪ ಧರ್ಮ ಶ್ರದ್ಧೆಯು ಹಾರಿ ಹೋಗಿ ಮತದ ವಿರುದ್ಧ ವಿಚಾರಗಳು ಪ್ರಚಾರದಲ್ಲಿ ಬಿಳದೇ ಬರುವವು.

ವಿದ್ಯೋಪಾರ್ಜನೆಯ ಸಲುವಾಗಿ ಇಂಗ್ಲಂಡ ಮತ್ತು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ ಮರಳಿ ಬಂದ ಜನರ ಕೂಡ ಒಳಿಕೆ ಇಲ್ಲವಂತೆ. ಅವರ ಸಂಗಡ ತಿಂಡಿ ಊಟಗಳನ್ನು ಮಾಡಕೂಡದಂತೆ. ಅವರಿಗೆ ವಂದನೆಗಳೂ ಸಹ ವರ್ಜವಂತೆ; ಎಷ್ಟೋ ಸ್ನೇಹಿತರು ಅಪ್ಪರು ಇಂಗ್ಲಂಡಕ್ಕೆ ಹೋಗಿ ಬಂದಿರುವರು. ಅವರ ಸಂಗಡ ನಾವು ಬಳಿಕೆಯನ್ನು ಮಾಡಬಾರದೋ? ಅವರು ಮಾಡಿದಂಥ ಘೋರ ಪಾತಕವು ಯಾವದು? ಇಂಥ ಜನರ ಸಂಗಡ ಬಳಿಕೆಯನ್ನು ಮಾಡಿದವರ ಕೂಡ ಬಳಿಕೆಯನ್ನು ಮಾಡಿದರೆ ಬಹಿಷ್ಕಾರವಂತೆ. ಇದೆಲ್ಲಿಯ ಧರ್ಮ! ಇದೆಲ್ಲಿಯ ನೀತಿ!!

ಮತ ಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯತೆಯು ವಿಷಯುವಾಗಿ ಹೋಗಾಡುವದಕ್ಕೆ ಈ ತರದ ಬೆದರಿಗುಂಡಿಗೆ ಯಾರು ಅಂಜುವರು?

ನಮ್ಮ ಸ್ನೇಹಿತರ ಮತ್ತು ಅಪ್ತಇಷ್ಟರ ವಿಷಯವಾಗಿ ಇದ್ದ ಗೌರವವೂ, ಆದರವೂ, ಪ್ರೀತಿಯೂ ಹೊರಟು ಹೋಗಿ ಅವರೊಂದು ದ್ವೀಪದಲ್ಲಿ ನಾವೊಂದು ದ್ವೀಪದಲ್ಲಿರುವ ಪ್ರಸಂಗವು ಬರಬಹುದು.

ಈ ಬಹಿಷ್ಕಾರದ ಬೆದರ ಬೆಟ್ಟಕ್ಕೆ ಎಳ್ಳಷ್ಟಾದರೂ ಹೆದರದೆ ನಮ್ಮ ಸ್ನೇಹಪಾತ್ರಗಳನ್ನು ಹರಿದುಕೊಳ್ಳಲಿಕ್ಕೆ ನಾವು ಸಿದ್ಧರಿಲ್ಲ.

ಮೇಲ್ಕಾಣಿಸಿದ ವಿಷಯಗಳ ಪೂರ್ಣ ವಿಚಾರವಾಗಬೇಕೆಂಬುವದರ ಸಲುವಾಗಿ ಒಂದು ಪ್ರಬಲ ವೈಷ್ಣವ ಸದ್ಗೃಹಸ್ಥರ ಕಮೀಟಿಯು ಬೇಕು.

ಆದಕಾರಣ ವೈಷ್ಣವ ಸಮಾಜದ ಸಭಿಗೂ ಹಿಸುವದು ಅವಶ್ಯವಿದೆ. ಈ ತರದ ಅಭಿಪ್ರಾಯಕ್ಕೆ ಬಳಪಟ್ಟ ಎಲ್ಲ ವೈಷ್ಣವ ಗೃಹಸ್ಥರೂ ಆಚಾರ್ಯರೂ ಚಟ್ಟನೆ ಕೆಳಗೆ ಸಹಿ ಕೊಟ್ಟವರ ಕಡೆಗೆ ಪತ್ರದ್ವಾರದಿಂದ ತಿಳಿಸಿದರೆ ಅವರು ಎಲ್ಲ ಏರ್ಪಾಟುಗಳನ್ನು ಮಾಡುವರು.

ಸಾಧ್ಯ ಕೇರಿ
ಧಾರವಾಡ

ತಮ್ಮ ಸೇವಕ
ಮಧ್ವರಾವ ಶ್ರೀನಿವಾಸರಾವ
ಕಮಲಾಪೂರ.

ನೋಟಿಸು

ಚ॥ ರಾ॥ ಬಸಯ್ಯಾ ತಂದಿ ಗುರಲಿಂಗಯ್ಯಾ ಗೆದ್ದಿಗಿಯ ವರ ಸಾ॥ ಕಿತ್ತೂರಿಲ್ಲಿ ಬೃಹಸ್ಪತಿವಾರದವ್ಯಾಟಿ ಯವರಿಗೆ-

ಕೆಳಗೆ ಸಹಿ ಮಾಡಿದವರು ಈ ನೋಟಿಸಿನಿಂದ ತಿಳಿಸೋದೇನಂದರೆ-ನೀನು ನನ್ನ ತಂಗಿಮಗನು ತಂದೆ ತೀರಿಕೊಂಡನಂತರ ನೀನು ನಿನ್ನ ಶಾಯಿ ಕೂಡಿ ನನ್ನ ಹತ್ರ ಯಿದ್ದು ಬೋಪಾನ ಅಧ್ರಿಶಾಯಿ ತೀರಿಕೊಂಡನಂತ್ರ ನಮ್ಮಲ್ಲೇ ಯಿದ್ದು ಮೊಡ್ಡವ ಆದಿ ಆಗ್ಗಿ ನಮಗೆ ನಿಮಗೆ ಮನೆಯಲ್ಲಿ ಕೂಡಿ ಬಾಂದ್ದರಿಂದ ನಿನಗೆ ಬೇರೆ ಯಿರಬೇಕಾಯಿತು ನಿನಗೆ ಉದರ ನಿರ್ವಾಹಕ್ಕೆ ಜಮೀನು ವ ಇರಲಿಕ್ಕೆ ಮನೆ ಯಾವದೂ ಇಲ್ಲದ್ದರಿಂದ ನಿನ್ನ ಹೊಲಾ, ಮನೆ ನಿಮ್ಮ ದೊಡ್ಡಪ್ಪನ ಕಬಜಾದಲ್ಲಿ ಯಿದ್ದಕಾರಣ ಅವನ ಕಡಿಂದಾ ನಿನ್ನ ಹಿಸೆ ತಗೊಂಬುವ ವರೆಗೆ ನಿನಗೆ ಯೇನೂ ಅಧಾರವಿಲ್ಲದ್ದರಿಂದ ನಾಲ್ಕು ಜನರ ಹೇಳ್ಕೇಪ್ರಕಾರ ಧಾರವಾಡ ತಾಲೂಕ ಪೈಕಿ ಕೆಸರಗೊಪ್ಪ ಜಮೀನು ೧|೫|೧೦ ೧೪ ಪುರಾವ ಇರಲಿಕ್ಕೆ ಕೊಟಬಾಗಿಯಲ್ಲಿ ಘರುವ ನನ್ನ ಎರಡನೇ ವಂದು ಮನೆ ಯೀಪ್ರಕಾರ ಖಾಲಿಕತ್ತು, ಭಕ್ಷೀಸ ಶಿರೇಕ ಕೊಟ್ಟಪ್ರಕಾರ ನೀನು ಅನುಭೋಗಿಸಹತ್ತಿದಿ ಸದ್ರಿ ಭಕ್ಷೀಸ ಪಕಕ್ಕೆ ಅಲ್ಲಾ ಅದು ನಿರಂತರ ನಡಿಯತಕ್ಕದ್ದು ಅಲ್ಲಾ ಅದ್ರೆ ನೀನು ನಿನ್ನ ಹಿಸೇದ ಮಿಳಕತ್ತು ನಿಮ್ಮ ದೊಡ್ಡಪ್ಪನ ಕಡಿಂದಾ ತಗೊಂಬುವರಿಗೆ ಭಕ್ಷಿಸ ನಡಿತಕ್ಕದ್ದು ಹೀಗೆ ನಮ್ಮ ನಿಮ್ಮ ನಡುವೆ ಸ್ಪಷ್ಟ ಕರಾರ ಆಗಿರುತ್ತದೆ ಅದ್ರೆ ನೀನು ಘತ್ತ ಮನೆ ಒಂದು ತಗೊಂಡಂತೆ ತಿಳಿತದ ಅಪ್ರಕಾರ ನನ್ನ ಮನೆ ನನ್ನ ಕಬಜಾಕ್ಕೆ ಪರತ ಬಂದಿದೆ ಅದ್ರೆ ನಿನ್ನ ಹಿಸೇದ ಹೊಲದ ಒಗ್ಗೆ ೭ ವರ್ಷ ಅದರೂ ಯೇನೂ ಇಲಾಜ ಮಾಡಲಿಲ್ಲ ನೀನು ಹೀಗೆ ಸುಮ್ಮನೆ ಕೂತು ನನ್ನ ಜಮೀನು ಮುಂಡಕೋತ ಕೂತರೆ ಅದು ನಡಿಲಿಕ್ಕಿಲ್ಲ ನೀನು ನಿನ್ನ ಹಿಸೇದ ಬಗ್ಗೆ ಇಲಾಜ ಮಾಡುವದು ಅವಶ್ಯವಿದೆ ಮುಂದೆ ಇದೇಪ್ರಕಾರ ನಡ್ಸಿಲಿಕ್ಕೆ ನನ್ನ ಕಬೂಲಿಯಿಲ್ಲಾ ಕಾರಣ ತಿಳಿಸೋದೆನಂದ್ರೆ ನೀನು ಈ ನೋಟೀಸ ಮುಟ್ಟಿದ ಲ ದಿವ್ಸದಲ್ಲಿ ನೀನು ನಿನ್ನ ಹಿಸೇದ ಬಗ್ಗೆ ಯಿಲಾಜ ಮಾಡಿದ್ದು ಖಾತ್ರಿ ಮಾಡಿ ತೊಡಬೇಕು ಯಿಲ್ಲದಿದ್ರೆ ನಾನು ನನ್ನ ಮಿಳಕತ್ತು ಪರತ ತಕ್ಕೊಳ್ಳಲಿಕ್ಕೆ ಇಲಾಜ ಮಾಡುವದೆ ಇದಲ್ಲದೆ ನೀನು ನನ್ನ ಕಡಿಯಿಂದಾ ಖುಸಿಖತ ತಗೊಂಡ ಜಮೀನು ಯೆರಡೆಯುವರಿಗೆ ಖಾಲಿ ಕೊಟ್ಟುಹೋಗಬೇಕಂತಾ ವಿಚಾರ ಮಾಡೀದಿ ಅಂತಾ ತಿಳಿತದೆ ಅಪ್ರಕಾರ ಖುಲ್ದಿ ತೊಡಲಿಕ್ಕೆ ನಿನಗೆ ಹೆಳ್ಕು ಇಲ್ಲಾ ಯಾರೂ ಖರೀದಿ ತಗೋಬಾರಂದು ಖುಲ್ದಿ ಯಾರಾದರೂ ತಗೊಂಡರೆ ಅವರು ಲುಕ್ಸಾನಕ್ಕೆ ಪಾತ್ರರಾದಾರು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲೆ ಅದೆ ತಾರೀಖ ೧೯-೧೦-೩೦

ಕೆಲ್ಲಯ್ಯಾ ಅಯ್ಯಪ್ಪಯ್ಯಾ ಜೇವಣ್ಣನವರ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಡಬಲ ಕಾಲಮಿನ ಪಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತಿಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಆಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಜಾಯಿ ಬಾಳಾಜಾಯಿ ಹೊಸಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖು ೧೬ ನೇ ಅಕ್ಟೋಬರ ೧೯೩೩ (ಸಂಚಿಕೆ ೨೩೮

ಮಾರಾಟಕ್ಕೆ ಸಿದ್ಧವಾಗಿದೆ.

೧೦೮ ಶ್ರೀ. ಸಿದ್ಧಾರೂಢಸ್ವಾಮಿಯವರ ಮೋಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೋಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾವದೂತರ ಅದೇ ಜೀ, ಶ್ರೀ. ಸಿದ್ಧಾರೂಢ ಸ್ವಾಮಿಗಳ ಕೈಫಿಯತ್ತು ಮತ್ತು ಪ್ರತಿವಾದಿ ಶ್ರೀ. ಸದಾಶಿವ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತ ವಾದಿ, ಪ್ರತಿವಾದಿ. ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಒಂದಕ್ಕೆ ಅಣ್ಣಾ ಕದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಅಷ್ಟು ಪ್ರತಿಗಳು ತೀರ ತುರುವೆನಿಸುವವು. ಆದರಿಂದ ಗ್ರಾಹಕರು ಕೂಡಲೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ಯಾ. ಪಿ. ಖರ್ಚ ಬೇರೆ ಒಂದೇಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಎಣಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ಯಾ. ಪಿ. ಯಿಂದ ರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಿಡ ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಚಟ್ಟನಲ್ಲಿ ಹಾಕಿ ಅಡಲು ಒರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮಹಾಪುರುಷರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ಪಲ್ಲಭಭಾಯಿ ಪಟೇಲ ಒಂಥುಗಳ ಇವರ ಚಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಕೋಕ ತಳ್ಳಿಗಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀದೇವಿ ಸ್ಟೋರ್ಸ್‌ವ ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಈ ಬ್ಯಾಂಕಿನ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಕೆಂಡಿಗಳು ಎಂಟು ಲಕ್ಷದ ಮೇಲುಂಟು. ಶೇಕಡಾ ಮೊದಲಾಗಿ ಬ್ಯಾಂಕಿನ ಎಲ್ಲ ವ್ಯವಹಾರ ವ್ಯವಸ್ಥೆ ಮಾಡಲ್ಪಡುವದು. ಠೇವೀಮ ಮತ್ತು ಬೇರೆ ತರದ ಠೀಣಾಟಿಗಳಿಗೆ ಬ್ಯಾಂಕಿನ ಒಳ್ಳೆ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಳಾಶಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅಂತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಬಾಗುದು. ದರವನ್ನು ಸಮಯ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಸತ್ತ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ	
೧ತಿಂಗಳಿಗೆ	ರೂ. ೧-೮-
೬ ,,	೩-೦-
೩ ,,	೪-೮-
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಧಾ ರ ವಾ ಡ ವಿ ಜ ಯ ಗ ಗ್ರ ವಾ ರ ಶ ಾ ರ ೀ ಮ ು ಗ ಲ ಸ ೇ ಳ ಿ ಸ ್ಟ ೀ ಬ ರ ರ ಾ ಯ ರ ಇ ಸ್ತಿ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಆಶ್ವೀಜ ವದ್ಯ ೮

ಲಾರ್ಡ ಆಯರ್ವಿನಸಾಹೇಬರಿಗೆ ಉತ್ತರ.

ಮನೆ ಮನೆಗೆ ಕಾಂಗ್ರೆಸ ಕಚೇರಿ.

ಹಿಂದುಸ್ಥಾನ ಸರಕಾರದವರು ಗುಜರಾಥದಲ್ಲಿಯ ಕಾಂಗ್ರೆಸ ಕಮಿಟಿ, ಆಶ್ರಮ, ಛಾವಣಿ ಕಾಂಗ್ರೆಸದ ಹೆಸರಿನಿಂದಿರುವ ಯಾವದೇ ಸಂಸ್ಥೆಯು ಬೇಕಾಯದೆಹೀರವಿರುತ್ತದೆಂದು ಜಾಹೀರನಾಮೆ ಹಚ್ಚಿ, ಅವುಗಳ ಜಪ್ತಿ ಮತ್ತು ಝಡತಿಯನ್ನು ಪ್ರಾರಂಭಿಸಿದ್ದಕ್ಕೆ ಕಾಂಗ್ರೆಸದವರು ಎದೆಗುಂದಿಲ್ಲ. ಅವರು ಪ್ರತೀಕಾರಕ್ಕೆ ಮತ್ತಿಷ್ಟು ಹೆಚ್ಚಿಗೆ ಪ್ರತೀಕಾರ ಮಾಡಬೇಕೆಂಬ ನಿಶ್ಚಯ ಮಾಡಿದ್ದಾರೆ. ಉಪ್ಪಿನ ಕಾಯದೆಭಂಗ ಪ್ರಾರಂಭವಾಗಿ ಆರು ತಿಂಗಳಾಯಿತು. ಈ ಕಾಲದಲ್ಲಿ ಹಿಂದುಸ್ಥಾನದ ಸ್ನೇಹಿತರೆಂದೆನಿಸಿಕೊಳ್ಳುತ್ತಿರುವ ಲಾರ್ಡ ಆಯರ್ವಿನಸಾಹೇಬರು ಒಂಭತ್ತು ದಬ್ಬಾಳಿಕೆಯ ಬಾದಶಾಹಿ ಹುಕುಮುಗಳನ್ನು ತೆಗೆದರು; ಇವರ ಚೀಲದಲ್ಲಿ ಇನ್ನೂ ಎಷ್ಟು ಇಂಥ ರತ್ನಗಳುಂಟೋ ದೇವರೇ ಬಲ್ಲ! ಒಟ್ಟಿನಿಂದ ಹೇಳಬೇಕೆಂದರೆ- ಸರಕಾರದವರು ಆರ್ಡಿನನ್ಸದ ಹೆದರಿಕೆಯಿಂದ ಬೇಕಾದಷ್ಟು ಹುಕುಮುಗಳನ್ನು ತೆಗೆಯಲಿ; ಅವಕ್ಕೆ ಕಾಂಗ್ರೆಸದವರು ಸೊಪ್ಪು ಹಾಕುವದಿಲ್ಲೆಂಬದು ಮಾತ್ರ ಖಂಡಿತವಾದದ್ದು. ಕಾಂಗ್ರೆಸದವರು ಸ್ವರಾಜ್ಯ ದೊರೆಯುವತನಕ ಪ್ರತಿಯೊಂದು ರೀತಿಯಿಂದ ಸರಕಾರಕ್ಕೆ ತೊಂದರೆ- ತಾಪ ಕೊಡಬೇಕೆಂದು ವೀರಪ್ರತಿಜ್ಞೆ ಮಾಡಿದ್ದು, ಆ ಪ್ರತಿಜ್ಞೆಯ ಸಿದ್ಧಿಗಾಗಿ ಅನಂತಾನಂತ ಕಷ್ಟ ನಷ್ಟಗಳನ್ನು ಸಹಿಸಲು ಸಿದ್ಧರಾಗಿದ್ದಾರೆ. ಕಂದಾಯ ಕೊಡದಂಥ ರೈತರ ಹೊಲಗಳನ್ನು ಜಪ್ತ ಮಾಡುವೆವು. ಜಪ್ತ ಮಾಡಿದ ಹೊಲಗಳನ್ನು ಯಾವ ಕಾರಣದಿಂದಲೂ ತಿರಿಗಿ ಕೊಡಲಾರೆವೆಂದು ಮುಂಬಯಿ ಸರಕಾರದವರು ಜಾಹೀರ ಮಾಡಿದ್ದಾರೆ. ಸರಕಾರದ ಕೂಡ ಧಾಜೆಯಾಗುವಾಗ- ಕಾಂಗ್ರೆಸದ ಜಳವಳಿಯಲ್ಲಿ ಸೇರಿದ ಯಾರಾರು ಎಂಥೆಂಥ ಹಾನಿ ಹೊಂದಿರುತ್ತಾರೆ; ಅವರೆಲ್ಲರ ನಷ್ಟಗಳನ್ನು ತುಂಬಿ ಕೊಡಬೇಕೆಂದು ವಕೀಲರು ಆಮಂತ್ರಿಸುವಾಗಿ ಸರ ಸವು, ಬ್ಯಾರಿಸ್ಟರ ಜಯಕರರ ನಿಧ್ಯಮಾನ ಲಾರ್ಡ ಆಯರ್ವಿನಸಾಹೇಬರಿಗೆ ತಿಳಿಸಿದ್ದು, ಆ ಪ್ರಕಾರ ಜನರ ಹಾನಿಯನ್ನು ತುಂಬಿ ಕೊಟ್ಟರೆ ಕಾಂಗ್ರೆಸದವರು ರಾಜಿಯಾಗುವರೆಂಬ ವಿಶ್ವಾಸದಿಂದ ಪಳ್ಳಿ ಪಟ್ಟಣದವರು ಜಳವಳಿಯಲ್ಲಿ ಭಾಗತಕ್ಕೊಂಡು, ಅದಕ್ಕಾಗಿ ಸ್ವಾರ್ಥತ್ಯಾಗ ಮಾಡುತ್ತಲಿದ್ದಾರೆ. ಲಾರ್ಡ ಆಯರ್ವಿನಸಾಹೇಬರು ಕಾಂಗ್ರೆಸದ ಛಾವಣಿಗಳನ್ನೂ ಮನೆಗಳನ್ನೂ ಜಪ್ತ ಮಾಡಬೇಕೆಂದು ತೆಗೆದ ಹುಕುಮು ತೀರ ನಿರರ್ಥಕವಾಯಿತೆಂದೆನಿಸುವಂತೆ, ಗುಜರಾಥದ ರೈತರು ಮನೆಗಳನ್ನು ಬಿಟ್ಟು ಹೊಲಗಳಲ್ಲಿ ಗುಡಿಸಲು ಆಕಿಕೊಂಡು, ಅವಕ್ಕೆ ಗಾಂಧೀನಗರ, ವಿಜಯನಗರ, ನೆಹರು ನಗರವೆಂದು ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡಿದ್ದಾರೆ. ಪಟ್ಟಣವಾಸಿಗಳು ಮನೆಗೊಂದು ಕಾಂಗ್ರೆಸ ಕಚೇರಿ ಮಾಡಬೇಕೆಂದಿದ್ದಾರೆ. ಸರಕಾರದವರು ಎಷ್ಟು ಮನೆ ಜಪ್ತ ಮಾಡುವರು? ಎಷ್ಟು ಮನೆಲಿಲಾವು ಮಾಡುವರು.? ಎಷ್ಟು ಮನೆಗಳ ಸುತ್ತಲು ಪೋಲಿಸ ಕಾವಲಿಡುವರೆಂಬದನ್ನು ಒರೆಗೆ ಹಚ್ಚಬೇಕೆಂದಿದ್ದಾರೆ. ಮುಂಬಯಿಯಲ್ಲಿ ಒಬ್ಬನೇ ಮಾಲೀಕನ ಸರಕಾರದಲ್ಲಿ ನೂರಿನ್ನೂರು ಒಕ್ಕಲುಗಳುಂಟು. ಇವರನ್ನು ಸ್ವತಃ ಮಾಲೀಕರೇ ಬಿಡಿಸಲಾರರು. ವತನದಾರರಂತಿರುವರು. ಒಂದೊಂದು ಜಾಳಿನಲ್ಲಿ ಒಂದೊಂದು ಕೋಣೆಯನ್ನು ಕಾಂಗ್ರೆಸ ಕಚೇರಿ ಮಾಡಿದರೂ, ಸರಕಾರದವರು ಹತ್ತಿಪ್ಪತ್ತು ಸಾವಿರ ಜಪ್ತಿ, ಲಕ್ಷ ಸಂಖ್ಯೆಯಿಂದ ಪೋಲಿಸ ಬಂದೋಬಸ್ತು ಇಡಬೇಕಾಗುವದು. ಉಪ್ಪಿನ ಕಾಯದೆ, ಜಂಗಲ ಕಾಯ್ದೆ, ಅಬಕಾರಿ ಕಾಯದೆ ಮುರಿದ ಒಗ್ಗ ಮುರಿದಂಥ ಅಕಾವಧಿ ಜನರನ್ನು ಹಿಡಿಯದೆ ಮುಖಂಡರೆಂದು ಕೈಬೆರಳಿನಿಂದೆಣಿಸುವಷ್ಟು ಜನರನ್ನು ಹಿಡಿದು ತುರಂಗಕ್ಕೆ ಹಾಕಿದಂತೆ, ಇನ್ನೆಯ ದಬ್ಬಾಳಿಕೆಯಲ್ಲಿಯೂ ಕೆಲ ಮನೆಗಳನ್ನು, ಪರಾರಗಳನ್ನೂ ಜಪ್ತ ಮಾಡಬಹುದು. ಉಳಿದಂಗೆ ಊರೇ, ದೇಶಕ್ಕೆ ದೇಶವನ್ನೇ ಜಪ್ತ ಮಾಡಲಾರರು. ಹೀಗೆ ಸರಕಾರದ ಉದ್ದೇಶವೀಡೇರಲಾರದು. ಅದುದರಿಂದ ಯಾವದೊಂದು ಬಾದಶಾಹಿ ಹುಕುಮು ತೆಗೆಯುವಾಗ, ಅದು ಎಷ್ಟರಮಟ್ಟಿಗೆ ಅಮಲಿನಲ್ಲಿ ಬರುವದೆಂಬದನ್ನು ಹಿಂದಿನ ಅನುಭವದಿಂದ ಚೆನ್ನಾಗಿ ತಿಳಿದು ನೋಡಬೇಕು. ಇಲ್ಲವಾದರೆ- ನಗುವಂಥವರ ಮುಂದೆ ಎಡವಿ ಬಿದ್ದಂತಾಗುವದು.

ಅಥಣಿಯ ಶ್ರೀ. ಅಂಬಾಬಾಯಿ ಬೊಂಗಾಣಿಯವರಿಗೆ ವ್ಯಾಜಿಸ್ಟ್ರೇಟರು ಮೂರುತಿಂಗಳ ಸಶ್ರಮ ಶಿಕ್ಷೆವಿಧಿಸಿದ್ದು, ಇವರನ್ನು ವಿಜಾಪುರದ ತುರಂಗಕ್ಕೆ ಕೈದಿದ್ದಾರೆ.

ಹುಬ್ಬಳ್ಳಿಯ ಕಾಂಗ್ರೆಸ ಕಮೀಟಿಯಿಂದ ಬಂದ ಸುದ್ದಿಗಳು.

—)(o)(—

ಶ್ರೀ. ಭಗತಸಿಂಗರಿಗೆ ಗಲ್ಲಿನ ಶಿಕ್ಷೆಯಾದ್ದರ ನಿಷೇಧಕ್ಕಾಗಿ ಊರೊಳಗೆ ಕರೆ ನಿಶಾನೆಗಳೆತ್ತಿದಿಗೆ ಪ್ರಚಂಡ ಮೆರವಣಿಗೆ ಹೊರಟು, ಸಭೆಯಾಯಿತು.

ಗಣೇಶಪೇಟೆಯಲ್ಲಿ ಪಿಕೆಟಿಂಗ ಮಾಡುತ್ತಿದ್ದ ಓರ್ವ ಸತ್ಯಾಗ್ರಹಿಯನ್ನು ಗಲಂಗದ ಒಬ್ಬ ಸಾವಕಾರನು ಗಡಂಗದಲ್ಲಿ ಎಳೆದೆಂಡು ಹೋಗಿ ಕದಾರಕ್ಕೆ ಹೊಡೆದನು. ಆತನ ಸ್ತ್ರೀಯವು ಊರ ಮಂಬ ಜಳವಳಿಯನ್ನುಂಟುಮಾಡಿದೆ

ಹುಬ್ಬಳ್ಳಿಯ ಕೆಲ ಸತ್ಯಾಗ್ರಹಿಗಳು ಕುಮಟೆಯ ಮಾರ್ಗವಾಗಿ ಹೊನ್ನಾವಂಕ್ಕೆ ಹೋಗುತ್ತಿದ್ದಾಗ, ಅವ್ಮನಳ್ಳಿಯಲ್ಲಿ ಇವರನ್ನು ಕರಬಿ, ಝಡತಿಮಾಡಿ, ಇವರ ಹತ್ತಿರದ್ದ ರಾಮಾಂಕ ಟೋಪಿಯ, ಹಿಂದುಸ್ಥಾನದ ಸಾಲ, ಮುಂತಾದ ಬಿಡಿ ಪತ್ರಿಕೆಗಳನ್ನು ಜಪ್ತ ಮಾಡಿದರು.

ಶಿದ್ದಾಪೂರದಲ್ಲಿ ಶ್ರೀ. ವೆಂಕಟರಾಜ್ಯಯ್ಯನವರು ಸ್ವಯಂಬರ ತಿಂಗಳ ಒನೆಯ ಕಾಂಗ್ರೆಸ ದಿವಸ ಹಿಡಿದು, ಲಾಕಪ್ಪಿನಲ್ಲಿಟ್ಟಿದ್ದಾರೆ. ಆದರೂ ಅವರ ವಿಚಾರಣೆಯಿಲ್ಲ. ಇವರ ನಂತರ ಹಿಡಿಯಲ್ಪಟ್ಟವರು ಶಿಕ್ಷ ಪೊಂದಿ, ಶಿಕ್ಷೆಯ ಎಷ್ಟೋ ಭಾಗ ಅನುಭವಿಸಿದರು. ಇವರ ಮಟ್ಟಿಗೇಕೆ ಉಪೇಕ್ಷೆ?

ಬ್ರಾಹ್ಮಣೇತರರು ರಾವಂಡ ಟೇಬಲನ್ನು ನಿಷೇಧಿಸಿದರು.

—(o)—

ಮುಂಬಯಿಯಲ್ಲಿ ಬ್ರಾಹ್ಮಣೇತರರು ಡಿಸೆಂಬರ ಟಿಯಲ್ಲಿ ಸಭೆಮಾಡಿ, ರಾವುಂಡ ಟೇಬಲ ಮತ್ತು ಅದಕ್ಕೆ ಹೋಗುವ ಹೆಲಿಗೇಟರ ಕೃತ್ಯವನ್ನು ನಿಷೇಧಿಸಿದರು. ಇದೇ ಪ್ರಕಾರ ಭಗತಸಿಂಗ ಮೊದಲಾದವರಿಗಾದ ಶಿಕ್ಷೆಯನ್ನೂ ನಿಷೇಧಿಸಿದರು. ಎಂ. ಡೊಂಗರೆಯವರು ಅಧ್ಯಕ್ಷರಾಗಿದ್ದರು.

ಸಹಕಾರ ಅಥವಾ ಸರಕಾರ ಪಕ್ಷದ ಬ್ರಾಹ್ಮಣೇತರರಲ್ಲಿ ದಿನಕ್ಕಿಂತ ದಿನಕ್ಕೆ ಹೆಚ್ಚಿಚ್ಚಾಗಿ ವೈಮನಸ್ಸು ಬೆಳೆಯುತ್ತಿದ್ದು, ನಡೆದಿದ್ದು, ಇವರ ಪರಸ್ಪರ ಕಲಹದ ಮೂಲಕ ಬ್ರಾಹ್ಮಣೇತರ ಪಕ್ಷಕ್ಕೆ ದಿವಾಳಿಗಿರಿಯನ್ನು ದೊರೆಯುವದು ಅಸಂಭವ ಮತ್ತು ಅಶಕ್ಯವಾಗುತ್ತಾ ನಡೆದಿದೆಂದು ಇಂಗ್ರೇಜಿ ಪತ್ರಗಳು ಪ್ರಸ್ತಾಪಿಸತೊಡಗಿವೆ.

ಮೂಲಜಿ ಬೇಕಾ ಮಾರ್ಕೆಟಿನಲ್ಲಿ ಪಿಕೆಟಿಂಗ.

ಸ್ವಯಂಶೇವಕರು ಉಪವಾಸ ಬೀಳುವರು.

—)(—(೦)—)(—

ಮುಂಬಯಿಯಲ್ಲಿ ಪರದೇಶೀ ಜವಳಿಯ ಕೋಟಿ ಸಂಖ್ಯೆಯಿಂದ ಬಿದ್ದಿದೆ. ನಾಲ್ಕು ತಿಂಗಳಾಯಿತು. ಅದಕ್ಕೆ ಕೀಡಿ ಹಚ್ಚಿತ್ತಲಿದೆ. ಬೀದಿಗೆ ಬಂತು; ಈ ಸಮಯದಲ್ಲಿ ಸಿಕಿದ್ದ ಒಟ್ಟಿಗಳನ್ನು ಹಾರಬೇಕೆಂದು ಮೂಲಜಿ ಬೇಕಾ ಮಾರ್ಕೆಟಿನವರು ನಿಶ್ಚಯಿಸಿ, ಆ ಪ್ರಕಾರ ಇಂದಿನಿಂದ ಅಂಗಡಿಗಳನ್ನು ತೆರೆಯುವರು. ಇವರ ಸಹಗು ಯಾವ ರೀತಿಯಿಂದಲೂ ಮಾರ್ಕೆಟು ಬಿಟ್ಟು ಹೊರಬೇಕಬಾರದೆಂದು ಕಾಂಗ್ರೆಸದವರು ಪಿಕೆಟಿಂಗ ಪ್ರಾರಂಭಿಸುವರು. ೨೫ ಪೇಕ್ಷ ಸ್ವಯಂಶೇವಕಿಯರು, ದೇಶಶೇವಕಿಯರು, ಹಿಂದೂಸ್ಥಾನ ಸೇವಾದಳದ ಸ್ವಯಂಶೇವಕಿಯರು ಮತ್ತು ವಾನರ ಸೇನೆಯ ಬಾಲಕರು ಪಿಕೆಟಿಂಗ ಮಾಡುವರು. ಇದನ್ನೂ ವಿರೋಧಿಸಿ, ಯಾರಾದರು ವ್ಯಾಪಾರ ಮಾಡಿದರೆ- ದಾರಿಯಲ್ಲಿ ಅಡ್ಡ ಬಿದ್ದು, ಅನ್ನ ನೀರು ವರ್ಜ ಮಾಡಿ, ಗಿರಾಕಿಗಳ ಅಂತಃಕರಣ ದ್ರವಿಸಬೇಕೆಂದಿದ್ದಾರೆ.

ಬಾರಡೋಲಿ ರೈತರ ಜಗತ್ತೇ ಬೆರಗು

ಕಚ್ಚುವಂಥ ಸ್ವಾರ್ಥತ್ಯಾಗ

ಬಾರಡೋಲಿ ರೈತರು ಸರಕಾರಕ್ಕೆ ಮುಯ್ಯುಣೆಂದು ಗ್ರಾಮತ್ಯಾಗ ಮಾಡುತ್ತಿದ್ದಾರೆ. ಇವರು ಗುಳೇ ಹೋಗುವದರಿಂದ ಪ್ರತಿಯೊಂದು ಗ್ರಾಮವು ನಿರ್ಜನವಾಗಿ ರಣಗುಟ್ಟುವದು. ಇವರ ಸ್ವಾರ್ಥತ್ಯಾಗವು ಜಗತ್ತೇ ಬೆರಗು ಕಚ್ಚುವಂತಾಗಿದೆ ಎಲ್ಲಿಯೂ ಇಂಥ ಅಸಹಕಾರವಾಗಿರಲಿಕ್ಕಿಲ್ಲ. ಹಾನಿಯ ಕೆಲ ಮುಖ್ಯ ಸಂಗತಿಗಳು

೧ ಬೆಳೆದು ನಿಂತ ಬೆಳೆಗಳನ್ನು ಬಿಟ್ಟು ಹೋಗುವದರಿಂದ ೫೦ ಲಕ್ಷ

೨ ಒಂದು ಲಕ್ಷ ೧೭ ಸಾವಿರ ಎಕರೆ ಭೂಮಿ ಬೆಲೆ ಆರು ಕೋಟಿ

೩ ಮನೆಗಳನ್ನು ಬಿಟ್ಟು ಹೋಗುವದರಿಂದಾಗುವ ಹಾನಿ ಎಂಡೂವರೆ ಕೋಟಿ

ರೈತರು ಊರು ಬಿಟ್ಟು ಹೋಗಬಾರದೆಂದು ಐದು ಹಳ್ಳಿಗಳಿಗೆ ಪೋಲಿಸರು ಮುತ್ತಿಗೆ ಹಾಕಿ, ಹೊರಗಿನವರು ಒಳಗೆ, ಒಳಗಿನವರು ಹೊರಗೆ ಹೋಗದಂತೆ ಕಾವಲಾಗಿ ನಿಂತುಕೊಂಡಿದ್ದಾರೆ.

ಲಾಲಾ ಲಜಪತರಾಯರ ಮಗಳ ದಸ್ತಗಿರಿ.

—(೦)—

ಲಾಹೋರಿನಲ್ಲಿ ಪೋಲೀಸರು ಲಾಲಾ ಲಜಪತರಾಯರ ಚಿರಂಜೀವಿ ಕುಮಾರಿ ಪಾರ್ವತಿ ದೇವಿಯವರನ್ನು ರಾಜದ್ರೋಹದ ಆರೋಪದಿಂದ ದಸ್ತಗಿರ ಮಾಡಿದರು. ಹಿಡಿಯುವಾಗ ಲಜಪತರಾಯರ ಭವನದ ನೆರೆಯಲ್ಲಿ ಬಹಳ ಬಂದೋಬಸ್ತ ಇಟ್ಟಿದ್ದರು.

ಮಹಾಕೂಟ ಮತ್ತು ಪಟವಳ್ಳಿನಲ್ಲಿ

ಸ್ವಾಮಿಜಿಮಹಾರಾಜರುಗಳು.

—(೦)—

ಮಹಾಕೂಟ ಗ್ರಾಮದಲ್ಲಿರುವ ದೇವಾಲಯದಲ್ಲಿರುವ ಹೊಂಡವು ಹೋದ ಆಚೆ ಸೋಮವಾರ ದಿವಸ ಹತ್ತು- ಹದಿನೈದು ಮಿನಿಟಿಗಳ ತನಕ ಉತ್ಕೇರಿತು ಅದೇ ಪ್ರಕಾರ ಮರುದಿವಸ ೨೦-೩ ಮಿನಿಟಿನ ತನಕ ಉತ್ಕೇರಿತು.

ಹಳೇ ರಾಜಧಾನಿಯಾಗಿದ್ದ ಪಟವಳ್ಳಿನಲ್ಲಿರುವ ಶ್ರೀ. ಒಡೆಶ್ವರ ದೇವಾಲಯದಲ್ಲಿರುವ ದೀಪಮಾಲೆಯ ಕಂಬವು ಇದೇ ತಿಂಗಳ ೧೧ನೆಯ ತಾರೀಖಿನಿಂದ ೮ನೆಯ ತಾರೀಖಿನ ತನಕ ಎಂಟು ದಿವಸಗಳ ತನಕ ಅಹೋರಾತ್ರಿ ಒಂದೇ ಸಮನೆ ಕೂಗುತ್ತಿತ್ತು.

ರಾಜ್ಯಕ್ರಾಂತಿ ಪತ್ರಿಕೆಗಳ ಪ್ರಸಾರ.

—(೦)—

ಅಪವಾದಾಜಾನಿನಲ್ಲಿ ಊರ ತುಂಬ ರಾಜ್ಯಕ್ರಾಂತಿಕಾರಕ ಕುಪ್ತಪತ್ರಿಕೆಗಳನ್ನು ಹಂಚಿದ್ದಾರೆ, ಕೆಲವನ್ನು ಬಿಸ್ಕಿಟ ಗೋಡೆಗೆ ಅಂಟಿಸಿದ್ದಾರೆ. ಮಹಾತ್ಮಾ ಗಾಂಧಿಯವರ ಅಹಿಂಸೆಯ ಅಸಹಕಾರವು ಸಾಕು. ಅವರ ತತ್ವ ಬಿಟ್ಟು, ಭಗತಸಿಂಗನ ಕ್ರಾಂತಿಕಾರಕ ತತ್ವ ಹಿಡಿದು, ಯುರೋಪಿಯನ್ನರ ಕೊಲೆ ಮಾಡಿರೆಂದು ಇದರಲ್ಲಿ ಬರೆದಿರುತ್ತದೆ.

ಗಾಂಧೀ ತತ್ವವೇ ಮೇಲು!

— (೦) —

ಮುಂಬಯಿಯಲ್ಲಿ ಶ್ರೀ ಸೇನಗುಪ್ತರ ಭಾಷಣವಾಯಿತು. ಅವರು ಹಿಂಸೆ ಮತ್ತು ಅಹಿಂಸೆಯ ಬಗ್ಗೆ ವಿಚಾರ ಮಾಡಿ, ಅಹಿಂಸೆಯ ತತ್ವದಿಂದಲೇ ಹಿಂದುಸ್ಥಾನಕ್ಕೆ ಜಯವೆಂದೂ. ಈ ತತ್ವ ಬಿಟ್ಟ ಹಿಂಸೆಗೆ ಪ್ರವೃತ್ತರಾದರೆ- ಹಿಂದುಸ್ಥಾನವು ಮುಂದೆ ತಲೆ ಎತ್ತಬೇಕಾದರೆ- ೫೦ ವರ್ಷಗಳು ಬೇಕಾಗುವವೆಂದೂ ಅಭಿಪ್ರಾಯಪಟ್ಟಿರುತ್ತಾರೆ.

ರಾಣೇಬಿನ್ನೂರಿನ ಶ್ರೀ ರಂಗಪ್ಪನಾಯಿಕರ

ಮೇಲೆ

ಭಾಷಣ ಬಂದೀ ನೋಟೀಸು

—(೦)—

ರಾಣೇಬಿನ್ನೂರಿನಲ್ಲಿ ದೇಶಭಕ್ತ ರಂಗಪ್ಪನಾಯಿಕರವರು ಈಗಿರೆಗೆ ಕಾಂಗ್ರೆಸ ಕಾರ್ಯವನ್ನು ಉತ್ಸಾಹಶಕ್ತಿಯಿಂದ ಮಾಡುತ್ತಾ ಬಂದಿದ್ದಾರೆ. ಇವರು ಹಳ್ಳಿಗಳಿಗೆ ಹೋಗಿ, ಲೋಕಜಾಗೃತಿ ಮಾಡುತ್ತಿದ್ದಾರೆ ಇಂಥ ದೇಶಭಕ್ತರ ಮೇಲೆ ಭಾಷಣ ಬಂದಿಯ ನೋಟೀಸು ಆಗಿದ್ದು, ಅವರು ಅದನ್ನು ಮುರಿದು, ದೇಶಕಾರ್ಯಕ್ಕಾಗಿ ಆತ್ಮಬಲಿ ಮಾಡಲು ಸಿದ್ಧರಾಗಿದ್ದಾರೆ.

ಸ್ವದೇಶಿ ಸಪ್ತಾಹ.

ಧಾರವಾಡ ಜಿಲ್ಲೆಯಲ್ಲಿ ಅನೇಕ ಊರುಗಳಲ್ಲಿ ಸ್ವದೇಶಿ ಸಪ್ತಾಹ ನಡೆದಿದೆ. ಧಾರವಾಡದಲ್ಲಿ ದಿನಾಲು ಒಂದಿಲ್ಲೊಂದು ಬೀದಿಯಲ್ಲಿ ನಾಡಗುಡಿಯ ಮೆರವಣಿಗೆ ಸಾಗುವದು. ಊರಲ್ಲಿ ಮನೆ ಮನೆಗೆ ಖಾದೀ ಮಾರುವರು. ಹಗಲು ರಾತ್ರಿ, ರಾಟೇ ತಿರುವುವರು. ಚಹಾದ ಅಂಗಡಿಯವರು ಚಹಾ ಮಾರತಕ್ಕದ್ದಲ್ಲೆಂದು ನಿಶ್ಚಯ ಮಾಡಿದ್ದಾರೆ. ಗದಗಿನಲ್ಲಿಯೂ ಗ್ರೇನ ಮಾರ್ಕೆಟಿನಲ್ಲಿರುವ ಕಿರಾಣಿ ಅಂಗಡಿಯವರು ಚಹಾ ಮತ್ತು ಜಾನಸನ್ನ ಸಕ್ಕರೆ ಮಾರಬಾರದೆಂದೂ, ಉಳಿದ ಬ್ರಾಹ್ಮಣರು ಚಹಾ ಮಾರತಕ್ಕದ್ದಲ್ಲೆಂದೂ ಗೊತ್ತು ಮಾಡಿದ್ದಾರೆ. ಉಳಿದವರೂ ಮಾರಬಾರದೆಂಬ ಪ್ರಯತ್ನ ನಡೆದಿದೆ.

ಮುಂಬಯಿಯಲ್ಲಿ ಶುಕ್ರವಾರ ರಾತ್ರಿ ಯುರೋಪಿಯನ ದಂಪತಿಗಳ ಮೇಲೆ ರಿವ್ಹಾಲ್ಲರ ಹಾರಿಸಲ್ಪಟ್ಟು, ಅವರು ತುಸು ಘಾಯಮಾಗಿದ್ದಾರೆ. ಸಂಶಯದಿಂದ ೧೫ ಜನರನ್ನು ಹಿಡಿದಿದ್ದು, ಇವರಲ್ಲಿ ಕನ್ನಡಿಗರೇ ಬಹಳ ಜನರಾಗಿದ್ದಾರೆ ಪ್ರಾಧ್ಯಾಪಕ ಕೊಪ್ಪಿಕರ, ಪುಕಳಿ ಬಂಧುಗಳು, ಎಮ್. ಆರ್. ಶೆಟ್ಟಿ ಮತ್ತು ಶ್ರೀ ಆ ಹೋಬಲಾಚಾರ್ಯ ಎಮ್. ಎ. ಇವರು ಅವರಲ್ಲಿ ಪ್ರಮುಖರಾಗಿದ್ದಾರೆ.

ಕಾಂಗ್ರೆಸದವರನ್ನು ಬಿಟ್ಟು, ರಾವುಂಡ ಟೇಬಲಿನ ವಾದ ವಿವಾದವೆಂದರೆ- ಹ್ಯಾಮಲೆಟ್ಟನ್ನು ಬಿಟ್ಟು ಹ್ಯಾಮಲೆಟ್ಟ ನಾಟಕ ಮಾಡಿದಂತಾಗುತ್ತದೆಂದು ಲಂಡನದಲ್ಲಿ ಪ್ರಕಟವಾಗುವ ಆಬಜರವ್ಹರ ಎಂಬ ಪತ್ರವು ಅಭಿಪ್ರಾಯಪಟ್ಟಿರುತ್ತದೆ.

ಸುರತದ ಕಲೆಕ್ಟರ ಮತ್ತು ಪೋಲಿಸಸಾಹೇಬರು ೧೫೫ ಪೋಲಿಸರೊಂದಿಗೆ ಬಾರಡೋಲಿಗೆ ಹೋಗಿ, ಅಲ್ಲಿಯ ಕಾಂಗ್ರೆಸ ಕಚೇರಿಯನ್ನು ಜಪ್ತ ಮಾ

ಪ್ರಕಟಣೆ

—(೦)—

ವಂದೇ ಮಾತರಂ

—(೦)—

ನಾವು ಸದ್ಯಕ್ಕೆ ಕೈಕೊಂಡ ಕೆಲಸದ ವಿಷಯವಾಗಿ ನೈಷ್ಣವ ಸಮಾಜಕ್ಕೆ ಈ ಪತ್ರದ್ವಾರದಿಂದ ತಿಳಿಸಲಿಕ್ಕೆ ಇಷ್ಟೆ! ಇನ್ನು ಮೇಲೆ ತಾ ೧೯-೧೦-೩೦ ನೇ ಇಸ್ವಿ ದಿವಸ ಅಂದರೆ ಬರುವ ಆದಿತ್ಯವಾರ ದಿವಸ ಸಾಯಂಕಾಲ ೫॥ ಘಂಟೆಗೆ ಸರಿಯಾಗಿ ಪ್ರಮುಖ ವೈಷ್ಣವ ಸದ್ಗೃಹಸ್ಥರ ಸಭೆಯು ಕೂಡುವದು ಈ ಸಭೆಯ ಉದ್ದೇಶವು ಒಹಳ ವಿಶಾಲವುಳ್ಳದ್ದು ಇರುತ್ತದೆ. ಈ ಸಭೆಗೆ ಒಲಿಕ್ಕೆ ಒಪ್ಪಿಗೆಯನ್ನು ಕೊಟ್ಟವರು ದಯವಾಡಿ ಸರಿಯಾದ ವೇಳೆಗೆ ಒರಬೇಕೆಂದು ವಿನಂತಿ

ಸಭೆಯ ಸ್ಥಳವು- ಡಾ. ಕಾಂತಂ-ವ ಕಾವ ಲಾಪೂರ ಇವರ ಮನೆಯ ಅಟ್ಟದಮೇಲೆ.

ಧಾರವಾಡ. ತಮ್ಮ ಸೇವಕ

ತಾ॥೧೬-೧೦-೩೦ ವಾಧ್ವರಾವ ಶ್ರೀನಿವಾಸರಾವ

ಕಾವ ಲಾಪೂರ

ದೀವಳಿಗೆಯ ಉತ್ಸವ ಮಾಡಬಾರದು

ಶ್ರೀ ಲಕ್ಷ್ಮಿವೆಂಕಟೇಶ ಪ್ರ.

—(೦)—

ರಾಜ್ಯದ ಮೇಲೆ ಬಂದ ಸದ್ಯದ ಅಪತ್ ಪ್ರಸಂಗದಲ್ಲಿ ದೇಶದ ಪ್ರಧಾನರಿಗಳಾದ ನಮ್ಮ ಬಂಧು ಭಗಿನಿಯರು ಕಠಿಣ ಕಾರಾಗೃಹವಾಸವನ್ನು ಅನುಭೋಗಿಸುತ್ತಿದ್ದದ್ದರಿಂದ ನಾಳಿನ ದೀಪಾವಳೀ ಉತ್ಸವವನ್ನು ದಸರಾಲದಂತೆ ಬರಗಿಸದೆ ಕಳಗೆಬಿಡೆಂತೆ ನಡತೀರಬೇಕೆಂದು ವಿನಂತಿ ಅದೆ.

೧ ಲಕ್ಷ್ಮೀ ಪೂಜೆಯನ್ನೂ ಸರ್ವತೀ ಪೂಜೆಯನ್ನೂ ಹೊಸ ವಹಿಗಳ ಪೂಜೆಯನ್ನೂ ಪ್ರತಿ ತುಕ್ರವಾರದ ಪೂಜೆಯಂತೆ (ಯಾವದೇ ತರದ ಆಡಂಬರ ಮಾಡದೆ) ಮಾಡತಕ್ಕದ್ದು.

೨ ಅಂಗಡಿಗಳಿಗೆ ಸ್ವಚ್ಛತೆಯ ದೃಷ್ಟಿಯಿಂದ ಸಾಕಾಗುವಷ್ಟು ಸುಣ್ಣ, ಬಣ್ಣ, ಎಣ್ಣೆಗಳನ್ನು ಹಚ್ಚಲಿಕ್ಕೆ ಅಡ್ಡಿ ಇಲ್ಲ.

ಮನೆ ಮಾಡಬಾರದು-

೩ ಅಂಗಡಿಗಳ ಹೊರಬಾಜುವಿನಲ್ಲಿ ಮಾವಿನ ತೋರಣ ಬಾಳೆಕಂಬ ವಗೈರೆ ಅಲಂಕಾರಗಳನ್ನು ಮಾಡತಕ್ಕದ್ದಲ್ಲ.

೪ ರೋಷಣಾಯಿ, ದೀಪ, ಮದ್ದು, ಪಟಾಕಿ ವಗೈರೆ ನ್ನು ಉಪಯೋಗಿಸ

೫ ಆಮಂತ್ರಣ ಪತ್ರಗಳನ್ನು ಕಳಿಸತಕ್ಕದ್ದಲ್ಲ.

೬ ಅಕ್ಷರ ಗುಲಾಬ ಪಾನಸುಪಾರಿ ಹೊಂಗಳನ್ನು ಕೊಡತಕ್ಕದ್ದಲ್ಲ.

೭ ಬಜೆಂತ್ರಿ, ಬ್ಯಾಂಡು ವಗೈರೆ ಬಾರಿಸತಕ್ಕದ್ದಲ್ಲ.

೬ ಭಟ್ಟ, ಭಿಕ್ಷುಕರಿಗೆ ಯಾವ ತರದ ದಕ್ಷಿಣೆಯನ್ನು ಕೊಡತಕ್ಕದ್ದಲ್ಲ.

೭ ದೀಪಾವಳಿಯ ದೆಸೆಯಿಂದ ದಸರಾಲದಂತೆ ತರಿಸುವ ಹೂಮಾಲೆಗಳನ್ನು ತರಿಸತಕ್ಕದ್ದಲ್ಲ.

ಧಾರವಾಡ ಪಾಂಡುರಂಗರಾವ ಇಜಂತಕರ

ತಾ॥ ೧೫-೧೦-೩೦ ಶಂಕರಪ್ಪ ಮಿಣಜಿಗಿ

ಅಧ್ಯಕ್ಷ ವ ಉಪಾಧ್ಯಕ್ಷ

ದೀಪಾವಳೀ ಉತ್ಸವ ಪ್ರತಿಬಂಧಕ

ಕಮೀಟಿ

ನೋಟೀಸು

ಸಂಗಬಸಪ್ಪಾ ಫತ್ತೇರಪ್ಪಾ ಲಚಮಣ್ಣವರ ಸಾ॥ ಹರ್ತಿ ತಾಲೂಕ ಗದಗ ಇವರಿಗೆ

ನಾನು ಕರಬಸಪ್ಪಾ ಕೊಂ| ಸಂಗಬಸಪ್ಪಾ ಲಚಮಂಣವರ ಸಾಕೀನ ಹರ್ತಿ ತಾಲೂಕ ಗದಗ ನಾನು ಯೀ ನೋಟಿಸ ಮೂಲಕಾ ತಿಳಿಸುವದೇನಂದ್ರೆ ನೀನು ನನ್ನ ಖಾಸ ಲಗ್ನದ ಗಂಡನಾಗಬೇಕು ನಾನು ಅಲ್ಪವಯಿ ಇದ್ದಾಗ್ಗೆ ನಿನಗೆ ಲಗ್ನ ಮಾಡಿ ಕೊಟ್ಟಿತು ಅದ್ದರಿಂದ ನೀನು ನಿನ್ನ ಪ್ರಪಂಚದ ಸೋಇದಶಯಿಂದಾ ಅಜಮಾಸ ೫ ವರ್ಷದ ಕಳಗೆ ಪಂದು ಉಡಿಕೆಯ ಕನ್ನೆಯನ್ನು ಮಾಡಿಕೊಂಡು ಯೀವರೆಗೂ ನೀನು ನನ್ನ ಕೂಡ ಪ್ರಪಂಚ ಮಾಡದೆ ಸದರೀಯವಳ ಕೂಡ ಪ್ರಪಂಚ ಮಾಡತಾ ಬರುತ್ತೀದಿ ನಾನು ಅನೇಕಸಾರೆ ತಿರಾಯೆಕರ ವಿದ್ಯಮಾನಾ ನನ್ನನ್ನು ಕರಕೊಂಡು ಹೋಗಿ ಪ್ರಪಂಚ ಮಾಡುಅಂತಾ ಹೇಳಿದರೂ ಕೂಡಾ ನೀನು ಅದಕ್ಕೆ ಯಿನಕಾರ ಮಾಡಿ ಯೀವರೆಗೂ ಕರೆದುಕೊಂಡು ಹೋಗಿರುವದಿಲ್ಲಾ ನಾನು ಹೆಣ್ಣು ಮಗಳು ಯಿದ್ದು ಯಿಕಾಲದಲ್ಲಿ ಸ್ವಥಃ ಮಡದು ನನ್ನ ಸಂರಕ್ಷಣೆ ಸಾಗಿಸುವದು ಅಗುವಂತೆ ಯಿಲ್ಲಾ ಹೀಗಾಗಿ ನನ್ನ ಸಂರಕ್ಷಣೆದಸಿಯಿಂದಾ ಯಿವರೆಗೂ ನಾನು ಭೀಮಪ್ಪಾ ತಿದ್ದಪ್ಪಾ ಹಂಡಿ ಸಾಕೀನ ನಾಗಾವಿ ಯಿವರಲ್ಲಿ ಎಂಡುನೂರು ೨೦೦ ರೂಪಾಯಿ ಪೇಸ್ ಮಾಡಿದ್ದೇನೆ ಯಿಸಾಲದ ರಕಮನ್ನು ಮತ್ತು ನನ್ನ ಲಗ್ನದ ವಾಳ್ಳೆಕ ನೀನು ನನಗೆ ಕೊಡತಕ್ಕ ಬಾಕೀವುಳಿದಿರುವ ಒಂದನೂರು ೧೦೦ ರೂಪಾಯಿ ರಕಮನ್ನು ಅಂತು ೩೦೦ ರೂಪಾಯಿಗಳನ್ನು ಯಿ ನೋಟೀಸ ಮುಟ್ಟಿದ (೬) ದಿವಸದಲ್ಲಿ ರೋಜ ಮುಕ್ತಾ ವಸೂಲ ಕೊಟ್ಟು ನನ್ನನ್ನು ಕರೆದುಕೊಂಡು ಹೋಗಿ ಜೆನ್ಮಗೆ ಪ್ರಪಂಚ ಮಾಡಬೇಕು ಯಿದಕ್ಕೆ ತಗ್ಗಿದರೆ ನಾನು ನನ್ನ ಮಾಜೆ ಬರದವರನ್ನು ಮದಿಕೆ ಮಾಡಿಕೊಂಡು ಪ್ರಪಂಚ ಮಾಡತೇನೆ ಆಮೇಲೆ ನಿನ್ನ ಲಗ್ನದ ಹಕ್ಕು ಯಾವ ಪ್ರಕಾರ ಧುಂದಾಯಿ ಸಲಾರದು ಇದೇ ನೋಟೀಸ ಪತ್ರ ಅಂತಾ ತಿಳಿಯುವದಕ್ಕಲ್ಲಿ ಬರುವದು ತಾರೀಖು ೧೪ ಅಕ್ಟೋಬರ ೧೯೩೦

ಈ ಯಡಗ್ಗೆ ಹೆಬ್ಬಟ್ಟಿನ ಗುರ್ತಾ ಕರಬಸಪಾ ಕೊಂ| ಸಂಗಬಸಪ್ಪಾ ಲಚಮಣ್ಣವರ ಇತಿ ದು ಅದೆ ದಸ್ಕರಸಾದರ

ಜಾಹೀರ ನೋಟೀಸು-

ಇಮೂರತಿ ಕಟ್ಟಿಗೆಗಳ ವಹಾರ

ಯಾವತ್ತು ಜನರಿಗೆ ತಿಳಿಸುವದೇನಾದರೆ-

ನಮ್ಮ ಕಟಗಿ ಅಡ್ಡದಲ್ಲಿ ಇಮೂರತಿ ಸಾಗವಾನಿ ತೊಲಿಗಳೂ ಮತ್ತ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವೇಸ (ಟ) ಪೂಟಿನ ಚವಕ್ಕ ಕುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ಶೈಯಾರಿ ತಿಗುತ್ತವೆ

ಇದರ ಹೊತಾರ್‌ಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಬೆಲ್ಲದ ಘರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ

ಟೆಂಡರ ಮರ್ಚಂಟ,

ಮಾರ್ಕೆಟ ಧಾರವಾಡ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಎಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಎಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಎಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೆರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಎಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಸಿದ್ಧ ಮಾಡಿದರು.

ನಿತ್ಯ ಪತ್ರಿಕೆ **ವಿಜಯ** ಬೆಲೆ ಆಣೆ

ಸಂಪಾದಕರು:- ಅಣ್ಣಾಜಾಯಿ ಬಾಳಾಜಾಯಿ ಹೂಗೇರಿ.

ವರ್ಷ ೧೧೧ ಧಾರವಾಡ ಶುಕ್ರವಾರ ತಾರೀಖು ೧೭ನೇ ಅಕ್ಟೋಬರ ೧೯೩೦ (ಸಂಚಿಕೆ ೨೩೯

ಮೊರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಹಾಡೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ಹಾಡೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾವಧೂತರ ಅಪೀಲ, ಶ್ರೀ. ಅರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸದಾಶಿವ ಇವರ ತೀರ್ಪು ಕೊಟ್ಟಿದೆ. ಮತ್ತ ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪ್ರಸಿದ್ಧ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಅದರ ಎಂಟೇ ಸಾವಿರ ಪ್ರತಿಗಳನ್ನು ತೆಗೆಸಿದೆ. ಹಾಡೆಯ ಮಹತ್ವದ ದೃಷ್ಟಿಯಿಂದ ಇನ್ನು ಪ್ರತಿಗಳು ತೀರ ತುಸುವೆನಿಸುವವು, ಆದರಿಂದ ಗ್ರಾಹಕರು ಶೀಘ್ರ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೇಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಪೈಸೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಂದು ಪ್ರತಿ ಬೇಡುವವರು ಮುಂಗಡ ಮನಿಆರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತಗಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಆರ್ಡರ ಮಾಡಬೇಕು.

ಮೆನೇಜರ ವಿಜಯ, ಧಾರವಾಡ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಚಿತ್ರಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಿಡ ಇವರ ಭಾವಚಿತ್ರಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಚೌಕಟ್ಟಿನಲ್ಲಿ ಹಾಗು ಇಡಲು ಒರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮಹಾಪುರುಷರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ಸರ್ದಾರ ವಲ್ಲಭಭಾಯಿ ಪಟೇಲ ಒಂಟುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಹೋಕ ಕಳಿಸಿಕೊಳ್ಳುವವರಿಗೆ ನೂರಕ್ಕೆ ಹದಿನೈದು ಕಮೀಶನ ದೊರೆಯುವದು.

ಜೆ. ವ್ಹಿ. ಸವರಕ್ಷ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್‌ವ ಮಾರ್ಕಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಲಿಂಡಿಗಯ ಎಂಟು ಲಕ್ಷದ ಮೇಲುಟ್ಟು, ಚಲಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜಾಸ್ತಿಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆಕಾಶಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಿಗಳನ್ನು ಅತ್ತೀ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಾವಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೦೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೩-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೫೫೫ ಆಶ್ವೀಜ ವದ್ಯ ೯

ಪಂಡಿತ ಜವಾಹರಲಾಲರು ಸಡ್ಡು ಹೊಡೆದು ಮಾಡಿದ ಭಾಷಣ.

ಪಂಡಿತ ಜವಾಹರಲಾಲರು ತುರಂಗದಿಂದ ಸುಖರೂಪವಾಗಿ ಬಂದುದಕ್ಕಾಗಿ ಅವರ ಅಭಿನಂದನ ಮಾಡಲೋಸುಗ, ಅಲ್ಲಾಬಾದಿನಲ್ಲಿ ಸಾರ್ವಜನಿಕ ಸಭೆಯು ಕೂಡಿತು. ಪಂಡಿತರ ಬಿಡುಗಡೆಯಾದ ದಿವಸವೇ ಲಾರ್ಡ ಆಯರ್ವಿನಸಾಹೇಬರು ಹಿಂದಿನತನದಲ್ಲಿ ತೆಗೆದು, ಗುಜರಾಥದ ಶಂಖ ಸುಲ್ತಾನಶಾಹಿ ಎನಿಸುವಂಥ ರೀತಿಗುಪ್ತಮಾವಾಯಿತು. ಇದನ್ನನುಲಕ್ಷಿಸಿ, ಪಂಡಿತರು ಲಾರ್ಡಸಾಹೇಬರಿಗೆ ಉತ್ತರವೆನಿಸುವಂತೆ ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

ಶುದ್ಧ ಮುಹೂರ್ತದಲ್ಲಿಯೇ ನನಗೆ ಬಿಡುಗಡೆಯಾಯಿತು. ಏಕಂದರೆ- ದಿಬ್ಬಾಳಿಕೆಯ ಅತ್ಯಂತ ವಿಷಮುಜವಾದ ಬೇಕಾಯದೆಶೀರ ಸಂಸ್ಥೆಗಳ ಬಗ್ಗೆ ಅಡಿನಸ್ಸವನ್ನು ತೆಗೆದ ದಿವಸವೇ ನಾನು ತುರಂಗದಿಂದ ಹೊರಬಂದೆನು. ಹಿಂದುಸ್ಥಾನದಲ್ಲಿ ಪ್ರಕೃತದಲ್ಲಿ ಎರಡು ನಿಶಾನೆಗಳ

ಕುಸ್ತಿ ನಡೆದಿದೆ. ಒಂದು ಸ್ವಾತಂತ್ರ್ಯದ ನಿದರ್ಶಕವಿದ್ದು, ಇನ್ನೊಂದು ದಿಬ್ಬಾಳಿಕೆಯ ಸೂಚಕವಾಗಿದೆ. ಇವೆರಡರಲ್ಲಿ ಯಾವ ನಿಶಾನೆಯ ಕೆಳಗೆ ನಿಲ್ಲಬೇಕೆಂಬ ವಿಚಾರವನ್ನು ಭಾರತೀಯರು ಮಾಡಿ. ಅದರಲ್ಲಿ ಅಂಟಿಕೊಂಡು ನಿಂತಿದ್ದಾರೆಂಬದು ಸಮಾಧಾನದ ಸಂಗತಿಯು. ಕಾಂಗ್ರೆಸವೆಂದರೇ ಅಖಿಲ ಹಿಂದುಸ್ಥಾನವೆಂದು ಸ್ಪಷ್ಟವಾಗಿದೆ. ಮಹಾತ್ಮರು ಶ್ರೇಷ್ಠ ಪುರುಷರಾದರೂ ಅವರು ಕಾಂಗ್ರೆಸವಲ್ಲ. ಕಾಂಗ್ರೆಸವೆಂದರೆ- ಹಿಂದುಸ್ಥಾನ ಹಿಂದುಸ್ಥಾನವೆಂದರೆ ಕಾಂಗ್ರೆಸವೆಂದು ತಿಳಿಯಿರಿ.

ಅವರು ಹೇಳಿದಂತೆಯೇ ಕಾಂಗ್ರೆಸ ನಡೆಯುತ್ತದೆಂದು ತಿಳಿಯಬೇಡಿರಿ. ಲಾರ್ಡ ಆಯರ್ವಿನಸಾಹೇಬರು ಶತ್ರುಲಾಗಿ ಮಾಡಿದ್ದೊಂದು ಭಾಷಣವು ಮನೋರಂಜಕವಾಗಿರುತ್ತದೆ. ಗುಪ್ತ ಅಧಿಕಾರ ಬಾಸಗಿಯಿಂದ ವಚನ ಕೊಡುವದು ತವಗೆ ಸಮ್ಮತವಿಲ್ಲದೆಂದು ಇವರು ಹೇಳುತ್ತಾರೆ. ಕಾಂಗ್ರೆಸದವರೂ ಅದೇ ಹೇಳುತ್ತಾರೆ. ಪಂಡಿತ ಮೋತಿಲಾಲರು ಮುಂಬಯಿಗೆ ಬರುವಾಗ ಇವರ ಕೂಡ ಸಂಧಿ ವಿಚಾರ ಮಾಡಲಿಕ್ಕೆ ಬಂದಾಗ, ಲಾರ್ಡ ಆಯರ್ವಿನಸಾಹೇಬರು ಮಾತಿಗೆ ಕೇಳಿಯಿಂದ ಆಶ್ವಾಸನ ಕೊಟ್ಟರೆ- ಅದಕ್ಕೆ ನೀವು ಒಪ್ಪುವಿರಾ ಎಂದು ಪ್ರಶ್ನೆ ಮಾಡಿದರು ಸಾಹೇಬರು ಹೀಗೆ ನಂಬಿಗೆ ಕೊಟ್ಟರೆ- ಮಹಾತ್ಮರ ಕೂಡ ಸಂಭಾಷಣೆ ಮಾಡಲು- ತಾವು ಯುರೋಪಿಗೆ ಬರುವಂತೆ ಅವರಿಗೆ ಉತ್ತರ ಕೊಟ್ಟರು. ನಂತರ ಸರ ಸಪ್ರು ಜಯಕರರು ಭೇಟಿಯಾಗಿ ಯುರೋಪಿಗೆ ಹೋದಾಗ, ಲಾರ್ಡ ಆಯರ್ವಿನಸಾಹೇಬರು ಸ್ವದಸ್ತೂರ ಲೇಖ ಬರೆಕೊಡಲಿಕ್ಕೆ ಸಿದ್ಧರಿದ್ದರೇ- ತಾವು ಪ್ರಸ್ತಾವಕ್ಕೆ ಸಿದ್ಧರಾಗಿರುವಂತೆ ಮಹಾತ್ಮರು ಇವರಿಗೆ ಹೇಳಿದ್ದಾರೆ.

ಪ್ರಸ್ತುತದ ಚಳವಳಿಯೇ

ಕಡೆತನಕ ಇದೇ ಪದ್ಧತಿಯಿಂದ ನಡೆಯುತ್ತದೆಂದು ತಿಳಿಯಬೇಡಿರಿ. ಯಾವದೇ ಒಂದು ಸಮಯದಲ್ಲಿ ಜನರು ಈ ಚಳವಳಿಯ ಮಾರ್ಗವು ಬದಲಾಗಬೇಕೆಂದು ಗೊತ್ತು ಮಾಡಿದರೆ- ಈಗಿನ ಕಾಯದೆಭಂಗದ ಚಳವಳಿಯನ್ನು ನಿಲ್ಲಿಸಿ, ಅವರು ಸ್ವರಾಜ್ಯ ಸಂಪಾದನೆಗಾಗಿ ಬೇರೊಂದು ಮಾರ್ಗವನ್ನು ಹಿಡಿಯಬಹುದು. ಕಾಂಗ್ರೆಸದ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವೇ ಆಗಿದೆ. ಈ ಸ್ವಾತಂತ್ರ್ಯ ದೊರೆಯುವ ತನಕ ಅದು ಬೇಕಾದಂಥ ಕಟುತರ ಕಡುತರ ಪ್ರಸಂಗ ಬಂದರೂ ಅದಕ್ಕೆ ತಲೆಗೊಡುವದು.

ಗಂಡಸರ ಸೋಸ್ತಾ- ಪ್ರ

ಪ್ರಸ್ತುತದ ಚಳವಳಿಯಲ್ಲಿ ಒಂದು ವೈಚಿತ್ರ ನಡೆದಿದೆ ಸ್ತ್ರೀಯರು ಸೋಸ್ತಾ ತೊರೆದು, ರಾಜಕಾರಣದಲ್ಲಿ ತೊಡಗಿರುತ್ತಾರೆ. ಆದರೆ ಕೆಲವೊಂದು ವರ್ಗದ ಪುರುಷರು ಸೋಸ್ತಾದ ನಿಯಮವು ಹಿಡಿದು ರಾವುಂತ ಟೇಬಲಕ್ಕೆ ಹೋಗಿದ್ದಾರೆ. ಅಲ್ಲಿಗೆ ಹೋದ ವಕೀಲರು ಆ ಶಬ್ದವಿರಾಜಾರದು; ಈ ಶಬ್ದವಿರಾಬೇಕೆಂದು ತೀಸರಿಡಲ್ಲಿ; ವಾಕ್ಯಾರ್ಥ ಮಾಡಲಿ. ಸ್ವಾತಂತ್ರ್ಯ ಸಂಪಾದನೆ ಸಲ್ಲುವ ನಿಜವಾದ ಕೆಲಸವನ್ನು ಹಿಂದುಸ್ಥಾನದಲ್ಲಿಯ ಜನರೇ ಮಾಡುವರು. ಲಾರ್ಡ ಆಯರ್ವಿನ ಸಾಹೇಬರು ಜನರಿಗೆ ಮಾಡುವ ಉಪದೇಶದ ಪ್ರಕಾರ ತಾವು ಸ್ವತಃ ನಡಿಯಲಿಕ್ಕೆ ಸಿದ್ಧರಾಗಲ್ಲಾರ್ರು. ಭಾರತವಾಸಿಗಳು

೧ ಪರದೇಶಿ ಆರಿವೆಗೆ ಬಹಿಷ್ಕಾರ
೨ ಮದ್ಯಪಾನ ಪ್ರತಿಬಂಧ
೩ ಉಪ್ಪಿನ ಕಾಯ್ದೆಭಂಗ
೪ ಕರಕಂದಾಯ ಕೊಡದಿರುವದು.

ಈ ನಾಲ್ಕು ಕರ್ತವ್ಯಗಳನ್ನು ಅವ್ಯಾಹತವಾಗಿ ನಡಿಸಲೇ ಬೇಕು. ಅನಕ್ಯಾಚಾರದ ಯುದ್ಧದ ಮೊದಲನೆಯ ಭಾಗ ಮುಗಿಯಿತು. ಈ ನಂತರ ಹಿಂದೀ ಸ್ವಾತಂತ್ರ್ಯದ ಕಳಗಲ್ಲನ್ನು ಕೂಡ್ರಿಸಬೇಕಾಗಿದೆ. ಲಾರ್ಡ ಆಯರ್ವಿನಸಾಹೇಬರು ಕಾಂಗ್ರೆಸದ ಧುರೀಣರಿಗೆ ಉಪದೇಶ ಮಾಡುವ ಭಾಷಣಗಳನ್ನು ನೋಡಿದರೆ ಮೇಲೆ ಹೇಳಿದ ಪ್ರತಿಕ್ಷೇಪಗಳಿಂದ ಭಾರವಂಥ ಸೂಚನೆಯನ್ನು ಮಾಡುವಷ್ಟು ಮೂರ್ಖರು ಹಿಂದೀ ಮುಖಂಡರು ವದಿಲ್ಲ. ಇರ್ವಿನಿಯವು ಇಂಗ್ಲಂಡದ ಮೇಲೆ ಶಿಥಿಲೋಗ ಮಾಡಿದಂದರೆ- ಇಂಗ್ಲಂಡವು ಅಹಿಂಸೆಯ ಅವಲಂಬಿಸಿದ ಸ್ವೀಕರಿಸುವುದೇನ ? ಮಾಂಚಿಕ ಅಲವು ಹೇಗೇ ಇರಲಿ; ಸದ್ಯದಲ್ಲಿ ಅಹಿಂಸೆಯ ಅಸ್ತ್ರಕಾರದಲ್ಲಿಯೇ ನನ್ನ ಸಂಪೂರ್ಣ ವಿಶ್ವಾಸವುಂಟು. ಎಂಬದಾಗಿ ಭಾಷಣ ಮಾಡಿ, ರಾವ್ಯಂತ ಬೇಬಲ್ಲದ ವ್ಯಾಗಜಲದ ಆಶೆ ಮಾಡದೆ, ಕವ್ವ ಚಳವಳಿಯು ಮೊದಲಿನಂತೆ ನಡೆಯುತ್ತದ್ದೆಂದು ಸಡ್ಡು ಹೊಡೆದು ಹೇಳಿದ್ದಾರೆ.

ಜಾಗಲ್ಲಕೋಟ್ಟಿ ಮುಖಂಡರಿಗೆ ಶಿಕ್ಷೆ.

---( )---

ನರಗುಂದ ಜಯರಾಯರ ಮಗಳು ಉಪ್ಪು ಮಾರಿದಳು.

—)(—(೦) —)(—

ಕೌನ್ಸಿಲ ಚುನಾವಣೆಯ ದಿವಸ ಪಿಕೆಟಿಂಗ ಮಾಡಿದ ಒಗ್ಗೆ ಜಾಗಲ್ಲಕೋಟ್ಟಿಯ ಪ್ರಮುಖರ ಮೇಲೆ ನೋಟೀಸಾದ ವರ್ತಮಾನವನ್ನು ಈ ಪೇಪರಲ್ಲಿ ಬರೆದಿರುತ್ತೇವೆ. ಅವರ ವಿಚಾರಣೆಯು ವಿಜಾಪುರದ ಸಬ್ಜ ಡಿವಿಜನಲ ಆಫಿಸರ ಮುಂದಾಗಿ ಕೆಳಗೆ ಹೇಳಿದಂತೆ ಶಿಕ್ಷೆಯಾಯಿತು,

೧ ಶ್ರೀ. ನರಗುಂದ ಜಯರಾಯರು
೨ ,, ಜೋರಾವ್ಯಾರ ಕೃಷ್ಣರಾಯರು
೩ , ಲಿಂಗಯ್ಯನವರು ಜಂಗಿನ

ಇವರಿಗೆ ಒಂದೊಂದು ತಿಂಗಳ ಸಾದಾ ಕೈದು ಮತ್ತು ಇನ್ನೂರಿನ್ನೂರು ರೂಪಾಯಿ ದಂಡವಾಯಿತು. ದಂಡ ಕೊಡದಿದ್ದರೆ- ಒಂದು ವರ್ಷ ಹೆಚ್ಚಿಗೆ ಶಿಕ್ಷೆ ಅನುಭವಿಸಬೇಕಾದ್ದು.

ಶಿಕ್ಷೆಯ ವರ್ತಮಾನ ಬಂದ ಕೂಡಲೆ- ಲಾಯಿಜ ಕೊಟ್ಟಿನಲ್ಲಿ ಶ್ರೀ. ದಾಬಾಡೆ ಅನಂತಸ್ವಾಮಿ ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ಸೆರೆಮನೆಗೆ ಹೋದವರ ಅಭಿನಂದನ ಮಾಡಲ್ಪಟ್ಟಿತು. ಸಭೆಯಲ್ಲಿಯೇ ಶ್ರೀ ಕಣಬರ ವಕೀಲರು ತಾವು ಸತ್ಯಾಗ್ರಹದ ಅಗ್ನಿಕುಂಡದಲ್ಲಿ ಧುಮುಕಲಿಕ್ಕೆ ಸಿದ್ಧರಾಗಿರುವಂತೆ ಜಾಹೀರ ಮಾಡಿದರು. ಶ್ರೀ ಮಲ್ಲಿಜುಮದಾರ, ಪುರೋಹಿತ, ಕೆರೂರ ಮೊದಲಾದವರ ಭಾಷಣಗಳೂ ಆದವು. ಬಳಿಕ ಸಭೆಯಲ್ಲಿ ಶ್ರೀ

ಕ್ಷ, ಹೊಂದಿದ ಶ್ರೀ. ನಳಗುಂದದ ಜಾಗೀರಾಯರ ಚಿರಂಜೀವಿಯು ಕಾಯಿದೆಭಂಗದ ಉಪ್ಪನ್ನು ಲಿಲಾವು ಮಾಡಿ, ತನ್ನನ್ನು ಹಿಡಿಯಬೇಕೆಂದು- ಸರಕಾರಕ್ಕೆ ಅಹ್ವಾನ ಕೊಟ್ಟಳು.

ಸಿದ್ದಾಪೂರದ ನಾಯಕರ ಧಿಕ್ಕಾರೋದಾತ್ತವರ್ತನೆ.

ಕಳೆದ ೧೧ನೇಯ ತಾರೀಖಿನ ದಿವಸ ಸಿದ್ದಾಪೂರದ ಮಾಮಲೇದಾರರು ಹಳೇ ಸೈನಿಕ ಜ್ಞಾತಿಯ ನಾಯಕರನ್ನು ಕಚೇರಿಗೆ ಕಳಿಸಿದರು. ಇದು ತುರಂಗಕ್ಕೆ ಆಮಂತ್ರಣವೆಂದು ಒಗೆದು ಇವರು ಎಲ್ಲ ಸಿದ್ಧತೆಯಿಂದಲೇ ಕಚೇರಿಗೆ ಹೋದರು. ಆದರೆ ಮಾಮಲೇದಾರರು ಇವರನ್ನು ಮನೆಗೆ ಕರಿಸಿ, ಬಮ್ಮೆ ಬೆಲ್ಲದಂಥ ಮತ್ತು ಬಮ್ಮೆ ಹೆದರಿಸುವಂಥ ಮಾತುಗಳಿಂದ ಅವರಿಂದ ಘುಲಬನ್ನಿ ವಸೂಲ ಮಾಡುವ ಪ್ರಯತ್ನ ಮಾಡಿದರು ಮಾಮಲೇದಾರಸಾಹೇಬರೇ- ನೀವು ಭೇಕಾದ್ದು ಮಾಡಿರಿ. ನಾವು ಗೋಜರಾಯಿ ಕೊಡುವದಿಲ್ಲ. ಕೊಟ್ಟು ಪ್ರತಿಜ್ಞಾಭಂಗ ಮಾಡುವದಿಲ್ಲೆಂದು ಉತ್ತರ ಕೊಟ್ಟರು. ಮಾಮಲೇದಾರರು ರೇಗಿ, ನಿಮ್ಮನ್ನು ಕಲ್ಲೊಡೆಯಲಿಕ್ಕೆ ಕಾರಾವಾರಕ್ಕೆ ಕಳಿಸುವೆವೆನ್ನಲು- "ನಾವು ಈಗ ಮುಂಜಾವಿನಿಂದ ಸಂಜೆಯವರೆಗೆ ಉಪವಾಸ ಬಿದ್ದು ಕಲ್ಲೊಡೆಯುತ್ತೇವೆ ಜೇಲಿನಲ್ಲಿ ಹೊಟ್ಟೆಗೆ ತೊಟ್ಟು ಕಲ್ಲೊಡೆಸುತ್ತಿರಾದ ಕಾರಣ ನಮಗೇನೂ ಜೇಲಿನ ಹೆದರಿಕೆ- ಇಲ್ಲೆಂದು" ಉತ್ತರ ಕೊಟ್ಟರು.

ಜಮಾಯತುಲ್ಲಾ ಸಭೆಯು ಕಾಂಗ್ರೆಸದಲ್ಲಿ ಧುಮುಕಿತು.

ಡಾಕ್ಟರ ಅನಸಾರಿಯವರನ್ನು ಹಿಡಿದ ಕೂಡಲೆ, ಜಮಾಯತುಲ್ಲಾ ಸಭೆಯವರು ಕಾಂಗ್ರೆಸದ ಕಾರ್ಯ ಮಾಡುವ ಶೈಲಸವನ್ನು ತಮಗೆ ಒಪ್ಪಿಸಬೇಕೆಂದು ಬರೆದರು. ಆಗ ಅವತ್ತವ್ಯ ತಡವಾಗಿ ಹೋಗಿತ್ತು. ಅನಂತರ- ಇದರೊಳಗೆ ಮುಖ್ಯಂದರಾದ ಮುಫ್ತಿ ಕಿಫಾಯತುಲ್ಲಾಸವರು ಕಾಂಗ್ರೆಸದ ವರ್ಕಿಂಗ ಕಮೀಟಿಯ ಮೆಂಬರರಾದರು. ಅಧಿಕಾರಿಗಳು ಇವರನ್ನು ದಿಲ್ಲಿಯಲ್ಲಿ ಹಿಡಿದು, ಇವರಿಗೆ ಆರು ತಿಂಗಳ ಶಿಕ್ಷೆ ವಿಧಿಸಿದರು. ಈ ಶಿಕ್ಷೆಯ ನಿಷೇಧಕ್ಕಾಗಿ ದಿಲ್ಲಿಯಲ್ಲಿ ಹಿಂದೂ ಮುಸಲಮಾನರು ಒಮ್ಮನಸಿನಿಂದ ಹರತಾಳ ಮಾಡಿ, ಎಲ್ಲ ವ್ಯವಹಾರವನ್ನು ಬಂದಿಟ್ಟರು. ಇವರ ಶಿಕ್ಷೆಯ ನಿಷೇಧವೆಂದು ಮುಂಬಯಿ ಮ್ಯುನಿಸಿಪಾಲಿಟಿಯ ಕೆಲಸವು ಹತ್ತು ಮಿನಿಟುಗಳ ವರೆಗೆ ತಹಕೂಬ ಮಾಡಲ್ಪಟ್ಟಿತು. ಮೌ. ಕಿಫಾಯತುಲ್ಲಾಸವರಿಗೆ ಎ ಕ್ಲಾಸ ಕೊಟ್ಟಿದ್ದಾರೆ.

ಮುಂಬಯಿಯಲ್ಲಿ ದಬ್ಬಾಳಿಕೆಯ ಕಾಯಿದೆಯ ಕೆಂಡ ಹಾರಿತು.

ಕಾಂಗ್ರೆಸದ ಎಲ್ಲ ಸಂಸ್ಥೆಗಳು ಬೇಕಾಯಿದೆಶೀರವಾದವು.

ಇನ್ನೂರು ಜನರ ದಸ್ತಗಿರಿಯು,

—)(o)(—

೧೫ನೇ ತಾರೀಖು ದೆಹಲಿಗಾಗುವದರೊಳಗಾಗಿ ಮುಂಬಯಿಯ ಪೋಲೀಸರು ಅಲ್ಲಿಯ ಮುಖ್ಯ ಕಾಂಗ್ರೆಸ ಕಮೀಟಿಗಳ ಮೇಲೆ ಅಧಿಯೋಗ ಮಾಡಿದರು, ಗಿರಗಾವಿನಲ್ಲಿರುವ ಮುಖ್ಯ ಕಚೇರಿಗೆ ಇನ್ನೂರು ಸಿಪಾಯರು ಮುತ್ತಿಗೆ ಹಾಕಿದರು. ಹ್ವಾಲಂಟಿಯರು ಬಾಗಿಲ ತೆಗೆಯದಾಗಲು- ಸಾರ್ಜಂಟನು ಗೋಡೆ ಹಾರಿ, ಬೋಲ್ಟ ತೆಗೆದು, ಸಿಪಾಯರಿಗೆ ಒಳ ಮಾಡಿದನು. ಅಲ್ಲಿದ್ದ ಹ್ವಾಲಂಟಿಯರನ್ನು ಅವರ ಕಪ್ತಾನ ಸಹಿತವಾಗಿ ದಸ್ತಗಿರ ಮಾಡಿದರು. ಆ ಹ್ವಾಲಂಟಿಯರಿಗೆ ಕೆಲ ಮಟ್ಟಿಗೆ ಪೋಲಿಸರ ಪ್ರಸಾದ ಸಿಕ್ಕಿತು.

ರಾಷ್ಟ್ರೀಯ ನಿಶಾನೆಯನ್ನು ಕಿತ್ತಿ, ಇಂಗ್ರೇಜಿ ನಿಶಾನೆಯನ್ನೇರಿಸಿದರು. ಭೋಗಾದ ಮೇಲೆ ಸಾ ಎರಾರು ಜನರು ಜಪ್ತಿ ಮತ್ತು ದಸ್ತಗಿರಿ ನೋಡಲಿಕ್ಕೆ ನಿಂತರು. ಅವರಲ್ಲಿ ಹ್ವಾಲಂಟಿಯರಂತೆ ಕಂಡವರೆಲ್ಲರನ್ನು ಹಿಡಿದು, ಪೋಟಾರದಲ್ಲಿ ಹಾಕಿ, ತುರಂಗಕ್ಕೆ ಕಳಿಸಿದರು. ಲ್ಯಾಮಿಂಗಟ್ಟನ ಬೀದಿಯಲ್ಲಿ ಒಂದು ಪ್ರಭಾತಫೇರಿಯು ಹೋಗುತ್ತಿತ್ತು. ಅದರ ಜನರನ್ನು ಹಿಡಿದು, ವಾದ್ಯದ ಎಲ್ಲ ಉಪಕರಣಗಳನ್ನು ಜಪ್ತ ಮಾಡಿದರು. ಹಿಡಿದ ಎಲ್ಲ ಜನರ ನಿಜಾಂಣೆಯು ಜಾಮೀನಿಗಾದ ತುರಂಗದಲ್ಲಿಯೇ ನಡೆಯುವುದು.

ಬೇಕಾಯಿದೆ ಶೀರವಾದ ಸಂಸ್ಥೆಗಳು

೧ ಸ್ವಾಂತಿಕ ಕಾಂಗ್ರೆಸ ಕಮೀಟಿ ೨ ಸತ್ಯಾಗ್ರಹ ಕಮೀಟಿ ೩ ಯುದ್ಧಮಂಡಲ ೪ ಶೇಷಶೇವಿಕೆಯರ ಸಂಘ ೫ ಹಿಂದುಸ್ಥಾನೀ ಶೇವಾದಲ ೬ ಕಾಂಗ್ರೆಸ ಮುಸಲಿಮ ಪಾರ್ಟಿ ೭ ಡೊಂಗರಿಯ ಸತ್ಯಾಗ್ರಹ ಕಮೀಟಿ ೮ ಎಲ್ಲಾ ವಾರ್ಡ ಕಾಂಗ್ರೆಸ ಕಮೀಟಿಗಳು ೯ ಬಾಯಿಕಾಟ ಕಮೀಟಿ ೧೦ ಪ್ರಚಾರಕ ಮತ್ತು ೧೧ ಉಗ್ರಾಣ ಕಮೀಟಿ

ಸರಕಾರದವರು ಸುರತದಲ್ಲಿ ಕಾಂಗ್ರೆಸ ಕಚೇರಿಯನ್ನು ಜಪ್ತ ಮಾಡಿ, ರಾಷ್ಟ್ರೀಯ ನಿಶಾನೆ ತೆಗೆದೊಗೆದು, ಇಂಗ್ರೇಜಿ ನಿಶಾನೆ ಹಚ್ಚಿದರು.

ಬಾದಾಮಿ ತಾಲೂಕಿನ ಸುದ್ದಿಗಳು.

—(o)—

೧ ಕೆರೂರಲ್ಲಿ ಜಂಗಲ ಕಾಯಿದೆ ಮುರಿದುದಕ್ಕಾಗಿ ಜಾಗಲಕೋಟೆಯ ಸ್ವತಂತ್ರೇಚ್ಛಕರಾದ ಶ್ರೀ. ಗೋವಿಂದ ನಡಂಸ, ಜಯಮಲ ಡಿ ಮೊಂದಲಾದವರಿಗೆ ಎಂಟೆಂಟು ತಿಂಗಳ ಶಿಕ್ಷೆಯಾಯಿತು. ಇವರಲ್ಲದೆ ಕೆರೂರಿನ ೧೮ ಜನರನ್ನು ದಸ್ತಗಿರಿ ಮಾಡಿದ್ದಾರೆ ಶ್ರೀ. ಮಾಮಡಪಲ್ಲಿಯವರಿಗೆ ೭॥ ತಿಂಗಳ ಶಿಕ್ಷೆಯಾಯಿತು.

ಗುಜರಾಥಿ ಸ್ತ್ರೀಯು ಗಂಡಸರ ವೇಷ ಹಾಕಿ ಗುಂಡು ಹಾರಿಸಿದಳು.

—(o)—

ಮುಂಬಯಿಯಲ್ಲಿ ಸಾರ್ಜಂಟ ಮೇಲೆ ಗುಂಡು ಹಾಕಿದವರಲ್ಲಿ ಒಬ್ಬ ಗುಜರಾಥಿ ಹೆಣ್ಣುಮಗಳಿದ್ದಳು. ಆಕೆಯು ಪುರುಷ ವೇಷದಲ್ಲಿ ಮೋಟಾರಿನಲ್ಲಿ ಕೂತಿದ್ದಳೆಂದು, ಮೋಟಾರ ಡ್ರೈಯವ್ಹರ ಬಾವುಟನು ಪೋಲಿಸರ ಮುಂದೆ ಜವಾಬು ಕೊಟ್ಟಿದ್ದಾನೆ. ಮೊನ್ನೆ ಹಿಡಿದವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆ.

ಹ್ಯಾಲಿಸಾರ್ಲೆಯಲ್ಲಿ ಸರಕಾರದವರು ಕಾಯಿದೆಭಂಗದ ಅಶ್ರಮ ಜಪ್ತ ಮಾಡಿದ ಸ್ವೇ; ಕಾಂಗ್ರೆಸದವರು ಬೇರೊಂದು ಆಶ್ರಮವನ್ನು ಸ್ಥಾಪಿಸುವ ಸಮಾರಂಭ ಮಾಡಿದ್ದಲ್ಲದೆ, ಸಮುದ್ರಕ್ಕೆ ಹೋಗಿ, ಉಪ್ಪು ಮಾಡಿ, ಕಾಯಿದೆ ಮುರಿದರು.

ಬಾಂಡೋಲಿಗೆ ಹೋಗಿರುವ ಕೆಜನರು ಪೋಲಿಸರು ಹೆಣ್ಣುಮಕ್ಕಳು ಮನೆಯಲ್ಲಿ ಮಾಡಿಟ್ಟ ಅಡಿಗೆಯನ್ನು ತಕ್ಕೊಂಡು ಹೋಗಿ ಕ್ಷುದ್ಧ ಶಾಂತಿ ಮಾಡಿಕೊಳ್ಳುವರು. ಹೊಗೆ ಇಲ್ಲದ ಜೋನವೇ ಸೈ.

ಕಾಂಗ್ರೆಸದ ಸೂಚನೆಯ ಮೇರೆಗೆ ಅಹಮದಾಬಾದನಲ್ಲಿ ಅನೇಕ ಮನೆಗಳ ಮುಂದೆ ಇಲ್ಲಿ ಕಾಂಗ್ರೆಸ ಕಚೇರಿ ಉಂಟೆಂಬ ಬೋರ್ಡು ಹಚ್ಚಿದ್ದಾರೆ.

ಪುಣೆಯಲ್ಲಿ ಟಿಳಕಸ್ಮಾರಕ ಮಂದಿರದಲ್ಲಿದ್ದ ಕಾಂಗ್ರೆಸ ಕಚೇರಿಯನ್ನು ಬೇರೆ ಕಡೆಗೆ ಹೈದರು.

ಶ್ರೀ ಲಕ್ಷ್ಮೀವೆಂಕಟೇಶಪ್ರ

ದೀವಳಿಗೆಯ ಉತ್ಸವ

ಸಾಡಬಾರದು

ರಾಷ್ಟ್ರದ ಮೇಲೆ ಬಂದಿರುವ ಆಪತ್ತ ಪ್ರಸಂಗದಲ್ಲಿ ದೇಶದ ಪುಣ್ಯಾತ್ಮರಾದ ನಮ್ಮ ಒಂದು ಭಗಿನಿಯರು ಕಠಿಣ ಕಾರ್ಯ ಮಾಡಿದ್ದು ಅತಿಭೋಗಿಸಿದ್ದರಿಂದ ನಾಳೆ ದೀಪಾವಳಿ ಉತ್ಸವವನ್ನು ದಾಸಾಲಂತೆ ಆಗದಿರಿ ಕೆಳಗಿಟ್ಟು ಕೆಡಂತೆ ನಿರ್ಧರಿಸಬೇಕೆಂದು ವಿನಂತಿ ಅದೆ

೧ ಲಕ್ಷ್ಮೀ ಪೂಜೆಯನ್ನು ಸಂಪ್ರದಾಯ ಪೂಜೆಯನ್ನೂ ಹೊಸ ಮನೆಯ ಪೂಜೆಯನ್ನೂ ಪ್ರತಿ ಕುಟುಂಬದ ಪೂಜೆಯನ್ನೂ (ಯಾವದೇ ಕಂದ ಆಚರಣೆ ಮಾಡಿದೆ) ಮಾಡತಕ್ಕದ್ದು

೨ ಅಂಗಡಿಗಳಿಗೆ ಸ್ವಚ್ಛತೆಯ ದೃಷ್ಟಿಯಿಂದ ಸಾಕಾಗುವಷ್ಟು ಸಣ್ಣ, ಸಣ್ಣ, ಎಣ್ಣೆಗಳನ್ನು ಕಷ್ಟಲಿಕ್ಕೆ ಅಡ್ಡಿ ಇಲ್ಲ.

ಏನು ಮಾಡಬಾರದು-

೧ ಅಂಗಡಿಗಳ ಹೊರಬಾಜುವಿನಲ್ಲಿ ಮಾವಿನ ತೆಳಿದು ಬಾಳೇಎಲೆ ವಗೈರೆ ಅಲಂಕಾರಗಳನ್ನು ಮಾಡತಕ್ಕದ್ದಲ್ಲ.

೨ ರೋಷಣ ಯಿ. ದೀಪ. ಮದ್ದು. ಫಟಾಕಿ ವಗೈರೆಗಳನ್ನು ಉಪಯೋಗಿಸತಕ್ಕದ್ದಲ್ಲ.

೩ ಆಮಂತ್ರಣ ಪತ್ರಗಳನ್ನು ಕಳಿಸತಕ್ಕದ್ದಲ್ಲ.

೪ ಅತ್ತರ ಗುಲಾಬ ಪಾನಸ ಪಾರಿ ಹಾಗೆ ಗಳನ್ನು ಕೊಡತಕ್ಕದ್ದಲ್ಲ.

೫ ಜಿಂಪ್ರಿ. ಬ್ಯಾಂಡು ವಗೈರೆ ಬಾರಿಸತಕ್ಕದ್ದಲ್ಲ.

೬ ಭಟ್ಟ, ಭಿಕ್ಷುಕರಿಗೆ ಯಾವ ತರದ ದಕ್ಷಿಣೆಯನ್ನು ಕೊಡತಕ್ಕದ್ದಲ್ಲ.

೭ ದೀಪ ಮಳೆಯ ದಿಸೆಯಿಂದ ದಾಸಾಲದಂತೆ ತರಿಸುವ ಹೂಮಾಲಗಳನ್ನು ತರಿಸತಕ್ಕದ್ದಲ್ಲ.

ಧಾರವಾಡ ಮಾಡುವಂಗಡಿ ವ ಇಜಂತಕರ
ತಾ|| ೧೫-೧೦-೩೦ ಶಂಕರಪ್ಪ ಮಿಣಜಿಗಿ
ಅಧ್ಯಕ್ಷ ವ ಉಪಾಧ್ಯಕ್ಷ
ದೀಪಾವಳೀ ಉತ್ಸವ ಪ್ರತಿಬಂಧಕ
ಕಮೀಟಿ

ಜಾಹೀರ ನೋಟೀಸು

ರಾ| ರಾ| ನಿಂಗಪ್ಪಾ ಬಿನ್ನ ಬಸವಪ್ಪಾ ಕಿಡಿ ಸಾ| ಕುರ್ತಕೋಟಿ ಇವರಿಗೆ-

ಕೆಳಗೆ ಸಹಿ ಮಾಡಿದವರ ಕಡಿಂದಾ ಈ ನೋಟೀಸಿನಿಂದಾ ತಿಳಿಸುವದೇನಂದರೆ-

ನೀನು ನನ್ನ ಲಗ್ನದ ಗಂಡನಿದ್ದು ಒಂದು ವರುಷ ಜಲೋ ಬಾಳ್ವೆ ಮಾಡಿ ಅನಂತರ ಕೆಟ್ಟ ಜನರ ದುರ್ಬೋಧನೆಯಿಂದಲೂ ಎರಡನೇ ಸ್ತ್ರೀಯಳ ಮೋಹದಿಂದಲೂ ನನ್ನನ್ನು ನಿರಾಕರಿಸಿ ಅಶನಕ್ಕೆ ತಾಪತ್ರಯ ಮಾಡಿ ಹೊಡೆದು ಬಡೆದು ಉಟ್ಟ ಬಿಟ್ಟ ಕೊರತಾಗಿ ಯಾವತ್ತೂ ದಾಗೀನು ಮಂಗಲಸೂತ್ರ ಮೊದಲು ಮಾಡಿ ಕಸಕೊಂಡು ಹೊರಗೆ ಹಾಕಿ ಇಂದಿಗೆ ಅಜಮಾಸು ಎಂಟು ವರ್ಷವಾಯಿತು ನನ್ನ ತವರ ಮನೆಗೆ ಬಂದು ಒಂದೇಡು ವರ್ಷ ಹಾಗೂ ಹೀಗೂ ಕಾಲ ಕಳೆದು ನಿನಗೆ ಎಷ್ಟೋ ಸಾರೆ ಹೇಳಿ ಕಳಿಸಿದರೂ ಕಳಿಸಿಕೊಂಡು ಹೋಗಲಿಲ್ಲಾ ನಿನಗೆ ತಂದೆ ತಾಯಿ ಇಲ್ಲದ್ದರಿಂದ ನನಗೆ ಆಶ್ರಯ ಕೈ ಗತಿಯಿಲ್ಲದೆ ನನ್ನ ಉಪಜೀವನದ ಸಲುವಾಗಿ ಲಕ್ಷ್ಮೇಶ್ವರ ದಲ್ಲಿರುವ ಇಲ್ಲಿ ಸಾಲ್ಕನೂರು ರೂಪಾಯಿ ದೇಣಿ ಮಾಡಿ ಒಂದು ವರ್ಷ ಕೊಟ್ಟು ಹೊಗಿಕೊಂಡೆನು ಈಗ ಕಠಿಣ ಕಾಲದ ಮೂಲ್ಯ ದೇಣಿ ಹುಟ್ಟದ್ದರಿಂದ ಲೂ ದೇಣಿ ಕೊಟ್ಟವರ ಕಸ್ತಿ ದಶಿಂದಲೂ ಎರಡನೇ ದವರನ್ನು ಉಡಿಕಿ ಮಾಡಿಕೊಂಡು ದೇಣಿ ಫೇಡ ಮಾಡಿ ಉದ್ಯೋಗ ಮಾಡಿಕೊಳ್ಳುವ ಪ್ರಸಂಗ ಒಂದದೆ ಅದ್ದರಿಂದಾ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಒಂದು ಗದ್ದಿ ದೇಣಿ ಫೇಡ ಮಾಡಿ ನನ್ನನ್ನು ಕರಕೊಂಡು ಹೋಗಿ ಚನ್ನಾಗಿ ಬಾಳವೆ ಮಾಡಬೇಕು ಇದಕ್ಕೆ ತಪ್ಪಿದರೆ ನನ್ನ ವರ್ಚ ಬಂಟವನನ್ನು ಉಡಿಕಿ ಮಾಡಿಕೊಂಡು ಉಪಜೀವನ ಮಾಡುವೆನು ಆ ಮೇಲೆ ನನ್ನ ಮೇಲೂ ಉಡಿಕಿ ಮಾಡಿಕೊಂಡವನ ಮೇಲೂ ಯಾವ ತರದ ಹಕ್ಕು ಉಳಿಯಲಿಕ್ಕಿಲ್ಲಾ ಅಂತಾ ಕೊಟ್ಟ ನೋಟೀಸು ಸಹಿ ತಾರೀಖ ೧೬-೧೦-೧೯೩೦ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಅವ್ವಕ್ಕಾ ಕೋಂ| ನಿಂಗಪ್ಪಾ ಕಿಡಿ ಕುರ್ತಕೋಟಿ ಹಾಲಿವಸ್ತಿ ಲಕ್ಷ್ಮೇಶ್ವರ ಈಕೆ ಕೈದು ಅದೆ

ನೋಟೀಸು

ರಾ|| ರಾ|| ಯಲ್ಲಪ್ಪಾ ಗಿರಿಮಲ್ಲಪ್ಪಾ ಭಂಡಿವಾಡದವರ ಸಾಕೀನ ನವಲಗುಂದ ಯಿವನಿಗೆ ದ್ಯಾಮವ್ವಾ ಕೋಂ | ಎಲ್ಲಪ್ಪಾ ಭಂಡಿವಾಡದವರ ಸಾಕೀನ ನವಲಗುಂದ ಹಾಲಿವಸ್ತಿ ಗೊಬ್ಬರಗುಂಪಿ ನಾನು ಈ ನೋಟೀಸಿನಿಂದ ನಿನಗೆ ತಿಳಿಸುವದೇನಂದರೆ

ನಾನ. ನಿನ್ನ ಲಗ್ನದ ಹೆಂಡತಿ ಯಿದ್ದು ನೆರೆದು ೪-೫ ವರ್ಷಗಳಾದುವು ನೆರೆದು ೩-೪ ವರ್ಷಗಳ ತನಕ ನನ್ನಕೂಡ ಸುರಳೀತ ಬಾಳುವೆ ಮಾಡಿದಿ ಆಮೇಲೆ ನೀನು ನಿನ್ನ ತಂದೆಯ ಸಂಗಡ ಅಂದರೆ ನನ್ನ ಮಾವನಾದ ಗಿರಿಯಪ್ಪನ ಸಂಗಡ ನನ್ನ ತವರಮನೆಗೆ ಕಳ್ಸಿಕೊಟ್ಟಿ ಆಮೇಲೆ ನೀನು ವ್ಯಸನೀಕ ಜನರ ಸಂಗತಿಯಿಂದ ಅವರ ಮಾತುಗಳಿಗೆ ಕಿವಿಸೋಕು ನನ್ನನ್ನು ಕರಕೊಂಡ ಹೋಗಬೇಕಂತಾ ಎಷ್ಟೋಸಾರೆ ಹೇಳಿಕಳ್ಸಿದರೂ ಯಿವರೆಗೂ ಕರೆದುಕೊಂಡು ಹೋಗಲಿಲ್ಲಾ ಕಾರಣ ನಾನು ತವರಮನೆಯಲ್ಲಿಯೇ ಯಿದ್ದು ದುಡಕೊಂಡು ಹೊಟ್ಟೇ ತುಂಬಿಕೊಳ್ಳುತ್ತಾ ಯಿದ್ದೇನೆ ಯಿಗ ಕೆಲ್ಸ ಮಾಡುವಿ ಬಹಳ ಕಠಿಣವಾದ್ದರಿಂದ ಹೊಟ್ಟೆಗೆ ಸಿಗುವದು ಬಹಳ ಕಠಿಣವಾಗುತ್ತದೆ. ಕಾರಣ ನಾನು ನನ್ನ ಹೊಟ್ಟೆ ಖರ್ಚಿನವಲುವಾಗಿ ಎರಡನೇಯವರ ಕಡೆ ೧೫೦ ರೂಪಾಯಿಗಳನ್ನು ಸಾಲಾ ಮಾಡಿದ್ದೇನೆ ನನ್ನ ಲಗ್ನದ ವ್ಯಾಳೆದಲ್ಲಿ ಒಂದು ಭಂಗಾರದ ಒಳ ಅಜಮಾಸ ೨ ತೊಲಿ ಒಂದು ಶೇರು ಬಂದೀಬೇಡ ಯಿವು ಅಜಮಾಸು ಕಿಮ್ಮತ್ತು ೧೨ ಮತ್ತು ಮರುವಿ ಶೀರಿ ಸಹಿತ ನನ್ನನ್ನು ತವರ ಮನೆಗೆ ಕಳಿಸುವ ವೆಚವಲೇ ನನ್ನ ತಮ್ಮನ ವಿಳ್ಳೆದ ಕಾರಣಕ್ಕೆ ಕಗೊಂಡಿರುತ್ತೇ ಕಾರಣ ಯಿನೋಟಿಸು ಮುಟ್ಟಿದ ೮ ದಿವಸದೊಳಗಾಗಿ ಸಾಲಗಾರನ ಸಾಲಾ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು ಒಂದು ವೇಳೆ ಕರಕೊಂಡು ಹೋಗದಿದ್ದರೆ ಇದೇ ನೋಟೀಸು ಅಂತಾ ತಿಳಿಯಬೇಕು ನಾನು ನನಗೆ ಬೇಕಾದವರನ್ನು ಮಾಡಿಕೊಂಡು ಹೋಗುತ್ತೇನೆ ಆಮೇಲೆ ನನ್ನ ಮೇಲೆ ನಿನ್ನದು ಯಾವ ತರಹದ್ದು ಹಕ್ಕು ನಡಿಯಲಿಕ್ಕಿಲ್ಲಾ ಅಂತಾ ಕೊಟ್ಟ ನೋಟೀಸು ತಾ|| ೧೩-೧೦-೧೯೩೦

ಈ ಎಡಗೈ ಹೆಬ್ಬಟ್ಟಿನ ಗುರ್ತಾ ದ್ಯಾಮವ್ವಾ ಕೋಂ ಯಲ್ಲಪ್ಪಾ ಭಂಡಿವಾಡದವರ ಸಾ- ನವಲಗುಂದ ಹಾಲಿವಸ್ತಿ ಗೊಬ್ಬರಗುಂಪಿ ಈಕೆದು ಕೈದು ಅದೆ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳೆ ವ ಸಾಗವಾನಿ (ಟ) ಪುಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಶಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಬಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರವ್ವಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊನಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1648

ವಿಜಯ

ನಿತ್ಯ ಪತ್ರಿಕೆ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಗೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೧೦ ನೇ ಅಕ್ಟೋಬರ ೧೯೩೦ (ಸಂಚಿಕೆ ೨೩೦

ಕರಾಚಿಟ್ಟಿ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೋಟಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢರ ಸ್ವಾಮಿಯವರ ಮೋಟಿನ ದಾವೆಯ ತೀರ್ಪನ್ನು ಹಿರಿಯ ಸೂಬೇದಾರರು ಮುಂದಿನ ಸಿ. ಆರ ಗಸ್ತ ಸಭಾಗೃಹದಲ್ಲಿ ಸಿದ್ಧ ಮಾಡಿರುತ್ತಿದ್ದರು ಇದರಲ್ಲಿ ವಾದಿ ಶ್ರೀ. ಸಿದ್ಧಾರೂಢರ ಅಂಗಡಿ, ಶ್ರೀ. ಅರೂಢ ಸ್ವಾಮಿ ಮಠ ಕೈಯಿಂದ ಹೋಗಿ ಪ್ರತಿವಾದಿ ಶ್ರೀ. ಸಿದ್ಧಾರೂಢ ಸ್ವಾಮಿ ಮಠ ಕೈಯಲ್ಲಿ ಬರಬೇಕೆಂದು ಕೇಳಿರುತ್ತಿದ್ದರು. ಪ್ರತಿವಾದಿ ಕಾಗದ ಪತ್ರಗಳು ಬಾರಾಚಿಕಗಳನ್ನೂ ಕೊಟ್ಟಿರುತ್ತಿದ್ದರು. ಪ್ರತಿಯ ಒಂದು ಅಂಗ ಕಾಗದಗಳು ಕೆಳಗಿನ ಕೋರ್ಟದವು ಅಂಗವಾಗಿ ವಾದಿ ಸಿ. ಕರಾಚಿಟ್ಟಿ ಸಿದ್ಧ ಮಾಡಿರುತ್ತಿದ್ದರು. ಇದರ ಒಳಗೆ ಕಾಗದ ಪತ್ರಗಳನ್ನು ತೆಗೆದಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಸೀಲ ಮಾಡಿಸಿರುವದು. ಆದರಿಂದ ಗಾಹಕರು ಕೂಡಿ ಕೊಳ್ಳಬೇಕು.

ಒಂದು ಪ್ರತಿಗೆ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಂಡವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ಸ್ಟಾಕಿಸ್ಟರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ಯಾ. ಪಿ ಪಿಜಿ ಬೇರೆ ಬೇರೆ ಪ್ರತಿಗಳನ್ನು ಬೇಕಾದವರು ಪ್ರತಿಯೊಂದಕ್ಕೆ ಬಂದಾಕಂತೆ ಪೋಸ್ಟ ಖರ್ಚಾಗುವದನ್ನು ಕಳಿಸಬೇಕು. ಒಂದು ಪ್ರತಿ ಬೇಕಾದವರು ಮುಂಗಡ ಮನಿಆರ್ಡರ ಮಾಡಬೇಕು. ಹ್ಯಾ. ಪಿ. ಯಿಂದ ತೆಗೆಕೊಳ್ಳಬೇಕಾದವರು ೧/೪ ಹಣವನ್ನು ಮುಂಗಡ ಮನಿಆರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಚಿತ್ರಗಳು.

ರಾಷ್ಟ್ರೀಯ ಮಹಾಪುರುಷರಾದ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಅನ್ಸಾರಿ ಮತ್ತು ರಫಿ ಅಹಮದ ಕಿದ್ವಾಯಿ ನಾಯಿಡ ಇವರ ಭಾವಚಿತ್ರಗಳು ಕರ್ನಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಬಹುದಾಗಿ ಒಂದರಲ್ಲಿ ಇವನ್ನು ಅಚ್ಚು ಹಾಕಿಸಿದ್ದೇವೆ. ಇವಲ್ಲದೆ ಇನ್ನೂ ಬೇರೆ ಮಹಾರಾಷ್ಟ್ರ ಸಾಧು ದಿವಾಕರ ಶ್ರೀ. ಪಿಂಗಳಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಚಿತ್ರಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅಧಾರಣೆ ಕೋಕ ಕಳಿಸಿಕೊಳ್ಳುವವರಿಗೆ ಸೂಕ್ತ ಭರ್ಪೂರ ಕಮೀಶನ ದೊರೆಯುವದು.

ಬಿ. ಪ್ಲಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ವ ಸಾಕೇಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಕೋರಿಕೆಯ ಮೇರೆ ಲಕ್ಷದ ಮೇಲಿಂದ ಚಳ ಕೊಂಡಿ ಕೊಡಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕಾಗೀಮ ಮತ್ತು ಬೇರೆ ತರದ ಶಿವಾಲಿಗಳಿಗೆ ಅಲ್ಪಾ ಒಡ್ಡಿ ಕೊಡಲಿಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸೂಚ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರ ತಿಂಗಳ ಮುದ್ದತಿ ಕರಾರಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಬಾಗುದು. ದರವನ್ನು ಸಮಸ್ಥ ಮತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಕತ್ತೀ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೧೮೫ ಆಶ್ವೀಜ ವದ್ಯ ೧೧

ತುರಂಗದಲ್ಲಿ ಮಹಾತ್ಮರನ್ನು ಹೇಗೆ ನಡಿಸಿಕೊಳ್ಳುತ್ತಾರೆ?

ಜನರು ತಿಳಕೊಳ್ಳುವಂಥ ಅನೇಕ ಸಂಗತಿಗಳು

- (೧) -

ಶ್ರೀ. ಜಮುನಾದಾಸ ದ್ವಾರಕಾದಾಸರು ಮೊನ್ನಿನ ದಿವಸ ಯರವಡೆಯ ತುರಂಗದಿಂದ ಬಂಧಮುಕ್ತರಾದರು. ಇವರು ತುರಂಗದಲ್ಲಿ ಮಹಾತ್ಮರನ್ನು ಹೇಗೆ ನಡಿಸಿಕೊಳ್ಳುತ್ತಾರೆಂಬದನ್ನು ಮುಂದೆ ಕ್ರೋಢೀಕರಿಸಿ ಹೇಳುತ್ತಾರೆ.

ನಮ್ಮ ಮತ್ತು ಮಹಾತ್ಮರ ನಡುವೆ ಒಂದು ಕಲ್ಲಿನ ಗೋಡೆಯಂತೆ. ಅದರಿಂದ ಅವರನ್ನು ಕಾಣುವ ಅಥವಾ ಅವರ ಕೂಡ ಮಾತಾಡುವದಕ್ಕೆ ನಮಗೆ ಅಪ್ಪಣೆಯು ದೊರೆಯಲೇ ಇಲ್ಲ. ನಮ್ಮ ಜಯಕರರು ಬಂದ ವೇಳೆಯ ಹೊರ್ಸ, ಕಾಕಾ ಕಾಲೇಕರರ ಹೊರ್ಸ ಮಹಾತ್ಮರಿಗೆ ಎರಡನೆಯವರ ಸಹವಾಸವೇ ಇರುವದಿಲ್ಲ. ಮಹಾತ್ಮರ ದೆಸೆಯಿಂದ ತಿಂಗಳಿಗೆ ನೂರು ರೂಪಾಯಿ ವೆಚ್ಚವನ್ನು ಮಂಜೂರ ಮಾಡಿದ್ದೇವೆಂದು ಸರಕಾರದವರು ಹೇಳುತ್ತಾರೆ. ಆದರೆ ಅವರಿಗೆ ೧೫೦ ರೂಪಾಯಿಗಿಂತ ಹೆಚ್ಚಿಗೆ ವೆಚ್ಚ ಬರುವದಿಲ್ಲ. ಅವರ ನಿತ್ಯದ ಆಹಾರವು ಮೂರು ಚಪ್ಪಾತಿ ಬದನಿಕಾಯಿ, ಮೂರು ಬಟಾಟೆ ಮತ್ತು ಅಡಿನ ಹಾಲಿನಿಂದ ಮಾಡಿದ ಪೊಸರು ಮಾತ್ರ ಇರುತ್ತದೆ. ಪ್ರತಿಯೊಂದು ವಾರದಲ್ಲಿ ಏಳು ಜನರನ್ನು ಕ್ರಾಣಬೇಕೆಂದು ನವಲಶ್ರಂಟು. ರಾಜಕಾರಣ ಸಂಬಂಧವಿದಂಥ ೧೬೦ ಜನರ ಯಾದಿಯನ್ನು ಮಹಾತ್ಮರು ಅಧಿಕಾರಿಗಳಿಗೆ ಬರೆದು ಕೊಟ್ಟರು. ಅದರಲ್ಲಿ ಈ ಯಾದಿಗೆ ಅಯೋಗ್ಯವೆಂದು ಮುದ್ರೆ ಹೊಡೆದು, ಯಾರ ಭೆಟ್ಟಿಯನ್ನೂ ಮಾಡಿಸಲಿಲ್ಲ. ನರಕಾಂಕ್ಕೆ ಅಂಟ್ಟಿನ ತರುವಂಥ ಕೃತ್ಯವೇ ಸರಿ. ಮಹಾತ್ಮರು ಘನವಂತರಾಗಿರುವದರಿಂದ, ಯಾವದರ ವಿಷಯವಾಗಿಯೂ ತಕರಾರು ಮಾಡುವದಿಲ್ಲ. ಅಕ್ಕ ಬಲದಲ್ಲಿಯೇ ವಿಶ್ವಾಸವುಳ್ಳವರಾಗಿದ್ದಾರೆ.

ಶ್ರೀ. ಜಮುನಾದಾಸರು ತುರಂಗವಾಳಿ ತಂದು ಹೆದರಿಲ್ಲ. ಪುನಃ ಪ್ರಸಂಗ ಬಂದರೆ- ಸರಕಾರದವರು ತಂದರೆ- ತುರಂಗಕ್ಕೆ ಹೋಗಲು ಸಿದ್ಧರಿದ್ದಾರೆ. ಅನ್ಯಾಯಾಚಾರದಲ್ಲಿ ಸಂಪೂರ್ಣ ವಿಶ್ವಾಸ ಇಟ್ಟು ನಡೆದರೆ ಹಿಂದುಸ್ಥಾನಕ್ಕೆ ಜಯವು ಖಂಡಿತವಾದುದೆಂಬ ಮತದವುಳಿಗಿದ್ದಾರೆ.

ಕಾಬೂಲ ರಾಜ್ಯದಲ್ಲಿ ಕಾಂಗ್ರೆಸದಂತೆ ಸತ್ಯಾಗ್ರಹ.

ಅಮೀರರ ರಾಜ್ಯಾಭಿಷೇಕ ಮುಂದೆ ಬಿತ್ತು.

—(o)—

ಮೊನ್ನೆ ಹದಿನಾರನೆಯ ತಾರೀಖಿನ ದಿವಸ ಕಾಬೂಲನಗರದಲ್ಲಿ ಅಮೀರ ನಾದಿರಖಾನನಿಗೆ ರಾಜ್ಯಾಭಿಷೇಕವಾಗಬೇಕಾಗಿತ್ತು. ಈ ಸಮಾರಂಭಕ್ಕಾಗಿ ಪಾರಿಸದಲ್ಲಿದ್ದ ಯುವರಾಜನು ಹೋದವಾರದಲ್ಲಿ ಮುಂಬಯಿಗೆ ಬಂದು, ಫೇಶಾವರ ಮಾರ್ಗವಾಗಿ ಕಾಬೂಲಕ್ಕೆ ಪ್ರಯಾಣ ಬೆಳೆಸಿದನು. ಈ ಉತ್ಸವದ ದೆಸೆಯಿಂದ ಈ ದೇಶದ ಪ್ರಖ್ಯಾತ ಗಾಯಕ, ಗಾಯಿಕೆ, ಅಟಗಾರ ಮೊದಲಾದವರಿಗೆ ಆಮಂತ್ರಣ ಬಿತ್ತು. ಹಿರಾತ ಮತ್ತು ಘಜನಿ ಪ್ರಾಂತದಲ್ಲಾದ ಪ್ರಜಾ ಕ್ಷೋಭೆಯ ದೆಸೆಯಿಂದ ಈ ಮಹೋತ್ಸವ ನಿಲ್ಲ ಬಿಟ್ಟಿಂದೆಮ್ಮೆ ಮುಂದೆ ಬಿತ್ತು. ಇದಕ್ಕೆ ಎರಡು ಕಾರಣಗಳಾಗಿರುತ್ತವೆ.

ಕಾಬೂಲ ಮತ್ತು ರಶಿಯಾದ ನಡುವೆ ಬುಖಾರಾವೆಂಬದೊಂದು ದೇಶವುಂಟಷ್ಟೇ; ಬೋಲ್ಶೆವಿಕರು ಈ ದೇಶವನ್ನು ಪಾದಾಕ್ರಾಂತವಾಡಿ, ನಿಂಗಿರುವರು. ಇದನ್ನು ಮರಳಿ ಸಂಪಾದಿಸಬೇಕೆಂದು ಪದಚ್ಯುತ ಅಮೀರನ ಚಿಂತೆಯೇನು ದಂಡು ಕೂಡಿಸುತ್ತಿದ್ದಾನೆ. ಈ ದಂಡು ಬುಖಾರಾಕ್ಕೆ ಕಾಬೂಲ ಪಟ್ಟ ದೊರಕಿಸಿಕೊಟ್ಟದ್ದಾಗಿರುತ್ತದೆ. ಇದಲ್ಲದೆ, ಪೊಡಾರಿಗಳಂಥ ಅನೇಕ ಪುಂಡರು ಇದರಲ್ಲಿ ಸೇರುತ್ತಲಿದ್ದಾರೆ. ಇದು ಬುಖಾರಕ್ಕೇ ಹೋಗುವದೋ? ಕಾಬೂಲದ ಮೇಲೇ ಬರುವದೋ ಎಂಬ ಸಂಶಯವಾಗಿರುತ್ತದೆ. ಏನಂದರೆ- ಸಂಕ್ರಾಂತಿಯು ಹೋಗುವ ದಾರಿಯೊಂದಾದರೆ- ಲಕ್ಷ್ಯವು ಬೇರೊಂದರ ಮೇಲಿರುತ್ತದೆ.

ಇದು ಕಾಬೂಲದ ಪೂರ್ವ ಭಾಗದ ಸಂದಿಯಾಯಿತು. ಪಶ್ಚಿಮ ಮತ್ತು ಪಾಯವ್ಯ ಮೇರೆಯಲ್ಲಿರುವ ಹಿರಾತ ಮತ್ತು ಘಜನಿಯ ರೈತರು ನಾದಿರಖಾನನ ಮೇಲೆ ಮನಸುಗೊಂಡು, ಸರಕಾರೀ ಕರಕಂದಾಯ ಕೊಡಬಾರದೆಂದು ಸತ್ಯಾಗ್ರಹ ಮಾಡಿದ್ದಾಗಿದೆ. ಪೋಢ ವರ್ಷ ಸುಲೇಮಾನ ಖೇಲರೆಂಬವರು ಹಪ್ತಿ ಕೊಡಲಿಲ್ಲ. ನಾದಿರಖಾನನು ದಂಡು ಕಳಿಸಿ, ಅವರನ್ನು ಮಣಿಸಿದನು. ಈ ಸಂದರ್ಭದಲ್ಲಿ ಅವರು ಕಾಂಗ್ರೆಸ ಧ್ವಜ ಮತ್ತು ಖಿಲಾಫತದ ಅನುಸರಣ ಮಾಡಿ, ಶೀಘ್ರ ಕೊಡಕೊಡುವಂಥ ಸತ್ಯಾಗ್ರಹ ಹೂಡಿ, ಬಾಂಡೋಲಿ ರೈತರ ಅನುಕರಣ ಮಾಡಿ ತುರಂಗ ಕಂಡ, ಸ್ವಾರ್ಥ ತ್ಯಾಗಿ ಬಿರುದು ಪಡೆಯಬೇಕೆಂದಿದ್ದರೆ ಇವನ್ನು ಶಿಕ್ಷಿಸಲು ನಾದಿರಖಾನನ ಹೇಳಿದ ಸಮಯದಂತೆ ದಂಡು ಕಳಿಸಿರುವಾನೆ. ಕಾಂಗ್ರೆಸ ಹೆಸರ ಮಾಡ ಬಂದೊ? ನಾದಿರಖಾನನ ಜಯವೊ? ಮುಂ ಗೊಂದಲದಲ್ಲಿ ರಾಜ್ಯಾಭಿಷೇಕವು ಮುಂದೆ ಬಿತ್ತು.

ಮುಂಬಯಿಯಲ್ಲಿ ಕಿಕೆಟ ಆಟದ ದೊಡ್ಡ ಜಯ.

—(-)—

ಮುಂಬಯಿಯ ವಿಲಾಯತಿಯ ಜವಳಿ ವರ್ತಕರು ಅಡುವ ತನಿಕ ಕೂಟ, ಅವರ ನೆಲ ಕ್ರಿಕೆಟ ಭಾರತೀಯರು. ದಿವಾಳಿಗೆ ಬಂದಿದೆ ಎಲಿಕೆಯಲ್ಲಿದ್ದ ಸನಗುಗಳನ್ನು ಮಾರಬೇಕೆಂದು ಕಂತೆಯನ್ನಿಗೆ ಮಾತಾಡಿಕೊಂಡರು. ಮನೆಯಿಗೆ ಹೋಗಿ, ಸಾಕಿತ ಪೆಕ್ಕಿಲಾಲಾಲನ್ನು ಕೇಳಿಕೊಂಡರು. ಅವರು ಇದೆಯೆರೆಂದರು. ಆದರೆ ವಿಲಾಯತಿಯ ವಿಜಯಿಗಳು ಇವರಿಗೆ ಮಂಕಬೂದಿ ತಿನ್ನಿಸಿದರು. ಆ ಮೇಳವನ್ನೂ ಹೋಗಿಲ್ಲ. ಅಂಗಡಿಕಾರರು ಮಂಗಳವಾರ ಅಂಗಡಿ ತೆರೆಯಬೇಕೆಂದು ಶಿಫಾರಸು ಮಾಡಿದರು. ಇದಂತೆ ಕಾಂಗ್ರೆಸದವರೂ ಶಿಫಾರಸು ಮಾಡಿದರು. ಸೋಮವಾರ ಬೆಳಗಾಯಿತು. ಸ್ವಯಂಸೇವಕ ಸೇವಿಕೆಯರು ಮಾರ್ಕೆಟಿನ ಕೂಟ ಪಿಕೆಟಿಂಗಕ್ಕೆ ನಿಂತರು. ಮತ್ತು ಪಿಕೆಟಿಂಗ್ ಮಾಡಲಿಕ್ಕೆ ಮಾರ್ಕೆಟಿನಲ್ಲಿ ನಡೆದರು. ಅಲ್ಲಿ ಅನೇಕ ಅಂಗಡಿಗಳಿವೆ. ಇವುಗಳ ಮಾಲೀಕರು ಯುರೋಪಿಯನರು ಮನೆಗೆ ಹೋಗಿ, ನಿತ್ಯಖರ್ಚಿಗೆ ಕಿರಾಣಿಯನ್ನು ತರುವ ಪದ್ಧತಿಯುಂಟು. ಕಾಂಕೂನರು ಮನೆಗೆ ಹೋಗಲೇ ಇಲ್ಲ. ಇವರೂ ಸತ್ಯಾಗ್ರಹದಲ್ಲಿ ಸೇರಿ, ವಿಲಾಯತಿಯ ಜವಳಿ ಮಾರಾಟಕ್ಕಿದ್ದಲ್ಲೆಂದರು. ಹೀಗಾಗಿ ಒಂದೂ ಅಂಗಡಿಯ ಬಾಗಿಲ ತೆರೆಯಲಿಲ್ಲ. ಮಧ್ಯಾನ್ಹದಲ್ಲಿ ವಿಲಾಯತಿಯ ವಿಜಯಿಗಳಾದ ದೊಡ್ಡ ಸೊಡ್ಡಸಾಹೇಬರು ಬಂದು, ವಿಗ್ರಹಮಾಡ ಪರಿಸ್ಥಿತಿಯನ್ನು ನೋಡಿ, ತಮ್ಮ ಮನೋರಥ ಭಂಗವಾದುದನ್ನು ಕಂಡು, ಇಳಿನೋಟ ಮಾಡಿಕೊಂಡು ಹಿಂದಿಗೆ ಹೋದರು. ಶ್ರೀ. ನರಿಮನ ಮತ್ತು ಮನಸುಖವಾಲ ಬಂದು, ಕೆಲ ಕಾಲ ಕಣ್ಣಿಟ್ಟರು. ಯಾವದೊಂದು ದೇಶವು ಸ್ವಾರ್ಥತ್ಯಾಗ ಮಾಡಿದ ವಿನಹ ಸ್ವರಾಜ್ಯ ಸ್ವಾತಂತ್ರ್ಯ ಸಂಪಾದಿಸಿಲ್ಲೆಂದು ಅಂಗಡಿಕಾರರಿಗೆ ಉಪದೇಶ ಮಾಡಿದರು. ಅಂಗಡಿ ತೆರೆಯುವರು ಸತ್ಯಾಗ್ರಹ ಮಾಡುತ್ತೇವೆಂದು ಸ್ವಯಂಸೇವಕಿಯರು ಪ್ರತಿಜ್ಞೆ ಮಾಡಿ ನಿಂತರು. ಕೊನೆಗೆ ಮಾರ್ಕೆಟ್ಟು ಬಿಗ

ಬಾಗಬೇಕೆಂದು ನಿರ್ಣಯವಾಗಿ, ಪಿಕೆಟಿಂಗಕ್ಕೆ ಜಯವಾಯಿತು. ದಂಗೆಮಾಡಿರಿ- ಪೋಲಿಸ ನೆಂಪು ಬೇಕಾದರೆ- ಇರಲೆಂದು ಹತ್ತಿರವೇ ನೂರನ್ನೂರು ಪೋಲಿಸರನ್ನು ನಿಲ್ಲಿಸಿದ್ದರು. ನಮ್ಮ ಜಗಳ ಹೆಗೇ ಇರಲಿ; ಪೋಲಿಸರು ಸಹಾಯ ತಕ್ಕೊಳ್ಳಕ್ಕದ್ದಲ್ಲೆಂದು ಅಂಗಡಿಯವರು ಗೊತ್ತು ಮಾಡಿಕೊಂಡಿದ್ದರು ಇದೊಂದು ಅವರ ಹೊಗಳುವಂಥ ವಿಚಾರವೇ ಸೈ

ಗುಳೇದಗುಡ್ಡದಲ್ಲಿ ದಬ್ಬಾಳಿಕೆ.

— (೦) —

ಐವರಿಗೆ ಶಿಕ್ಷೆ.

— (೦) —

ಬುಧವಾರ ೧೮ನೆಯ ತಾರೀಖಿನ ದಿವಸ ಶಿಂದಿಯ ಗಡಂಗಗಳ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ಪೋಲೀಸರು ಐವರನ್ನು ಹಿಡಿದರು. ಶ್ರೀ ಮುತರಾದ

೧ ಅಡಸಾಬ ಬಿಮಣಿಮಾವ

೨ ಶಿವಪ್ಪಾ ತಿಂಗದ

೩ ಬೆಂಬ್ಬಣ್ಣಾ ಶೇಕಾ

೪ ಪಾಂಡಪ್ಪಾ ನಿರಂಜನ

೫ ಖಾದಿರಸಾಹೇಬ ದೇವರಮನಿ ಇವರನ್ನು ಹಿಡಿದ ಮಧ್ಯೇ ಕೇಳಿದ ಕೂಡಲೆ- ಊರ ಜನರು ದೊಡ್ಡ ಮೆರವಣಿಗೆ ತೆಗೆದು ಅತ್ಯಂತವಾದ ಉತ್ಸಾಹದಿಂದ ಇವರನ್ನು ಊರಗಡೀ ದಾಟಿಸಿದರು. ಅಂದೇ ಮಧ್ಯಾನ್ಹದಲ್ಲಿ ಬಾದಾಮಿಯಲ್ಲಿ ವಿಚಾರಣೆ ಮಾಗಿ, ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರಿಗೆ ಒಂದೊಂದು ತಿಂಗಳ ಕೈದು ಮತ್ತು ಐನೂರ್ತೈವತ್ತು ರೂಪಾಯಿ ದಂಡದ ಶಿಕ್ಷೆ ವಿಧಿಸಿದರು ಅಂದೇ ಸಾಯಂಕಾಲದಲ್ಲಿ ಗಾಂಧಿ ಚೌಕಿನಲ್ಲಿ ಶ್ರೀ ಶಂಕರಪ್ಪಾ ಬಸ್ಸಣ್ಣ ಧನಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ತುರಂಗವಾಸಿಗಳ ಅಭಿನಂದನ ಮಾಡಲ್ಪಟ್ಟಿತು.

ರಾಷ್ಟ್ರೀಯ ನಿಶಾನೆ ಕಿತ್ತಿದವರಿಗೆ ಬರತಫ್ಫ.

—)(— (೦) —)(—

ರತ್ನಾಗಿರಿಯ ಡಿಸ್ಟ್ರಿಕ್ಟ ಲೋಕಲಬೋರ್ಡ ಕಚೇರಿಯ ಮೇಲೆ ರಾಷ್ಟ್ರೀಯ ನಿಶಾನೆಯನ್ನೇರಿಸುವ ಸಮಾರಂಭವಾಯಿತು. ಯಾವನೋರ್ವನು ಗುಪ್ತವಾಗಿ ಈ ನಿಶಾನೆಯನ್ನು ತೆಗೆದು ಹಾಕಿದನು ಇದರ ವಿಚಾರಣೆಯು ಬೋರ್ಡಿನ ಜನರಲ ಕಮೀಟಿಯ ಮುಂದೆ ನಡೆಯಿತು. ಅಪರಾಧಿಯನ್ನು ಹುಡುಕಿ ತೆಗೆಯಬೇಕು. ಆತನು ಸರಕಾರೀ ಕಾಮದಾರನಾಗಿದ್ದರೆ- ಬರತಫ್ಫ ಮಾಡಬೇಕು. ಬೋರ್ಡಿನ ಭೃತ್ಯನಾಗಿದ್ದರೆ- ಆತನ ಮೇಲೆ ಖಟ್ಲೆ ಮಾಡಬೇಕೆಂದು ತೀರ್ಮಾನವಾಯಿತು.

ಮುಂಬಯಿಯಲ್ಲಿ ದಬ್ಬಾಳಿಕೆ.

ನೀನು ನನ್ನ ಲಗ್ನದ ಗಂಡನಿದ್ದು ನಾನು ವಯಸ್ಸಿಗೆ ಬಂದ ಮೇಲೆ ಸಹ ನೀನು ನನ್ನನ್ನು ಕರಕೊಂಡು ಹೋಗಲಿಲ್ಲಾ ನನ್ನ ತವರಮನೆಯವರು ಕೆಲವು ಪಂಚಾಯ ಮಧ್ಯಸ್ಥಿಯಿಂದ ೧೦ ತಿಂಗಳ ಜುಲುಮೆಯಿಂದ ನನ್ನನ್ನ ನಿನ್ನ ಮನೆಗೆ ಕಳುಹಿದರು ಆದರೂ ನೀನು ನನ್ನ ಕೂಡ ಜನ್ಮಾಗಿ ಬಾಳ್ವೆ ಮಾಡಲಿಲ್ಲಾ ನನ್ನನ್ನು ಹೊಡೆದೂ ಒದಿದೂ ಮಾಡಿ ನಾನಾತರದ ತಾಸುಕೊಟ್ಟು ಮೈಮೇಲಿದ್ದ ದಾಗೀನೆ ಅರಿವಿ ಅಂಜಿಸಿ ಸಹ ಕರಕೊಂಡು ಹೋಗಿ ಅಟ್ಟಿದಿ ಇಂದಿಲ್ಲ ನಾಳಿಗೆ ನಿನಗೆ ತಿಳುವಳಿಕೆ ಹುಟ್ಟಿ ಕರಕೊಂಡು ಹೋಗಿ ಬಾಳ್ವೇ ಮಾಡೀಯಂದು ಈಗ ೬-೭ ವರ್ಷಗಳಿಂದ ನಿನ್ನ ಹಾದೀ ನೋಡಿದೆನು ಆದರೂ ನೀನು ಕರಕೊಂಡು ಹೋಗಲಿಲ್ಲ ಮತ್ತೊಬ್ಬಳನ್ನು ಮಾಡಿಕೊಂಡು ಬಾಳ್ವೆ ಮಾಡಹತ್ತಿದಿ ನನ್ನ ತವರಮನೆಯವರು ಒಡವರಿದ್ದ ಕಾರಣ ಅವರೂ ನನ್ನನ್ನು ಇಟ್ಟುಕೊಳ್ಳಲಿಕ್ಕೆ ಇಷ್ಟಪಡಲಿಲ್ಲಾ ಅದ್ದರಿಂದ ನಾನು ನನ್ನ ಹೊಟ್ಟೆ ಒಟ್ಟಿಗಳ ವೆಚ್ಚಕ್ಕಾಗಿ ಸಾವಕಾರ ಕಡೆಯಿಂದ ಸಾಲ ಮಾಡಬೇಕಾಯಿತು ಈಗ ಸಾಲವೂ ಹುಟ್ಟಿದಂತಾಗಲು ನಾನು ನಿರುಪಾಯಳಾಗಿ ಎರಡನೆದವನನ್ನು ಉಡಕಿ ಮಾಡಿಕೊಳ್ಳುವ ಪ್ರಸಂಗ ಒದಿರುತ್ತದೆ ಕಾರಣ ಈ ನೋಟೀಸಿನ ದ್ವಾರಾ ನಿನಗೆ ತಿಳಿಸುವದೇನಂದರೆ-

ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನೀನು ನಾಲ್ಕು ಮಂದಿ ಪಂಚರನ್ನು ಕೂಡಿಕೊಂಡು ಬಂದು ಸಾವಕಾರರ ಸಾಲ ಅಜಮಾಸು (೩೦೦) ರೂಪಾಯಿ ತೀರಿಸಿ ನನ್ನ ಜೀವರಕ್ಷಣೆಯ ಒಗ್ಗೆ ಖಾತ್ರಿ ಕೂಡಿಸಿ ನನ್ನನ್ನು ಕರಕೊಂಡು ಹೋಗಬೇಕು ಒಂದು ವೇಳೆ ನೀನು ಸದರೀ ಮುದ್ದತ್ತಿಗೆ ಒಂದು ನನ್ನನ್ನು ಕರಕೊಂಡು ಹೋಗದಿದ್ದರೆ ಈ ನೋಟೀಸೇ ಸೋಡಚೀಟಿನುಂದು ತಿಳಿದು ನಾನು ನನ್ನ ಮರ್ಜೀ ಪ್ರಕಾರಾ ಮತ್ತೊಬ್ಬನನ್ನು ಉಡಕೀ ಮಾಡಿಕೊಳ್ಳುತ್ತೇನೆ ಆನಂತರಾ ನನ್ನ ಮೇಲೆ ಹಾಗೂ ನನ್ನನ್ನು ಉಡಕೀ ಆದವನ ಮೇಲೆ ನಿನ್ನ ಯಾವ ಸ್ಥಿತಿಂದ ಹಕ್ಕು ಬಾಧ್ಯತೆಯೂ ಉಳಿಯಲಿಕ್ಕಿಲ್ಲಾ ಅಂತಾ ಕೊಟ್ಟ ನೋಟೀಸು ಸಹಿ- ತಾ॥

ಈ ಎಡಗೈ ಹೆಬ್ಬೆರಳಿನ ಗುರ್ತಾ ಯಮನವ್ವಾ ಕೋಮ ಮಲ್ಲಪ್ಪಾ ನಾವಲಿಗೇರ ಇವಳದು ಸಹಿ-

ನೋಟೀಸು

ದಾವಲಸಾಬ ವ॥ ರಾಜೇಸಾಬ ಖಾಜೇಖಾನ ವರ ಹಾಲೋಬೀಡಿ ಜಿಲ್ಲಾ ಧಾರವಾಡ ಇವರಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡಿದ ನಾನು ರಾಜಪ್ಪಾ ಕೋಂ ದಾವಲಸಾಬ ಖಾಜೇಖಾನ ವರ ಹಾಲಿವಸ್ತಿ ಯಾದವಾಡ ತಾಲೂಕ ಧಾರವಾಡ ನಾನು ಮಾಡುವ ನೋಟೀಸು ಏನಂದರೆ-

ನೀನು ನನ್ನ ಮದುವೆಯ ಗಂಡನಿದ್ದು ಈಗ ಒಳಗಾದೆ ೩-೪ ವಾರ ನಿನಗೆ ನೋಟೀಸ ಕೊಟ್ಟಿರುತ್ತೇನೆ ಆ ನೋಟೀಸಗಳ ಒಗ್ಗೆ ನೀನು ಈ ವರೆಗೂ ಏನೂ ಲಕ್ಷ ತೆಗೊಂಡಿಲ್ಲ ಕಾರಣ ಈಗ ಪುನಃ ನೋಟೀಸ ಕೊಡುವ ಭಾಗವಿತ್ತು ನೀನು ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ಬಂದು ಒಂದುನೆರಾವವತ್ತು ರೂಪಾಯಿ ಹಾಗೂ ನನ್ನ ಮೈಮೇಲೆ ದಾಗೀನೆ ಇಟ್ಟು ನಾಲ್ಕು ಮಂದಿ ತಿರಿಯರ ಸಮಕ್ಷವ ಕರಕೊಂಡು ಹೋಗಬೇಕು ಈ ವಾರೆಯ ನೋಟೀಸಿಗೆ ತಪ್ಪಿದಲ್ಲಿ ನಾನು ಬೇರೆ ಕಡೆಗೆ ಉಡಕಿ ಮಾಡಿಕೊಂಡು ಹೋಗುತ್ತೇನೆ ಆಮೇಲೆ ನನ್ನ ಮೇಲೆ ನಿನ್ನ ಯಾವತರದ ಕಾಯದೇತೀರ ಹಕ್ಕು ಉಳಿಯಲಿಕ್ಕಿಲ್ಲಾ ಮತ್ತು ನಾನು ಮಾಡಿಕೊಂಡು ಹೋದ ಉಡಕಿ ಗಂಡನ ಮೇಲೂ ನಿನ್ನ ಕಾಯದೆ ಪ್ರಕಾರ ಯಾವದೇ ತರಹದ ಹಕ್ಕು ಉಳಿಯುವದಿಲ್ಲಾ ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲೆ ಅಂತಾ ಕೊಟ್ಟ ನೋಟೀಸ ತಾ॥ ೨೮-೧೦-೧೯೩೦ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ರಾಜಪ್ಪಾ ಕೋಂ ದಾವಲಸಾಬ ಖಾಜೇಖಾನ ವರ ಹಾಲಿವಸ್ತಿ ಯಾದವಾಡ ಈಕಿಯದು ಆದೆ

ನಕಾಲೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲ

ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲ

ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲ ಪ್ರಸಿದ್ಧವಾಗಿ ಇವುಗಳಲ್ಲಿ ಎರಡೂ ಜಿಲ್ಲೆಗಳ ಲಿಣ್ಣ ಮಾಹಿತೀ ಇರುತ್ತದೆ. ಹೆಚ್ಚು ಪ್ರತಿಗಳನ್ನು ಪೂರೈಕ್ಕವರಿಗೇ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಚ್ಚ ಎಮ. ಅಕ್ಕುಂಡಿ,
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಈ ಪತ್ರಿಕೆನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾ ಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಶುಕ್ರವಾರ ತಾರೀಖು ೩೦ ನೇ ಅಕ್ಟೋಬರ ೧೯೩೦ (ಸಂಚಿಕೆ ೨೩೨

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಡಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ಡಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾವಧೂತರ ಅಸೆಂಬ್ಲಿ, ಶ್ರೀ. ಅರೂಢಸ್ವಾಮಿಗಳ ಲೈಫಿಯಸ್ಟು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತವಾದಿ, ಪ್ರತಿವಾದಿ, ಹಾಗು ಮುನಸಫರ ಬಾನಜಿಕಗಳನ್ನೂ ಕೊಟ್ಟಿರುತ್ತದೆ. ಪುಸ್ತಕದ ಬೆಲೆ ಅಗ್ರಕದ ಸಾಹಿಯ ಮೇಲಿಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ಡಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುರುವೆನಿಸುವವು, ಆದರಿಂದ ಗ್ರಾಹಕರು ಶೀಘ್ರ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರದ್ದಾರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ಯಾ. ಪಿ. ಪರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಸವಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ಯಾ. ಪಿ. ಯಿಂದ ಬರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಚಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ೫೦ ಮತ್ತು ಟೇಲರಿಂಗ ೧೫ ಹದಿನೆದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕಲಿಸುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಜಸ್ಸಿನ ಪ್ರಕಾರ ತಿಂಗಳಾ ಕನಿಷ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಯ ಎಂಟು ಲಕ್ಷದ ನೋಟುಂಟು. ಚಲ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಪ್ರ ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗ ಜನ್ಯಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮುಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರೆ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುವುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಮತ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಕಾರ್ತೀಕ ಶುದ್ಧ

ರಾವುಂಡ ಟೇಬಲಕ್ಕೆ ಹೋದ ಹಿಂದೀ ಪ್ರತಿನಿಧಿಗಳಿಗಾದ ಅಪಮಾನ

—(೦)—

ಅಡಕೆಗೆ ಹೋದ ಮಾನ ಅನೆ ಕೊಟ್ಟರೂ ಬರುವದೇ ?

—(೦)—

ಹಿಂದೀ ಪ್ರತಿನಿಧಿಗಳಲ್ಲಿ, ಕೆಲವರು ಅಜೆಯ ಶನಿವಾರ ದಿವಸ ಲಂಡನ ತಲ್ಲಿದರು. ಇವರ ಹಾಗು ವಸಾಹಾತಿನ ಪ್ರತಿನಿಧಿಗಳ ಸ್ವಾಗತದಲ್ಲಾದ ಎಡಗೈ ಬಲಗೈ ಭೇದವನ್ನು ಈ ಮೊದಲು ಬರೆದಿದ್ದೇವೆ. ಅದಕ್ಕೂ ಹೆಚ್ಚಿನ ಭೇದವು ವಿಮಾನಗಳನ್ನು ನೋಡಲಿಕ್ಕೆ ಹೋದಾಗ ಸ್ಪಷ್ಟವಾಗಿ ಒಡೆದು ಕಾಣಿಸಿತು. ವಸಾಹಾತಿನ ಪ್ರತಿನಿಧಿಗಳಿಗೆ ಕ್ರಾಯಡನ್ನದಲ್ಲಿರುವ ವಿಮಾನಗಳ ಪ್ರದರ್ಶನ ನೋಡಲು ಆಮಂತ್ರಣವಿತ್ತು. ಅವರ ಸಂಗಡ ಹಿಂದೀ ಪ್ರತಿನಿಧಿಗಳಿಗೂ ಆಮಂತ್ರಣ ಬಂತು. ಮಧ್ಯಿಯೆಮನೆಯಲ್ಲಿ ಒಂದೇಮಾದರಿಯ ಕಾರ್ಡಿನ ಮೇಲೆ ಔತಣವಿರುವದು. ಮಧ್ಯಿಯೆಯ ಮಂಟಪಕ್ಕೆ ಹೋದಕೂಡಲೆ ತಾರತಮ್ಯ ಪ್ರಾರಂಭವಾಗುವದು. ಅದ್ದೇ ಹಾಡು ಇಲ್ಲಿ ಕಂಗೊಳಿಸಿತು. ಮುಖ್ಯ ಪ್ರಧಾನರಾದ ಮೆ. ಮ್ಯಾಕಡೊನಾಲ್ಡ ಸಾಹೇಬರು ವಸಾಹಾತಿನ ಡೆಲಿಗೇಟರ ಸ್ವಾಗತ ಮತ್ತು ಆತಿಥ್ಯ ಸತ್ಕಾರಕ್ಕಾಗಿ ಸಿದ್ಧರಾಗಿದ್ದರು. ಆದರೆ ಹಿಂದೀ ಪ್ರತಿನಿಧಿಗಳನ್ನು ಕೇಳುವವರ ದಿಕ್ಕೇ ಇರಲಿಲ್ಲ. ಇವರನ್ನು ಒಂದು ಮೂಲೆಯಲ್ಲಿ ನಿಲ್ಲಿಸಿದರು. ಕೂಡ್ರಲಿಕ್ಕೆ ಖುರ್ಚಿ ಬೆಂಚು ಕೂಡ ಇರಲಿಲ್ಲ, ಕೊಡಲಿಲ್ಲ. ಯಾರೂ ಬನ್ನಿರೆಂದು ಉಪಚಾರದ ಮಾತುಗಳನ್ನಾಡಲಿಲ್ಲ. ಉಪವಾಸದಿಂದ ಬಳಲಿದರೂ ಯಾರೂ ಇವರನ್ನು ಕೇಳಲಿಲ್ಲ. ವಸಾಹಾತಿನ ಡೆಲಿಗೇಟರು ಪಕ್ವಾನ್ನಗಳಿಂದ ಪುಷ್ಟರಾಗುತ್ತಿದ್ದಾಗ, ಯಾರೋ ಒಬ್ಬರು ಇವರಿಗೆ ಕಾಗೆಗೆ ಹಗೆಯುವಂತೆ ಹಲಾತಿಂದು ಹಲ್ಲಿದರು. ಸ್ವತಃ ಮ್ಯಾಕಡೊನಾಲ್ಡ ಸಾಹೇಬರು ಇವರ ಮುಂದೆ ಹಾದು ಹೋದರೂ, ನೀ ಯಾರೆಂದು ಇವರನ್ನು ಮಾತಾಡಿಸಲಿಲ. ಒಬ್ಬ ಸಾಹೇಬನಂತೂ ನಾಗಪೂರದ ಗವರ್ನರರಾಗಿದ್ದನು. ತಾಂಜೆಯವರಿಗೆ ನಿಮಗೆ ಇಂಗ್ಲಿಷ ಬರುತ್ತದೆಯೋ ಎಂದು ಪ್ರಶ್ನೆ ಮಾಡಿದನು. ಇದೆಲ್ಲ ಅಪಮಾನವನ್ನು ಸಂಧೀ ಮುಖಂಡರಾದ ಬ್ಯಾರಿಸ್ಟರ ಜಯಕರರು ಹುಚ್ಚಮಲ್ಲಿಯಾಗಿ ನೋಡುತ್ತಾ ನಿಂತಿದ್ದರು.

ಹೀಗೆ ಒಂದೇಸವನೆ ಎರಡು ತಾಸುಗಳ ವರೆಗೆ ಆಗ್ರಾಂತುಕರಂತೆ ನಿಂತು, ಬಂದ ಹಾದಿಗೆ ಸುಂಕವಿಲ್ಲೆಂದು ಇವರು ಹಿಂದುರಿಗಿ ಬಿಡಾರಕ್ಕೆ ಹೋದರು. ಸಮಾರಂಭ ಮುಗಿದ ಬಳಿಕ ಈ ವರ್ತಮಾನವು ಮೆ. ಜೆನ್ನ ವೆಜ್ಜವುಡ್ಡ ಸಾಹೇಬರಿಗೆ ತಿಳಿಯಿತು. ಅವರು ತಮ್ಮ ವತಿಯಿಂದ ಇಬ್ಬರು ಸಾಹೇಬರನ್ನು ಕಳಿಸಿ, ಕ್ಷಮೆ ಬೇಡಿಕೊಂಡರು. ಮೆ. ಮ್ಯಾಕಡೋನಾಲ್ಡ ಸಾಹೇಬರು ವಸಾಹಾತಿನ ಡೆಲಿಗೆಟರ ಸ್ವಾಗತಕ್ಕಾಗಿ ಕೈ ಕಟ್ಟಿಕೊಂಡು ನಿಂತಂತೆ ಮೆ. ಜೆನ್ನ ಸಾಹೇಬರೇಕೆ ನಿಲ್ಲಬಾರದಾಗಿತ್ತು ? ಅಥವಾ ಇವರ ಸ್ವಾಗತ ಮಾಡಲಿಕ್ಕೆ ತಮ್ಮ ಕಚೇರಿಯ ಶಾಮದಾರರನ್ನೇಕೆ ಕಳಿಸಬಾರದಾಗಿತ್ತು ? ಮೊದಲು ತಪ್ಪು ಮಾಡುವದು; ಆನಂತರ ,, ಆಪಾಲಜಿ ,, ಎನ್ನುವದು ಇಂಗ್ಲಿಷರಿಗೆ ಮೈವುಂಡ ಮಾತಾಗಿದೆ. ಹಿಂದೀ ಜನರು ಹೀಗೆ ತಿಳಿಯುವವರಲ್ಲ. ಅಡಿಕೆಗೆ ಹೋದ ಮಾನ ಅನೆ ಕೊಟ್ಟರೂ ಬರದೆನ್ನುವರು.

ಅಹಮದಾಬಾದಿನಲ್ಲಿ ಹೊಸ ಕಾಂಗ್ರೆಸ ಕಚೇರಿ.

—(೦)—

ಅಹಮದಾಬಾದಿನಲ್ಲಿ ಸರಕಾರದವರು ಮೊದಲಿನ ಕಾಂಗ್ರೆಸ ಕಚೇರಿಯನ್ನು ಜಪ್ತ ಮಾಡಿದ ಬಳಿಕ, ಎರಡನೆಯ ಕಚೇರಿ ಪ್ರಾರಂಭ ಮಾಡುವ ಸಮಾರಂಭವಾಯಿತು. ಕಲೆಕ್ಟರಸಾಹೇಬರು ಅಲ್ಲಿಗೆ ಬಂದು, ಈ ಸ್ಥಳವನ್ನು ನೀನು ಬಾಡಿಗೆಯಿಂದ ಕೊಟ್ಟಿರುವಿಯಾ ಎಂದು ಅದರ ಮಾಲೀಕನಿಗೆ ಕೇಳಲು ಬಾಡಿಗೆಯಿಂದಿಲ್ಲ; ಉಚಿತವಾಗಿ ಕೊಟ್ಟಿದ್ದೇನೆ. ದೇವರ ದಯೆಯಿಂದ ನನಗೆ ಅನೇಕ ಮನೆಗಳುಂಟು. ಇವೆಲ್ಲವನ್ನೂ ಕಾಂಗ್ರೆಸಕ್ಕೆ ಹಾಗೇ ಕೊಡುವೆನೆಂದು ಉತ್ತರ ಕೊಟ್ಟನು. ಸಾಹೇಬರು ಕಾಂಗ್ರೆಸಕ್ಕೆ ಮನೆ ಕೊಡುವದು ಅಪರಾಧವೆಂದು ಹೇಳಿ; ಈ ಕನನ್ನು ಹಿಡಿಕೊಂಡು ಹೋದರು. ಬೇಕಾಯದೆಶೀರವಾದ ಕಾಂಗ್ರೆಸ ಕಚ್ಚೇರಿಯು ಬೇಕಾಯದೆಶೀರವಾಗಿಯುಳಿಯಿತು.

ನಗರ ಇಬ್ರಾಹಿಮ ರಹಿಮತುಲ್ಲಾ ಸಾಹೇಬರು ಡಾಕ್ಟರರ ಅಭಿಪ್ರಾಯದ ಮೇರೆಗೆ ರಾವುಂಡ ಟೇಬಲಕ್ಕೆ ಹೋಗುವದನ್ನು ರಹಿತ ಪಡಿಸಿದರು. ಒಳ್ಳೇ ಜಾಣರು.

ಮುಂಬಯಿಯಲ್ಲಿ ಈರ್ಷರು ಪೊಲಿಸರ ಭೆಂಡತನ.

ಮುಂಬಯಿಯಲ್ಲಿ ಆದಿತ್ಯವಾರ ದಿವಸ ತರುಣಿ ಮತ್ತು ಸುಂದರಿಯಾದಂಥ ಸ್ತ್ರೀಯರನ್ನು ಸಾರ್ಜಂಟರು ಅಜದ ಬೈಲಿನಲ್ಲಿ ಹಿಡಿದು, ಅವರನ್ನು ಊರ ಹೊರಗೆ ಅತಿಯಲ್ಲಿ ಬಿಟ್ಟು, ಅವರಿಗೆ ಯಾವ ದಾರಿ ತೋರದಂತೆ ಮಾಡಿದ್ದು ಅತ್ಯಂತ ಗರ್ಹಣೀಯವಾಯಿತು. ಕೆಲ ಸತ್ಯಾಗ್ರಹಿ ಗಂಡಸರನ್ನು ಹಿಡಿದು, ಅವರನ್ನು ಅಡವೀಪಾಲು ಮಾಡಿದ್ದ ವರ್ತಮಾನವು ಆಲ್ಲಲ್ಲಿ ಕೇಳಿ ಬರುತ್ತಿತ್ತು. ಸ್ತ್ರೀಯರನ್ನು ಹೀಗೆ ಕಣ್ಣು ಕಟ್ಟಿ ಬಿಟ್ಟವರಂತೆ ಮಾಡಿದ್ದು ಎಲ್ಲಿಯೂ ಕೇಳಿಬರಲಿಲ್ಲ. ಮುಂಬಯಿಯ ಪೊಲಿಸರು ಈ ಕೊರತೆಯನ್ನು ಪೂರ್ಣಮಾಡಿಹೆಗಲು ಪಡೆದರು. ಈ ಕೃತ್ಯವು ಅತ್ಯಂತ ನಿಂದ್ಯವಾಯಿತೆಂದು ಯಾರಾದರೂ ಹೇಳುವಂತಾಗುತ್ತದೆ.

ಇದಕ್ಕೂ ಹೆಚ್ಚಿನ ನಿಂದ್ಯ ಆಚರಣೆಯನ್ನು ಮೆಕಂಜಿ ಎಂಬ ಸಾರ್ಜಂಟನೂ, ವಿಚಾರಿ ಎಂಬೋರ್ವ ಹಿಂದೂ ಅಮಲದಾರನೂ ಮಾಡಿದ್ದಾರೆಂಬ ಆರೋಪದ ಫಿರ್ಯಾದಿಯಾಗಿರುತ್ತದೆ. ಪೊಲಿಸರು ೨೨ ಜನ ಸ್ತ್ರೀಯರನ್ನು ಲಾಕಪ್ಪಿನಲ್ಲಿಟ್ಟಾಗ- ಮಧ್ಯರಾತ್ರಿಯಲ್ಲಿ ಈ ಕಾಮಾಂಧರು ಅವರ ಕೋಣೆಗಳ ಹತ್ತರ ಹೋದರು.

ಮೆಕೆಂಜಿಸಾಹೇಬನು ಇವರಿಗೆ-

> ನಿಮ್ಮ ಸುಂದರಿ, ಸುಕುಮಾರಿಯರಾಗಿದ್ದೀರಿ. ನಾನು ಅವಿವಾಹಿತನಾಗಿದ್ದೇನೆ.

ಎಂದಾಗಿ ಒಮ್ಮೆಯಲ್ಲ; ಹಲವು ಸಾರೆ ಇವರಿಗಂದನು. ಇವನಂತೆ ಹಿಂದೂ ಮನುಷ್ಯನಾದ ವಿಚಾರಿಯೂ ಅವಿಚಾರಿಯಾಗಿ, ಸ್ತ್ರೀಯರಿಗೆ ಅಪಮಾನವೆನಿಸುವಂಥ ಮಾತ್ರ ಬಾಯಿಯಿಂದ ಉಚ್ಚಾರ ಮಾಡಲಿಕ್ಕೆ ಬರದಂಥ ಘಾಲ್ಯಣ ಮಾಡಿದ ಶಬ್ದಗಳನ್ನಾಡಿದನು. ಮ್ಯಾಜಿಸ್ಟ್ರೇಟರು ಹೆಣ್ಣುಮಕ್ಕಳಿಗೆ ಶಿಕ್ಷೆ ಹೇಳಿದನಂತರ- ಅವರ ವಕೀಲರು ಈ ಸಂಗತಿಯನ್ನು ಕೋರ್ಟಿನ ಮುಂದೆ ತಂದರು. ಮ್ಯಾಜಿಸ್ಟ್ರೇಟರು ಯುರೋಪಿಯನ್ನ ಸಾರ್ಜಂಟನ್ನು ಕರೆಸಿ, ಅವರ ಪರೇಡ ಮಾಡಿಸಿದರು. ಸ್ತ್ರೀಯರು ಮೆಕಂಜಿಯನ್ನು ಗುರ್ತಿಸಿದರು. ವಿಚಾರಿಯು ಆಗ ತಕ್ಕದ್ದುಂಟು.

ಸಾರ್ಜಂಟರಿಗೆ ಘುಚ್ಚ ಹಿಡಿದಂತೆ ತೋರುತ್ತದೆ. ಏಕಂದರೆ- ಇವರು ಅಜದ ಬೈಲಿನಲ್ಲಿ ಬೇಕಂದು ಚಲುವೆಯರಾದಂಥ ಹುಡಿಗೆಯರ ಕೈಹಿಡಿದು ದಸ್ತಗಿರ ಮಾಡುವದಲ್ಲದೆ, ಹೊಡೆಯುವ ಥಳಿನದಿಂದ, ಅವರ ಮೈ ಮುಟ್ಟುವರು. ಸರಕಾರದವರು ಸಾರ್ಜಂಟ ಮತ್ತು ಬೇರೆ ಪೋಲಿಸರಿಂದ್ರಾಗುವ

ಹೆಣ್ಣುಮಕ್ಕಳ ಅಪಮಾನವನ್ನು ತಡೆಯದಿದ್ದರೆ-ಮುಂದೆ ಘೋರ ಅನರ್ಥವೇ ಸಂಭವಿಸುವದೆಂದು ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಶೈಲದ ದೊಡ್ಡ ಹುಲಿಯು ದಬ್ಬಾಳಿಕೆಗೆ ಶುರುವಾಯಿತು.

ಕರ್ನಾಟಕದಲ್ಲಿ ಶ್ರೀ ಮರುಳಾರಾಧ್ಯಶಾಸ್ತ್ರಿಗಳ ಹೆಸರು ಕೇಳದವರೇ ಇಲ್ಲ. ವೀರಶೈವರಲ್ಲಂತೂ ಇವರು ಲೋಕಪ್ರಿಯರಾದವರು. ಚಿಕ್ಕ ವಯಸ್ಸಿನವರಾದರೂ ಕಾಶಿಯಲ್ಲಿ ಕಲಿತು ಬಂದ ವಿದ್ವಾಂಸರು. ಸಾಹಿತ್ಯ, ಜೋತಿಷ್ಯ ಮತ್ತು ಆಯುರ್ವೇದವನ್ನು ಅಭ್ಯಾಸಿಸಿದವರು. ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾದಾನ ಮಾಡಿಸುವರು. ಬಡವರಿಗೆ ಉಚಿತವಾಗಿ ಔಷಧಿ ಕೊಡುವರು. ಉಜ್ವಲರಾದ ದೇಶಭಕ್ತರು. ಸ್ವದೇಶೀ ಚಳವಳಿಯಲ್ಲಿ ಮುಂದಾಳುತ್ವವನ್ನು ವಹಿಸಿದವರು. ಇಂಥವರು ತುರಂಗದ ಹೊರಗಿರುವದು ಮಹತ್ಪಾಪವೆ! ಶಾಖಾಮಂಡಿಕೆಯಲ್ಲಿ ಉಪ್ಪಿನ ಕಾಯದೆಭಂಗ ಮಾಡುವ ಭಾಷಣ ಮಾಡಿದರೆಂಬ ಆರೋಪದಿಂದ ಇವರನ್ನು ಹಿಡಿದರು. ಇವರನ್ನು ಹಿಡಿದ ವರ್ತಮಾನ ಬಂದ ಕೂಡಲೆ- ಗದಗಿನಲ್ಲಿಯ ಸಾಬೇತಿ ಗ್ರಾಮಗಳಲ್ಲಿಯೂ ಹರತಾಳವಾಯಿತು. ಇದೊಂದೇ ಸಂಗತಿಯು ಇವರೆಷ್ಟು ಜನಪ್ರಿಯರೆಂದು, ದೇಶಾಭಿಮಾನಿಗಳೂ ಆಗಿದ್ದಾರೆಂಬದನ್ನು ತೋರಿಸುತ್ತದೆ. ಶಾಸ್ತ್ರಿಯವರ ವಿಚಾರಣೆಯು ವಿಜಾಪೂರದ ಮಾಮಲೇದಾರರ ಮುಂದಾಗಿ, ನಾಲ್ಕು ತಿಂಗಳ ಕಠಿಣ ಶಿಕ್ಷೆಯಾಯಿತು. ಬ ಕ್ಲಾಸ ಕೊಟ್ಟಿದ್ದಾರೆ. ತೀರ್ಪು ಹೇಳುವಾಗ ಸಾವಿರಾರು ಜನರು ಕಚೇರಿಯ ಮುಂದೆ ನೆರೆದಿದ್ದರು. ಇವರು ಶಾಸ್ತ್ರಿಗಳಿಗೆ ಹೂವಿನ ಮಾಲೆ ಹಾಕಿದರು. ಹೂವು ತೂರಿ, ಜಯಜಯಕಾರ ಮಾಡಿದರು. ಫಲಕ್ಕೊಟ್ಟು ಬಹುಮಾನ ಮಾಡಿದರು.

ಶ್ರೀ ಸೇನಗುಪ್ತರ ಸಂದೇಶ

——(ಅ)——

ಶ್ರೀ ಸೇನಗುಪ್ತರನ್ನು ಅಮೃತಸರದಲ್ಲಿ ಹಿಡಿದು, ದಿಲ್ಲಿಗೆ ಕೈದಿಸ್ಥೇ ಇವರ ಸಂದೇಶವೆಂದು ಇವರ ಪತ್ನಿಯವರು ಅಮೃತಸರದಲ್ಲೊಂದು ಭಾಷಣಮಾಡಿದರು. ಇಂಗ್ಲಿಷವೆನ್ನುವದಕ್ಕೆಲ್ಲ ಒಪ್ಪಿಸ್ಕಾರ ಹಾಕಬೇಕೆಂದು ಅವರ ಅಂದೇಶವಾಗಿರುತ್ತದೆಂದು ಹೇಳಿದರು.

ತಂಜಾವರ ಪ್ರಾಂತದಲ್ಲಾದ ಅತಿವೃಷ್ಟಿಯಿಂದ ಒಂದು ಸ್ಟೇಶನವೇ ತೆಲಿ ಹೋಯಿತು. ಅದರ ಸಂಗಡ ಪ್ರವಾಹದಲ್ಲಿ ಸ್ಟೇಶನಮಾಸ್ತರನ ಮಗನೂ ಅದೃಶ್ಯನಾದನು.

ಪಂಡಿತ ಜವಾಹರಲಾಲರಿಗೆ ಭಯಂಕರ ಶಿಕ್ಷೆ.

ಪಂಡಿತರ ಮೇಲೆ ಉಪ್ಪಿನ ಕಾಯದೆ ಮುರಿದ ಬಗ್ಗೆ, ಪತ್ರೆ ಕೊಡಬಾರದೆಂದು ಉಪದೇಶ ಮಾಡಿದ ಬಗ್ಗೆ ಮತ್ತು ರಾಜದ್ರೋಹದ ಭಾಷಣ ಮಾಡಿದ ಬಗ್ಗೆ ಒಟ್ಟು ಎರಡು ವರ್ಷ ಸಶ್ರಮ ಮತ್ತು ಇನೂರು ರೂಪಾಯಿ ದಂಡ ಮಾಡಿದರು. ಈಗಿನ ಚಳವಳಿಯಲ್ಲಿ ಈ ಶಿಕ್ಷೆಯು ಉಗ್ರಸ್ವರೂಪಧಾರಣ ಮಾಡಿ ರುತ್ತದೆ.

ಹೋದ ಸಪ್ಟಂಬರ ತಿಂಗಳಲ್ಲಿ ಹಿಂದುಸ್ಥಾನದ ಆಯಾತ ಮತ್ತು ನಿರ್ಗತದ ವ್ಯಾಪಾರವು ಹಿಂದಿನ ವರ್ಷದ ಸಪ್ಟಂಬರ ತಿಂಗಳಗಿಂತ ಮೂರು ಕೋಟಿಯಿಂದ ಕಡಿಮೆಯಾಯಿತು. ಹಿಂದಿನ ವರ್ಷ ಇಂಭತ್ತು ಕೋಟಿಯದಿತ್ತು.

ಶ್ರೀ. ದಿವಾಕರ ರಂಗರಾಯರು ಶನಿವಾರ ಬೆಳಗಾವಿಯಲ್ಲಿ ಬಿಡುಗಡೆ ಹೊಂದಿ, ಆದಿತ್ಯವಾರ ಇಲ್ಲಿಗೆ ಬರುವರು.

ಮದ್ರಾಸದಲ್ಲಿ ಮುಖ್ಯ ದಿವಾಣರಾದ ಶ್ರೀ. ಮುನಿಸ್ವಾಮಿ ನಾಯಡುನವರು ೪೫ ವರ್ಷದವರಿದ್ದು, ಖಾದೀ ಭಕ್ತರಾಗಿದ್ದಾರೆ.

ರಾಜಮಹೇಂದ್ರಿಯಲ್ಲಿ ಸಬ್ಬ ಇನ್ಸಪೇಕ್ಟರರ ಕೆಲಸಕ್ಕೆ ಆಡ್ಡೀ ತಂದರೆಂದು ಡಾಕ್ಟರ ಮೂರ್ತಿಯವರಿಗೆ ಮೂರು ತಿಂಗಳ ಶಿಕ್ಷೆಯಾಯಿತು.

ಜಮಾಯತಲ್ಲಾದ ಮೆಂಬರ ಮತ್ತು ಯುದ್ಧಮಂಡಲದ ಮೆಂಬರರಾದ ಮೌಲಾನಾ ಸಯ್ಯದ ದಿಲ್ಹಾರ್ಲ್ಲಿರುವರನ್ನು ದಿಲ್ಲಿಯಲ್ಲಿ ಹಿಡಿದಿದ್ದಾರೆ.

ಗಾಂಧೀ ಸ್ವಾಗತ ನಿಧಿ ಮಂಡಲದ ಸಭೆ

೧೯೨೭ನೆಯ ಇಸ್ವಿಯಲ್ಲಿ ಮಹಾತ್ಮಾ ಗಾಂಧೀಯವರು ಧಾರವಾಡಕ್ಕೆ ಬರುವವರಿದ್ದರು. ಅವರಿಗೆ ನಿಧಿಯನ್ನು ಅರ್ಪಿಸಬೇಕೆಂದು "ಗಾಂಧೀಯ ಸ್ವಾಗತ ನಿಧಿ ಮಂಡಲ ಸ್ಥಾಪಿಸಲ್ಪಟ್ಟಿತ್ತು. ಆ ಮಂಡಲದವರು ಸುಮಾರು ೧೦೦೦ ರೂಪಾಯಿಗಳನ್ನು ಕೂಡಿಸಿರುವರು. ಅವಾಗ್ಗೆ ಮಹಾತ್ಮರು ಇತ್ತಕಡೆಗೆ ಬರಲಿಲ್ಲವಾದುದರಿಂದ ಆ ಹಣವು ಹಾಗೆಯೆ ಉಳಿಯಿತು. ಈಗ ಧಾರವಾಡ ಜಿಲ್ಲೆಯಲ್ಲಿ ಖಾದಿಯ ಉತ್ಪತ್ತಿಯು ಹೆಚ್ಚಿಗೆ ಬೆಳೆದಿದ್ದರಿಂದ ಮೊದಲು ಹಣವನ್ನು (ಭಾಂಡವಲ) ಹಾಕಬೇಕಾಗಿದೆಯೆಂದು, ಅ. ಭಾ. ಚ. ಸಂಘ ಕಾರ್ಯದರ್ಶಿಗಳಾದ ಶ್ರೀ. ಕೌಜಲಗಿ ಹನುಮಂತರಾಯರು ತಿಳಿಸುತ್ತಾರೆ. ಮ. ಗಾಂಧೀಯವರ ಅತ್ಯಂತ ಪ್ರೀತಿಯ ವಸ್ತುವಾದ ಖಾದಿಯ ಬಗ್ಗೆ ಈ ಹಣದ ವಿನಿಯೋಗವನ್ನು ಹೇಗೆ ಮಾಡಬೇಕೆಂಬದರ ಬಗ್ಗೆ ಈ ಮಂಡಲದ ಸಭಾಸದರೆಲ್ಲರೂ ನಾಳೆ ತಾ-೧೧-೧೯೩೦ ನೆಯ ದಿನ ಸದರ ಮಹಾರಾಷ್ಟ್ರ ಸ್ಯಾಂಕಿನ ಆಟ್ಟದಮೇಲೆ ಸೇರುವ ಸಭೆಗೆ ಬರಬೇಕಾಗಿ ಬಿನ್ನಹ.

ಧಾರವಾಡ ಗೊ. ಗು. ಗುತ್ತಲ

ತಾ॥ ೨೮-೧೦-೧೯೩೦ ಭಾ. ರಾ. ಪಟವರ್ಧನ

ಗಾಂಧೀ. ಸ್ವಾ. ನಿಧಿಯ ಕಾರ್ಯದರ್ಶಿಗಳು

ಜಾಹೀರ ನೋಟೀಸು

ನಾನು ಕೆಂಗ ಸಹಿ ಮಾಡಿದವನು ಈ ನೋಟೀಸ ಮೂಲಕ ಜಾಹೀರ ಮಾಡುವದೇನಂದರೆ- ನನ್ನ ಮನಿಯಲ್ಲಿ ಅಡಗಿ ಮಾಡಲಿಕ್ಕೆಂತ ಒಬ್ಬ ರುದ್ರಪ್ಪಾ ಯಡಳ್ಳಿಯವರ ಸಾಕೇನ ನರೇಂದ್ರ ಅಂಬುವಾಕೆಯು ಅಜಮಾಸ ೪ ವರ್ಷದಿಂದ ಇದ್ದಳು। ಆಕೆಯು ತಾ॥ ೨೩-೧೦-೧೯೩೦ ನೇ ಬೆಳಿಗ್ಗೆ ಮೃತಪಟ್ಟಳು. ಆಕೆಯ ಬೇನೆಯ ದಶೆಂದ ಔಷಧೋಪಚಾರ ಮಾಡಲಿಕ್ಕೆ ಡಾಕ್ಟರ ಫೀ ಟಾಂಗಾ ಭಾಡಿಗಿ ವಗೈರೆ ಕೂಡಿ ರೂಪಾಯಿ ೧೪-೬-೦ ಮತ್ತು ಸತ್ತ ಕಾಲಕ್ಕೆ ಆಕೆಯ ದಫನ ಮಾಡಲಿಕ್ಕೆ ರೂಪಾಯಿ ೧೦-೮-೦ ನಾನೇ ಖರ್ಚ ಮಾಡಿದ್ದೇನೆ. ಇಷ್ಟು ಹಣಾ ನನಗೆ ಬರತಕ್ಕದ್ದು ಅದೆ. ಸದ್ರಿ ರುದ್ರಪ್ಪನ ಬಾಬತ್ತು ಆಕೆಯ ಮಾಲ್ಕಿ ಜಂಗಮ ಮಾಲು ಒಂದು ಜೋಡು ಬೆಳ್ಳಿ ತೋಳಬಂದಿ, ಒಂದು ಜೋಡು ಭಂಗಾರದ ಕರ್ಣಪೂಲ, ಒಂದು ಭಂಗಾರದ ಮೂಗತಿ' ಗುಳದಾಳ. ಈ ಪ್ರಕಾರ ದಾಗಿನೆಗೆಳು ನನ್ನ ಕಡೆಗೆ ಅವೆ; ಆದ್ದರಿಂದ ಸದ್ರಿಯವಳ ಕಾಯದೇ ಶೀರ ವಾರಸದಾರರಿದ್ದವರು ನನಗೆ ಬರತಕ್ಕ ಹಣಾ ಕೊಟ್ಟು ಸದ್ರಿ ದಾಗೀನೆಗಳನ್ನು ತೆಗೆದುಕೊಂಡು ಹೋಗತಕ್ಕದ್ದು. ಇದರ ಬಗ್ಗೆ ಈ ಜಾಹೀರಾತ ಪ್ರಸಿದ್ಧ ಆದ ತಾರೀಖಿನಿಂದ ೮ ದಿವಸ ದಾರೀ ನೋಡಿ ಸದ್ರಿ ಸಾಮಾನು ಮಾರಾಟ ಮಾಡಿ ನನ್ನ ಹಣಾ ಭರ್ತಿ ಮಾಡಿಕೊಳ್ಳುತ್ತೇನೆ. ಈ ಜಾಹೀರಾತಿನ ಖರ್ಚ ಎರಡು ರೂಪಾಯಿ ಸದ್ರಿಯವರ ಮೇಲೆಯೇ ಇರುತ್ತದೆ. ಮುಂದೆ ಯಾರನೂ ತಕರಾರು ನಡಿಯಲಿಕ್ಕಿಲ್ಲ. ಅಂತಾ ಈ ಜಾಹೀರಾತಿನಿಂದ ತಿಳಿಸಿದ್ದೇನೆ. ತಾ॥ ೩೦-೧೦-೩೦

ಶಿವಲಿಂಗಪ್ಪಾ ಬಸಾಡ ಖಾಮಲಾಪೂರ ಧಾರವಾಡ

ವರ್ತಮಾನಸಾರ

—— (-) ——

ಮರಾಟಿ, ಗುಜರಾಥಿಯ ನಾಟಕ ಕಂಪನಿಗಳು ಒಂದೊಂದು ಪ್ರಯೋಗದ ಉತ್ಪನ್ನವನ್ನು ಬಾರಡೋಲಿಯ ರಿಲೀಫ ಫಂಡಿಗೆ ಕೊಡಬೇಕೆಂದು ಮುಂಬಯಿ ಕಾಂಗ್ರೆಸದ ಹೊಸ ಡಿಕ್ಟೇಟರರಾದ ಶ್ರೀ ಜಟ್ಟೋ ಪಾಧ್ಯಾಯರು ವಿನಂತಿ ಪತ್ರ ತೆಗೆದಿದ್ದಾರೆ. ಕನ್ನಡ ಕಂಪನಿಗಳೂ ಅವರ ವಿನಂತಿಯನ್ನು ಮನ್ನಿಸಬೇಕಾದದ್ದೆಂದು ಕರ್ತವ್ಯವೇ

——

ರಾವುಂಡ ಟೇಬಲಕ್ಕೆ ಹೋಗುವ ಎಲ್ಲ ಪ್ರತಿನಿಧಿಗಳಲ್ಲಿ ಮತೈಕ್ಯವಾಗುವಂತಿದ್ದು, ಇವರೆಲ್ಲರೂ ಸಂಪೂರ್ಣ ಸ್ವಾತಂತ್ರ್ಯ ಸ್ವರಾಜ್ಯ ಬೇಡುವರೆಂದು ಮೌಲಾನಾ ಶೌಕತಲ್ಲಿಯವರು ಸಾರೀಸದಲ್ಲಿ ಒಂದು ಪತ್ರದ ಮುಂದೆ ಹೇಳಿದ್ದಾರೆ.

——

೧೩ನೆಯ ತಾರೀಖಿನ ದಿವಸ ಬಾದಶಹರು ರಾವುಂಡ ಟೇಬಲವನ್ನು ತೆರೆಯುವ ಸಮಾರಂಭ ಮಾಡುವಾಗ- ಮಾಡುವ ಭಾಷಣವನ್ನು ಜಗತ್ತಿನ ತುಂಬ ವಿದ್ಯುತ್ತಿನಿಂದ ತಿಳಿಸುವ ಏರ್ಪಾಡು ಮಾಡಿದ್ದಾರೆ.

——

ವರ್ತಮಾನಪತ್ರಗಳ ದಬ್ಬಾಳಿಕೆಯ ಆರ್ಡಿನೆನ್ಸದ ಅವಧಿ ತೀರಿ ಹೋದ್ದರಿಂದ ಸರಕಾರದವರು ಸೆಕ್ಯುರಿಟಿಯಾಗಿಟ್ಟುಕೊಂಡಿದ್ದ ಹಣವನ್ನು ತಿರಿಗಿ ಕೊಡಲಾರಂಭಿಸಿದಾರೆ,

——

ಡಾಕ್ಟರ ಹರ್ಡೇಕರ, ಶ್ರೀ. ಪಲ್ಲಭಭಾಯಿ ಪಟೇಲ, ಜಯರಾಮ ದಾಲತ್ತರಾಮ ಮೊದಲಾದವರು ಆದನೇ ತಾರೀಖಿನ ದಿವಸ ಒಂಧಮುಕ್ತರಾಗುವರು.

——

ಧಾರವಾಡದಲ್ಲಿ
ಅಂಗಡಿ ಮತ್ತು
ಬಂಗಲೆಯ ಮಾರಾಟ

ಮು. ನಂ. ೧೫೬೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟ ಜವಳಿ ಪೆಣದುಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕಿಲ್ಲೆದಲ್ಲಿ ಶ್ರೀ. ಹೆಬಳೀಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ನೋಟೀಸು

—(೦) —

೧ ಮಾಯಾಜಂದ ಉರ್ಫ್ ಗಂಗಾರಾಮ ಬಿನ್ ಮೋತೀಚಂದ ಮಾರವಾಡಿ ೨ ಪ್ರತಾಪಚಂದ ಭೂತಾಚಂದ ಮಾರವಾಡಿ ೩ ವರದಾಚಂದ ವಾಘಾಚಂದ ಮಾರವಾಡಿ ಸಾ|| ನವಲಗುಂದ ಇವರಿಗೆ-

ಈರಪ್ಪಾ ಗಂಗಪ್ಪಾ ಬಾಗಲಕೋಟಿ ಸಾ|| ನವಲಗುಂದ ನಾನು ನೋಟೀಸು ಕೊಡುವದೇನಂದರೆ ನವಲಗುಂದ ಶಹರ ವಿನಾಯಕ ಪ್ಯಾಟಿಯಲ್ಲಿಯ ದೊಡ್ಡ ಮನೆ ೧ ಟಿ ಸರ್ವೆ ನಂಬರ ೧೧೯೧ ಮ್ಯುನಿಸಿಪಾಲಿಟಿ ನಂಬರ ೧೪೬ ಇದು ಪೂರ್ವದಲ್ಲಿ ಶಂಕರ ರಾಮಚಂದ್ರ ಹೆಬಸೂರ ಇವನ ಮಾಲ್ಕೀದು ಅವನ ಸಾವಕಾರರು ಅವನ ವೇಲೆ ದಾವೇಮಾಡಿ ದರಖಾಸ್ತ ನಡಿಸಿ ಸದರ ಮನೆ ಕೋರ್ಟಿನ ಮಾರಿಫತ್ ಲಿಲಾವ ಮಾಡಿಸಿದ್ದರಲ್ಲಿ ಅವನ ದಾಯಾದನಾದ ವೆಂಕಟೇಶ ಕೃಷ್ಣ ಹೆಬಸೂರ ಇವನು ಸದರ ಲಿಲಾವಿನಲ್ಲಿ ಖರೀದಿ ಕಗೊಂಡು ಕಾಯದೇ ಪ್ರಕಾರ ಕಬಜಾ ಪಡಕೊಂಡು ಅದರ ಮಹಿವಾಟ ಮಾಡತಾನೆ ಸದ್ಯಕ್ಕೆ ತನ್ನ ಮಗನ ಅಜಾರಿ ಮೂಲಕಾ ಅವನು ಬೆಂಗಳೂರಿಗೆ ಹೋಗಿರುತ್ತಾನೆ ನಾನು ಅವನ ಸೋದರಮಾವದ್ದು ಮನೀ ವಹಿವಾಟ ಈಗ ನಾನು ಮಾಡತೇನೆ ಈ ಯಾವತ್ತು ಹಕೀಕತ್ತು ನಿಮಗೆ ಗೊತ್ತು ಅದೆ ನೀವು ಸದ್ಯಕ್ಕೆ ಸದರ ಮನೆಯ ಸಂಬಂಧವಾಗಿ ಏನೂ ಸಂಬಂಧವಿಲ್ಲದವರ ಮೇಲೆ ಗುಪ್ತ ವಾವೆ ವಗೈರೆ ಮಾಡಿ ಅಮಲಬಜಾವಣೀ ನಡಿಸಿ ಗುಪ್ತರೀತಿಯಿಂದಾ ಸದರ ಮನೆ ಲಿಲಾವ ಮಾಡಿಸಿ ಲಿಲಾವಿನಲ್ಲಿ ನೀವೇ ತಗೊಂಡಿರುತ್ತೀರಿ ಅಂತಾ ಕೆಳಿಕಜೆ ಸದರ ಮನೆ ಸಂಬಂಧವಾಗಿ ಯಾವತ್ತು ಖರೇ ಸಂಗತಿ ನಿಮಗೆ ಗೊತ್ತದೆ ಈಗ ಸದರ ಮನೆ ಮಾಲೀಕ ವೆಂಕಟೇಶ ಕೃಷ್ಣ ಇವನು ಊರಲ್ಲಿ ಇಲ್ಲದಾಗ್ಗೆ ನೀವು ಗುಪ್ತ ರೀತಿಯಿಂದಾ ಕಬಜಾ ತಗೊಂಡರೆ ಏನಾದರೂ ಕಾಗದ ಪತ್ರಗಳನ್ನು ಮಾಡಿಸಿದರೆ ಅವು ಸದರ ವೆಂಕಟೇಶ ಕೃಷ್ಣ ಇವನ ವಿರುದ್ಧ ನಡಿಯದು ಅವನು ಊರಲ್ಲಿ ಇಲ್ಲದ್ದರಿಂದ ಮತ್ತು ನಾನು ಮನೆಯ ವಹಿವಾಟ ಮಾಡುತ್ತಿರೋದರಿಂದ ಅವನ ಲಿಕಸಾನಿ ಯಾವರೀತಿಯಿಂದಾನೂ ಆಗಬಾರದೆಂದು ನಿಮಗೆ ವರ್ತಮಾನಪತ್ರದ್ವಾರಾ ಈ ನೋಟೀಸು ಕೊಟ್ಟಿರುತ್ತೇನೆ

ಸಹಿ ಇಂಗ್ಲಿಷ ಹ್ವಿ. ಜಿ. ಬಾಗಲಕೋಟಿ ನವಲಗುಂದ

——

ವಿಜಯ ನಿತ್ಯ ಪತ್ರಿಕೆ 1930 ನವೆಂಬರ

ಶನಿವಾರ	1.11.1930
ರವಿವಾರ	2.11.1930
ಮಂಗಳವಾರ	4.11.1930
ಬುಧವಾರ	5.11.1930
ಗುರುವಾರ	6.11.1930
ಶುಕ್ರವಾರ	7.11.1930
ಶನಿವಾರ	8.11.1930
ರವಿವಾರ	9.11.1930
ಸೋಮವಾರ	10.11.1930
ಮಂಗಳವಾರ	11.11.1930
ಬುಧವಾರ	12.11.1930
ಗುರುವಾರ	13.11.1930
ಶುಕ್ರವಾರ	14.11.1930
ಶನಿವಾರ	15.11.1930
ರವಿವಾರ	16.11.1930
ಮಂಗಳವಾರ	18.11.1930
ಬುಧವಾರ	19.11.1930
ಗುರುವಾರ	20.11.1930
ಶುಕ್ರವಾರ	21.11.1930
ಶನಿವಾರ	22.11.1930
ರವಿವಾರ	23.11.1930
ಸೋಮವಾರ	24.11.1930
ಮಂಗಳವಾರ	25.11.1930
ಬುಧವಾರ	26.11.1930
ಗುರುವಾರ	27.11.1930
ಶುಕ್ರವಾರ	28.11.1930
ಶನಿವಾರ	29.11.1930
ರವಿವಾರ	30.11.1930

ಬೆಲೆ ಅರ್ಧ ಆಣೆ

ಬಾಳಾಚಾರ್ಯ ಪೊಸಕೇರಿ. ಕಿಂ

೧ನೇ ನವ್ಹೆಂಬರ ೧೯೩೦ (ಸಂಚಿಕೆ ೨೩

ಶೀಪ್ಪ.

ದಿಂದ ಮುದ್ರಿಸಿ, ಅದ
ರ್ಜ, ಶ್ರೀ. ಆರೂಢ
ಕೊಡಲ್ಪಟ್ಟಿದೆ. ಮತ
ಷ್ಟಳ ಜನರ ಅಗ್ರ
ಸಿದ್ಧ ಮಾಡಿರುತ್ತದೆ,
ಯಿಂದ ಇಷ್ಟು ಪ್ರತಿಗ

ದು ಪ್ರತಿ ಹೆಚ್ಚಿಗಿ
. ಪಿ. ಖರ್ಚ ಬೇರೆ
ಚ್ಚಾಪುಗಳನ್ನು ಕಳಿಸ
ಪ್ಪಿ. ಪಿ. ಯಿಂದ

ಧಾರವಾಡ

ಕಾಲೇಜ

ಪ ಮತ್ತು ಟೇಲರಿಂಗ
ತಿ ತಿಂಗಳ ಮತ್ತು
ಕೊಡುತ್ತೇವೆ ಫಕ್ತ
ಯ ಶಿಕ್ಷಣವನ್ನು ಕ
ಶಿಕ್ಷಣದಿಂದ ವಿದ್ಯಾ
ವಿಶೇಷ ಮಾಹಿತಿ

ಘೋಳಕೆರ
ಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೆಂದಿಗೆಯು ಎಂಟು ಲಕ್ಷದ ಮೇಲಿರುತ್ತದೆ. ಚಲಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ವಿಶಾಲ ಪ್ರಿ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಪತ್ತೇ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ.

ವರ್ತಮಾನಸಾರ

—— (-) ——

ಮರಾಟಿ, ಗುಜರಾಥಿಯ ನಾಟಕ ಕಂಪನಿಗಳು ಒಂದೊಂದು ಪ್ರಯೋಗದ ಉತ್ಪನ್ನವನ್ನು ಬಾರಡೋಲಿಯ ರಿಲೀಫ ಫಂಡಿಗೆ ಕೊಡಬೇಕೆಂದು ಮುಂಬಯಿ ಕಾಂಗ್ರೆಸದ ಹೊಸ ಡಿಕ್ಟೇಟರರಾದ ಶ್ರೀ ಜಟ್ಟೋ ವಾಧ್ಯಾಯನು ವಿನಂತಿ ಪತ್ರ ತೆಗೆದಿದ್ದಾರೆ ಕನ್ನಡ ಕಂಪನಿಗಳೂ ಅವರ ವಿನಂತಿಯನ್ನು ಮನ್ನಿಸಬೇಕಾದದ್ದೆಂದು ಕರ್ತವ್ಯವೇ

——

ರಾವ್ಹಂಡ ಟೇಬಲಕ್ಕೆ ಹೋಗುವ ಎಲ್ಲ ಪ್ರತಿನಿಧಿಗಳಲ್ಲಿ ಮೈತ್ರ್ಯವಾಗುವಂತಿದ್ದು, ಇವರೆಲ್ಲರೂ ಸಂಪೂರ್ಣ ವಸಾಹಾತಿನ ಸ್ವರಾಜ್ಯ ಬೇಡುವರೆಂದು ಮೈಲಾನಾ ಶೌಕತಲ್ಲಿಯವರು ಪಾರೀಸದಲ್ಲಿ ಒಂದು ಪತ್ರದ ಮುಂದೆ ಹೇಳಿದ್ದಾರೆ.

——

೧೬ನೆಯ ತಾರೀಖಿನ ದಿವಸ ಬಾದಶಹರು ರಾವ್ಹಂಡ ಟೇಬಲವನ್ನು ತೆರೆಯುವ ಸಮಾರಂಭ ಮಾಡುವಾಗ- ಮಾಡುವ ಭಾಷಣವನ್ನು ಜಗತ್ತಿನ ತುಂಬ. ವಿದ್ಯುತ್ತಿನಿಂದ ತಿಳಿಸುವ ಏರ್ಪಾಡು ಮಾಡಿದ್ದಾರೆ.

——

ವರ್ತಮಾನಪತ್ರಗಳ ದಬ್ಬಾಳಿಕೆಯ ಆರ್ಡಿನನ್ಸದ ಅವಧಿ ತೀರಿ ಹೋದ್ದರಿಂದ ಸರಕಾರದವರು ಸೆಕ್ಯುರಿಟಿಯಾಗಿಟ್ಟುಕೊಂಡಿದ್ದ ಹಣವನ್ನು ತಿರಿಗಿ ಕೊಡಲಾರಂಭಿಸಿದಾರೆ,

——

ಡಾಕ್ಟರ ಹರ್ಡೇಕರ, ಶ್ರೀ. ವಲ್ಲಭಭಾಯಿ ಪಟೇಲ, ಶ್ರೀ.ಯಂರಾಮ ಬೌಲತ್ತರಾಮ ಮೊದಲಾದವರು ಆರನೇ ತಾರೀಖಿನ ದಿವಸ ಬಂಧಮುಕ್ತರಾಗುವರು.

——

ಧಾರವಾಡದಲ್ಲಿ
ಅಂಗಡಿ ಮತ್ತು
ಬಂಗಲೆಯ ಮಾರಾಟ

ಮು. ನಂ. ೧೫೬೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟ ಜವಳಿ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕಿಲ್ಲೆದಲ್ಲಿ ಶ್ರೀ. ಹೆಬಳೀಕರ ಇವರ ಬಂಗ್ಲೇದ ಎದುರಿನಲ್ಲಿ ಎಮ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ನೋಟೀಸು

—(೦)—

೧ ಮೊಯಾಜಂದ ಉರ್ಫ್ ಗಂಗಾರಾಮ ಬಿನ್ ಮೋತೀಜಿ ಮಾರವಾಡಿ ೨ ಪ್ರತಾಪಜಿ ಭೂತಾಜಿ ಮಾರವಾಡಿ ೩ ವರದಾಜಿ ವಾಘಾಜಿ ಮಾರವಾಡಿ ಸಾ|| ನವಲಗುಂದ ಇವರಿಗೆ-

ಈರಪ್ಪಾ ಗಂಗಪ್ಪಾ ಬಾಗಲಕೋಟಿ ಸಾ|| ನವಲಗುಂದ ನಾನು ನೋಟೀಸು ಕೊಡುವದೇನಂದರೆ ನವಲಗುಂದ ಶಹರ ವಿನಾಯಕ ಪ್ಯಾಟಿಯಲ್ಲಿಯ ದೊಡ್ಡ ಮನೆ ೧ ಟಿ ಸರ್ವೆ ನಂಬರ ೧೧೯೧ ಮ್ಯುನಿಸಿಪಾಲಿಟಿ ನಂಬರ ೧೪೬ ಇದು ಪೂರ್ವದಲ್ಲಿ ಶಂಕರ ರಾಮಚಂದ್ರ ಹೆಬಸೂರ ಇವನ ಮಾಲ್ಕೀದು ಅವನ ಸಾವಕಾರರು ಅವನ ಮೇಲೆ ದಾವೇಮಾಡಿ ದರಖಾಸ್ತ ನಡಿಸಿ ಸದರ ಮನೆ ಕೋರ್ಟಿನ ಮಾರಿಫತ್ ಲಿಲಾವ ಮಾಡಿಸಿದ್ದರಲ್ಲಿ ಅವನ ದಾಯಾದನಾದ ವೆಂಕಟೇಶ ಕೃಷ್ಣ ಹೆಬಸೂರ ಇವನು ಸದರ ಲಿಲಾವಿನಲ್ಲಿ ಖರೇದಿ ತಗೊಂಡು ಕಾಯದೇ ಪ್ರಕಾರ ಕಬಜಾ ಪಡಕೊಂಡು ಅದರ ವಹಿವಾಟ ಮಾಡತಾನೆ ಸದ್ಯಕ್ಕೆ ತನ್ನ ಮಗನ ಅಜಾರಿ ಮೂಲಕಾ ಅವನು ಬೆಂಗಳೂರಿಗೆ ಹೋಗಿರುತ್ತಾನೆ ನಾನು ಅವನ ಸೋದರಮಾವನಿದ್ದು ಮನೀ ವಹಿವಾಟ ಈಗ ನಾನು ಮಾಡತೇನೆ ಈ ಯಾವತ್ತು ಹಕೀಕತ್ತು ನಿಮಗೆ ಗೊತ್ತು ಅದೆ ನೀವು ಸದ್ಯಕ್ಕೆ ಸದರ ಮನೆಯ ಸಂಬಂಧವಾಗಿ ಏನೂ ಸಂಬಂಧವಿಲ್ಲದವರ ಮೇಲೆ ಗುಪ್ತ ದಾವೆ ವಗೈರೆ ಮಾಡಿ ಅಮಲಬಜಾವಣೇ ನಡಿಸಿ ಗುಪ್ತರೀತಿಯಿಂದಾ ಸದರ ಮನೆ ಲಿಲಾವ ಮಾಡಿಸಿ ಲಿಲಾವಿನಲ್ಲಿ ನೀವೇ ತಗೊಂಡಿರುತ್ತೀರಿ ಅಂತಾ ತಿಳಿತದೆ ಸದರ ಮನೆ ಸಂಬಂಧವಾಗಿ ಯಾವತ್ತು ಖರೇ ಸಂಗತಿ ನಿಮಗೆ ಗೊತ್ತದೆ ಈಗ ಸದರ ಮನೆ ಮಾಲೀಕ ವೆಂಕಟೇಶ ಕೃಷ್ಣ ಇವನು ಊರಲ್ಲಿ ಇಲ್ಲದಾಗ್ಗೆ ನೀವು ಗುಪ್ತ ರೀತಿಯಿಂದಾ ಕಬಜಾ ತಗೊಂಡರೆ ಏನಾದರೂ ಕಾಗದ ಪತ್ರಗಳನ್ನು ಮಾಡಿಸಿದರೆ ಅವು ಸದರ ವೆಂಕಟೇಶ ಕೃಷ್ಣ ಇವನ ವಿರುದ್ಧ ನಡಿಯದು ಅವನು ಊರಲ್ಲಿ ಇಲ್ಲದ್ದರಿಂದ ಮತ್ತು ನಾನು ಮನೆಯ ವಹಿವಾಟ ಮಾಡುತ್ತಿರೋದರಿಂದ ಅವನ ಲುಕಸಾನಿ ಯಾವರೀತಿಯಿಂದಾನೂ ಆಗಬಾರದೆಂದು ನಿಮಗೆ ವರ್ತಮಾನಪತ್ರದ್ವಾರಾ ಈ ನೋಟೀಸು ಕೊಟ್ಟಿರುತ್ತೇನೆ

ಸಹಿ ಇಂಗ್ಲಿಷ ಹ್ವಿ. ಜಿ. ಬಾಗಲಕೋಟಿ
ನವಲಗುಂದ

——

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ಪಟ್ಟಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (ಟ) ಪುಟಿನ ಜವಕ್ಕ ಕುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಂದಾ ಕೊರತಿ ಕೊಡುತ್ತೇವೆ

ಮತ್ತು ಬಿಲ್ಡರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟೆಂಬರ ಮರ್ಚಂಟ್ಸ,
ಮಾರ್ಕೆಟ ಧಾರವಾಡ.

——

ನಕಾಶೆ ಸಹಿತ

—(೦)—

ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿ

ಇವುಗಳಲ್ಲಿ ಎರಡೂ ಜಿಲ್ಲೆಗಳ ಲ್ಲಿರ್ಣ ಮಾಹಿತೀ ಇರುತ್ತದೆ. ಹೆಚ್ಚು ಪ್ರತಿಗಳನ್ನ ಪೂರೈಕ್ಕುವರಿಗೇ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಚ್ಚ ಎಮ. ಅಕ್ಕುಂಡಿ.
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧, ಗದಗ ಬೆಟಗೇರಿ

——

ಚಂದಾದಾರರಿಗೆ ಸೂಚನೆ

ನವ್ಹಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆನ್ನ. ಚಂದಾದಾರರು ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತಾಹಿಸಬೇಕೆಂದು ವಿನಂತಿಯು.

ಮ್ಯಾನೆಜರ ವಿಜಯ ಧಾರವಾಡ

——

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊನಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

N. B. 1448

ವಿಜಯ

ವಾರ್ತಾ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಪೊಸಕೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೧೯ ನೇ ನವೆಂಬರ ೧೯೩೦ (ಸಂಚಿಕೆ ೨೩೯

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಸಿದ್ಧಾವದೂತರ ಅಸಲಿ, ಶ್ರೀ. ಅರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಟೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕಕ್ಕೆ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೇಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ಬಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫೫ ಹದಿನೆದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಗಸ್ಥಿತಿಯ ಪ್ರಕಾರ ತಿಂಗಳಾ ಕನಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟ ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಚಂದಿಗೆಯಿ ಎಂಟು ಲಕ್ಷದ ಮೇಲುಂಟು. ಜಕಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮುಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರೆ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮಾ. ವಿಜಯ ಧಾರವಾಡ.

ವಿಜಯ.

ಶಾಲಿವಾಹನ ವಿಕ್ರಮ ವರ್ಷ ೧೮೫೫ ಕಾರ್ತೀಕ ಶುದ್ಧ ೧೦

ಬಾರಡೋಲಿ ದಿನವು

ನಾಳೆನ ದಿವಸ ಹಿಂದುಸ್ಥಾನದ ತುಂಬ ಬಾರಡೋಲಿ ದಿನವನ್ನಾಚರಿಸಬೇಕೆಂದು ಗೊತ್ತು ಮಾಡಲ್ಪಟ್ಟಿದೆ. ಬಾರಡೋಲಿಯ ರೈತರು ಅಹಿಂಸೆಯ ಅಸಹಕಾರ ಮಾತ್ರವಲ್ಲ. ಸ್ವಾರ್ಥತ್ಯಾಗವನ್ನು ಹೇಗೆ ಮಾಡಬೇಕೆಂಬದನ್ನೂ ಜಗತ್ತಿಗೆ ಪ್ರತ್ಯಕ್ಷ ಕೃತಿ ಮಾಡಿ ತೋರಿಸುತ್ತಿದ್ದಾರೆ. ೧೯೨೨ರಲ್ಲಿ ಮಹಾತ್ಮರು ಬಾರಡೋಲಿಯ ತೀರ್ಮಾನವನ್ನು ಹಿಂದಕ್ಕೆ ತಕ್ಕೊಂಡದ್ದರಿಂದ, ಅಸಹಕಾರದ ಚಳವಳಿಯು ಅಕಲ್ಪಿತವಾಗಿ ನಿಂತು ಹೋಯಿತು. ಅನಂತರ ಈ ಚಳವಳಿಯು ಕೆಲವರ್ಷ ಬೂದಿಮುಚ್ಚಿದ ಕೆಂಡವಾಗಲು- ಮಹಾತ್ಮರ ಮಹಾತ್ಮತೆಯೆಲ್ಲ ಹೊರಟು ಹೋಗಿ, ಅವರು ತ್ರೇತಾಯುಗದ ಹನುಮಪ್ಪನು ಕಲಿಯುಗದ ವಾನರನಾದನೆಂದು ಇಂಗ್ರೇಜಿ ಪತ್ರಗಳಲ್ಲಿ; ಸ್ವತಃ ರಾಜ್ಯಕರ್ತರೇ ಹಾಸ್ಯ ಮಾಡಿದರು. ಆದರೆ ಅದೇ ಮಹಾತ್ಮರ ಪ್ರಭಾವವು ಈಗ ಜಗತ್ತಿನ ಕಣ್ಣು ಕುಕ್ಕಿಸುತ್ತಲಿದೆ. ಅದೇ ಬಾರಡೋಲಿಯು ಸ್ವರಾಜ್ಯವನ್ನು ತರಲು ಸಿದ್ಧವಾಗಿದೆ. ಮಹಾತ್ಮರೂ ಸರದಾರ ಪಟೇಲರೂ ಹೇಳುವತನಕ ತೀರ್ವೆಯನ್ನು ಕೊಡತಕ್ಕದ್ದಲ್ಲೆಂದು ಇವರ ವೀರ ಪ್ರತಿಜ್ಞೆ ಇದೆ. ಮಿ. ಬ್ರೆಲ್ಸಫೋರ್ಡಸಾಹೇಬರು ಹೋದ ವಾರದಲ್ಲಿ ಬಾರಡೋಲಿಗೆ ಹೋಗಿ, ರೈತರ ನಿರ್ಧಾರ ಕಂಡು ಬೆಟ್ಟು ಕಚ್ಚಿದ್ದಾರೆ. ಯುರೋಪಿಯನ್ನರು ಈ ರೀತಿಯಾಗಿ ಅವರ ಪ್ರಶಂಸೆ ಮಾಡುವಾಗ, ಅವರೆಷ್ಟು ಸ್ವಾರ್ಥತ್ಯಾಗಿಗಳೂ, ಕಷ್ಟಭೋಗಿಗಳೂ ಆಗಿರಬೇಕೆಂಬದನ್ನು ಸಹಜವಾಗಿ ಊಹಿಸಬಹುದು. ಇವರು ಊರು ಬಿಟ್ಟು ಹೋಗಬಾರದು. ಧನಕರ ಮತ್ತು ಬೆಳೆಯನ್ನು ತಕ್ಕೊಂಡು ಗುಳೇ ಹೋಗಬಾರದೆಂದು ನಾಲ್ಕು ನೂರು ಕೆಚನರ ಪೋಲಿಸರನ್ನು ಕಾವಲಿಟ್ಟಿರುತ್ತಾರೆ. ಮುಲಕೀ ಮತ್ತು ಬೇಕೆ ಪೋಲಿಸರ ತಾಪವಂತೂ ನಿತ್ಯ ಸತ್ತರೆ ಅಳುವವರಿಲ್ಲದಂಥ ತುಂಟ. ಇವರ ಸ್ಥಾವರ ಜಂಗಮ ಆಸ್ತಿಯ ಬೆಲೆಯು ಸಹಜವಾಗಿ ಅರೇಳು ಕೋಟಿಯಾಗುತ್ತದೆ. ಇದೆಲ್ಲವನ್ನು ದೇವರೇ ಗತಿ, ಸರಕಾರವೇ ನಿನಗೆ ದಕ್ಕೆಂದು ಹೇಳಿ, ಸನಿಯದಲ್ಲಿರುವ ಬಡೋದೆ ರಾಜ್ಯದಲ್ಲಿ ಹೋಗಿ, ವನವಾಸಿಗಳಿಗಿಂತ ಹೆಚ್ಚು ವನವಾಸಿಯಾಗಿದ್ದಾರೆ. ಇವರು ಅಡವಿಯಲ್ಲಿ ಗುಡಿಸಲು ಹಾಕಿರುವರು. ಅವಕ್ಕೆ ಬಾಗಿಲ ಸಹ ಇಲ್ಲ. ಹಾಸುವದಕ್ಕೆ ಭೂಮಿ, ಹೊದೆಯುವದಕ್ಕೆ ಆಕಾಶವೆಂಬ ಅವಸ್ಥೆಯು ಸಾವಿರಾರು ಕುಟುಂಬಗಳಿಗೆ ಬಂದೊದಗಿದೆ. ಧನಕರಗಳಂತೂ ವಿವಿಧ ಕಷ್ಟಕ್ಕೆ ಈಡಾಗಿವೆ. ಸ್ತ್ರೀಯರು,ಹುಡುಗರು, ಪುರುಷರು, ಹಿರಿಯರು, ಮುದುಕರು,ತರುಣರು ಎಲ್ಲಾ ಕುಲ, ಎಲ್ಲಾ ವರ್ಗ ಮತ್ತು ಎಲ್ಲಾ ಶರದ ವಯಸ್ಸಿನವರು ದೇವರ ಮೇಲೆ ಭಾರವಿಟ್ಟು, ಸ್ವರಾಜ್ಯ ಸ್ವಾತಂತ್ರ್ಯ ದೊರೆಯುವತನಕ ತಿರಿಗಿ ಊರ ಮೋರೆ ನೋಡಲಿಕ್ಕಿಲ್ಲ; ಮನೆಯ ಬಾಗಿಲ ಮುಟ್ಟಲಿಕ್ಕಿಲ್ಲೆಂದು ಭಂಡಾರ ಎತ್ತಿದ್ದಾರೆ. ಮಹಾತ್ಮರೂ ಸರದಾರ ಪಟೇಲರೂ ಹಪ್ತೆ ಕೊಡಿರೆಂದು ಹೇಳಬೇಕಾದರೆ- ಅವರು ಬಂಧಮುಕ್ತರಾಗಬೇಕು. ಸ್ವರಾಜ್ಯ ತಂದ ದಿನಹ ಬಂಧಮುಕ್ತತೆ ಇಲ್ಲೆಂದು ಮಹಾತ್ಮರು ಸಾರಿ ಹೇಳಿದ್ದಾರೆ. ಹೀಗೆ ರೈತರ ಕಂದಾಯ ಕೊಡದಿರುವಿಕೆ, ಗ್ರಾಮತ್ಯಾಗದಲ್ಲಿ ಸ್ವರಾಜ್ಯ ಸ್ವಾತಂತ್ರ್ಯದ ವಿಜಯವುಂಟು. ಆದ್ದರಿಂದ ದೇಶದ ತುಂಬ ನಾಳೆನ ದಿವಸವನ್ನು ಬಾರಡೋಲಿ ಸ್ಮಾರಕ ಮಾಡುವದು ಹಿಂದೀ ಪ್ರಜರ ದೇಶಾಭಿಮಾನದ ಪ್ರತ್ಯಕ್ಷ ಕುರುಹೇ ಆಗುತ್ತದೆ.

ಗುಜರಾಥದ ಕಮೀಶನರ ಸಾಹೇಬರಿಗೆ ಬಂದ ಭೋಗ

—(೦)—

ಗುಜರಾಥದ ಕಮೀಶನರ ಸಾಹೇಬರು ಸುರತ ಮತ್ತು ಬಾರಡೋಲಿ ತಾಲೂಕಿನ ವರ್ತಮಾನ ವಿಚಾರ ತಿಳಿದುಕೊಳ್ಳಲು ಸುರತಕ್ಕೆ ಹೋದರು. ಸ್ಟೇಶನದಲ್ಲಿಯೇ ಉಳಿದರು. ಕಲೆಕ್ಟರ, ಪ್ರಾಂತ ಆಫೀಸರ, ಫೌಜದಾರರ ಹೊರ್ತು ಇವರನ್ನೆದು ಗೆರ್ಗಳ್ಳಲು ಬಂದು ಪಿಳ್ಳೆ ಸಹ ಹೋಗಲಿಲ್ಲ. ಸಾಹೇಬರು ಸಾಯಂಕಾಲದ ತನಕ ಸಲೂನದಲ್ಲಿಯೇ ಹೊತ್ತುಗಳೆದು, ರಾತ್ರಿ ಬಂಡಿಯಿಂದ ಅಹಮದಾಬಾದಕ್ಕೆ ಹಿಂದಿರಿಗಿದರು.

ಇಂಗ್ಲಂಡದ ಮುಖ್ಯ ಪ್ರಧಾನರಾಗಿ ಈಗ ಕಾನ್ಸರವೇಟಿವ್ವ ಪಕ್ಷದ ಮುಖಂಡರಾಗಿರುವ ಮಿ ಬಾಲ್ಡ್ವಿನಸಾಹೇಬರನ್ನು ಮುಖಂಡತ್ವದ ಪಟ್ಟದಿಂದ ತಕ್ಕೈಹಾಕಬೇಕೆಂದು ಅವರ ಪಕ್ಷದವರೇ ಚಳವಳಿ ಹೂಡಿದ್ದಾರೆ.

ಪುಣೆಯ ಕೇಳಕರರು ಅಸಹಕಾರದ ಹೊರ್ತು ಬೇರೆ ದಾರೀ ತೋರಿಸಲಿ.

—(೦)—

ಅಸಹಕಾರದ ಚಳವಳಿಯಲ್ಲಿ ತುರಂಗವಾಸಿಯಾಗಿ ಬಂಧಮುಕ್ತರಾಗಿ ಬಂದವರಾದ ಶ್ರೀ. ಪ್ರೇಮರಾಜ ವರ್ಮಾ ಇವರ ವ್ಯಾಖ್ಯಾನವು ಪುಣೆಯಲ್ಲಿ ಶ್ರೀ. ಶಿವಾಜಿ ಮಂದಿರದಲ್ಲಾಯಿತು. ಅವರು ಶ್ರೀ. ಕೇಳಕರರನ್ನುದ್ದೇಶಿಸಿ ಅಂದದ್ದೇನಂದರೆ-

ಶ್ರೀ. ಕೇಳಕರರೇ- ನೀವು ನಮಗೆ ಬೇರೊಂದು ಮಾರ್ಗವನ್ನು ತೋರಿಸಿರಿ. ನಾವು ಇದೀಗ ಗುಜರಾಥವನ್ನು ನಮ್ಮ ಹಿಂದೆ ಜಗ್ಗಿ ತುತ್ತೇನೆ ದಾರೀ ತೋರಿಸುವದಾಗದಿದ್ದರೆ- ನೀವು ಗುಜರಾಥದ ಅನುಕರಣ ಮಾಡಲಿಕ್ಕೇಬೇಕು. ಈಗ ಕೃತಿ ಬೇಕು. ಉತ್ತರ ಕುಮಾರನಂತೆ ಮಾತು ಬೇಡ. ಅಳಿಯನು ಹತ್ತನೇ ಗ್ರಹವು

ಇದೇ ಸಭೆಯಲ್ಲಿ ಶ್ರೀ. ದಿವೇಕರ ಎಮ. ಎ. ಇವರ ಭಾಷಣವಾಯಿತು. ಅವರು ಅಂದದ್ದೇನಂದರೆ-

ಲಾರ್ಡ ಆಯರ್ವಿನಸಾಹೇಬರು ಈಗ ಬಂಭತ್ತನೆಯ ಗ್ರಹವನ್ನು ನಿರ್ಮಾಣ ಮಾಡಿದ್ದಾರೆ. ಈ ಗ್ರಹಕ್ಕೆ ನಾವು ಏನೇ ಎಂದು ತಿಳಿಯುತ್ತೇವೆ. ನಮಗೆ ಒಂಭತ್ತೇ ಗ್ರಹಗಳು ಗೊತ್ತುಂಟು. ಸಂಸ್ಕೃತದಲ್ಲಿ ಜಾಮಾತಾ ದಶಮೋ ಗ್ರಹಃ ಎಂಬ ದೊಂದು ವಾಕ್ಯವುಂಟು. ನಮ್ಮ ಹಬ್ಬಯಿಸರಾಯರು ಹತ್ತಕ್ಕಿಂತ ಹೆಚ್ಚು ಗ್ರಹಗಳನ್ನುಂಟುಮಾಡುವರೆಂದು ತೋರುತ್ತದೆ. ಸರಕಾರದವರು ಹೀಗೇ ಆರ್ಡಿನನ್ಸ ತೆಗೆಯುತ್ತಾ ಹೋದರೆ- ಹಿಂದುಸ್ಥಾನವೆಲ್ಲ ಗೈರ ಕಾಯದೆಶೀರ ಮಂಡಲವಾಗುವದು. ಸ್ಮಶಾನಭೂಮಿ ಸಹ ಗೈರಕಾಯದೆಶೀರವಾಗುವದು.

ಗವ್ವರ್ನರಸಾಹೇಬರ ಕಚೇರಿಯಲ್ಲಿ ಪಿಕೆಟಿಂಗ.

—(೦)—

ಮುಂಬಯಿಯಲ್ಲಿರುವ ಗವ್ವರ್ನರಸಾಹೇಬರ ಕಚೇರಿಗೆ ಸೇತ್ರೆಟಿಯಟ್ಟವೆನ್ನುವರು. ಅಲ್ಲಿಗೆ ನಾಲ್ವರು ಹ್ವಾಲಂಟಿಯರರು ಹೋಗಿ, ಪ್ರತಿಯೊಬ್ಬ ಕಾರಕೂನನ ಮೇಜಿನ ಮೇಲೆ ನೀವು ಸರಕಾರೀ ಕೆಲಸ ಬಿಡಿರೆಂದು ಮುದ್ರಿಸಿದ ಹಸ್ತಪತ್ರಿಕೆಗಳನ್ನಿಟ್ಟರು. ಇದನ್ನು ಕಂಡು ಕಾರಕೂನರು ಅಚ್ಚರಿ ಪಟ್ಟರು. ಸ್ವಯಂಶೇವಕ ಬಹಾದ್ದೂರರು ಹಾಟನ್ನ ಸಾಹೇಬರು ಬಂದಿರುವರೇ ಎಂದು ಶೋಧ ಮಾಡಿದರು: ಸಾಹೇಬರಿದ್ದರೆ- ಅವರ ಮುಂದೂ ಬಂದು ಕಾಗದವಿಡುತ್ತಿದ್ದರು ಪಿಕೆಟಿಂಗದ ವರ್ತಮಾನ ಕೇಳಿ ಪೋಲಿಸರು ಬಂದು, ನಾಲ್ವರನ್ನು ಹಿಡಿದೊಯ್ದರು. ಮುಂದೆ ಇವರಿಗೆ ಶಿಕ್ಷೆಯಾಯ್ತೆನ್ನದು ಹೇಳುವ ಅಗತ್ಯವೇ ಇಲ್ಲ.

ಮುಂಬಯಿ. ಸರಕಾರದ ದಿವಾನಗಿರಿಯು ಶೇಸರೊಳಗಿನ ಕಂಬವಾಯಿತು.

—o*o—

ಮೌ. ರಫಿಯುದ್ದಿನ, ಎಂ. ಎ. ವಕೀಲ ಹಾಗೂ ರಾ. ಬ. ಕಂಬಳಿಯವರಿಗೆ ದಿವಾನಗಿರಿಯು ದೊರೆಯುವದು ಖಂಡಿತವಾಯಿತೆಂದು ಪುಣೆ ಮುಂಬಯಿಯ ಪತ್ರಗಳು ಒಮ್ಮೆ ಸಂತೆಯ ಸುದ್ದಿಯನ್ನು ಒಡೆದವು. ಅನಂತರ ಇವೇ ಪತ್ರಗಳು ದಿವಾನಗಿರಿಯು ಇನ್ನೂ ಯಾರಿಗೂ ದೊರೆದಿಲ್ಲ. ಇಂಥವರಿಗೇ ದೊರೆಯುತ್ತದೆಂಬ ನಿಯಮವಿಲ್ಲ. ಅನೇಕ ಜನರು ಉಮೇದವಾರರಾಗಿದ್ದು, ಅವರು ತಮ್ಮ ಹಕ್ಕುಗಳನ್ನು ಹೇಳುತ್ತ ಗವ್ಹರ್ನರ ಸಾಹೇಬರನ್ನು ಕಾಣಲಿಕ್ಕೆ ಹೋಗುವ ಸಾರಿಗೆ ಇಟ್ಟಿದ್ದಾರೆಂದು ಇವೇ ಪತ್ರಗಳು ಈಗ ಹೇಳಲಾರಂಭಿಸಿವೆ. ಸಾಹೇಬರು ತಮ್ಮ ಪುಣೆಯ ವಾಸವನ್ನು ಇಂದೇ ತೀರಿಸಿಕೊಂಡು ಮುಂಬಯಿಗೆ ಹೋಗುವರು. ಬರುವ ಸೋಮವಾರ ಅಥವಾ ಮುಂದಿನ ಸೋಮವಾರ ದಿವಸ ದಿವಾನರನ್ನು ನೇಮಿಸಿಕೊಂಡದ್ದನ್ನು ಜಾಹೀರ ಮಾಡುವೆಂದು ಬೀದಿಯ ಸುದ್ದೀ ಹೇಳುವರು.

ಬೆಳಗಾವಿಯಲ್ಲಿ ದಂಡಿನ ಕಾಮದಾರರಿಗೆ ಕಲ್ಲಿನ ಹೊಡತ.

—(o)—

ಬೆಳಗಾವಿಯಲ್ಲಿರುವ ದಂಡಿನ ಕಾಮದಾರರು ತಿರುಗಾಡಲಿಕ್ಕೆಂದು ಹೋಗುವಾಗ, ಜನರು ಇವರಿಗೆ ಹುರ್ಯೋ ಮಾಡುವರು. ಭುಸ್ಸೆಂದು ಮೈಮೇಲೆ ಹೋಗುವರು. ಮೈಮೇಲೆ ಕಲ್ಲೊಗೆಯುವರು. ಒಬ್ಬ ಬ್ರಿಟಿಶ ಕಾಮದಾರನು ಮಡಮಸಾಹೇಬರು ಸಹಿತ ಮೋಟಾರಿನಲ್ಲಿ ಕೂಕು ಹೋಗುತ್ತಿದ್ದಾಗ, ಜನರು ಅವರ ಮೇಲೆ ಕಲ್ಲಿನ ಮಳೆ ಸುರಿಸಿದರು. ಸಾಹೇಬರು ಜೀವದಿಂದ ಪಾರಾಗುವದೇ ಕಠಿಣವಾಯಿತು. ಮದ್ರಾಸದಿಂದ ಬಂದೋರ್ವ ಬ್ರಿಗೇಡಿಯರ ಗಿಸಿಸರೆಂಬಸಾಹೇಬರು ಸ್ವಾಶಕಾಲದ ಸರೇಡ ತೀರಿಸಿಕೊಂಡು ಹೋಗುತ್ತಿದ್ದಾಗ, ದಾರಿಯಲ್ಲಿ ಕಲ್ಲು ದುಂಡಿ, ಕಟ್ಟಿಗೆ ಮುಂತಾದ್ದನ್ನು ಚಲ್ಲಿ ಇವರ ದಾರಿಗೇ ಅಡ್ಡೀ ಮಾಡಿದ್ದರು. ಇವರು ಈ ಅನುಹುಗಳನ್ನು ಕಮೀಶನರಸಾಹೇಬರಿಗೆ ತಿಳಿಸಿದ್ದು ಅವರು ಇದರ ವಿಚಾರಣೆ ಮಾಡುತ್ತಿದ್ದಾರೆ. ಸಾಹೇಬರಿಗೆ ಕೇಡು ಬಗೆದವರು ಅನಗೋಳ, ಸಾಂಗಲಿ ಮುಂಕಾದ ಸಂಸ್ಥಾನಗಳ ಪ್ರಜರಾಗಿದ್ದಾರೆಂದೂ ಹೇಳುತ್ತಿದ್ದಾರೆ.

ಪೋಲಿಸರು ಬೇರೊಂದು ಬಗೆಯಿಂದ ಮೋಸ ಹೋದರು.

—(o)—

ಮುಂಬಯಿಯಲ್ಲಿ ಮಾಂಡವಿಯ ಭಾಗದಲ್ಲಿ ಬೇರೊಂದು ಕಡೆಗೆ ಕಾಂಗ್ರೆಸ ಕಚೇರಿ ತೆರೆಯುವ ಸರೂಪಾರಂಭ ಮಾಡಿದರು. ಜನರು ಉತ್ಸವ ತೀರಿಸಿಕೊಂಡು, ಕಚೇರಿಗೆ ಬೀಗ ಹಾಕಿ ಹೊಂಟು ಹೋದ ಬಳಿಕ, ಪೋಲಿಸರು ಜಪ್ತಿಗೆ ಹೋದರು. ಸಂತೆ ತೀರಿದ ಬಳಿಕ ಹೋದಂತಾಯಿತು. ಕೀವೆ ಮುರಿದು ಕೋಣೆಯಲ್ಲಿ ನೋಡುವಾಗ, ಝಳ ಝಳ ಸಾರಿಸಿ, ರಂಗೋಲಿ ಹಾಕಿದ್ದನ್ನು ಕಂಡರು. ಬಂದುದಕ್ಕೆ ತುಸುವಾದರೂ ಸಂತಸ ಪಟ್ಟರೆಂದು, ಸಿಶಾನೆ ಮತ್ತು ಬೋರ್ಡು ಜಪ್ತ ಮಾಡಿಕೊಂಡು ಹೋದರು.

ನಾವು ಹೆಂಗಸರಲ್ಲ; ಗಂಡಸರು

—(o)—

ಶ್ರೀ. ಜೋಸಿ ಕಸ್ತೂರಿಯಮ್ಮನವರು ಸದಿಯಾದದ ಲಾಕಪ್ಪಿನಲ್ಲಿರುವ ಸ್ತ್ರೀಯರಿಗೆ ತೀರ ಕುಪ್ಪಸ ಕೊಡಲಿಕ್ಕೆ ಹೊದರು. ಜಾಗಿಲದಲ್ಲಿದ್ದ ಪೋಲಿಸ ಇನ್ಸಪೇಕ್ಟರನು ಇವರಿಗೆ ಗಂಡಸರು ಮಾಡುವ ಕೆಲಸವನ್ನು ನೀವು ಹೆಂಗಸರೇಕೆ ಮಾಡುತ್ತೀರೆಂದು ಪ್ರಶ್ನೆ ಮಾಡಲು - ನಾವು ಹೆಂಗಸರಲ್ಲ; ಗಂಡಸರೇ ಎಂದು ಕಸ್ತೂರಿಬಾಯಿಯವರು ಉತ್ತರ ಕೊಟ್ಟಳು. ಇನ್ಸಪೇಕ್ಟರ ಸಾಹೇಬರು ಮುಖ ಹೀನರಾದರು. ಆದರೆ ಅಧಿಕಾರದ ಬಲ ತೋರಿಸುವದಕ್ಕಾಗಿ, ಜಾಯಿಂಟವರನ್ನು ಲಾಕಪ್ಪಿಗೆ ಹೋಗಗೊಡಲಿಲ್ಲ.

ಜಡ್ಜಸಾಹೇಬರಿಗೆ ಆರು ವೈ ಡಿಕ್ರಿ ದೊರೆಯಿತು.

—(o)—

ನಿಜಾಮ ರಾಜ್ಯದಲ್ಲಿ ಪಾಯಗಾ ಇಲಾಖೆಯ ಸೆಶನ ಜಡ್ಜರಾದ ಮೀರ ಇಬ್ರಾಹೀಮಲ್ಲಿಯವರು ಹೈದರಾಬಾದಿನ ಮ್ಯುನಿಸಿಪಾಲಿಟಿಯ ಮೇಲೆ, ಮ್ಯುನಿಸಿಪಾಲಿಟಿಯ ದಾರಿಯನ್ನು ನೆಟ್ಟಗೆ ಇಟ್ಟದ್ದರಿಂದ ತಮ್ಮ ಮೋಟಾರಕ್ಕೆ ಕೇಡಾಯಿತೆಂದು, ದಾವೇ ತಂದರು. ಮುನಸಫರು ಅಲ್ಲಿ ಸಾಹೇಬರಿಗೆ ಆರು ವೈಗಳ ನಷ್ಟ ಕೊಡಿಸಿದರು.

ಕಲಕತ್ತೆಯಲ್ಲಿ ಅಲ್ಲಿಯ ಕಮೀಶನರಾದ ಮೆ. ರಾಬರ್ಟಸನ್ನಸಾಹೇಬರ ಬಂಗಲೆಯ ಮೇಲೆ ಬಾಂಬು ಬಿಗೆದರು. ಕಿಟಕಿಗಳು ನುಚ್ಚಾದವು. ಸಾಹೇಬರು ಪಾರಾದರು.

ವಿದ್ಯಾರ್ಥಿಗಳಿಗೆ ಬುದ್ಧಿಗಲಿಸುವ ಶಿಕ್ಷೆ.

ಮೈಸೂರ ಸರಕಾರದವರು ವಿದ್ಯಾರ್ಥಿಗಳಿಗೆ ಸಿಸ್ತು ಕಲಿಸುವ ಉದ್ದೇಶದಿಂದ ಅವರನ್ನು ಈಗಿನ ಚಳವಳಿಯಿಂದ ಅಲಿಸ್ತ ಮಾಡಬೇಕೆಂದಿದ್ದಾರೆ. ವಿದ್ಯಾರ್ಥಿಗಳು ಸಂಪು ಮಾಡಿ ಶಾಲೆಗೆ ಹರಣ ಹೊಡದರೆ- ಒಂದು ದಿವಸಕ್ಕೆ ಏಳು ದಿವಸ ಶಾಲೆಗೆ ಬರಗೊಡಬಾರದು; ಸ್ಕಾಲರ ಇದ್ದವರ ಒಂದು ತಿಂಗಳ ಹಣವನ್ನೇ ಕೊಡಬಾರದು. ಮೇಲಿಂದ ಮೇಲೆ ಸಂಪು ಮಾಡುತ್ತಾ ಹೋದರೆ- ಸ್ಕಾಲರತಿಪ್ಪನ್ನೇ ಲೋಸ ಹೊಡಿಸಬೇಕು. ಮತ್ತು ಉಳಿದವರನ್ನು ಒಂದು ವರ್ಷ ಹೆಚ್ಚಿಗೆ ಅದೇ ವರ್ಗದಲ್ಲಿಡಬೇಕೆಂದು ಒಂದು ಸರಕ್ಯೂಲರ ತೆಗೆದಿದ್ದಾರೆ.

ತುರಂಗಕ್ಕೆ ಹೋಗಿ ನಾವಲಿಗನ ಕಸಬು ಕಲಿತನು.

—(o)—

ಜೋಶಿ ಎಂಬ ಹೆಸರಿನ ತರುಣನು. ಬಿ. ಎ. ಪರೀಕ್ಷೆ ಪಾಸಾದವನು. ಎಲ್‌ಎಲ್. ಬಿ ಅಭ್ಯಾಸ ಮಾಡುತ್ತಿದ್ದನು. ಕಾಯದೆಭಂಗದ ಚಳವಳಿಯಲ್ಲಿ ಸೇರಿ, ತುರಂಗವಾಸಿಯಾದನು. ಅಲ್ಲಿ ಅವನು ಕಲಿತದ್ದೇನು? ಸಾಹೇಬರ ಪದ್ಧತಿಯಂತೆ ಕ್ರಾಪ ಬಿಟ್ಟವರ ಕೂದಲು ಕತ್ತರಿಸುವದು !!

ಸ್ಟಾ ಅಸಫಲ್ಲಿಯವರ ಪತ್ನಿಗೆ ಜಾಮೀನದ ಶಿಕ್ಷೆ.

—(o)—

ದಿಲ್ಲಿಯಲ್ಲಿ ಶಿಕ್ಷೆಯಾದ ಶ್ರೀ. ಅಸಫಲ್ಲಿಯವರ ಪತ್ನಿಯವರು ರಾಜಕೀಯ ಚಳವಳಿಯಲ್ಲಿ ಪ್ರವೇಶ ಮಾಡಿದರು. ಸಾರ್ವಜನಿಕ ಶಾಂತತೆ ಕಾಯುವ ಬಗ್ಗೆ ಇವರಿಗೆ ಜಾಮೀನು ಕೊಡಬೇಕೆಂದು ಕೋರ್ಟಿನಲ್ಲಿ ವಿಚಾರಣೆ ನಡೆಯಿತು. ಜಾಮೀನು ಕೊಡದ್ದರಿಂದ ಮ್ಯಾಜಿಸ್ಟ್ರೇಟರು ಒಂದು ವರ್ಷದ ಸಾದಾ ಶಿಕ್ಷೆ ವಿಧಿಸಿದರು. ಅ ವರ್ಗ ಕೊಟ್ಟಿದ್ದಾರೆ.

ಶಿಕ್ಷೆಯ ತೀರ್ಪನ್ನು ತಾವೇ ಓದಿದರು

—(o)—

ಅಲ್ಲಾಬಾದಿನ ಮ್ಯಾಜಿಸ್ಟ್ರೇಟರು ಪಂಡಿತ ಜವಾಹಿರಲಾಲರಿಗೆ ಶಿಕ್ಷೆ ಹೇಳಿದನಂತರ ತಮ್ಮ ತೀರ್ಪನ್ನು ಓದುವದಕ್ಕೆಂದು ಪಂಡಿತರ ಕೈಗ್ಯುಷ್ಟಿಯೇ ಕೊಟ್ಟರು. ಪಂಡಿತರು ಇದನ್ನು ತಮ್ಮ ಮನೆಯವರಿಗೆ ಸ್ವತಃ ಓದಿ ತೋರಿಸಿದರು.

ಲರ ಮತ್ತು ಜೇಲ ಮುಖ್ಯಾಧಿಕಾರಿಗಳಿಗೆ ಸ್ವೀ ಲ ಅಧಿಕಾರ ಕೊಟ್ಟಿದ್ದಾರೆ.

ಪಂಡಿತ ಜವಾಹಿರಲಾಲರಿಗಾದ ಶಿಕ್ಷೆಯು ಬರೇ ಕ್ರೂರವಲ್ಲ. ದುರುಳತನದ್ದಾಗಿರುತ್ತದೆಂದು ಕಲಕತ್ತೆಯ ಮುನಸಿಪಾಲಿಟಿಯವರು ಜನರಲ ಕೌಂಸಿಲಿಯಲ್ಲಿ ಠರಾವು ಮಾಡಿದರು. ಯುರೋಪಿಯನ್ನ ಮೆಂಬರರು ಠರಾವಿಗೆ ವಿರೋಧ ಬೆಳೆಯಿಸಲಿಲ್ಲ.

ಪೇಶಾವರದ ದಂಡಿನ ಪಟ್ಟಿಯಲ್ಲಿ ನಡೆದು ಹೋಗುವವರೆಲ್ಲರು ಕಯ್ಯಲ್ಲಿಯೇ ಕಾಂದೀಲು ಹಿಡಕೊಂಡು ಹೋಗಬೇಕೆಂದು ಜಾಹೀರನಾಮೆ ಹಚ್ಚಿದ್ದಾರೆ.

ಧಾರವಾಡ-

ಶ್ರೀ. ದಿವಾಕರರು ಸುಖವಾಗಿ ಬಂಧಮುಕ್ತರಾಗಿ ಬಂದರೆಂಬ ಸಂತೋಷಕ್ಕಾಗಿ ಇಲ್ಲಿಯ ಖಾದಿಯ ಅಂಗಡಿಯಲ್ಲಿ ಎಲ್ಲಾ ಅರಿವೆಗಳ ಬೆಲೆಯನ್ನು ಕಡಿಮೆ ಮಾಡಿ ೧೦ ದಿವಸಗಳ ತನಕ ಕಡಿಮೆ ದರದಿಂದ ಮಾರುವರು.

ನಾಳೆನ ರಜೆ

ಕಾರ್ತಿಕೈಕಾದಶಿಯ ದೆಸೆಯಿಂದ ಇಂದು ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳೆನ ನಿತ್ಯದ ವಿಜಯವು ಪ್ರಕಟಿಸ್ಪಡಲಾರದು.

ನೋಟಿಸು

ರಾವಸಾಹೇಬ ಮುನಸುಫ ಕುಂದಗೋಳ ಕೋರ್ಟ ಇವರ ಸನ್ನಿಧಿಗೆ-

ಕೆಳಗೆ ಸಹಿ ಮಾಡಿದವನು ತಮಗೆ ತಿಳಿಸುವದೇನಂದರೆ ತಮ್ಮ ಕೋರ್ಟಿಗೆ ಕಾರಭಾರಿಸಾಹೇಬ ಜಮಖಂಡಿ ಕೋರ್ಟಿಗೆ ಗವಡಪ್ಪಾ ಈರನಗೌಡಾ ಬಳಗಾನೂರ ವ ಯಂಕನಗೌಡಾ ಪಕ್ಕೀರಗೌಡಾ ಪಾಟೀಲ ವ ಯಲ್ಲಪ್ಪಗೌಡಾ ಗುರನಗೌಡಾ ಪಾಟೀಲ ಶಂಕರಗೌಡಾ ರಾಮನಗೌಡಾ ಪಾಟೀಲ ವ ಗದಿಗೆಪ್ಪಾ ಪಕ್ಕೀರಪ್ಪಾ ಬಾಲೆಹೊಸೂರ ಸಾಕೀನ ಸವತಿ ಈ ಜನರು ಕೂಡಿ ನನ್ನ ಕಡಿಂದಾ ಗವಡಪ್ಪಾ ಬಳಗಾನೂರ ಇವನು ಬಸವಣ್ಣೆಪ್ಪಾ ಸುಂಕದ ಇವನ ಮೇಲೆ ದಾವಾ ಮಾಡಿದ್ದರಲ್ಲಿ ಸದರಿ ದಾವೆದಲ್ಲಿ ಗವಡಪ್ಪನು ಬಸವಣ್ಣೆಪ್ಪನ ಹೆಸರಲೆ ಬರಕೊಟ್ಟ ಚೀಟಿ ಸದರಿ ದಾವೆದಲ್ಲಿ ಬಸವಣ್ಣೆಪ್ಪನು ಹಾಜರ ಮಾಡಿದ್ದು, ನಾನು ಬರದದ್ದು ಸಳ್ಳು ಮಾಡುವ ದಶಿಂದಾ ನನ್ನ ಕಡಿಂದಾ ಸ್ವತಾ ವತ್ತಾಯದಿಂದಲೆ ಬರತಿಕೊಂಡ ಯರಡ ಅರ್ಜಿಗಳು ಅವರ ಕಡೆ ಇರುತ್ತವೆ ಸದರಿ ಅರ್ಜಿಗಳ ದಶಿಂದಾ ನಾನು ಅವರ ಮೇಲೆ ಕೆಲಸ ನಡಿಸುವವ ಇದ್ದೆ ಅದರೆ ಅವು ಸದರಿ ಅರ್ಜಿಗಳನ್ನಿ ತಿರಿಗಿ ನನಗೆ ಕೊಡುತ್ತೇನೆ ಅಂತ ಹೇಳಿದ್ದರಿಂದಾ ನಾನು ಕೆಲಸ ನಡಸಲಿಲ್ಲಾ ಈಗ ತಮ್ಮ ಕೋರ್ಟಿಗೆ ಕಳಿಸುವಷ್ಟರು ಇದ್ದಾರೆಂತ ತಿಳಿಯುತ್ತದೆ ಕಾರಣ ಸದರಿ ಅರ್ಜಿ [illegible] ರುದಿಂದಾ ದಮಕಿ ಕೊಟ್ಟು ಬರತಿಕೊಂಡ ಇರುತ್ತವೆ ಸದರೀ ಬಸವಣ್ಣೆಪ್ಪಾ ವ [illegible] ಪ್ಪಾ ಇವರ ಸಹವೆ ಅದ ಪಾವತ್ತೀ (ಚೀಟಿ) [illegible] ವಹಾರ ಬರದ ಪ್ರಕಾರ ಖರೆ ಇರುತ್ತದೆ ತಿಳಿಯುವದು ತಾರೀಖ ೧-೧೧-೩೦

ಸಹಿ. ಚೆನಮಲ್ಲಯ್ಯಾ ಗುರುಪಾದಯ್ಯಾ ಕೆರಿಮಠ ಸಾಕೀನ ಸವತಿ ಹಾಲಿವಸ್ತಿ ಧಾರವಾಡ ದಿ॥ ಕು॥

ನೋಟೀಸು

ರಾ॥ ರಾ॥ ಗವಡಪ್ಪಾ ಈರನಗೌಡಾ ಬಳಗಾನೂರ ವ ಯಂಕನಗೌಡಾ ಪಕ್ಕೀರಗೌಡಾ ಪಾಟೀಲ ವ ಯಲ್ಲಪ್ಪಗೌಡಾ ಗುರನಗೌಡಾ ಪಾಟೀಲ ವ ಶಂಕರಗೌಡಾ ರಾಮನಗೌಡಾ ಪಾಟೀಲ ವ ಗದಿಗೆಪ್ಪಾ ಪಕ್ಕೀರಪ್ಪಾ ಬಾಲೆಹೊಸೂರ ಸಾಕೀನ ಸಂವತಿ ಇವರಿಗೆ-

ಕೆಳಗೆ ಸಹಿ ಮಾಡುವವನು ಜಾಹೀರ ನೋಟೀಸು ಕೊಡುವದೇನಂದರೆ ನೀವು ನನ್ನ ಕಡಿಂದಾ ಅಜಮಾಸು ಐದು ತಿಂಗಳ ಹಿಂದೆ ವತ್ತಾಯದಿಂದ ದಮಕಿ ಹಾಕಿ ನಿಮ್ಮ ಪೈಕಿ ಗವಡಪ್ಪಾ ಬಳಗಾನೂರ ಇವನು ಬಸವಣ್ಣೆಪ್ಪಾ ಸುಂಕದ ಇವನ ಮೇಲೆ ದಾವೆಮಾಡಿದ್ದರಲ್ಲಿ ಬಸವಣ್ಣೆಪ್ಪನ ಹೆಸರಲೆ ಗವಡಪ್ಪಾ ಬಳಗಾನೂರ ಇವರು ಬರಕೊಟ್ಟ ಚೀಟಿಯನ್ನು ನೀನು ಬರದಿರುತ್ತೇನೆ ಅದು ಸುಳ್ಳು ಮಾಡುವದರದಶಿಂದಾ ನನ್ನ ಕಡಿಂದಾ ಕೆಲವು ಮಜಕೂರು ಕಾಣತಿ ರಾವಸಾಹೇಬ ಕುಂದಗೋಳ ಮುನಸುಫ ಕೋರ್ಟಿಗೆ ವ ಜಮಖಂಡಿ ಕಾರಭಾರಿಸಾಹೇಬ ಕೋರ್ಟಿಗೆ ಸ್ವತಾ ನನ್ನ ಕಡಿಂದಾ ಅರ್ಜಿಗಳನ್ನು ಬರಿಸಿ ತೆಗೆದುಕೊಂಡಿರುತ್ತೀರಿ ಆದರೆ ಅದರ ಬಗ್ಗೆ ನಾನು ನಿಮ್ಮ ಮೇಲೆ ಕೆಲಸ ನಡಿಸುವವನಿದ್ದೆನು ಆದರೆ ನೀವು ಸದರಿ ಅರ್ಜಿಗಳನ್ನು ಕೋರ್ಟಿಗೆ ಕಳಿಸುವದಿಲ್ಲಾ ನಿಗೆ ಕೊಡುತ್ತೇವೆ ಅಂತ ಹೇಳಿದ್ದರಿಂದಾ ನಾನು ನಿಮ್ಮ ಮೇಲೆ ಕೆಲಸ ನಡಿಸಲಿಲ್ಲಾ ಆದರೆ ಈಗ ಸದರಿ ಅರ್ಜಿಗಳ ದುರುಪಯೋಗ ಮಾಡುವ ಯತ್ನದೊಳಗೆ ನೀವು ಇದ್ದಂತೆ ನನಗೆ ಕಂಡು ಬರುತ್ತದೆ ಕಾರಣ ಈ ನೋಟೀಸಿನಿಂದಾ ಹೀಗೆ ಜಾಹೀರ ಮಾಡುತ್ತೇನೆ ಅಲ್ಲಾ ಸದರಿ ಅರ್ಜಿಗಳು ನನ್ನ ಖುಷಿಯಿಂದ ಬರಕೊಟ್ಟದ್ದು ಇಲ್ಲವೆ ನೀವು ವತ್ತಾಯದಿಂದ ಬರಿಸಿಕೊಂಡದವು ಇರುತ್ತವೆ ಆದರೆ ನಾನು ಬಸವಣ್ಣೆಪ್ಪನ ಹೆಸರಲೆ ಸದರಿ ಗವಡಪ್ಪನು ಬರಕೊಟ್ಟ ಪಾವತಿ (ಚೀಟಿ) ನಾನು ಬರದದ್ದು ಖರೆ ಇರುವದು ಪಾವತಿ ಪ್ರಕಾರ ಅದ ವ್ಯವಹಾರ ಖರೆ ಇರುತ್ತದೆ ಅಂತಾ ಬರಕೊಟ್ಟ ಜಾಹೀರ ನೋಟೀಸು ಸಹಿ ತಾ॥ ೧-೧೧-೩೦

ಸಹಿ ಚೆನಮಲ್ಲಯ್ಯಾ ಗುರುಪಾದಯ್ಯಾ ಕೆರಿಮಠ ಸಾಕೀನ ಸಂವತಿ ಹಾಲಿವಸ್ತಿ ಧಾರವಾಡ ದಿ॥ ಕು॥

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ಸಲಾರ

ಯಾರಿಗೂ ಬರಂಗಿ ಕಳ ಗವದೇನಂದರೆ-

ನಮ್ಮ ಕಟ್ಟಿಗೆ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಗಳೂ ಮತ್ತ ವ ಕೂಸ್ಸಿ ಹೆದ್ದಿ ವ ತಿರ [illegible]

[illegible] ಮಳೆ ವ ಸಂಗವಾಸಿ (ಟ) ಪೂ ಟಿನ [illegible] ಕಂಡುಗಳು

[illegible] ಕೊಟೆದ ಬಲಿಗಿಗರು ವ ಜಂತಿ ವ ರೀಪು ವ [illegible] ಟೈಯಾರ ತಿಗುತ್ತವೆ

ಇದರ ಕೊಂಡಕಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಜಿಲ್ಲಾದ ಘರಸೀಡರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಬ್ಬಾ ಗೋಡಿಕಟ್ಟಿ
ಟೀಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಚಂದಾದಾರರಿಗೆ ಸೂಚನೆ

—(೦)—

ನವ್ವಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ಹ್ವಿ. ಪಿ. ಯನ್ನು ಕಳಿಸುವೆವು. ಚಂದಾದಾರರು ಹಿ. ಪಿ. ಸೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೆಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೨ನೇ ನವೆಂಬರ ೧೯೩೩ (ಸಂಚಿಕೆ ೨೪೦

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೋಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೋಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾರೂಢರ ಅಸೇಜಿ, ಶ್ರೀ. ಅರೂಢಸ್ವಾಮಿಗಳ ಕೈಪಿಯತು ಮತ್ತು ಮುನಸಿಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತವಾದಿ, ಪ್ರತಿವಾದಿ, ಹಾಗು ಮುನಸಿಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತೇವೆ. ಪುಸ್ತಕದ ಬೆಲೆ ಆಗಿದ್ದ ಸಾಜರಿಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ, ಇದರ ಎಂಟೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇದು ಪ್ರತಿಗಳು ತೀರ ತುಸುವೆನಿಸುವವ, ಆದರಿಂದ ಗ್ರಾಹಕರು ಕ್ಷರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ಯಾ. ಪಿ. ಪಿಸ್ ಬೇರೆ ಒಂದೇದು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಎಷ್ಟಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಕಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ಯಾ. ಪಿ. ಯಿಂದ ತಗೆಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟಿ ಕಳಿಸಬೇಕು.

ಆರ್. ಜಿ. ಮುಧೋಳಕರ
ಫಸ್ಟ ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೆಂದಿಗಳು ಎಂಟು ಲಕ್ಷದ ಮೇಲಿಂಟು. ಜಿಲ್ಲೆ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜಾಸ್ತಿಗಿ ಒಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ "	೭-೦-೦
೩ "	೮-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಶಾಲಿವಾಹನ ಶಕವರ್ಷ ೧೮೨೨ ಕಾರ್ತೀಕ ಶುದ್ಧ ೧೧

ರಾವುಂಡ ಟೇಬಲ.

ರಾವುಂಡ ಟೇಬಲದ ಪ್ರತಿನಿಧಿಗಳು ಬಹುತ್ಕೃಷ್ಟವಾಗಿ ಲಂಡನ ಸೇರಿದರು. ಸರ ರಹಿಮತುಲ್ಲಾ ಸಾಹೇಬರು ಅಸ್ವಸ್ಥತೆಯ ಮೂಲಕ ಪ್ರತಿನಿಧಿಯಾಗಿ ಹೋಗುವದನ್ನು ರಹಿತ ಪಡಿಸಿದ್ದರಿಂದ, ಅವರ ಸ್ಥಳದಲ್ಲಿ ಮೆ. ಗುಲಾಮಹುಶೇನಸಾಹೇಬರನ್ನು ನೇಮಿಸಿದ್ದಾರೆ. ಇವರ ದೇಹಪುಷ್ಟಿಯು ಆಗಡಬಂಡಾಗಿರುವದರಿಂದ, ವಿಲಾಯತಿಯ ಪತ್ರಗಳಿಗೆ ಹಾಸ್ಯಚಿತ್ರ ತೆಗೆಯಲು ಇವರೊಂದು ಸಾಧನವಾಗುವದೆಂದು ಮುಂದಾಗಿಯೇ ಟೀಕೆ ನಡೆದಿದೆ.

ರಾವುಂಡ ಟೇಬಲ ತೆರೆಯುವ ಸಮಾರಂಭವನ್ನು ಸ್ವತಃ ಬಾದಶಹರೇ ಮಾಡುವರು. ಬಾದಶಹರಂಥವರನ್ನು ರಾಜಕಾರಣದಲ್ಲಿ ತರುವದರಿಂದ, ಹಿಂದುಸ್ಥಾನದ ಪ್ರಜರಿಗೆ ವಿಶೇಷವಾಗಿ ಕಾಂಗ್ರೆಸದವರ ಬಾಯಿಗೆ ನೀರು ಬಿಡುವಂಥ ಕೆಲ ಮಾತುಗಳನ್ನು ಅದರಲ್ಲಿ ಹಾಕುವರೆಂದು ತರ್ಕ ಮಾಡಲ್ಪಟ್ಟಿದೆ ಸಾಲ್ಕು ದಿವಸಗಳ ಹಿಂದೆ ಪಾರ್ಲಮೆಂಟ ಸಭೆಯ ಪ್ರಾರಂಭವಾಯಿತು. ಆಗ ಬಾದಶಹರು ಮಾಡಿದ ಭಾಷಣದಲ್ಲಿ ಬರೇ ಆಶೀರ್ವಾದವುಂಟು. ಆಶೀರ್ವಾದಿಂದ ಕುಸುವಾದರೂ ಪ್ರತ್ಯಕ್ಷ ಹಿತವಾಗುವಂಥ ಶಬ್ದಗಳು ಮುಂದಿನ ಭಾಷಣದಲ್ಲಿ ಬರುವವೆಂದು ಊಹೆ ಮಾಡಲು ಅಡ್ಡಿಯಿಲ್ಲ.

ಗಿಡಿಸೆಯ ತಾರೀಖಿನ ದಿವಸ ಬಾದಶಹರು ಪ್ರಾರಂಭ ಸಮಾರಂಭ ಮಾಡಿದ ಬಳಿಕ ಏಳು ದಿವಸಗಳವರೆಗೆ ಕೆಲಸವು ಶಹಕೂಬಾಗುವದು. ಗಿಡಿಸೆಯ ತಾರೀಖಿನಿಂದ ನಿಜವಾದ ಕೆಲಸಕ್ಕೆ ಪ್ರಾರಂಭವಾಗುವದು. ವಿಮಾನಗಳ ದೃಶ್ಯದಲ್ಲಿ ಹಿಂದೀ ಪ್ರತಿನಿಧಿಗಳನ್ನು ಕಣ್ಣಿತ್ತಿ ಸಹ ನೋಡದಂಥ ಮುಖ್ಯ ಮಂತ್ರಿಯಾದ ಮೆ. ಮ್ಯಾಕಡೋನಾಲ್ಡ ಸಾಹೇಬರು ಟೇಬಲಿನ ಅಧ್ಯಕ್ಷ ಸ್ಥಾನ ಸ್ವೀಕರಿಸುವರು. ಮೆ. ಹೆಂಡರಸನ್ನ ಹಾಗು ಲಾರ್ಡ ಸಾಂಕೆಯವರು ದಿವಸ ಜೇರಮನ್ನರಾಗುವರು.

ಇವೆಲ್ಲ ಮೇಲೋಪಚಾರಗಳಾದವು. ಪ್ರತ್ಯಕ್ಷವಾ ನಡೆಯಬೇಕಾದ ಕಾರ್ಯದ ಕಾರ್ಯಕ್ರಮವೇ ಗೊತ್ತಾಗಿಲ್ಲ. ಈ ಬಗ್ಗೆ ವಿಚಾರ ಮಾಡಲು ಶ್ರೀಮದಾರ ಶಾಸ್ತ್ರೀ, ಸರ ಸಿ. ಪಿ. ರಾಮಸ್ವಾಮಿ ಅಯ್ಯರ ಮತ್ತು ದಿವಾನ ಬಹಾದ್ದುರ ರಾಮಚಂದ್ರರಾಯರು ಮೆ ಬೆನ್ನ ವೆಜ್ಜನ್ಸ್ಟ್ರಸಾಹೇಬರನ್ನು ಕಾಣಲಿಕ್ಕೆ ಹೋಗಿದ್ದರು. ಅಲ್ಲೇನು ವಿಚಾರವಾಯಿತೆಂಬದು ಪ್ರಕಟವಾಗಿಲ್ಲ. ಮೊದಲು ಪ್ರಾಂತಿಕ ಸರಕಾರಗಳ ಸ್ವಾತಂತ್ರ್ಯದಿಂದ ಪ್ರಾರಂಭ ಮಾಡಬೇಕೇ? ಹಿಂದುಸ್ಥಾನ ಸರಕಾರದಿಂದ ಪ್ರಾರಂಭಿಸಬೇಕೇ? ಎಂಬ ವಿಚಾರವಿರುವದು.

ವಸಾಹತಿನ ಸ್ವರಾಜ್ಯದ ಕೆಳಗೆ ಯಾವ ಹಕ್ಕನ್ನೂ ತಾವು ಪಡೆಯಲಿಚ್ಛಿಸುವದಿಲ್ಲ. ಮತ್ತು ಅದರ ಕೆಳಗೆ ಕೊಡಬೇಕೆಂದೆನಿಸುವ ಕೆಲವಕ್ಕೆ ಹಕ್ಕುಗಳನ್ನು ಅಂಗೀಕರಿಸಲಿಕ್ಕಿಲ್ಲೆಂದು ಅನೇಕ ಪ್ರತಿನಿಧಿಗಳು ವರ್ತಮಾನಪತ್ರಗಳ ದ್ವಾರದಿಂದ ಅಭಿಪ್ರಾಯ ಪಟ್ಟಿರುತ್ತಾರೆ ಇವೆಲ್ಲ ಸದ್ಯದಲ್ಲಿ ಅಂತಃಪುರದ ವೀರಾವೇಶವಾಗಿರುತ್ತವೆ. ಪ್ರತಿಪಕ್ಷಗಳು ತಮ್ಮ ವಿರೋಧವನ್ನು ಭಯಂಕರವಾಗಿ ಟೇಬಲಿನ ಮುಂದಿಡುವರು. ಹಿಂದುಸ್ಥಾನ ಸರಕಾರದವರು ತಮ್ಮ ಅಭಿಪ್ರಾಯದ ಒಂದು ಪತ್ರಿಕೆಯನ್ನು ಕಳಿಸಿದ್ದಾರೆ. ಅವರು ಅದರಲ್ಲಿ ವಸಾಹಾತಿನ ಸ್ವರಾಜ್ಯದ ಹೊರ್ತು ಮಿಕ್ಕ ಬೇಡಿಕೆಗಳನ್ನು ಬೇಡಿರಬಹುದು. ಏಕಂದರೆ- ಲಾರ್ಡ ಆಯರ್ವಿನ ಸಾಹೇಬರು ಡೋಮಿನಿಯನ್ನ ಎಂಬ ಶಬ್ದವನ್ನುಚ್ಚರಿಸದಿದ್ದದರಿಂದಲೇ ಹಿಂದುಸ್ಥಾನದ ತುಂಬ ಅವರ ಆರ್ಡಿನನ್ಸುಗಳ ಪ್ರೇರಣೆಯಿಂದಲೇ ಲಂಠಿಶಾಹಿ ನಡೆದಿದೆ. ಲಾರ್ಡ ಸಾಹೇಬರ ಪತ್ರಿಕೆಯನ್ನೇ ಮೂಲಾಧಾರ ಮಾಡಿಕೊಂಡು ವಿಚಾರಣೆಯ ಪ್ರಾರಂಭವಾಗಬೇಕೆಂದು ಕೆಲವರು ಅನ್ನುತ್ತಾರೆ. ಈ ಪತ್ರಿಕೆಯು ಒಂದೆರಡು ದಿವಸಗಳಲ್ಲಿ ಪ್ರಚಾರವಾಗತಕ್ಕದ್ದಿದೆ. ದೇಶೀ ಚಳವಳಿಗೆ ಅದೊಂದು ಉತ್ತೇಜನವಾಗಿ, ರಾವುಂಡಟೇಬಲಿನ ಪ್ರತಿನಿಧಿಗಳನ್ನು ಪುಸಲಿಗೊಂದಲದಲ್ಲಿ ಹಾಕುವದೆಂದು ತರ್ಕ ವುಂಟು. ಆದುದರಿಂದ ವಸಾಹಾತಿನ ಸ್ವರಾಜ್ಯ ತರುತ್ತೇವೆಂದೇ ಆತ್ಮ ಪೌರುಷ ಮಾಡಿಕೊಂಡು ಹೋಗುವರಿಗೆ ರಣಮಂಡಲದಲ್ಲಿ ಬೇರೆ ಚಿತ್ರವೇ ಕಂಗೊಳಿಸುವದು.

ರಾವುಂಡಟೇಬಲಕ್ಕೆ ಜಯವಾಗಲೆಂದು ಕ್ರಿಸ್ತನ ಪ್ರಾರ್ಥನೆ

—(೦)—

ಹಿಂದುಸ್ಥಾನದ ರಾವುಂಡಟೇಬಲದಲ್ಲಿ ಇಂಗ್ಲಿಷ ಮತ್ತು ಹಿಂದುಸ್ಥಾನದ ನಡುವೆ ಸೌಹಾರ್ದ್ರ ಉತ್ಪನ್ನವಾಗಿ, ಪರಸ್ಪರ ಪ್ರೀತಿ ವಿಶ್ವಾಸಗಳುಂಟಾಗಿ ಅದರ ಕೆಲಸಕ್ಕೆ ಜಯ ಬರಲೆಂದು ಗಿಳಿಸೆಯ ತಾರೀಖಿನ ದಿವಸ ಎಲ್ಲ ಚರ್ಚಗಳಲ್ಲಿಯೂ ದೇವತಾರಾಧನೆ ನಡೆಯಬೇಕೆಂದು ಬ್ರಿಟಿಷ ಸಾಮ್ರಾಜ್ಯದ ಮುಖ್ಯ ಗುರುಗಳಾದ ಕ್ಯಾಂಟರಬರಿ ಮತ್ತು ಬೇರೆ ಪ್ರಮುಖ ಪಾದ್ರಿಭಟ್ಟರೂ ಎಲ್ಲ ಪಾದ್ರಿಗಳನ್ನುದ್ದೇಶಿಸಿ, ಗುರುವಾಜ್ಞೆಯನ್ನು ಪ್ರಕಟಮಾಡಿದ್ದಾರೆ. ದೇಶಕ್ಕೆ ಆಪತ್ತು ಬಂದಾಗ ಪಾದ್ರಿಗಳು ಈ ರೀತಿ ಸಾರ್ವಜನಿಕ ದೇವತಾರಾಧನೆ ಮಾಡುವ ವಾಡಿಕೆಯಂತು.

ಬ್ರೈಸ್ಸಫೋರ್ಡಸಾಹೇಬರ ವೋಟಾರಕ್ಕೆ ಜಪ್ತಿಯ ಭಯವೆದ್ದಿತು.

—(೦)—

ಹಿಂದುಸ್ಥಾನದ ನಿಜಸ್ಥಿತಿಯನ್ನು ತಿಳಿದುಕೊಳ್ಳುವದಕ್ಕೆ ಬಂದಿರುವ ಮೆ. ಬ್ರೈಸ್ಸಫೋರ್ಡಸಾಹೇಬರು ಕಾಂಗ್ರೆಸದವರ ಕೊಡ ನಿಜಸ್ಥಿತಿಯನ್ನು ಸೇರಿಸಲು ಹೊರಟಿರುವದು ಒಂದು ಶಪ್ತ! ಏನಂದರೆ- ಪೋಲಿಸ ಸೂಪರಿಂಟೆಂಡೆಂಟ ಜಕ್ಕಪ್ಪ ಇವರನ್ನು ಹಿಂಬಾಲಿಸಿ, ಇವರಿಗೆ ಅಕಾಡಣ ಅಪಮಾನವಾಗುವಂಥ ಕೃತ್ಯ ಮಾಡುತ್ತಿರುವದು. ಸಾಹೇಬರು, ಮಿರಾಬಾಯಿಯವರು, ಕಾಂಗ್ರೆಸದಸೇಕ್ರೆಟರಿ ಇವರೆಲ್ಲರೂ ಒಂದು ವೋಟಾರಿನಲ್ಲಿ ಕೂತು ಬೋರಸಾಲದಗೆ ಬಂದರು. ಮ್ಯಾಜಿಸ್ಟ್ರೇಟರೂ ಪೋಲಿಸರೂ ಸೇರಿ, ಕಾಂಗ್ರೆಸ ಸೆಕ್ರೆಟರಿಯಾದ ಶ್ರೀ ನೋಪಸಲಾಂಶಪಾ ಇವರನ್ನು ಹಿಡಿದರು. ಸಾಹೇಬರು ತಾಲೂಕ ಕಚೇರಿಯಲ್ಲಿ ಹೋದರು. ಉಳಿದವರು ವೋಟಾರಿನಲ್ಲಿಯೇ ಕೂತಿದ್ದರು. ಪೋಲೀಸರು ಬಂದು, ಇದು ಸ್ವೀಕಾರಯುದೆಶೀರ ಮಂಡಲಿಯ ತಂದ ವೋಟಾರು. ಇದನ್ನು ಜಪ್ತ ಮಾಡದೆ. ಕೆಳಗಿಳಿಯರೆಂದರು. ಶ್ರೀ ಮೀರಾಬಾಯಿಯವರು ಇಳಿಯುವದಿಲ್ಲ, ಬಾಯಿಯಿಂದ ತಂದ ವೋಟಾರಂದೆಂದರು. ಪೋಲಿಸರ ಸಮಾಧಾನವಾಗಲೇ ಇಲ್ಲ. ಕಡೆಯಲ್ಲಿ ವೋಟಾರಿನ ನಂಬರು ಡ್ರಾಯಿಂಗ್ರೂಮಿನ ಬಾಗಿಲ ಎಲ್ಲಾ ಸೇರಿಸಿಕೊಂಡು ಅದನ್ನು ಜಪ್ತ ಮಾಡಲಿಲ್ಲ. ಮೆ ಬ್ರೈಸ್ಸಫೋರ್ಡ ಸಾಹೇಬರು ಸರಕಾರದ ವತಿಯಿಂದ ಹೋಗಿದ್ದರೆ- ಪೋಲಿಸರು ಇವರು ಕೂತು ಒಂದು ವೋಟಾರಿನ ಕಲಗೋತ್ರವನ್ನು ತಿಳಕೊಳ್ಳುವ ಉದ್ದಾಮಗೇ ಹೋಗುತ್ತಿದ್ದಿಲ್ಲ. ರಾಜನೀತಿಯು ಈ ಪ್ರಕಾರ ಪಕ್ಷಪಾತಕ್ಕಾಗುತ್ತದೆ.

ಜಪಾನದಲ್ಲಿ ಅತ್ಯಾಚಾರ

—(೦)—

ಪೋಲಿಸರ ಕಾಟಾಂತ್ಯ ಅಂತಸ್ಥಾನ

ಜಪಾನ ದೇಶದಲ್ಲಿರುವ ಕೊರಿಯನಿವಾಸಿಗಳು ಜಪಾನಿಗಳನ್ನು ಭಯಂಕರ ರೀತಿಯಿಂದ ಕೊಂದರು. ಇದರಲ್ಲಿ ಗಿಡಿ ಬಾಣ ಪೋಲಿಸರಿದ್ದಾರೆ. ಇವರ ನೆಂಬರು ಮೆಟ್ಟಿಸನ್ನ ನಡೆ ಪಾಲ್ಗೊಳ್ಳಕ್ಕೆ ಕಳಿಸಿದರು.

ಶ್ರೀ. ಬಿ. ಕಂಬಳಿಯವರ ವಿಷಯವಾಗಿ ಜ್ಞಾನಪ್ರಕಾಶದ ಸ್ಪಷ್ಟ ಮತವು.

—(೦)—

ಹಿಂಬಲವಿಲ್ಲದ ಮಿಂಚೇರಾವರನ್ನು ಸರಕಾರೀ ಮತಗರ ಬಲದ ಮೇಲೆತ್ತಿ ಕಾಯ್ದೆಯಪದರಿಂದ ಕೌನ್ಸಿಲದಲ್ಲಿ ಸರಕಾರದ [illegible] ವಿರೋಧವನ್ನುಂಟುಮಾಡಿಕೊಂಡಂತೆ [illegible] ರಾ. ಬಿ. ಕಂಬಳಿಯವರನ್ನು ಬ್ರಾಹ್ಮಣೇ[illegible]ವರು ಮೊದಲು ಆರಿಸಿದ್ದರು. [illegible]ವರಲ್ಲಿ ದ್ವಿಪಕ್ಷ, ತ್ರಿಪಕ್ಷವಾಗಿರುತ್ತದೆಂ[illegible] ಅತಿಶಯ ಯೋಗ್ಯತೆಯವರಾಗಿ[illegible] ನವಲೆ, ಹೊಂಗುರಿಂಗ [illegible] ರಾ. ಬಿ. ಕಂಬಳಿಯವರಿಗಿಂತ [illegible] ಕೃಷ್ಣರಾಯರ ಬೆಂಬಲವುಂಟು [illegible] ಚಿತ್ತಾಕೀಡಿಯವರಾಗೂ [illegible] ಸೇವಾಗಲು ಸಿದ್ಧರಿದ್ದಾರೆ. ಈ ಪರಿ[illegible]ಲ್ಲಿ ರಾ. ಬಿ. ಕಂಬಳಿಯವರು ಬ್ರಾಹ್ಮಣೇ[illegible]ಶರಾಗುವದೇ ಹೇಗೆಂಬದನ್ನು ಗನ್ನರ್ನರ [illegible] ಪೂರಾ ವಿಚಾರ ಮಾಡಿ ತಿಳಕೊಳ್ಳಬೇಕು.

ಹುಬ್ಬಳ್ಳಿಯ [illegible] ಆರೋಪಿಗಳು ಖಾಲಾಸ.

—(೦)—

ಗಡಂಗದ ಮುಂದೆ ಪಿಕೆಟಿಂಗ ಮಾಡಿದ ಜನರೋಪದಿಂದ ಪಿಡಿಸಲ್ಪಟ್ಟಿದ್ದ ಡಿಕ್ಟೆಟರ ರಾಮರಾವ ತೇವಡೆ, ಪಕೀರ ಮರಾಠೆ ಮೊದಲಾದ ೨೫ ಜನ ಆರೋಪಿಗಳ ವಿಚಾರಣೆಯು ರೆಸಿಡೆಂಟ ಮ್ಯಾಜಿಸ್ಟ್ರೇಟರಾದ ರಾವಸಾಹೇಬ ಕಲಶೋಟೆಯವರ ಮುಂದೆ ನಡೆಯಿತು. ವಿಚಾರಣೆಯ ಮುಂಚೆ ಪೋಲಿಸರು ಬೀದಿಗಳಗುಂಟ ಬಂದೋಬಸ್ತು ಇಟ್ಟು ಮುಖ್ಯ ಮುಖ್ಯ ಜನರನ್ನು ಪೊರ್ಬಂದ ಮಾಡಿಸಿ, ಯಾರನ್ನೂ ಕೋರ್ಟಿನಲ್ಲಿ ಬಿಡಲಿಲ್ಲ. ಒಂದೂವರೆ ತಾಸಿನ ತನಕ ವಿಚಾರಣೆಯಾಗಿ, ಕೊನೆಯಲ್ಲಿ ಮ್ಯಾಜಿಸ್ಟ್ರೇಟರು ಇವರಿಗೆ ಇನ್ನೊಮ್ಮೆ ಗದ್ದಲ ಗೊಂದಲವಾಗದಂತೆ ಪಿಕೆಟಿಂಗ ಮಡಬೇಡಿರೆಂದು ಹೇಳಿ ಎಲ್ಲರಿಗೆನ ಮನೆಗೆ ಹೋಗಿರೆಂದು ಹೇಳಿದರು. ನಂತರ ತಿರಕಾರಾಮನ ಕೆರೆಯ ದಂಡೆಯಮೇಲೆ ಸಭೆಯಾಗಿ ಶ್ರೀ. ವಾಳವೇಕರ ಗುರುರಾಯರು ಇವರ ಅಭಿನಂದನ ಮಾಡಿದ ಭಾಷಣ ಮಾಡಿದರು.

ಇಂದು ಶ್ರೀ. ದಿವಾಕರ ಬಹುಮಾನ ಮತ್ತು ಮೆರವಣಿಗೆ.

ಶ್ರೀ. ದಿವಾಕರ ರಂಗರಾಯರು ಬೆಳಗಾವಿಯಲ್ಲಿ ನಿನ್ನೆ ಮುಂಜಾನೆ ಬಿಡುಗಡೆ ಹೊಂದಿದರು. ಇಂದು ಅಪರಾಹ್ನದಲ್ಲಿ ಧಾರವಾಡಕ್ಕೆ ಬರುವರು. ಇವರ ಸ್ವಾಗತಕ್ಕಾಗಿ ಊರು ಶೃಂಗಾರ ಮಾಡಲ್ಪಟ್ಟಿರುವದು. ಸಾಯಂಕಾಲದಲ್ಲಿ ಮೆರವಣಿಗೆ ಜರುಗುವದು. ಕಾಂಗ್ರೆಸ ಕಚೇರಿಯಿಂದ ಹೊರಟು, ವಿಜಯ ಮುದ್ರಾಲಯದ ಮುಂದೆ ಹಾದು ಕಲ್ಲಪ್ಪಿಯ ದಾರಿಯ ಮಾರ್ಗವಾಗಿ ಪ್ರಮುಖ ಬೀದಿಗಳಿಂದ ಹಾದು, ಕಡೆಗೆ ಬೈಲಿಗೆ ಹೋಗುವದು. ಅಲ್ಲಿ ಪೂರ್ವಪತ್ರವು ಅರ್ಪಣ ಪಡಿಸುವದು.

—

ಗಂಡ, ಹೆಂಡತಿ, ಮಗ ಸೊಸೆ
ಎಲ್ಲರೂ ತುರಂಗ ಕಂಡರು

—(೦)—

ಮಹಾತ್ಮ ಗಾಂಧಿಯವರು ಭಕ್ತರಾದ ದರಜಾದ ಗೋವಾಳವಾಸರು ಜಳವಳಿಯ ಮೊದಲಿನಿಯ ಕುತ್ತಿಗೆ ಎಂಡು ವರ್ಷದ ಶಿಕ್ಷೆಗೆ ಗುರಿಯಾದರು. ಇವರ ಚಿರಂಜೀವರಾದ ಶ್ರೀ ಶ್ರೀಕಾಂತರು ತಮಗೆ ಬ್ರಿಟಿಶ ಹಡ್ಡು ದಾಟಿ ಹೋಗಲಿಕ್ಕೆ ಮಾಡಿದ ಪ್ರಯತ್ನ ಮಾಡಿದ್ದರಿಂದ, ಹಿಂದೂವರೀ ತಿಂಗಳೆಂದ ಜೋರಸಾವಿನ ಶಾಕ್ಷಿನ್ನಿದ್ದಾರೆ. ಇವನ ತಮ್ಮನು ಜೋರಸಾದ ಒಲ್ಲೆಟಸ್ಸು ಮುಟ್ಟಿಸಿದ್ದಕ್ಕಾಗಿ ಶಿಕ್ಷೆ ಹೊಂದಿ ತುರಂಗವಾಸಿಯಾಗಿದ್ದಾನೆ. ಸೂರ್ಯಕಾಂತನ ಹೆಂಡತಿ ಶಾಂತಿಬಾಯಿಯು ಪಿಕೆಟಿಂಗದ ದೆಸೆಯಿಂದ ಶಿಕ್ಷೆ ಅನುಭವಿಸುತ್ತಿದ್ದಾರೆ. ಗೋವಾಳವಾಸರ ಪತ್ನಿ ಶ್ರೀ. ಸೌ॥ ಭಕ್ತಲಕ್ಷ್ಮೀಯವರು ಈಗ ತಾನೇ ಜೋರಸಾದಿನ ಡಿಕ್ಟೇಟರಾಗಿದ್ದಾರೆ. ಏಳು ತಿಂಗಳ ಕೂಸುಂಟು. ತುರಂಗದ ಮಾರ್ಗವನ್ನು ನಿರೀಕ್ಷಿಸುತ್ತಿದ್ದಾಳೆ.

—

ಬಾದಶಹರ ಭಾಷಣದ ಮೇಲೆ ನಿಷೇಧದ ಠರಾವು.

—(೦)—

ಬಾದಶಹರು ಸಾರ್ಲಮೆಂಟ ಸಭೆಯನ್ನು ತೆರೆಯುವಾಗ ಹಿಂದುಸ್ಥಾನದ ಪ್ರಸ್ತಾಪದಲ್ಲಿ ಸಾಯಮನ ಕಮೀಶನದ ಹೆಸರನ್ನು ಎತ್ತಲೇ ಇಲ್ಲ; ಗುತ್ತು ರಾವುಂಡ ಟೇಬಲವು ಪಾರ್ಲಮೆಂಟದ ಅಧಿಕಾರವನ್ನು ಅನ್ಯಾಯತ್ರಾಂತ ಮಾಡತಕ್ಕದ್ದಾಗಿರುತ್ತದೆ; ಎಂಬೆರಡು ಕಾರಣಗಳ ದೆಸೆಯಿಂದ ನಿಷೇಧದ ಠರಾವು ತರುವಂತೆ ಕಮ್ಯಾಂಡರ ದ್ವಯರಾದ ಲ್ಯಾಂಕರಲಪ್ಸನ ಘುತ್ತು ಫ್ಲೋಲಾಕ್ಸರು ನೋಟೀಸು ಕೊಟ್ಟಿದ್ದಾರೆ.

ಸೇನಗುಪ್ತರ ಪತ್ನಿಯವರ ದಸ್ತಗಿರಿ.

—(೦)—

ದಿಲ್ಲಿಯಲ್ಲಿ ಡಿಕ್ಟೇಟರ ಡಾಕ್ಟರ ಬೇದಿಬಾಯಿಯವರ ಅಧ್ಯಕ್ಷತೆಯ ಜೇಕಾಯ ಮೆಶೀರವೆಂದು ಹೇಳಿ, ಪೊಲಿಸರು ಶ್ರೀ. ಸೇನಗುಪ್ತರ ಪತ್ನಿ, ಶ್ರೀ ವಿಜಯಾ, ತಿರಸಾರಾಯಣ ಹಸ್ತರ ಮೊದಲಾದವರು ಸಮುದಾಯ ದಸ್ತಗಿರ ಮಾಡಿದರು. ಶ್ರೀ. ಸೇನರ ಪತ್ನಿಯವರು ಇಂಗ್ಲಿಷ ಯುವತಿಯಾಗಿದ್ದಾರೆ.

—

ಇಂಗ್ಲಂಡರ ವಿರುದ್ಧ ರಚಿಸಿದ ಜಾಹಿರಾತು.

—(೦)—

ಜಗತ್ತಿನ [illegible] ಪ್ರದರ್ಶನ ಧೂಳಜೇಷ್ಟೆ ನಡೆದಿದೆ. ಅದರಲ್ಲಿ ಇಂಗ್ಲಿಷರ ಕೈಕೆಳಗೆ ಅವರ ಕಣ್ಣ ಹೆಚ್ಚಿಗೆ ಇರುವದು. ಇಂಗ್ಲಿಷರ ವಿರುದ್ಧ ನಡೆದಿದ ಜಳವಳಿಯನ್ನು ನಿಲ್ಲಿಸಬೇಕೆಂದು ಮಾನೆಜ್ಜೀದಲ್ಲಿರುವ ಇಂಗ್ಲಿಷ ರಾಯಭಾರಿಯು ರಷಿಯಾ ಸರಕಾರಕ್ಕೆ ಒತ್ತಾಯದಿಂದ ಹೇಳುವನು. ಇದನ್ನೆಲ್ಲ ಕೇಳಿ, ಕೆಳಿ ರಷಿಯರು- ನಾವು ಬೇಕಾದಷ್ಟು ಪ್ರಯತ್ನ ಮಾಡುತ್ತೇವೆ ನಮ್ಮ ಅಭಿಪ್ರಾಯ ಮೀರಿದೆಂದು- ಉತ್ತರ ಕೊಟ್ಟಿರುತ್ತಾರೆ.

—

ಸೊಲ್ಲಾಪೂರದ ಅಧ್ಯಕ್ಷರ ಬಿಡುಗಡೆ.

—(೦)—

ಲಷ್ಕರೀ ಕಾಯದೆಯ ದಬ್ಬಾಳಿಕೆದುಲ್ಲಿ ಆರು ತಿಂಗಳ ಶಿಕ್ಷೆಯಾದ ಸೊಲ್ಲಾಪೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದ ಶೇಟ ಮಾಣಿಕಚಂದ ಶಹಾ ಇವರು ವಿಜಾಪೂರದ ತುರಂಗದಿಂದ ಬಂಧಮುಕ್ತರಾದರು. ವಿಜಾಪೂರದಲ್ಲಿಯೂ ಇವರ ಬಹುಮಾನವಾಯಿತು. ಸೊಲ್ಲಾಪೂರದಲ್ಲಿಯೂ ಪ್ರಚಂಡವಾಗಿ ಒಯ್ಯಮಾನದ ಸಮಾರಂಭವಾಯಿತು. ಇವರನ್ನು ಕಾಣಲು ಜನರು ತಂಡತಂಡವಾಗಿ ಸೇರುತ್ತಲಿದ್ದಾರೆ.

—

ಜೇಲರರಿಗೆ ಸ್ವೇಚ್ಛಲ ಅಧಿಕಾರ.

ರಾಜಕೀಯ ಕೈದಿಗಳು ತುರಂಗದಲ್ಲಿ ತುರಂಗದ ನಿಯಮ ಮತ್ತು ಸಿಸ್ತನ್ನು ಮುರಿಯುವದಾದರೆ- ಅವರ ಮೇಲೆ ಕತ್ತಿ, ರಿವ್ಹಾಲ್ವರ, ಬಂದೂಕು ಮುಂತಾದವುಗಳ ಉಪಯೋಗ ಮಾಡಿ, ಅಪರಾಧಿಗಳನ್ನು ದಂಡಿಸುವಂತೆ ಒಂಗಾಲ ಸರಕಾರದವರು

R. N. B 1443

ವಿಜಯ

ಬೆಲೆ ೧ ಅಣೆ

ಸಂಪಾದಕರು:- ಅಣ್ಣಾಜಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ | ಧಾರವಾಡ ಮಂಗಳವಾರ ತಾರೀಖು ೮ನೇ ನವ್ಹೆಂಬರ ೧೯೩೦ | (ಸಂಚಿಕೆ ೪೨

ಶ್ರೀ. ದಿವಾಕರರ ಆಗಮನ ಮತ್ತು ಸನ್ಮಾನ.

ದಿವಾಕರೋದಯ

ಕನ್ನಡಿಗರ ಕೂಟದ ಉದಯೆರಾಗ

ಕೇಳಿರಿ ಕೇಳಿರಿ ನರುಕಿನ ಪಾಡನು ।
ಕೇಳಿಸುವರೆ ಬೆಳಗಿನ ತಂಬೆ ?
"ಬಿಟ್ಟಿ ನನ್ನ ಭಾಗ್ಯಭಾಷೆ" ।
ಎನುತ ಪಾಡುತಿಹ ಕೈಲಾಸಿ ॥೧॥

ಕನ್ನಡ ನಾಡಿನ ಗುಡಿಗಳನರೆ ಸೊನ- ।
ಣ್ಣವ ನೇಸರು ಹಾಕುವನು ।
ಹೊನ್ನಿನ ಕಿರಣದ ಹಂದರಬಿಗಿಯುತೆ ।
ಕನ್ನಡಿಗರನಲ್ಲಿರಿಸುವನು ॥೨॥

ವೀರನು ಕನ್ನಡ ನಾಡಿನ ಗದ್ದುಗೆ- ।
ಯೇರಿದ, ಹುರುಪನು ಬೀರಿದನ ।
ಕೂರಿರಿ ಕನಗಂಪುರನು ಶಿವದಲಿ ।
ಕೋರಿ ದಿವಾಕರ ವಿಜಯವನು ॥೩॥

ಘನವೇತಂದಿಹುದಿನ್ನು ನವ ಗೆಗಳ ।
ಭೂಯರು ನೆಂಬ ಕಣ ಕಣದಾಡಿ ॥
"ಜಯ ಜಯ ಜಯ ಕರ್ನಾಟಕ" ಎನ್ನುತ ।
ಹಾಡುವ ನಾವೆಲ್ಲರು ಕೂಡಿ ॥೪॥

—ಕವಿಭೂಷಣ ಕೃಷ್ಣಕವಿ

ಕನ್ನಡ ಕಡುಗಲಿ
ಮಹಾದೇವ ಮಾರ್ಕಂಡ ಮೈದೂರ

—(೦)—

ದ, ಅಧ್ಯ ಭಾವಿನಿಗಳು
ಗೃಂಥಿಯ ಕುಲದ ಬಂಟರು
ವೀರ ಕನ್ನಡನಾಡ ಕುವರನ ।
ಭಾರತಾಂಬೆಯ ಸೇವೆಗೈಯಲು ಪರಮ ಹರುಷದಲಿ ।
ಪರಮಹಾತ್ಮರ ಪಥಕೆ ಸೇರುತ ।
ಹುಡಿಪಿನಿಂ ಸ್ವಾತಂತ್ರ್ಯಯುದ್ಧಕೆ ।
ಧುಮಿ ಮುಂದಡಿಯಿಡುತ ಪೋಗಿರೆ ಜಯವು
ತಾನಿರಿ ॥

ಇನ್ನೊಂದು ಒಗೆಯಾಗಿ

ವರ ಮಹಾತ್ಮರ ಪಥಕೆ ಸೇರುತ ।
ಹುರುಪಿನಿಂ ಸ್ವಾತಂತ್ರ್ಯ ಯುದ್ಧಕೆ ।
ಪರನು ಮಾಡೆಮೆಂಬ ಕನ್ನಡ ವೀರ ಬಾಲಕನು ॥
ವೀರ ಶಿವರ ಕೀರ್ತಿ ಸೂರ್ಯನ ।
ಚಾಮರಧ್ವಜವನು ಪಿಡಿದು ನಡೆತರೆ ॥

ಬೆಗೆ ಜಯವು ತಾನದು ದೊರೆಪುದೇನರಿದು ?

ಕರ್ನಾಟಕ ಪ್ರಾಂತಿಕ ಕಾಂಗ್ರೆಸಕಮೀಟಿಯ ಅಧ್ಯಕ್ಷರಾದ ಶ್ರೀ. ದಿವಾಕರ ರಾಗರಾಯರು ಶ ನಿವಾರ ಪ್ರಾಂತಕಾಂಬಲದಲ್ಲಿ ಬೆಳಗಾವಿಯಲ್ಲಿ ಬಡ ಗಡೆ ಹೊಂದಿದರು. ಅಂದು ಸಾಯಂಕಾಲದಲ್ಲಿ ಹೀರ ಸಭೆ ಕೂಡಿ, ಇವರ ಬಹುಮಾನ ಮಾಡ ಮರುದಿವಸ ಇವರು ಬೆಳಕ್ಕುಡಿಯ ಶ್ರೀ ರಾಗರಾಯರ ಸಂಗಡ ಬೈಲಹೊಂಗಲ, ಸವದತ್ತಿಗೆ ಹೋಗಿ, ಅಲ್ಲಿಯ ಡಳವಳಿಯನ್ನು ನೋಡಿಕೊಂಡು, ಸಾಗರಿಗರು ಮಾಡಿದ ಮಾನ ಮರ್ಯಾದೆಯಿಂದ ಧಾರವಾಡಕ್ಕೆ ಬಂದ ಇವರು ಬರುವದು ಮೊದಲೇ ಗೊತ್ತಾದ್ದ ಇವರ ಸ್ವಾಗತ ಮಾಡಲು ನಾಗರಿಕರಲ್ಲರು ಸಿದ್ಧರಾಗಿದ್ದರು. ಮುಖ್ಯ ಮ ಬ್ಯ ಕೂಟಗಳಲ್ಲಿ ಮಾ ನ ನ ಲ್ಲಿ ಸಿ ದ್ದ ರು ಮ್ಯ ವಿಸಾಲಿಟಿಸುವರು ಮೊದಲ್ಗೊಂಡು ಊರ ಜ ನರು ದಾರಿಗಂಟ ಧಳಿ ಹಾಕಿ, ರಂಗವಲ್ಲಿ ಹಾ ಕಿದ್ದರು. ತಳಿರು ತೋರಣ ಕಟ್ಟಿದ್ದರು. ವಿದ್ಯುತ್ ಬತ್ತಿಯ ಪ್ರಭೆ ಹೆಚ್ಚಿಂದು ಘೋಷಿಸಿದ್ದರು. ಈ ದೀಪ ಸ್ಪಂದ್ಯಾಂದ್ರ ಕೂಟನ್ನು ಬೆಳಗಿದರ ಮೇಲೆ ಕಮೀಟಿಯಿಂದ ಪೌರವಗೆ ಹೊರಟಿತು. ಮಹಾತ್ಮರ ಪಥದಲ್ಲಿ ಕನ್ನಡಿಗರು ಅಲ್ಲಿ ಅವರ ಸಂಗಡ ದಾಂಡಿಗೆ ಹೋಗಿ, ಅಲ್ಲಿ ದ್ದ ಶ್ರೀ ತಮ ಬಜಿಯವರ ಕೂಡ ದಾಂಡಿಸಾದ ಮೇಲೆ ಅಧಿಕೋಗ ಮಾಡಿ, ಸರಕಾರೀ ಉಸ್ತುವ ಸೂರ ಮಾಡಿದ ಮೇಜ್ಜೇದ ಮೈದೂರ ಮಲ್ಲಾ ರಿಯು ಇದೇ ಸಮಯದಲ್ಲಿ ಬಂಧಮುಕ್ತನಾಗಿ ಧಾ ರವಾಡಕ್ಕೆ ಬಂದನ ಹೆಂಗ್ಳೋಡಿಯ ಶ್ರೀ ಅನಂ ತರಾಯರೂ ಹಿಂತಿರುಗಿದ್ದ ಬ್ರಿಟಿಷ ಸರಕಾರದ ಅ ತಿಥ್ಯಹೊಂದಿದವರೇ. ಹೀಗೆ ಈ ಮೂವರ ಮೆರವ ಣಿಗೆ ಹೊರಟಿತು. ದಾರಿಗಂಟ ನರಸಾರಿಯರು ಇ ವರ ಮೇಲೆ ಪುಷ್ಪವೃಷ್ಟಿ ಮಾಡಿದರು ಮಾಲೆ ಗಳನ್ನು ಹಾಕಿದರು. ಆರತಿ ಮಾಡಿದರು ಕೂ ವುಗಳು ಮ ಗಂಟ ಹಾಸಿದವು ಮಾರ್ಗದಲ್ಲಿ ಇ ವರ ಗೋಣು ಬಾಗಿಸಿದವು ಕೈ ಬ ಸವಾಡಿದ ವು ಎಲ್ಲರು ತಾಸಿನ ಕನಕ ಮೆರವಣಿಗೆಯ ಡಗರದಿಂದ ಸಡಿ ಸಡಸಾಜ್ಜಿಲಿಗೆ ಬಂತು. ಅ ಲ್ಲಿ ನಾಲ್ಕು ಸಾವಿರ ಕ್ಕಿಂತ ಹೆಚ್ಚು ಜನ ಕೂಡಿತ್ತು. ಶ್ರೀ ಅಲೂರ ವೆಂಕಟರಾಯರು ಅಧ್ಯಕ್ಷರಾದರು ಶ್ರೀ ಮುದವೀಡು ಕೃಷ್ಣರಾಯರು ಶ್ರೀ ವೈಶಾರ ಶ್ರೀ ಸಂಕರಿಂದ ಇವರ ಬಗ್ಗೆ ಪ್ರಶಂಸೋದ್ಗಾರ ಕೆಗೆದು ಶ್ರೀ ದಿವಾಕರರ ವಿಜಯವಾಗಿ ಹೇಳತ ಕ್ಕನ್ನೆನ್ನೂ ಇಂಬಸದಿಲ್ಲೆಂದು ಮಾಕನಾಡಿ ಶ್ರೀ ದಿವಾ ಕರರಿಗೆ ಸಂಗಡಿಸ ತಿಯಿಂದ ಕೊಡಬೇಕೆಂದು. ಮೊ ದಲೇ ಗೊತ್ತಾಗಿದ್ದ ಮಾನಪತ್ರವನ್ನೋದಿದರು ಬಳಿ ಕ ಕನ್ನಡಿಗ ಕೂಟದವರು ಬೇರೆ ತಕೆದ ಕವಿತಾ ಬದ್ಧವಾದ ದಿವಾಕರೋದಯವೆಂಬ ಸ್ತುತಿಯ ನ್ನು ಮಂಡಿಸಿ ಕನ್ನಡಿಯ ಕಟ್ಟಿನಲ್ಲಿ ಹಾಕಿ, ಅದ ನ್ನು ಅಂಗಿಗೆ ಒಳ ಮಾ ನ ವಾ ಗಿ ಕೂಟ್ಟರು ಒಬ್ಬ ಗೃಹಸ್ಥರು ಒಂದು ಇಡಿಗಂಟನ್ನು ಇವರಿಗೆ ಕೊಟ್ಟರು ಅದು ಮುಚ್ಚಿದ ಮುತ್ತಿಯ ಮೊ ರು ಲಕ್ಷದ್ದೆಂತುಂಟು ಒಂದ ದಾನಿಯು ಅರು ತಿ ಮಾಡಿ, ಎರಡು ರೂಪಾಯಿ ಉಡುಗರೆ ಕೊಟ ಳು. ಶ್ರೀ ದಿವಾಕರರು ಈ ಎಲ್ಲ ನಿಧಿಯನ್ನು ಕಾಂಗ್ರೆಸ ಫಂಡಿಗೆ ಕೊಟ್ಟರು ನಂತರ ಶ್ರೀ ವೈ ದೂರರು ಬಾಗಲೋಟಿಯ ಬೈಕರ ಅಪ್ಪಾತಿಯ ಸ್ವಾ ಧ್ಯಾಯನ್ನು ಕಣ್ಣಾರೆಕಂಡದ್ದನ್ನು ಹೇಳಿದರು ಅದೇ ಪ್ರಕಾರ ಶ್ರೀ ಆನಂತರಾಯರು ಬಾಗಲೋ ಟಿಯ ಬೈಕರ ವಿಷಯ ಹೇಳಿ, ಅದೊಂದು ದ್ವಾರ ಕಾ, ಗೋಕುಲ ವೃಂದಾವನ ಈಂತೆ ಪುಣ್ಯಾಸ್ಥಳವಾ ಗಿದೆಯೆಂದು ಗೋಕುಲದಲ್ಲಿ ಶ್ರೀ ಕೃಷ್ಣನಿದ್ದಿದ್ದನು ಅಡಿದನು ನೋಡಿದನೆಂದು ಶ್ಲೇಕ್ತ ಪುರೋಹಿತ ರು ತೋರಿಸುವಂತೆ, ಮುಂದೆ ಬಾಗಲೋಟಿಯಲ್ಲಿ ಮ ಹಾತ್ಮರಿದ್ದಿರ. ಸರದಾರ ಪಟೇಲರ ಭಾಷಣೆಯು ಇಂದ್ಲಿತ್ತೆಂದು ಬಾಗಲೋಟಿಯವರು ತೋರಿರುವ ರು. ಈಗ ತುಂಗಳ್ಳಕ್ಕೆ ಹೋದವರೆಕ್ಕು ಒನರೆಂಬ ಲೆಕ್ಕು ಮಾಡುವದುಳಿದ್ದಿಲ್ಲ. ಯಾವ ವಿಷಯವರು ಇನ್ನೂ ತುರ್ಗಳಕ್ಕೆ ಹೋಗಿಲ್ಲೆಂಬ ಗಣತಿ ಮಾಡ ಬೇಕಾಗಿದೆಯೆಂದೂ, ಸ್ವರಾಜ್ಯ ಸ್ವತಂತ್ರ್ಯಕ್ಕಾಗಿ ಪ್ರ ತಿಯೊಬ್ಬರೂ ಹೋರಾಡಬೇಕೆಂದೂ ಸ್ಫೂರ್ತಿ ಬರು ವಂಥ ಭಾಷಣ ಮಾಡಿದರು ತುಂಗಳದ್ದಿ ವೇಶ ದ ನಿಜಸ್ಥಿತಿಯ ತಿಳಿಯುವಂಥ ವರ್ತಮಾನಪತ್ರಗ ಳನ್ನು ತಮಗೆ ಓದಲಿಕ್ಕೆ ಕೊಡಬೇಕ ಇಲ್ಲ ರಾಜಕೆ ಯ ಕೈದಿಗಳಲ್ಲಿ ಒಬ್ಬಿಭೇದವಾಗುವಂದ ಅ ಬ, ಕ, ವರ್ಗ ಮಾಡಿ, ಕಲಹ ಹಚ್ಚಿದರು. ನಾನು ಹೊ ಗೆಗೆ ಬಂದ ಬಳಿಕ ದೇಶಕ್ಕೆತಿಯಲ್ಲಿ ಓದಲಾದ್ದನ್ನು ಕಂಡು ಕಳ್ಳವಿಕ್ಕಿಯಾದೆನು. ನಾವೆಲ್ಲ ಬಳಕಳಿಯ ನ್ನು ಒಳ್ಳೇ ಕನ್ನಡಿಗರ ನೆನಿಸಕ್ಕಕ್ಕುಂ. ಇಂ ದು ನನ್ನನ್ನು ಅಕ್ಕಿಯನ್ನು ಮಾಡಿ, ಅದರಿಂದಿರು ವ ನಳಿ ನಾನು ಅಳುವನ್ನು. ದೇಶಕ್ಕೆಗಾಗಿ ಈ ಸದೆಯಲ್ಲಿಯ ಗೇಡಾರ, ದೀಪ ಹೊರಕ್ಕೆಯನು ಇಂ ದಿನ ವ ತಕ್ಕೆಲಿ ದಿವಸನ್ನು ಸ್ಮರಿಸಿ, ಆ ಬನರಿ ಗೆ ದ ವ ಗಾ ಗಾ ಗ ಯ ದ ಕೊ ಡಬೇಕಂ ಗಾ ಕ ತ ಮ ನ ಮಾಡಿದರು ಬಳಿ ಕ ಶ್ರೀ ಕಾ ಗಿ ಪಡಮೆಂಕರಾಯರು ಬಾಗಲೋ ಟಿಯ ಅನ ವ ಕಟ ಬಂಗಳ ಆಸಕವಕಗಳ ದೆಸೆ ಯಿಂದ ಧಾರವಾಡ ಜಿಲ್ಲೆಯವರು ದುಗಮುಟ್ಟಿ ಸ ಹಾಯ ಮಾಡಬೇಕು ಹೆಚ್ಚು ಸಾವಿರ ಕಟಿಂ ಬಗಳ ಭಾರ ಹಿಡಿಯುವದು ಧಾ ರವಾಡ ಜಿಲ್ಲೆ ಸೀ ಗದ ಕೆಲಸವಲ್ಲ ಅರುತಿಂಗಳಲ್ಲಿ ಸಕ್ಕಾಗ್ರಹಕ್ಕಾಗಿ ಅಂ ಸಾವಿರ ರೂಪಾಯಿ ಮೆಚ್ಚ ವಾಗಿ ಧಾರವಾಡದಲ್ಲಿ ಕೂಡಿದ್ದು ಮೂರೇ ಸಾವಿರ ಉಳಿದ ರಕಮು ಹಳ್ಳಿಗಳಲ್ಲಿ ಕೂಡಿದ ಗ ಳೂಂದಲ್ಲಿ ಹೊರಯುವವರೂ ಜರಂಚನೆ ರೂ ಮಾಲು ಸತ್ತುವವರೂ ಕೂಟ್ಟಿಲ್ಲ ಬಡ ರೈತ ರೇ ಕೂಟ್ಟಿದ್ದಿರುತ್ತದೆ ಇನ್ನೊಂದಾರ್ಮ ಹೀಗೆ ಎಂದು ಕೂಡಿಸಿ, ಬಾಂಡೋರಿಗೆ ಕಳಸಬೇಕ ಲ್ಲಿಯ ಪ್ರತ್ಯಕ್ಷ ಸ್ಥಿತಿಯನ್ನು ನೋಡುವದಕ್ಕಾಗಿ ದೇಶಮಂಡೆ ರಂಗಾಧರರಾಯರು, ಶ್ರೀ ಕಂಬಾರಕರ ಡಾಕ್ಟರ ಕಟ್ಟುರವ ಮತ್ತು ಶ್ರೀ ಹ್ವಿ ಹ್ವಿ ಪಾಟೀಲರು ಜೋಗಿದ್ದಾರೆ ಇನರು ನಿಮಾಗಾಗಿ ಬಾಗಲೋಟಿಯ ಸಂದೇಶ ತರುವರು. ಮತ್ತು ಸ ಡ್ಡ ನಾವು ಧಾರವಾಡದಲ್ಲಿ ವಿಶಾಯಕಿರು ಅಂಯ ಮಾರಂಭವಾಗದಂತೆ ಪಿಟಿಂಗ ಮಾಡಬೇಕಾಗಿದೆ ಮಂಗಳವಾರದಿಂದ ಪ್ರಾರಂಭಮಾಡುವೆನು ಯಾರು ಬರದಿದ್ದರೂ, ನಾನೊಬ್ಬನೇ ಮುಂದಾಗುವೆನು ಸ್ವಯಂಸೇವಕರು ನಾಳೆ ಒಂದು ತಮ್ಮ ಹೆಸರು ಬ ರಿಸಬೇಕೆಂದು ನುಡಿದರು ನಂತರ ಅಧ್ಯಕ್ಷರಾಗ ಮಾರೋಪದ ಭಾಷಣವಾಗಿ, ವಂದೇ ಮಾತರದ ಜಯ ಘೋಷದಲ್ಲಿ ಸಭೆ ವಿಸರ್ಜನೆಯಾಯಿತು

ಪುಂಬಯ ಸರಕಾರದ ದಿವಾನಗಿರಿಯನು ಕೆಸರೊಳಗಿನ ಕಂಬವಾಯಿತು.

—(೦)—

ದಿಲ್ಲಿಯಲ್ಲಿ ಶ್ರೀ. ಸೇನಗುಪ್ತರಿಗೆ ಒಂದು ವರ್ಷದ ಸಾದಾ ಶಿಕ್ಷೆಯಾಯಿತು ಇವರ ಹೆಂಡತಿ (ಯಶೋಪಿಯನ್ನ) ಯ ವೇಲಿನ ಖಟ್ಲೆಯ ವಿಚಾರಣೆಯು ನಿನ್ನೆದಿಂದ ಪ್ರಾರಂಭವಾಗಿದೆ.

ವಕೀಲನ ಖಾದಿ ಧೋತರ ಕಸಕೊಂಡ ಸಿಪಾಯಿಗೆ ೨೦ ರೂ. ದಂಡ.

—(o)—

ಬೆಜವಾಡದಲ್ಲಿ ಮಹಮದ ಜಾಫರನೆಂಬ ಪೋಲಿಸ ಸಿಪಾಯಿಯು ಶ್ರೀ ಸೀತಾರಾಮಾಂಜನೇಯ ವಕೀಲರು ದಾರಿಯಲ್ಲಿ ಹೋಗುತ್ತಿದ್ದಾಗ, ಅವರ ಖಾದೀ ದೋತರವನ್ನು ಸೆಳೆಕೊಂಡನು. ಈ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಈತನಿಗೆ ೨೦ ರೂಪಾಯಿ ದಂಡ ಮಾಡಿದರು.

ಒಮ್ಮೆಯಾದ ಘಜೇತಿ ಸಾಕು-

ವಿಮಾನಗಳನ್ನು ನೋಡಲಿಕ್ಕೆ ಹೋದನಂತರ, ಹಡಗಪಡೆಯನ್ನು ನೋಡಲಿಕ್ಕೆ ಬನ್ನಿರೆಂದು ಬ್ರಿಟಿಶ ಸರಕಾರದವರು ರಾವುಂಡ ಟೇಲರದ ಪ್ರತಿನಿಧಿಗಳನ್ನು ಕರೆದರು. ಒಮ್ಮೆಯಾದ ಅಪಮಾನ ಸಾಕು; ಪುನಃ ಪುನಃ ಇಂಥ ಮಾನಹಾನಿ ಬೇಡೆಂದು, ಅನೇಕರು ಆಮಂತ್ರಣ ಸ್ವೀಕರಿಸಲಿಲ್ಲ.

ಈ ವರ್ಷ ಇಂಗ್ರೇಜಿ ಸರಕಾರದ ಬಜೆಟ್ಟಿನಲ್ಲಿ ೫೪ ಕೋಟಿ ರೂಪಾಯಿಯ ಒಳಬಟ್ಟಾ ಬರುವದು,

---

ಜಾಹೀರ ನೋಟೀಸು

ರಾಣೇಬೆನ್ನೂರ ತಾಲ್ಕಾ ಕಾಂಗ್ರೆಸ ಕಮೀಟಿಯಿಂದ ಈ ವರುಷದ ೧-೪-೦ ಕೊಟ್ಟು ನಮ್ಮ ಕಾಂಗ್ರೆಸ ಕಮೀಟಿ ಮೆಂಬರ ಆದವರಿಗೆ ಈ ಮೂಲಕಾ ಜಾಹೀರ ನೋಟೀಸು ಕೊಡುವದೇನಂದರೆ- ಸದರ ವರ್ಷ ಪದ್ಧತಿ ಪ್ರಕಾರ ನವಂಬರ ತಿಂಗಳಲ್ಲಿ ವಾರ್ಷಿಕ ಜನರಲ್ ಕಮೀಟಿ (ರಾಣೇಬೆನ್ನೂರ ತಾ॥ಕಾಂಗ್ರೆಸ ಬಾಬತ್ತು) ಕೂಡ್ಸತಕ್ಕ ಪನಿಪಾರ ಯಿದ್ದು ಅದರಂತೆ ತಾ॥೧-೧೧-೩೦ಕ್ಕೆ ಜನರಲ್ ಕಮೀಟಿ ಠರದಿದ್ದು ಸದರ ಠಾರೀಖಿಗೆ ಯಾರೂ ಬಾರದ್ದರಿಂದ ಸದರ ಕಮೀಟಿ (ಜನರಲ್ ಕಮೀಟಿ) ತಾ॥೧೫-೧-೧೯೩೧ ನೇದಿನಸ ನಮ್ಮ ತಾ॥ಕಾ॥ ಆಫೀಸಿನಲ್ಲಿ ೪ ಘಂಟೆಕ್ಕ ಯಿಟ್ಟಿರುತ್ತೇವೆ ದಯವಿಟ್ಟು ಎಲ್ಲರೂ ಬರಬೇಕು ಸದ್ರಿ ದಿವಸ ಅಡಜರ್ನ ಕಮೀಟಿ ಯಿದ್ದಮೂಲಕ ಕೂಡಿದ್ದ ಪ್ರಜನರಿಂದಾ ಆ ದಿವ್ಸ ಕಮೀಟಿ ಸಾಗಿಸುವದಲ್ಲಿ ಬರುವದು ಯೀವತ್ತು ತಾ॥೧-೧೧-೩೦ಕ್ಕೆ ಜನರಲ್ ಕಮೀಟಿ ಆದೆ ಅಂತಾ ತಾ॥-೧೫-೧೧-೩೦ಕ್ಕೆ ಜಾಹೀರ ನೋಟೀಸು ಹಚ್ಚಿ ಪ್ರಸಿದ್ಧಿ ಮಾಡಿದ್ದಿ ಆದರೆ ಯಾರೂ ಬಾರದ್ದರಿಂದ ಈಗ ಖಾದಕ್ಕೂ ಹೆಚ್ಚು ಪ್ರಸಿದ್ಧ ಮಾಡೋ ಪ್ರಸಂಗು ಬಿತ್ತು

ವಿಷಯಗಳು

೧ ರಾಣೇಬೆನ್ನೂರ ತಾ॥ಕಾ॥ ದ ವರ್ಕಿಂಗ ಕಮೀಟಿ ನೆಮ್ಮುವದು.(ಮುಂದಿನ ವರ್ಷ ಕೆಲಸ ಮಾಡುವ ಬಗ್ಗೆ ಕಾರ್ಯಕಾರಿ ಮಂಡಲ)

೨ ಶ್ರೀಯುತ ಶಂಕರವೀರಯ್ಯನವರ ಸಂಬ್ಯಂಧಿ ಇಸಕೊಂಡ ಆಗಾವುರೂಪಾಯಿ ಮತ್ತು ಅವರು ಸರಬರಾಹಿ ವಸೂಲ ಮಾಡಿಕೊಂಡ ರೂಪಾಯಿಗಳ ಬಗ್ಗೆ ವಿಚ್ಯಾರ ಮಾಡಿ ಮುಂದೇನು ಮಾಡತಕ್ಕದ್ದು ಅಂತಾ ವಿಚ್ಯಾರ

೩ ರಾಣೇಬೆನ್ನೂರ ತಾ॥ಕಾ॥ ಕಮೀಟಿಯ ನೇಮಗಳನ್ನು ಗೊತ್ತು ಪಡಿಸತಕ್ಕದ್ದು ಅಂಬೋಬಗ್ಗೆ ವಿಚ್ಯಾರ

೪ ಈವರೆಗೆ ವರ್ಕಿಂಗ ಕಮೀಟಿಯವರು ಮಂಜೂರ ಮಾಡಿದ ಮತ್ತು ಕಛಾಸಣಿಯಿಂದ ಒಬ್ಬೋಬರ ಅಂತಾ ಠರಾವು ಆದದ್ದನ್ನು ಅನುಲಕ್ಷಿಸಿ ಉಳಿದ ಲೆಖ್ಖದ ಬಗ್ಗೆ ಮಂಜೂರ ಕೊಡುವದು.

೫ ಅವತ್ತಿನ ದಿವಸ ಇದ್ದ ಅಧ್ಯಕ್ಷರಿಂದ ಮತ್ತು ಅವರ ಸರವಾನಗಿಯಿಂದ ತರತಕ್ಕ ಇತರೆ ವಿಷಯಾ ಈ ಪ್ರಕಾರ ವಿಷಯಗಳನ್ನು ಠರಾವಿಸುವದು ಇರುತ್ತದೆ. ದಯವಿಟ್ಟು ಎಲ್ಲರೂ ಬರಬೇಕು ಅಂತಾ ವಿನಂತಿ

ತಾ॥ ೧-೧೧-೧೯೩೦ ಇಸ್ವಿ

ಹಣಮಂತಾಚಾರ್ಯ ಪಾಂಡುರಂಗಿ

ಅಧ್ಯಕ್ಷ

ರಾಣೇಬೆನ್ನೂರ ತಾಲೂಕ ಕಾಂಗ್ರೆಸ ಕಮೀಟಿ

ನೋಟೀಸಿನದರಗಳು

ಸಿಂಗಲ ಶಾಲಮಿನ ಹತ್ತು ಎಳೆಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಎಳೆಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಎಳೆಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರ್ಧ ಆಣೆ ಡಬಲ ಕಾಲಮಿನ ಎಳೆಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯಿ ಎಂಟು ಲಕ್ಷದ ಮೇಲುಂಟು, ಚಲಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೀರೆ ತರನ ಡಿಪಾಜಿಟಿಗಳಿಗೆ ಹನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳತಕ್ಕದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಿಗಳನ್ನು ಇತ್ತೀ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

ಮು. ನಂ. ೧೫೭೬ ದುಮ್ಮಜಿನ ಅಂಗಡಿ ಮಂಗಳವಾರಪೇಟ ಜವಳಿ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕಿಲ್ಲೆದಲ್ಲಿ ಶ್ರೀ. ಹೆಬಳೀಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೀರೆ ಮಾಹಿತಿಯನ್ನು ಸಂವಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಸಿ N. B 1448

ವಿಜಯ

ನಿತ್ಯ ಸತ್ಯ ಬೆಲೆಅರ್ಧ ಅಣೆ

ಸಂಪಾದಕರು:- ಅಣ್ಣಾಚಾರ್ಯ ಜಾಳಾಪುರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಬುಧವಾರ ತಾರೀಖು ೨೫ ನೇ ನವ್ಹೆಂಬರ ೧೯೩೦ (ಸಂಚಿಕೆ ೨೪೧

ದಿವಾಕರರ ಆಗಮನ ಮತ್ತು ಸನ್ಮಾನ.

ದಿವಾಕರೋದಯ

ಕನ್ನಡಿಗರ ಕೂಟದ ಉದಯರಾಗ

ಕೇಳಿರಿ ಕಂಠಿ ನಮ್ರಿನ ಪಾಡನು |
ಕೇಳಿಸುವದೆ ಬೇಗನ ಕಾಳಿ ?
"ಏಳ್ಳಿ ಕನ್ನಡ ಭಾಗ್ಯವಿಧಾತನೆ" |
ಎನುತ ಹಾಡುತಿಹ ಗೃತಾಳಿ ||೧||
ಕನ್ನಡ ನಾಡಿನ ಗುಡಿಗಳನೆಲೆ ಹೊಸ- |
ಒಣ್ಣವ ನೇಸರು ಹಾಕುವನು !
ಹೊನ್ನಿನ ಕಿರಣದ ಹಂದರಬಿಗಿಯುತೆ |
ಕನ್ನಡಿಗರನಲ್ಲಿರಿಸುವನು ||೨||
ವೀರನು ಕನ್ನಡ ನಾಡಿನ ಗದ್ದುಗೆ- |
ಯೇರಿದ, ಹುರುವನು ಬೀರಿದನು |
ತೂರಿರಿ ಶನಿಗಂಪಲರನು ಶಿರದಲಿ |
ಕೋರಿ ದಿವಾಕರ ವಿಜಯವನು ||೩||
ಭಯವೇತರದಿಹುದಿನ್ನು ಸವಗೆ ನಿ- |
ರ್ಭಯರು! ನೆರೆದು ಕಾಣಿ- ಕಾಣದಾಡಿ ||
"ಜಯ ಜಯ ಜಯ ಕರ್ನಾಟಕ" ಎನ್ನುತೆ |
ಹಾಡುವ ನಾವೆಲ್ಲರು ಕೂಡಿ ||೪||

—ಕವಿಭೂಷಣ ಕೃಷ್ಣಶರ್ಮ

ಕನ್ನಡ ಕಡುಗಲಿ
ಮಹಾವೀರ ಮಾರ್ತಾಂಡ ಮೈದೂರ
ಅರ್ಥ ಭಾಮಿನಿಗಳು

ವೀರಶೈವರ ಕುಲದ ಬಂಟನು|
ವೀರ ಕನ್ನಡನಾಡ ಕುವರನು|
ಭಾರತಾಂಬೆಯ ಸೇವೆಗೈಯಲು ಪರಮ ಹರುಷದಲಿ|
ವರಮಹಾತ್ಮರ ಪಥಕೆ ಸೇರುತ|
ಹುರುಪಿನಿಂ ಸ್ವಾತಂತ್ರ್ಯಯುದ್ಧಕೆ|
ಭರದಿ ಮುಂದಡಿಯಿಡುತ ಪೋಗಿರೆ ಜಯವು ತಾನರಿಗೆ||

ಇನ್ನೊಂದು ಬಗೆಯಾಗಿ

ವರ ಮಹಾತ್ಮರ ಪಥಕೆ ಸೇರುತ|
ಹುರುಪಿನಿಂ ಸ್ವಾತಂತ್ರ್ಯ ಯುದ್ಧಕೆ|
ಪರಮ ಮಾದೇವೆಂಬ ಕನ್ನಡ ವೀರ ಬಾಲಕನೂ||
ವೀರಶೈವರ ಕೀರ್ತಿ ಸೂರ್ಯನ|
ಚಾಮುಂಡಜವನು ಪಿಡಿದು ನಡೆತಿರೆ|
ಭಾರತಾಂಬೆಗೆ ಜಯವು ತಾನದು ದೊರೆಪುದೇನರೆದೆ?

ಕರ್ನಾಟಕ ಪ್ರಾಂತಿಕ ಕಾಂಗ್ರೆಸಕಮೀಟಿಯ ಅಧ್ಯಕ್ಷರಾದ ಶ್ರೀ. ದಿವಾಕರ ರುಗರಾಯರು ಶನಿವಾರ ಪ್ರಾತಃಕಾಲದಲ್ಲಿ ಬೆಳಗಾವಿಯಲ್ಲಿ ಬಡುಗಡೆ ಹೊಂದಿದರು. ಅಂದು ಸಾಯಂಕಾಲದಲ್ಲಿ ಜಾಹೀರ ಸಭೆ ಕೂಡಿ, ಇವರ ಒಹುವಾನ ಮಾಡಲ್ಪಟ್ಟಿತು; ಮರುದಿವಸ ಇವರು ಚಿಕ್ಕೋಡಿಯ ಶ್ರೀ. ಅನಂತರಾಯರ ಸಂಗಡ ಬೈಲಹೊಂಗಲ, ಸವದತ್ತಿಗೆ ಹೋಗಿ, ಅಲ್ಲಿಯ ಜನಳಳಿಯನ್ನು ನೋಡಿಕೊಂಡು, ನಾಗರೀಕರು ಮಾಡಿದ ಮಾನ ಮರ್ಯಾದೆಯಿಂದ ತುಷ್ಟರಾಗಿ ಅಪರಾಣ್ಣದಲ್ಲಿ ಧಾರವಾಡಕ್ಕೆ ಬಂದರು. ಇವರು ಬರುವದು ಮೊದಲೇ ಗೊತ್ತಾದ್ದರಿಂದ ಇವರ ಸ್ವಾಗತ ಮಾಡಲು ನಾಗರಿಕರೆಲ್ಲರು ಸಿದ್ಧರಾಗಿದ್ದರು. ಮುಖ್ಯ ಮುಖ್ಯ ಕೂಟಗಳಲ್ಲಿ ಕ ಮಾ ನ ನಿ ಲ್ಲಿ ? ದ್ದ ರು. ಮ್ಯುನಿಸಿಪಾಲಿಟಿಯವರು ಮೊದಲ್ಗೊಂಡು ಊರ ಜನರು ದಾರಿಗಂಟ ಧೋ ಹಾಕಿ, ರಂಗವಲ್ಲಿ ಹಾಕಿದ್ದರು. ಕ ಸು ತೋರಣ ಕಟ್ಟಿದ್ದರು. ವಿದ್ಯುತ್ತಿನ ಬತ್ತಿಯ ಲಾಭ ತಕ್ಕೊಂಡು ಭೂಮಪೇಟಿಯವರು ಈ ದೀಪ ಪಂಕ್ತಿಯಿಂದ ಆ ಕೂಟನ್ನು ಬೆಳಗಿದ್ದರು. ಕಾಂಗ್ರೆಸ ಕಮೀಟಿಯಿಂದ ಮೆರವಣಿಗೆ ಹೊಂಟಿತು. ಮಹಾತ್ಮರ ಪಥಕದಲ್ಲಿ ಕನ್ನಡಗಲಿಯಾಗಿ, ಅವರ ಸಂಗಡ ದಾಂಡಿಗೆ ಹೋಗಿ, ಅಲ್ಲಿದ್ದ ಶ್ರೀ ತಯಬಜಿಯವರ ಕೂಡ ಧಾರಾಸಾನದ ಮೇಲೆ ಅಭಿಯೋಗ ಮಾಡಿ, ಸರಕಾರೀ ಉಪ್ಪನ್ನು ಸೂರೆ ಮಾಡಿದ ಮೇಜ್ಜೆರಿಯ ಮೈದೂರ ಮಲ್ಲಾರಿಯು ಇದೇ ಸಮಯದಲ್ಲಿ ಬಂಧಮುಕ್ತನಾಗಿ ಧಾರವಾಡಕ್ಕೆ ಬಂದನು; ಚಿಕ್ಕೋಡಿಯ ಶ್ರೀ ಅನಂತರಾಯರೂ ಹಿಂಜಲಗಿಯಲ್ಲಿ ಬ್ರಿಟಿಶ ಸರಕಾರದ ಅತಿಥಿ ಹೊಂದಿದವರೇ. ಹೀಗೆ ಈ ಮೂವರ ಮೆರವಣಿಗೆ ಹೊಂಟಿತು. ದಾರಿಗುಂಟ ನರನಾರಿಯರು ಇವರ ಮೇಲೆ ಪುಷ್ಪವೃಷ್ಟಿ ಮಾಡಿದರು. ಮಾಲೆಗಳನ್ನು ಹಾಕಿದರು ಆರತಿ ಮಾಡಿದರು. ಕೂವುಗಳು ದಾರಿಗುಂಟ ಹಾಸಿದವು. ಮಾಲೆಗಳು ಇವರ ಗೋಣು ಜಾಗಿಸಿದವು. ಕೈ ಭಾರಮಾಡಿದವು. ಎರಡು ತಾಸಿನ ತನಕ ಮೆರವಣಿಗೆಯು ಸಡಗರದಿಂದ ನಡೆದು, ಕಡಪಾಟ್ಟೆಲಿಗೆ ಬಂತು. ಅಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಜನ ಕೂಡಿತ್ತು. ಶ್ರೀ ಆಲೂರ ವೆಂಕಟರಾಯರು ಅಧ್ಯಕ್ಷರಾದರು. ಶ್ರೀ ಮುದವೀಡು ಕೃಷ್ಣರಾಯರು ಶ್ರೀ ಮೈಲಾರ ಶ್ರೀ ಅನಂತರಾವ ಇವರ ಬಗ್ಗೆ ಪ್ರಶಂಸೋದ್ಗಾರ ತೆಗೆದು, ಶ್ರೀ ದಿವಾಕರರ ವಿಷಯವಾಗಿ ಹೇಳತಕ್ಕದ್ದೆಷ್ಟು ಇರುವದಿಲ್ಲೆಂದು ಮಾತನಾಡಿ ಶ್ರೀ ದಿವಾಕರರಿಗೆ ನಾಗರಿಕರ ವತಿಯಿಂದ ಕೊಡಬೇಕೆಂದು ಮೊದಲೇ ಗೊತ್ತಾಗಿದ್ದ ಮಾನಪತ್ರವನ್ನೋದಿದರು. ಬಳಿಕ ಕನ್ನಡಿಗರ ಕೂಟದವರು ಬೇರೆ ಹಾಕಿದ ಕವಿತಾಬದ್ಧವಾದ ದಿವಾಕರೋದಯವೆಂದು ಸ್ತುತಿಯನ್ನು ಮುದ್ರಿಸಿ, ಕನ್ನಡಿಯ ಕಟ್ಟೆಯಲ್ಲಿ ಹಾಕಿ, ಅದನ್ನು ಅವರಿಗೆ ಒಹುಮಾನವಾಗಿ ಕೊಟ್ಟರು; ಒಬ್ಬ ಗೃಹಸ್ಥರು ಒಂದು ಇಡಿಗಂಟನ್ನು ಇವರಿಗೆ ಸೇರಿಸಿದರು. ಅದು ಮುಚ್ಚಿದ ಮುಷ್ಟಿಯು ಮೂರು ಲಕ್ಷದ್ದೆಂತುಂಟು. ಓರ್ವ ಭಗಿನಿಯು ಆರತಿ ಮಾಡಿ, ಎರಡು ರೂಪಾಯಿ ಉಡುಗರೆ ಕೊಟ್ಟಳು. ಶ್ರೀ. ದಿವಾಕರರು ಈ ಎಲ್ಲ ನಿಧಿಯನ್ನು ಕಾಂಗ್ರೆಸ ಫಂಡಿಗೆ ಕೊಟ್ಟರು. ನಂತರ ಶ್ರೀ. ಮೈದೂರರು ಬಾರಡೋಲಿಯ ರೈತರ ಅದ್ವಿತೀಯ ಸ್ವಾಧ್ಯಾಗವನ್ನು ಕಣ್ಣಾರೆಕಂಡದ್ದನ್ನು ಹೇಳಿದರು. ಅದೇ ಪ್ರಕಾರ ಶ್ರೀ. ಅನಂತರಾಯರು ಬಾರಡೋಲಿಯ ರೈತರ ಮಹಿಮೆ ಹೇಳಿ, ಅಲ್ಲೊಂದು ಪ್ರಾರ

ರಾ, ಗೋಕುಲ ವೃಂದಾವನಗಳಂತೆ ಪುಣ್ಯ ಸ್ಥಳವಾ ಗುವದು. ಗೋಕುಲದಲ್ಲಿ ಶ್ರೀ. ಕೃಷ್ಣನಿದ್ದಿದ್ದನು. ಆಡಿದನು. ನೋಡಿದನೆಂದು ಕ್ಷೇತ್ರ ಪುರೋಹಿತ ರು ತೋರಿಸುವಂತೆ ಮುಂದೆ ಬಾರಡೋಲಿಯಲ್ಲಿ ಮ ಹಾತ್ಮರಿದ್ದಿದ್ದರು. ಪರದಾಸ ಪಟೇಲರ ಜ್ಞಾಪಣೆಯು ಅಂಥಲ್ಲಿತ್ತೆಂದು ಬಾರಡೋಲಿಯವರು ತೋರಿಸುವ ರು. ಈಗ ತುರಂಗಕ್ಕೆ ಹೋದವರೆಷ್ಟು ಜನರೆಂಬ ಲೆಕ್ಕ ಮಾಡುವದುಳಿದಿಲ್ಲ. ಯಾವ ಮನೆಯವರು ಇನ್ನೂ ತುರಂಗಕ್ಕೆ ಹೋಗಿಲ್ಲೆಂಬ ಗಣತಿ ಮಾಡ ಬೇಕಾಗಿದೆಂದೂ, ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಪ್ರ ತಿಯೊಬ್ಬರೂ ಹೋರಾಡಬೇಕೆಂದೂ ಸ್ಫೂರ್ತಿ ಬರು ವಂಥ ಭಾಷಣ ಮಾಡಿದರು. ತುರಂಗದಲ್ಲಿ ದೇಶ ದ ನಿಜಸ್ಥಿತಿಯು ತಿಳಿಯುವಂಥ ವರ್ತಮಾನಪತ್ರಗ ಳನ್ನು ತಮಗೆ ಓದಲಿಕ್ಕೆ ಕೊಡಲೇ ಇಲ್ಲ. ರಾಜಕೀ ಯ ಕೈದಿಗಳಲ್ಲಿ ಬುದ್ಧಿಭೇದವಾಗುವಂಥ ಅ, ಬ, ಕ, ವರ್ಗ ಮಾಡಿ, ಕಲಹ ಹಚ್ಚಿದರು. ನಾನು ಹೊ ರಗೆ ಬಂದ ಬಳಿಕ ದೇಶಸ್ಥಿತಿಯಲ್ಲಿ ಬದಲಾದ್ದನ್ನು ಕಂಡು ಆಶ್ಚರ್ಯವಿಕ್ಕಿಯಾದೆನು. ನಾವು ಚಳವಳಿಯ ನ್ನು ಒಳ್ಳೇ ಕಸುವಿನಿಂದ ನಡಿಸಶಕ್ಕದ್ದು: ಇಂ ದು ನನ್ನನ್ನು ಅಳಿಯನನ್ನು ಮಾಡಿ, ಆದರಿಸಿದ್ದಿರಿ. ನಾಳೆ ನಾನು ಅಳಿಯನಲ್ಲ. ದೇಶಸೇವೆಗಾಗಿ ಈ ಸಭೆಯಲ್ಲಿಯ ಗುಡಾರ; ದೀಪ ಹೊರತಕ್ಕವನು. ಇಂ ದಿನ ಬಾರಡೋಲಿ ದಿನವನ್ನು ಸ್ಮರಿಸಿ, ಆ ಜನರ ಅ ಭಿನಂದನ ಮಾಡಿ, ಅವರಿಗೆ ದೇವರು ಯಶ ಕೊ ಡಬೇಕೆಂದಾಗಿ ಈತ ಚಿಂತನೆ ಮಾಡಿದರು. ಬಳಿ ಕ ಶ್ರೀ ಕೌಜಲಗಿ ಹಣಮಂತರಾಯರು ಬಾರಡೋ ಲಿಯ ಅನಾಥ ಕುಟುಂಬಗಳ ಅಶನವಸನಗಳ ದೆಸೆ ಯಿಂದ ಧಾರವಾಡ ಜಿಲ್ಲೆಯವರು ಮನಮುಟ್ಟಿ ಸ ಹಾಯ ಮಾಡಬೇಕು. ಹತ್ತು ಸಾವಿರ ಕುಟುಂ ಬಗಳ ಭಾರ ಹಿಡಿಯುವದು ಧಾರವಾಡ ಜಿಲ್ಲೆಗೆ ನೀ ಗದ ಕೆಲಸವಲ್ಲ. ಆರು ತಿಂಗಳಲ್ಲಿ ಸತ್ಯಾಗ್ರಹಕ್ಕಾಗಿ ಆರು ಸಾವಿರ ರೂಪಾಯಿ ವೆಚ್ಚ ವಾಗಿವೆ. ಧಾರವಾಡದಲ್ಲಿ ಕೂಡಿದ್ದು ಮೂರೇ ಸಾವಿರ ಉಳಿದ ರಕಮು ಹಳ್ಳಿಗಳಲ್ಲಿ ಕೂಡಿದೆ. ಪ್ರೋಪ್ರಾಂದಲ್ಲಿ ಮೆರೆಯುವವರೂ ಜರದಂಚಿನ ರೂ ಮಾಲು ಸುತ್ತುವವರೂ ಕೂಟ್ಟಿಲ್ಲ. ಬಡ ರೈತ ರೇ ಕೊಟ್ಟಿದ್ದಿರುತ್ತದೆ. ಇನ್ನೊಂದಾವರ್ತ ಹೀಗೆ ಚಂದಾ ಕೂಡಿಸಿ, ಬಾರಡೋಲಿಗೆ ಅಳಿಸಬೇಕು, ಅಲ್ಲಿಯ ಪ್ರತ್ಯಕ್ಷ ಸ್ಥಿತಿಯನ್ನು ನೋಡುವದಕ್ಕಾ ಗಿ ದೇ. ದೇಶಪಾಂಡೆ ಗಂಗಾಧರರಾಯರು, ಶ್ರೀ. ಕರಮರಕರ, ಡಾಕ್ಟರ ಬಿಬ್ಬೂರ ಮತ್ತು ಶ್ರೀ. ಹ್ಯೂ ಹ್ಯೂ ಪಾಟೀಲರು ಹೋಗಿದ್ದಾರೆ. ಇವರು ನಮಗಾಗಿ ಬಾರಡೋಲಿಯ ಸಂದೇಶ ತರುವರು. ಮತ್ತು ನ ಮ್ಮ ನಾವು ಧಾರವಾಡದಲ್ಲಿ ವಿಲಾಯತಿಯ ಅರಿವೆಯ ಮಾರಾಟವಾಗದಂತೆ ಪಿಕಟಿಂಗ ಮಾಡಬೇಕಾಗಿದೆ. ಮಂಗಳವಾರದಿಂದ ಪ್ರಾರಂಭಮಾಡುವೆನು. ಯಾರು ಬರದಿದ್ದರೂ, ನಾನೊಬ್ಬನೇ ಮುಂದಾಗುವೆನು. ಸ್ವಯಂಸೇವಕರು ನಾಳೆ ಬಂದು ತಮ್ಮ ಹೆಸರು ಬ ರಿಸಬೇಕೆಂದು ನುಡಿದರು. ನಂತರ ಅಧ್ಯಕ್ಷರ ಸ ಮಾರೋಪದ ಭಾಷಣವಾಗಿ, ವಂದೇ ಮಾತರಮು ದ ಜಯಘೋಷದಲ್ಲಿ ಸಭಾ ವಿಸರ್ಜನೆಯಾಯಿತು.

ಸುಮಂಗಲೆಯರೆನ್ನು ಅಮಂಗಲ ಮಾಡುವ ಜೇಲಿನ ವಿಚಿತ್ರ ಮತ್ತು ವಿಷಿಷ್ಟ ಕಾಯದೆ.

ಮುಂಬಯಿಯಲ್ಲಿ ಅಜದ ಬೈಲಿನಲ್ಲಿ ಹಿಡಿದ ಎಗ ಸ್ತ್ರೀಯರಿಗೆ ಶಿಕ್ಷೆ ಮುಗಿದನಂತರ ಅವರನ್ನು ಎ ರವಡೆಯ ತುರಂಗಕ್ಕೆ ಕರಕೊಂಡು ಹೋದರು. ಅ ಲ್ಲಿ ಅವರ ಸೌಭಾಗ್ಯದ ಮುಖ್ಯ ಭಾಗವೆಲ್ಲ ಹೊರ ಟು ಹೋಯಿತು. ಜೇಲಿಗೆ ಬರುವ ಸ್ತ್ರೀಯರ ಮೇ ಲೆ ಅಧಿಕಾರ ನಡಿಸಲೋಸುಗ ಹೆಂಗಸ್ತ್ರೀಯಳೇ ಇ ರುತ್ತಾಳೆ. ಇವಳಿಗೆ ಮೆಟ್ರನ್ನವೆನ್ನುವರು. ಹಿಂದೂ ಅಥವಾ ಮುಸಲಮಾನಳಾಗಿರುವದು ಶಕ್ಯವೇ ಇಲ್ಲ. ಏಕಂದರೆ ದೊಡ್ಡ ಜೇಲು. ಯುರೋಪಿಯನ್ನಳ ಹೊರ್ತು ಸರಿಯಾಗಿ ಕೆಲಸ ನಡಿಯುವದು ಹೇಗೆ? ಯುರೋಪಿಯನ್ನ ಮಡಮರಿಗೆ ಹಿಂದೂ ಹೆಣ್ಣುಮ ಕ್ಕಳ ಅರಿಷಣ ಕುಂಕುಮ ಬಳೆ ಇವುಗಳ ಧಾರ್ಮಿ ಕ ಮಹತ್ವವು ಹೇಗೆ ತಿಳಿಯಬೇಕು? ಇನ್ನೊರು ವ ರ್ಷವಾದರೂ, ಅಜ್ಞಾನದೇ ಹಿಂದೂ ಜನರ ಆಚಾರ ವಿಚಾರಗಳು ಈ ಪ್ರಕಾರವುಂಟು. ಅವಕ್ಕನುಸರಿಸಿ, ಎ ಲ್ಲರೂ ನಡೆಯಬೇಕೆಂಬದಾಗಿ ಇಂಗ್ರೇಜಿ ಸರಕಾರದ ವರು ಪಿನಲಕೋಡ, ಪ್ರೈಸೀಜರ ಕೋಡಿನಂತೆ ಒಂದು ಹೊತ್ತಿಗೆ ಬರೆದಿಡಬೇಕಲ್ಲವೇ? ಆ ಪ್ರಕಾರ ಬ ರೆಯಲಿಲ್ಲ. ಇನ್ನು ಬರೆಯುವ ಆಗತ್ಯವುಳಿಯಲಿಕ್ಕಿ ಲ್ಲ. ಮುಖ್ಯವಾಗಿ ಹೇಳಬೇಕೆಂದರೆ- ಇಂಗ್ಲಿಷ ಜನರು ತಿಳಿದೂ, ತಿಳಿದೂ, ಹಿಂದೂ ಜನರು ಭಯಂ ಕರವಾಗಿ ಸಂಪಾಷಣೆಗೊಳ್ಳುವಂಥ ಕೃತ್ಯವನ್ನು ಕಾ ಯದೆ ಕಾನೂನಿನ ಹೆಸರಿನಿಂದ ಮಾಡುತ್ತಾರೆಂಬದು ದುಃಖದ ಸಂಗತಿಯು.

ಮೇಲೆ ಹೇಳಿದ ಎಗ ಜನ ಸ್ತ್ರೀಯರು ತು ರಂಗದಲ್ಲಿ ಕಾಲಿಟ್ಟ ಕೂಡಲೆ- ಮೆಟ್ರನ್ನಳೆಂಬವಳು ಇವರೆಲ್ಲರನ್ನೂ ಒಂದು ಭ್ಯಾರಾಕಿನಲ್ಲಿ ಹಾಕಿ, ಹೊ ರಗೆ ಜೀಗ ಹಿಡಿದಳು. ದೊಡ್ಡ ದೊಡ್ಡ ಶ್ರೀಮಂ ತರ ಮನೆಯ ಹೆಣ್ಣುಮಕ್ಕಳಿಗೆ ಈ ನಿರ್ಬಂಧನೆಯು ಎಷ್ಟು ಕಾಸದಾಯಕವಾಗಿದ್ದೀತೆಂಬದು ಹೇಳಲಿಕ್ಕೆ ಸಾಲದು. ಈ ಪ್ರಕಾರ ಬಂಧನದಿಂದ ಮನಸ್ಸು ವ್ಯಗ್ರವಾಗಿದ್ದಾಗ, ಮೆಟ್ರನಳು ಇವರ ಕಯ್ಯೊಳಗಿನ ಕಾಚಿನ ಬಳೆಗಳನ್ನು ಧಡ ಧಡನೆ, ಪಳಪಳನೆ ಒಡೆ ದಳು. ಅನಂತರ ಹಣೆಯ ಮೇಲಿನ ಕುಂಕುಮ ಅಳಿಸಿದಳು. ಬಳಿಕ ಮಂಗಳಸೂತ್ರಕ್ಕೆ ಕೈ ಹಚ್ಚಿ ದಳು. ಯುರೋಪಿಯನ್ನ ಸ್ತ್ರೀಯು ಸುಮಂಗಲೆ ಇರಲಿ; ಅಮಂಗಲೆ ಇರಲಿ; ಹುಡಿಗೆ ಇರಲಿ; ಹರಿಯ ಧವಳಿರಲಿ; ಚಂದ ಕಾಣಿಸಬೇಕೆಂದು ನೀಟಾಗಿ ಮಾ ಟ್ಟಾಗಿ ಕೂದಲು ಕತ್ತರಿಸುವಳು. ಅವರಿಗೇನೂ ಅ ಶ್ಲಾಘ್ಯವೆನಿಸುವದಿಲ್ಲ. ಅಮಂಗಲವೆನಿಸುವದಿಲ್ಲ. ನಮ್ಮ ದೇಶದಲ್ಲಿ ಮುತ್ತೈದೆಯರ ಕೂದಲು ಕತ್ತ ರಿಸುವದುಂಟೇ? ಎಷ್ಟೇ ಸ್ತ್ರೀ ಕೈದಿಗಳ ಕೂದ ಲು ಕತ್ತರಿಸಿದರು. ಆದರೆ ಇವರ ಕೂದಲು ಕ ತ್ತರಿಸಿದಂತೆ ಇನ್ನೂ ಪ್ರಕಟವಾಗಿಲ್ಲ. ನಾಗವೇ ಣಿಯನ್ನು ಹೊಂಡವೆಂಬೆಯಾಗುವದೂಂದೊರೆಸು ಮಂಗಲೆಯರು ಅಮಂಗಲೆಯರಾಗುವ ಎಲ್ಲ ಶಿಷ್ಟಾ ಚಾರವಾಯಿತು.

ಹಿಂದೂ ಜನರ ಧರ್ಮದಲ್ಲಿ ಕೈ ಹಾಕುವ ದಿಲ್ಲೆಂದು ಸರಕಾರದವರು ಆಗಾಗ್ಗೆ ಹೇಳುತ್ತಾರೆ. ಮೇಲಿನ ಅಮಂಗಲವಾದ ಅಸಹ್ಯ ಕೃತ್ಯವು ಧರ್ಮ ವೇ ಅಧರ್ಮವೇ ಎಂಬದನ್ನು ತಾವೇ ಹೇಳಬ ಹುದು. ಜೇಲಿನಲ್ಲಿ ಧರ್ಮದ ವಿರುದ್ಧ ಹಲವು ಕೃತ್ಯಗಳು ನಡೆಯುತ್ತವೆ. ಮುಸಲಮಾನರಿಗೆ ರಮಜಾನ ತಿಂ ಗಳಲ್ಲಿ ಉರವಾಸ ಮಾಡಗೊಡುವರು. ರಾತ್ರಿ ಕೂಡ ಅವರಿಗೆ ಊಟ ಕೊಡುವರು. ಹಿಂದೂ ಜನರಿ ಗೆ ಪ್ರತಿವರ್ಷ ಶಿವರಾತ್ರಿಯ ದಿವಸ ನಿರಾಹಾರ ಮಾಡಗೊಡುವದಿಲ್ಲ. ತಮ್ಮ ನಾಲ್ಕು ಕೊಟ್ಟೆಯು ಳಿಯುವದು ತಮಗೇ ಲಾಭಕರವಾಗಿದ್ದರೂ, ಶಿವ ರಾತ್ರಿವ್ರತ ಮುರಿಯಲಿಕ್ಕೆ ಹಚ್ಚುವರು. ಇಂಥ ಹಲವು ಅಧರ್ಮದ ಎಷ್ಟೋ ಮಾತುಗಳನ್ನು ಹೇಳಬಹುದು. ಸರಕಾರದವರು ಇನ್ನೆಲ್ಲ ಅಧರ್ಮಗಳು ನಡೆಯದಂತೆ, ಧರ್ಮ ವಿಚಾರದಲ್ಲಿ ಜಾಗರೂಕರಾಗುವದು ತಮ್ಮ ಹಿತವನ್ನು ತಾವೇ ಬಯಸಿದಂತಾಗುತ್ತದೆ.

ಧಾರವಾಡದಲ್ಲಿ ಪುನ: ಪಿಕಟಿಂಗ ಪ್ರಾರಂಭ.

---(-)---

ಧಾರವಾಡದಲ್ಲಿ ಹಿಂದಾದ ಪಿಕಟಿಂಗದಿಂದ ಬಹುಮಟ್ಟಿಗೆ ವಿಲಾಯತಿಯ ಅರಿವೆಯ ವ್ಯಾಪಾರ ಮುಗ್ಗಿತ್ತು. ಕಾಂಗ್ರೆಸದವರು ಗಡಂಗದ ಮುಂದಿ ನ ಪಿಕಟಿಂಗ ಮತ್ತು ಬೇರೆ ಕೆಲಸಗಳಲ್ಲಿ ತೊಡಗಿದ್ದ ರಿಂದ ಜವಳಿ ಅಂಗಡಿಗಳ ಮುಂದಿನ ಪಿಕಟಿಂಗವು ನಿಂತಿತ್ತು. ಅದನ್ನು ನಿನ್ನಿನಿಂದ ಪುನ: ಪ್ರಾರಂಭಿಸಿದ ರು. ಪಿಕಟಿಂಗಕ್ಕಾಗಿ ಕಿಕ್ಕೇರಿನ ಕಾಂಗ್ರೆಸ ಕಮಿ ಟಿಯ ಉಪಾಧ್ಯಕ್ಷ ಮತ್ತು ಯುದ್ಧಮಂಡಲದ ಸೇ ನಾಪತಿ ಶ್ರೀ. ಸೇಮಿಷಂದ್ರ ಮುನವಳ್ಳಿಯವರು ತ ಮ್ಮ ಪಕ್ಷದ ಜನರೊಂದಿಗೆ ಪಿಕಟಿಂಗಕ್ಕೆ ಸಹಾ ಯಕರಾಗಿ ಇಲ್ಲಿಗೆ ಬಂದಿದ್ದು, ಒಳ್ಳೇ ಪರಿಣಾಮಕಾ ರಕವಾಗಿ ತಮ್ಮ ಕರ್ತವ್ಯ ಮಾಡುತ್ತಲಿದ್ದದ್ದು ಕೈ ವರಿಗೆ ಭೂಷಣವಾಗಿರುತ್ತದೆ.

ಬಡೋದೆಯಲ್ಲಿ ಹಿಂದೀ ಪ್ರವೇಶ

ಮರಾಟಿಗರಿಗೆ ಬಂದ ಶೇಕಡಾ ೬೦

—(೦)—

ಈಗಿನ ಚಳವಳಿಯಲ್ಲಿ ಭಾಷಾ ಭೇದದ ಅಂತ ಕಲಹವೇಕೆಂದು ಕೆಲ ಮಹಾಮೂರ್ಖರಾದ ಮರಾಟಿಗರಂದು, ತಮ್ಮ ಭಾಷೆಯ ಕುದುರೆಯನ್ನು ಮುಂದೆ ಹಾಕಲಿಕ್ಕೆ ಮಾತ್ರ ಹವಣಿಸುತ್ತಾರೆ. ಭಾಷಾಭೇದದ ಜಗಳ ಬೇಡಾಗಿದ್ದರೆ- ತಮ್ಮ ಕುದುರೆಯ ಕಡಿವಾಣವನ್ನೇಕೆ ಜಗ್ಗಿ ಹಿಡಿಯ ಬಾರದು? ತಮ್ಮದುಳಿದು, ಅನ್ಯರದು ಮಾತ್ರ ಯಾವ ಆಟವಾಗಬಾರದೆಂದೇ ಇಪರಲ್ಲಿ ನಮಿಪಿಪಾಂತ ತುಂಬಿದ ಸ್ವಾರ್ಥವು

ಗಿನೆಯ ಬಾಜೀರಾಯನ ಕಾಲದಲ್ಲಿ ಮುಂದೆ ಬಂದ ಹಿಂದೆ, ಪೋಳಕರ, ಗಾಯಕವಾಡರು ಗುಜರಾಥ ಹಿಂದೀ ರಾಜ್ಯದಲ್ಲಿ ರಾಜ್ಯಸ್ಥಾಪನೆ ಮಾಡಿದರು. ಆದರೆ ಇಂದೂದ ಮತ್ತು ಗ್ವಾಲ್ಹೇರಿನವರು ಅಲ್ಲಿಯ ದೇಶಭಾಷೆಯಾದ ಹಿಂದಿಯನ್ನೇ ದರಬಾರ ಭಾಷೆ ಮಾಡಿದರು. ಅರಮನೆಯಲ್ಲಿ ಕೂಡ ಇದೇ ನುಡಿಯು ಹೆಚ್ಚಾಗಿ ನಡೆಯುತ್ತಿರುವದು, ಆದರೆ ಬಡೋದೆಯ ಪರಿಸ್ಥಿತಿಯು ಹಿಂಗಿರುವದಿಲ್ಲ. ರಾಜಭಾಷೆಯು ಮರಾಟಿಯು. ರಾಜವಾಡೆಯಲ್ಲಿ ನಡೆಯುವ ನುಡಿ ಸಹ ಮರಾಟಿಯಾಗಿದೆ. ಕಾಂಗ್ರೆಸದ ಭಾವೀ ರಾಷ್ಟ್ರಭಾಷೆಯು ಹಿಂದಿಯಾಗಬೇಕೆಂದುಂಟು. ಅದನ್ನು ಧೂರ್ತ ದೃಷ್ಟಿಯಿಂದ ಲಕ್ಷಿಸಿ, ಅಗ್ರವಾ ಹಿಂದಿಗೆ ಪ್ರಾಧಾನ್ಯ ಕೊಡಬೇಕೆಂದು ಶ್ರೀ ಸಯಾಜೀರಾವ ಗಾಯಕವಾಡ ಮಹಾರಾಜರು ಅರಮನೆ ಮತ್ತು ದಂಡಿನ ನುಡಿಯು ಹಿಂದೀ ಆಗಬೇಕೆಂದು ಅಪ್ಪಣೆ ಮಾಡಿದ್ದಲ್ಲದೆ, ಇದರಲ್ಲಿ ಜ್ಞಾನವುಂಟೆಂದು ತಿಳಿಯುವ ಹಾಗೆ ಕೆಲವಗಾರರು ಹಿಂದಿಯಲ್ಲಿ ಪರೀಕ್ಷೆ ಸಹ ಕೊಡಬೇಕೆಂಬ ಕಟ್ಟಳೆ ಮಾಡಿದ್ದಾರೆ.

ಮಹಾರಾಜರು ವಿಲಾಯತಿಯಿಂದ ಕಳಿಸಿದ ಹುಕುಮು ಮರಾಟಿಗರನ್ನು ಹೌಹಾರಿಸಿದೆ. ಮರಾಟಿಯು ಹೋಯಿತೆಂದು ದುಃಖಾಶ್ರು ಹಾಕುತ್ತಲಿದ್ದಾರೆ. ವರ್ತಮಾನಪತ್ರಗಳಲ್ಲಿ ಲೇಖನಬರೆಯುವವರು ಬೆಳಗಾವಿ, ಧಾರವಾಡ ಮತ್ತು ಕರ್ನಾಟಕದಲ್ಲಿ ಮರಾಟಿಯು ಹೊಯ್ದಾಲಿತನ ನಡೆಸಿದಂತೆ ಗುಜರಾಥದಲ್ಲಿಯೂ ಅನ್ಯಾಕ್ರಾಂತ ಮಾಡಿಕೊಂಡಿದಿತು. ಹೀಗೇ ಮುಂದೆ ನಡೆಯಬೇಕೆಂದಿದ್ದಿತು. ಮಹಾರಾಜರ ಹುಕುಮು ಅವರನ್ನು ಹಾಯು ಹಾಳು ಮಾಡಿತೆನ್ನುವಂಥ ಉದ್ಗಾರ ತೆಗೆದಿದ್ದಾರೆ.

ಇಂದು ಇಲ್ಲಿಯ ಕನ್ನಡಿಗರು ಇದೇ ಮರಾಟಿಗೇ ಲುಚ್ಚಾಟನೆ ಕೊಟ್ಟಿಲ್ಲ. ಕನ್ನಡಿಗರ ಅಗ್ರಹ್ಯಾನೆಕೊಟ್ಟು, ನಿಮ್ಮ ಮರಾಟಿಯನ್ನು ನಿಮ್ಮ ಮನೆಯಲ್ಲಿ ಬೇಕಾದ ರೀತಿಯಿಂದ ಕಾಯ್ದುಕೊಳ್ಳಿರೆನ್ನುವರು. ಶ್ರೀ ಸಯಾಜೀರಾಯರಿಗಂತ ಸಾವಿರಪಾಲಿನಿಂದ ಕನ್ನಡಿಗರ ಹೇಳಿಕೆಯು ಸೌಮ್ಯವಾಗಿರುತ್ತದೆಂಬದು ಮರಾಟಿಗರಿಗೇ ಹೊಳೆಯದಿದ್ದು ಇನ್ನಾದರೂ ಮರಾಟಿಗರು ಬುದ್ಧಿಗಲಿಯಲಿ; ಇದೇ ವಿಷಯವಾಗಿ ಮುಂಬಯಿಯ ಟಾಯಿಮ್ಸ ಪತ್ರದ ಶನೇ ನವೆಂಬರದ ಪತ್ರದಲ್ಲಿ ಬಡೋದೆಯಲ್ಲಿ ಹಿಂದೀ ಎಂಬ ತಲೆಗಟ್ಟಿನಲ್ಲಿ ಒಂದ ಬರಹ ಓದಲಿ.

ನೀಲಗಿರಿ ಮತ್ತು ತಮಿಳ ನಾಡಿನಲ್ಲಿ ಮಳೆಯಿಂದಾದ ಭಯಂಕರ ಹಾನಿ.

—(೦)—

ಗಿಳ ದಿವಸವಾಯಿತು. ನೀಲಗಿರಿ ಮತ್ತು ತಮಿಳ ನಾಡಿನಲ್ಲಿ ಮಳೆಯಿಂದಾದ ಭಯಂಕರ ಹಾನಿಯ ವರ್ತಮಾನಗಳು ದಿನಾಲು ಲೆಖ್ಖವಿಲ್ಲದೆ ಬರುತ್ತವೆ. ನೀಲಗಿರಿಯ ರೇಲ್ವೆಯ ಅರು ಸೇತುವೆಗಳು ಜಲಸಮವಾಗಿ, ರೇಲ್ವೆಯು ಪುನಃ ಪ್ರಾರಂಭವಾಗಬೇಕಾದರೆ- ಕನಿಷ್ಠ ಅರು ತಿಂಗಳಾದರೂ ಬೇಕೆಂದು ಕಂಪನಿಯವರು ಜಾಹೀರ ಮಾಡಿದ್ದಾರೆ. ತಂಜಾವರ ಜಿಲ್ಲೆಯಲ್ಲಿ ಹಾಹಾಕಾರವಾಗಿದೆ. ಒಂದು ಸ್ಟೇಶನವೇ ತೆಲಿ ಹೋಯಿತು. ಅದರ ಸಂಗಡ ಸ್ಟೇಶನಮಾಸ್ತರನ ಮಗನೂ ಜಲಸಮಾಧಿ ಹೊಂದಿದನು. ಮಾಯಾವರಮದಲ್ಲಿ ಜನರು ಗೇಣೆತ್ತರ ನೀರಲ್ಲಿಯೇ ಓಡಾಡುತ್ತಿದ್ದಾರೆ. ಎಷ್ಟೋ ಹಳ್ಳಿಗಳು ನಾಮಶೇಷವಾದವು. ಮದ್ರಾಸದಲ್ಲಿ ಮಳೆಯ ಮುಂಚೆ ಬಿಟ್ಟ ಅದ್ಭುತ ಗಾಳಿಯಿಂದ ಇನ್ನೂರು ಗುಡಿಸಲುಗಳು ಹಾರಿ, ಆಕಾಶದಲ್ಲಿ ಪತಂಗಗಳಂತೆ ಕಂಡವು. ಆ ಮಳೆಗೆ ಈ ದೇಶದಲ್ಲಿ ಕಲಾಸೃಷ್ಟಿಯೆನ್ನುವರು. ಇದು ಒಳ್ಳೆರಿತನಕ ಬಂದಿದೆ. ಬಳ್ಳಾರಿ ಮತ್ತು ರಾಯದುರ್ಗದ ನಡುವಿರುವ ಪಗರಿಗೆ ಮಹಾಪೂರ ಬಂದು, ರೇಲ್ವೆ ಹರಿದು, ಕೆಲವು ದಿವಸ ಡಾಕಿಯು ಬಂದಾಗಿತ್ತು.

ಬೆಳಗಾವಿಯ ಹತ್ತರ ವಡಗಾವಿಯಲ್ಲಿ ಗೋಳಿಬಾರು;

—(೦)—

ಶಹಾಪೂರ ಮತ್ತು ವಡಗಾವಿಯ ಪೋಲಿಸರಿಗೂ, ಕೆಲ ಜನರಿಗೂ ಆದಿತ್ಯವಾರ ರಾತ್ರಿಯಲ್ಲಿ ಚಕಮಕಿಯಾಗಿ ಎರಡೂ ಪಕ್ಷದವರು ಕುಸು ಘಾಯವಾಗಿದ್ದಾರೆ. ಈ ಗೊಂದಲದಲ್ಲಿ ಕಾಂಗ್ರೆಸ್ಸಿಗೆ ಸಂಬಂಧವಿಲ್ಲೆಂದು ಶ್ರೀ ನಾರಾಯಣರಾವ ಜೋಶಿ ಮತ್ತು ಶ್ರೀ ಯಾಳಗಿಯವರು ಅಲ್ಲಿಯ ಕಳಕ್ಟರ ಸಾಹೇಬರಿಗೆ ತಿಳಿಸಿದ್ದಾರೆ.

ಮಹಾತ್ಮಾ ಗಾಂಧಿಕೆ ಅರ್ಧ ಜಯವೆ

ಹಿಂದೀ ಪ್ರತಿನಿಧಿಗಳ ಬಂಟತನ.

ಮೊದಲು ಸ್ವರಾಜ್ಯ, ನಂತರ ಮಿಸ್ಟ ಮಾತು.

—(೦)—

ಲಂಡನದಲ್ಲಿ ರಾವುಂಡ ಟೇಬಲಿಗಾಗಿ ಸೇರಿದ ಹಿಂದೂ, ಮುಸಲಮಾನ, ಕ್ರಿಶ್ಚನ, ಪಾರ್ಸಿ ಮುಂತಾದ ಎಲ್ಲ ಪ್ರತಿನಿಧಿಗಳು ತಮ್ಮೊಳಗೆ ಗಟ್ಟಿಯಾಗಿ ವಕಾಲತಿಕೊಂಡು ಇಂಗ್ಲಿಷ ಸರಕಾರಕ್ಕೆ

ಮೊದಲು ಸಂಪೂರ್ಣ ಸ್ವರಾಜ್ಯ ಕೊಟ್ಟ ಮೇಲೆ ಕೊಡಿರಿ;

ಈ ವಚನ ಕೊಟ್ಟರೇ ಮುಂದಿನ ಕಿರುಕಳ ವಿಚಾರ; ಇಲ್ಲವಾದರೆ- ಅವೆಲ್ಲ ವಿಚಾರಗಳು ಗುಡ್ಡಕ್ಕೆ ಕಲ್ಲು ಹೊತ್ತಂತೆ ನಿಷ್ಪ್ರಯೋಜಕವಾಗುವವೆಂದು ಸ್ಪಷ್ಟವಾಗಿ ತಿಳಿಸಬೇಕೆಂದು ಗೊತ್ತು ಮಾಡಿದ್ದಾರೆಂದು ಸಂಜೇ ಟಾಯಿಮ್ಸ ಪತ್ರವು ಪ್ರಸಿದ್ಧ ಮಾಡಿದೆ. ಹೀಗಾದರೆ. ಮಹಾತ್ಮಾ ಗಾಂಧಿಕೆ ಅರ್ಧ ಜಯವೆನ್ನಬಹುದಾಗುತ್ತದೆ.

ಮುಂಬಯಿಯ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಾದ್ದೊಂದು ಮೋಜು.

— (೦) —

ಸರಕಾರದವರು ತರುಣರ ಸಂಪುಟ ಬೇಕಾಯಿತೆಂತೆಂದರೆಂದು ಜಾಹೀರಮಾಡಿದನಂತರ-ತರುಣರು ಪ್ರಜಾಪಕ್ಷದ ಪಡೆ ಎಂಬ ಹೆಸರಿನದೊಂದು ದಂಡನ್ನು ಕಟ್ಟಿದರು. ಇದರ ನಾಯಕನಾದ ಶ್ರೀ. ರಾಜಾ ಎಂಬವರನ್ನು ಪೋಲಿಸರು ಹಿಡಿದು ಮ್ಯಾಜಿಸ್ಟ್ರೇಟರ ಕೋರ್ಟಿಗೆ ಒಯ್ದರು. ವಿಚಾರಣೆ ಕೇಳಲು ಜನರು ಕಿಕ್ಕಿರಿದು ನೆರೆದರು. ಮ್ಯಾಜಿಸ್ಟ್ರೇಟರು ಬಂದಿರಲಿಲ್ಲ. ಒಬ್ಬ ಯುವಕನು ನೀಟಾಗಿ, ಮ್ಯಾಜಿಸ್ಟ್ರೇಟರು ಕೂಡುವ ಖುರ್ಚಿಯಲ್ಲಿ ಹೋಗಿ, ಅದರ ಮೇಲೆ ಕೂತು

" ನಾವು ಇಂದು ಸ್ವರಾಜ್ಯ ಸಂಪಾದನೆ ಮಾಡಿದ್ದೇವೆ. ಮತ್ತು ನನಗೆ ತೀರ್ಪು ಹೇಳುವ ಅಧಿಕಾರ ದೊರೆತಿದೆ. ಕೋರ್ಟಿನ ಮುಂದೆ ನಿಂದ ಸಾಕ್ಷಿ ಪುರಾವೆ ನೋಡಲಾಗಿ ಆರೋಪಿ ರಾಜಾನವರು ನಿರ್ದೋಷಿಯಾಗಿದ್ದಾರೆ. ಆದ್ದರಿಂದ ಅವರನ್ನು ಬಂಧಮುಕ್ತ ಮಾಡಿದ್ದೇನೆ. "

ಎಂದು ತೀರ್ಪು ಬರೆದು, ಓದಿದನು. ಇದೆಲ್ಲವನ್ನು ಜನರೂ ಪೋಲಿಸರೂ ಪ್ರಶ್ನೆಸ್ಸನೋಡುತ್ತಾ, ಕೇಳಿದರು. ತೀರ್ಪಿನ ನಂತರ ಈತನು ಮುಂದೆ ಕೆಲ ಹುಕುಮು ಮಾಡುವಾಗ ಪೋಲಿಸರು ಈತನನ್ನು ಹಿಡಿದು, ಲಾಕಪ್ಪಿಗೆ ಒಯ್ದರು.

ಶ್ರೀ. ನರಸಿಂಗ ನಾರಾಯಣ ಭಿಸೆ ಇವರ ಮೇಲೆ ವಿಜಾಪೂರದ ವಾರಂಟು.

ಇಲ್ಲಿಯ ಶ್ರೀ. ಭಿಸೆಯವರು ವಿಜಾಪೂರ ಜಿಲ್ಲೆ ಹೋಗಿ ವ್ಯಾಖ್ಯಾನಗಳನ್ನು ಕೊಟ್ಟು ಬಂದಿದ್ದ ರು. ಅವರ ಮೇಲೆ ೧೦೮ನೆಯ ಕಲಮಿನನ್ವಯ ನಾಮೀನು ಮುಚ್ಚಳಿಕೆ ವಾರಂಟು ವಿಜಾಪೂರದಿಂದ ಬಂದ್ದೆ ರಾತ್ರಿ ಬಂತು. ವಿಚಾರಣೆಯು ಹತ್ತನೆಯ ತಾರೀಖಿನ ದಿವಸ ನಡೆಯುವದು. ಮನೆತನದ ವ್ಯವಸ್ಥೆ ಮಾಡಿಕೊಂಡು ಹೋಗುವದರ ದೆಸೆಯಿಂದಲೇ ಅವರು ಜಾಮೀನು ಕೊಟ್ಟದ್ದು, ಶ್ರೀ. ಜೋಗ ಶ್ರೀ ನಿವಾಸರಾಯರು ಜಾಮೀನಾಗಿದ್ದಾರೆ.

— —

ಅಲ್ಲಾಬಾದಿನಲ್ಲಿ ಸಾವಿರಾರು ಜನರ ಸತ್ಯಾಗ್ರಹ.

—(೦)—

ಅಲ್ಲಾಬಾದಿನಲ್ಲಿ ಜವಾಹರಲಾಲರಿಗೆ ತೀಕ್ಷ್ಣಯಾದ ಒಗ್ಗೆ ಸಪ್ತಾಹ ನಡೆದಿದೆ. ಮೊದಲನೆಯ ದಿವಸ ಸಿಂಗರಿಸಿದ ಎತ್ತಿನ ಬಂಡಿಗಳ ಎಡಬದಿಯಲ್ಲಿ ಮನುಷ್ಯಗಣತಿಗೆ ಸಹಾಯವಾಡಬೇಡಿರಿ. ೧೪೪ ಕಲಮು ಮುರಿಯಿರಿ. ಸ್ವದೇಶಿ ಅರಿವೆ ಕೊಳ್ಳಿರೆಂದು ಒರೆದ ಬೋರ್ಡುಗಳನ್ನು ಹಚ್ಚಿದ್ದರು. ಮೊದಲಣೆಯು ಊರ ಮಧ್ಯದಲ್ಲಿ ಒಂದ ಕೂಡಲೆ- ಸರಕಾರದವರು ಪೋಲಿಸ ಮತ್ತು ಸೈನ್ಯದ ಬಂದೋಬಸ್ತಿನಲ್ಲಿ ೧೪೪ ಕಲಮು ಜಾಹೀರ ಮಾಡಿ, ಜನರಿಗೆ ಹೋಗಲಿಕ್ಕೆ ಹೇಳಿದರು. ಜನರು ಸತ್ಯಾಗ್ರಹ ಮಾಡಿ, ಅಲ್ಲೇ ಕೂತಿದ್ದಾರೆ. ಪಟ್ಟಣದ ಸಾವಿರಾರು ಪ್ರಮುಖರು ನೆಲ ಹಿಡಿದು ಕೂತದ್ದರಿಂದ, ಪಟ್ಟಣದ ಬಂಬ ಚಳವಳಿಯುಂಟಾಗಿದೆ.

— —

ಪೋಷ್ಟನ ಸೆವಿಂಗ್ಸ ಬ್ಯಾಂಕಿನಲ್ಲಿ ದರೋಡೆ.

—(೦)—

ಮುಂಬಯಿಯ ಯುದ್ಧ ಮಂಡಲದವರು ಕೆಳಗಿನಂತೆ ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಪೋಷ್ಟ ಸೇವಿಂಗ್ಸ ಬ್ಯಾಂಕಿನಿಂದ ಎಲ್ಲ ಹಣವನ್ನು ಹಿಂದಕ್ಕೆ ತಕ್ಕೊಳ್ಳಬೇಕು.

ಪೋಷ್ಟ ಆಫೀಸಿನ ಎಲ್ಲ ಕ್ಯಾಸ ಸರ್ಟಿಫಿಕೇಟುಗಳನ್ನು ಕೊಟ್ಟು ತಿರುಗಿ ಹಣ ತಕ್ಕೊಳ್ಳಬೇಕು.

ಪೋಷ್ಟ ಆಫೀಸಿನ ಎಲ್ಲ ಕಾಗದಗಳನ್ನು ಕೊಳ್ಳಬಾರದು.

ಎಲ್ಲ ವೆಚ್ಚಗಳಿದು, ಉಳಿದ ಎಲ್ಲ ಹಣದಿಂದ ಬಂಗಾರ ಕೊಂಡಿಡಬೇಕು.

ಮೇಲಿನ ಜಾಹೀರನಾಮೆಯ ಪ್ರಕಾರ ಜನರು ನಡಿಯುವಂತೆ ಯುದ್ಧ ಮಂಡಲದವರು ಕೆಲಸ ನಡಿಸತಕ್ಕವರಿದ್ದಾರೆ.

— —

ಬಾರ್ಡೋಲಿಯ ಸತ್ಯಾಗ್ರಹದ ಚಳವಳಿಯಲ್ಲಿ ಸರದಾರ ವಲ್ಲಭಭಾಯೀ ಪಟೇಲರು ಉಪಯೋಗಿಸುತ್ತಿದ್ದಂಥ ವೋಟಾರನ್ನು ಕಮೀಶನರರಾದ ಮಿ. ಗ್ಯಾರಟ್ಟಸಾಹೇಬರು ತಾಲೂಕಗಳಲ್ಲಿ ಫಿರತಿಗೆ ಹೋಗುವಾಗ, ಉಪಯೋಗಿಸಿ ಇದರಲ್ಲಿ ಕೂಡುವರೆಂದು ಪ್ರಸಿದ್ಧವಾಗಿದೆ.

— —

ಪಂಡಿತ ಜವಾಹರಲಾಲರಿಗೆ ತೀಕ್ಷ್ಣಯಾದುದರ ನಿಷೇಧವೆಂದು ಬೆಂಗಳೂರ ಮ್ಯುನಿಸಿಪಾಲಿಟಿಯ ಜನರಲ ಕಮೀಟಿಯ ಕಲಸವು ಏದು ನಿಮಿಷ ತಹಕೂಬ ಮಾಡಲ್ಪಟ್ಟಿತು.

— —

॥ ಸಿರಿಗನ್ನಡಂ ಗೆಲ್ಗೆ ॥

ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗರೂ)

ಮಾಳಮಡಿ
ಮತ್ತು ——— ಧಾರವಾಡ
ಕಾಮನಕಟ್ಟೆ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಳಲಾಣ ಅಂಚೆ ಟಿಕೀಟುಗಳನ್ನ ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ೧,೨. ಪ್ರತಿ ೧ಕ್ಕೆ	೨- ೪-೦
೨. ಕನ್ನಡಕ್ಕೆ ಕೊಂಡ ಬೇರಬಲ್ಲ ಚರಿತ್ರೆ ಸಚಿತ್ರ	೧- ೬-೦
೩ ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪ ಕರ್ನಾಟಕ ಸಿಂಹಾಸನ ಸಾವನಿ	೧ ೦ ೦
೫. ಚರಿತ್ರ ಸಂಗ್ರಹ ಭಾ. ೧.	೧- ೪-೦
೬. ಅಳಸಿಂಗಾಚಾರ್ಯರ ರಾಮಾಯಣ ೯ ಸಂಪುಟಗಳು	೧೪-೮-೦
೭ ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨ ೩	೧೬-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಆ್ಯಂಡ ರೆಡ್ಡಿಸ್ಯ್ ಕೋಡು	೨-೧೧-೦
೧೧. ಗ್ರಾಮ ಸಮಾಜ ಲೆಕ್ಕದ ಪುಸ್ತಕ	೨-೧೩-೦
೧೨ ಸ್ತ್ರೀದರ್ಪಣ ನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸೂಪನೀತಿ ಕಥೆ ಬಾ ೧, ೨	೨- ೪-೦
೧೪. ಕಾರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ ಎಸ್. ಸಿ.

ಧಾರವಾಡ

ಅಂಗಡಿ ಮತ್ತು ಬಂಗಲೆಯ ಹರಾಜ

ಮು. ನಂ. ೧೪೬ ಎಲಿನ ಅಂಗಡಿ ಮಂಗಳವಾರದಿಂದ ಇದ್ದ ಇ. ಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೬೫೧ ರ ಲ್ಲಿ ಶ್ರೀ. ಹೆಬಳೀಕರ ಇವರ ಬಂಗ್ಲೇದ ಎಲ್ಲ ಲ್ಲಿ ಮಿ. ಫರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಪೂರೆ ಪೂರ್ತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1445

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾ ಜಾಯಿ ಬಾಳಾಜಾಯಿ ಹೊನಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖು ೬ನೇ ನವೆಂಬರ ೧೯೩೦ (ಸಂಚಿಕೆ ೨೪೨

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಪಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ಪಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ ಇದರಲ್ಲಿ ವಾದೀ ಶ್ರೀ. ಸಿದ್ಧಾವಧೂತರ ಅಸೋಜಿ, ಶ್ರೀ. ಆರೂಢ ಸ್ವಾಮಿಗಳ ಶಿಷ್ಯರುತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತೆವೆ. ಪ್ರಸಿದ್ಧ ಜನರ ಆಗ್ರಹದ ಮೇರೆಗೆ ಈ ಪುಸ್ತಕವು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತೆವೆ. ಇದರ ಎಂಟೇ ಪ್ರತಿಗಳನ್ನು ತೆಗೆಸಿದೆ. ಪಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆಗರಿಂದ ಗ್ರಾಹಕರು ಶೀಘ್ರ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಕುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಕುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ಲಿಬ್ಬಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ಟೇಕಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೆದು ರೂಪಾಯ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕಿಟ್ಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೇಟಿವ ಬ್ಯಾಂಕ ಲಿಮಿಟೆಡ

ಪ್ರತಿಯವಾರ ಬೇಟಿ ಧಾರವಾಡ.

ಕೂ[illegible] ಕಟಿಯ ಕಟಿಯ ಕೊಟ್ಟಿಯಿಂದ ಆಳ[illegible] ಕ್ರಮದ ವಿಚಾರ ಮಾಡಲ್ಪಟ್ಟಿದೆ.

ಈ ಬ್ಯಾಂಕ್ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಕೊಂಡಿಯ[illegible] ಲಕ್ಷಿದ[illegible]ಯೇಲಾಂಟು, ಇಲ್ಲಿ ಕಂಪನಿ ಕಾಯದೆಯಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾಸೀಮ ಮತ್ತು ಬೇರೆ ಠರವು ಮಿಮಾಂಸಾಗಳಿಗೆ ಜಾಗ ಇಟ್ಟಿರುವಿಯುವರು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತ್ಕರ
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಬಹುದು. ದರವನ್ನು ಸ್ಪಷ್ಟ ಮಾತಿಗೆಳ್ಳಬೇಕು.

ಈ ಬ್ಯಾಂಕಿನಲ್ಲಿ ಡಾಗೀನಿಗಳನ್ನು ಪತ್ತೆ ಇಟ್ಟುಕೊಳ್ಳುವ ಟ್ರಿಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಅಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೪-೮-೦

ವಾರ ಪತ್ರಿಕೆ ೧ ವರ್ಷಕ್ಕೆ ೩-೧೩-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ಮ್ಯಾ ವಿಜಯ ಧಾರವಾಡ.

ವಿಜಯ.

ಳುಕ್ಯವಿಕ್ರಮ ವರ್ಷ ಲಾಜ ಕಾರ್ತೀಕ ಶುದ್ಧ ೧೫

ಕ್ಕ ಸತ್ತರೆ ಅಮಾವಾಸ್ಯ ನಿಲ್ಲದು.

ಧಾರವಾಡದ ಮರಾಟಿಗರು ಬರೇ ಹುಡುಗಾಟಿಗೆಗೆ ನಿಂತರು.

ಧಾರವಾಡದಲ್ಲಿ ಮೊನ್ನೆ ಮಂಗಳವಾರದಿಂದ ಲಾಯತಿಯ ಜವಳೀ ಅಂಗಡಿಗಳ ಮುಂದೆ ಪಿಕೆ ಟಿಂಗ ಪ್ರಾರಂಭಿಸಿದ್ದಾರೆ. ಆದರೆ ಇದರಲ್ಲಿ ಮರಾ ಟಿಗರು ಸೇರಿಲ್ಲ. ಸೇರದಿದ್ದರೆ- ಮಾತು ದೊ ಡ್ಡದಾಗುತ್ತಿದ್ದಿಲ್ಲ. ವಾಮನದೇವರಿಗೆ ಬಲಿರಾಜ ನು ದಾನ ಕೊಡುವಾಗ ಶುಕ್ರಾಚಾರ್ಯನು ಅಡ್ಡ ರುವಂತೆ, ಇವರು ಅಡ್ಡ ಬಂದಿದ್ದಾರೆ. ಶುಕ್ರಾಚಾ ರ್ಯನು ಬಲಿಚಕ್ರವರ್ತಿಯ ಹಿತಬಯಸಿದನು. ಇ ವರು ವಿಲಾಯತಿಯ ಗಿರಣಿಯವರ ಹಿತಬಯಸಿದ್ದಾ ರೆ. ಧಾರವಾಡದಲ್ಲಿ ಕನ್ನಡ ಮರಾಟಿ ವಾದ ಬ ಗೆಹರಿಯುವ ತನಕ, ನಾವು ಪಿಕೆಟಿಂಗಕ್ಕೆ ಬರುವ ದಿಲ್ಲ. ಇಷ್ಟೇ ಅಲ್ಲ; ಅದು ಅವಯಶ ಹೊಂದು ವಂತೆ ನಮಗೆ ತೋರಿದ ರೀತಿಯಿಂದ ಉಲಕೋ ಷತನ, ತಿಡಿಗೇಡಿತನ ನಾಡುವೆವೆಂದು ಕಾಂಗ್ರೆಸ ಕ ಮೀಟಿಗೆ ಪತ್ರ ಬರೆದಿರುತ್ತಾರೆ. ಈ ಪತ್ರದ ಮೇ ಲೆ ಹತ್ತಿಪ್ಪತ್ತು ಜನ ಮಾರವಾಡಿಗಳ ಸಹೀ ತಕ್ಕೊಂ ಡಿದ್ದಾರೆ. ಮಾರವಾಡಿಗಳಿಗೆ ಆನಂದವೇ ಆನಂ ದ! ತೋಳಕ್ಕೆ ಕುರೀಕಾಯಲಿಕ್ಕೆ ಹೇಳಿದರೆ- ಅ ದು ಸಂಬಳವಿಲ್ಲದೆ ಕಾಯುವದು. ಮಾರವಾಡಿ ಗಳನ್ನು ಮುಂದೆ ಮಾಡಿಕೊಂಡು ಕಾಂಗ್ರೆಸ ಕಮೀಟಿ ಗೆ ಪತ್ರ ಬರೆದಂತೆ ಪ್ರತ್ಯಕ್ಷ ಕೃತಿಗೆ ಪ್ರಾರಂಭಿಸಿದ್ದಾ ರೆ. ಕನ್ನಡ ಸ್ವಯಂ ಶೇವಕರಿಗೆ ಅಪಮಾ ನ ಹಿಂಸೆ ತೊಡುವದೇ ಅವರ ಪ್ರಕೃತ ಕರ್ತವ್ಯ ಕ ರ್ಮವಾಗಿದೆ. ಮಂಗಳವಾರ ದಿವಸ ಮರೆಗೆ ನಿಂ ತು, ಕೆಲ ಮಾರವಾಡಿಗಳಿಂದ ಇವರಿಗೆ ಅಭದ್ರ ಮಾತುಗಳನ್ನಾಡಿಸಿದರು. ನಿನ್ನೆ ದಿವಸ ಒಬ್ಬ ಸುಶಿಕ್ಷಿತ ಮತ್ತು ಸಂಪನ್ನ ಸ್ವಯಂ ಶೇವಕನನ್ನು ತಿರಿತಿರಿವಿ ಹೊಡೆದರು. ಎಲ್ಲ ವ್ಯವಹಾರವು ಅ ಹಿಂಸೆಯ ಅಸಹಕಾರವಾಗಿರುವದರಿಂದ ಹೊಡೆದವ ರು ವಿಘ್ನಸಂತೋಷಿಯಾದನು. ಹೊಡೆಸಿಕೊಂಡನು ಕರ್ತವ್ಯಕರ್ಮದ ಯೋಗ್ಯ ಫಲವು ದೊರೆಯಿ ತೆಂದು ಸಂತೋಷಪಟ್ಟನು. ಮುಂಬಯಿಯಲ್ಲಿ ಪಿಕೆಟಿಂಗಕ್ಕೆ ವಿರೋಧ ಮಾಡಬೇಕೆಂದು ನೀಲೀಬ ಣ್ಣದ ಫೀತು ಹಚ್ಚಿಕೊಂಡು ಕಾಂಗ್ರೆಸದ ವಿರೋ ಧಿಗಳು ಬಂದರು ಅಲ್ಲಿ ಅವರಿಗೆ ಮಂಗ ಳಾರತಿಯಾಯಿತು. ಇಲ್ಲಿಯೂ ಅದೇ ಹಾಡಾ ಗುವದೇ ನಿಶ್ಚಯ ನೀಲೀ ಫೀತನವರು ಕಾಂಗ್ರೆಸ ದ ವಿರೋಧಿಗಳು. ವೈರಿಗಳು. ಆದರೆ ಇವರು ಕಾಂಗ್ರೆಸದವರೆಂದು ಹೇಳಿ ಕಾಂಗ್ರೆಸದ ಕಾರ್ಯ ಕ್ಕೆ ಬೇಕೆಂದು ಕೇವಲ ದುರಭಿಮಾನಪೂರ್ವಕವಾ ದ ಸ್ವಾರ್ಥದ ದೆಸೆಯಿಂದ ತಮ್ಮ ಒನಾಸ್ಥೇ ಹೊಡೆಯುವರು. ಹೊಡೆಯಲಿ, ಬೇಕಾದದ್ದು ಮಾ ಡಲಿ; ಪಿಕೆಟಿಂಗದ ಕೆಲಸ ನಡೆಯುವದು. ಏಕಂ ದರೆ ಅನ್ಯ ಸತ್ತರೆ ಅಮವಾಸ್ಯ ನಿಲ್ಲದು. ಇದೆಲ್ಲ ಪೋರರ ಕೆಲಸ. ಸ್ಥಿತಿವಂತರಾದ ಮರಾಟಿಗರು ಕಾಂಗ್ರೆಸಕ್ಕೆ ಬರೆದ ಪತ್ರದ ಮೇಲೆ ಸಹೀ ಮಾಡಿ ಲ್ಲ. ಮತ್ತೂ ಎಂದಿಗೂ ಮಾಡಲಾರರು. ಇ ವರು ಇದರಲ್ಲಿ ಸೇರಲ್ಲೆಂದು ಬರೇ ಸುಮ್ಮನೆ ಕೂ ತರೆ ಸಾಗದು. ಏಕೆಂದರೆ-ಇಲಿ ಪೆಟ್ಟು ಗಣಸತಿ ಗೆ ಬಡೆಯುವದು. ಇವರು ಹುಡುಗಾಟಿಗೆಗೆ ಮು ಗದಾಣ ಹಾಕದಿದ್ದರೆ - ಹೆಚ್ಚು ಹಾನಿಗೆ ಕಾರಣ ವಾಗಬಹುದು ಇಷ್ಟೇ ಅಲ್ಲದೆ, ಮುಂಬಯಿಯೆಂಬ ವರು ಹಿಂದೆ ನಿಂತು ಡೊಳ್ಳು ಹೊಡೆಯುತ್ತಾರೆಂದೂ ಖಂಡಿತವಾಗುವದು.

ಮರಾಟರ ಕೀಳ ಮನಸ್ಸಿನ ಇನ್ನೊಂದು ಪ್ರತ್ಯಕ್ಷ ಪ್ರಮಾಣ.

- (೦) -

ಶ್ರೀ ದಿವಾಕರರ ದೆಸೆಯಿಂದ ಆಗತಕ್ಕ ಬ ಹುಮಾನದ ಮೆರವಣಿಗೆಯಲ್ಲಿ ಊರವರೆಲ್ಲರೂ ಭಾ ಗ ತಕ್ಕೊಂಡಿದ್ದರು. ರೈತರು, ವ್ಯಾಪಾರಸ್ಥರು, ನೆ ಯಕಾರರು, ಸುಶಿಕ್ಷಿತರು, ಬ್ರಾಹ್ಮಣ, ಲಿಂಗಾಯಿತ, ಜೈನ ದೇವಾಂಗ ಮೊದಲಾದವರು ಅಧಿ ಮಾನವೂ ವಾಕವಾಗಿ ಊರ ಶೃಂಗಾರ ಮಾಡಿದರು. ಆದರೆ ಮರಾಟಿಗರು ಮಾತ್ರ ಸೂತಕದವರಂತೆ ನಡೆದರು ಕನ್ನಡ ಗೃಹಸ್ಥರಿಂದ ಜನ್ಮವೆತ್ತಿ, ಕನ್ನಡ ಗೃಹಸ್ಥ ರಿಂದ ಮುಂದೆ ಬಂದು ಕನ್ನಡ ಬರಹದಿಂದ ಜೀವಿಸುವ ರಾಜತಂಸ ಛಾಪಖಾನೆಯ ಹಣೆಯ ಹಸರಿಟ್ಟು ಹೋಗಿತ್ತು. ಗಾಂಧೀ ಚಾಕಿನ ಅರ್ಧಭಾಗವು ಹಾಳು ಸುರಿಯಿತು. ದೇಶಭಕ್ತ ದಿವಾಕರರು ಬರಲಿ; ಅ ವರು ಕನ್ನಡಿಗನ ನ್ಯಾಯವನ್ನು ಬಗೀ ಹರಿಸುವರೆಂದು ಒಂಕೊಂಡಿದ್ದಲ್ಲದೆ, ಕನ್ನಡಿಗರಿಗೆ ಮನಸೋಕ್ತ ಬೈ ದು ಕೊಂಡ ಯಾ ರಿ ದ ತ ಮ ಗೆ ಅ ಪ ಕಾ ರ ವಾ ಗ ದೇ ಕಂ ದ ರು; ಅವರಿಗೇ ಯಾವ ಮರ್ಯಾದೆ ಮಾಡಿದರೆಂಬದನ್ನು ನೋಡಿರಿ. ಕನ್ನಡಿಗರಿಗಲಿ; ಶ್ರೀ. ದಿವಾಕರರಾಗಲಿ; ಮರಾಟಿಗ ರಹುಚ್ಚತನಕ್ಕೆ ಮಹತ್ವ ಕೊಡುವದೇ ಇಲ್ಲ. ಇವರು ವಿಶಾಲ ದೃಷ್ಟಿಯಿಂದ ನೋಡುವರು; ಕ್ಷುದ್ರತನವಿ ರುವದೇ ಇಲ್ಲ. ಪಿಕೆಟಿಂಗದ ಒಗ್ಗೆ ಶ್ರೀ. ದಿವಾ ಕರರು ಇವರಿಗೆ ಕೊಟ್ಟ ಉತ್ತರವೇ ಸಾಕ್ಷಿಯು. ಪಿಕೆಟಿಂಗ, ವಿಲಾಯತಿಯ ಅರಿವೆಯ ಬಹಿಷ್ಕಾರವು ನಾಡಿನ ವಿಷಯವು. ಪ್ರಾಂತಿಕ ಅಭಿಮಾನ ವ್ಯಕ್ತಿಗೆ ಸಂಬಂಧವಲ್ಲ. ಅದ್ದರಿಂದ ಮರಾಟಿಗ, ಕೀಳ ವನ್ನು ಮಾಡದೆ, ಪಿಕೆಟಿಂಗ ಮಾಡಬೇಕೆಂದು ಇ ವರಿಗೆ ಬುದ್ಧೀ ಹೇಳಿದರು. ಹೀಗೆ ತಾವು ಸಂಬಿದ ವರೇ ತಮ್ಮನ್ನು ನಮಸ್ಕರಿಸಿ ಬೈಬಿಟ್ಟಂತಾಯಿತು. ಇದರಿಂದ ಮರಾಟಿಗರು ಎಷ್ಟೇ ಬುದ್ಧಿ ಲಿಮಬೇ ಕಾಗಿತ್ತು. ಇವರ ದೇಶವಿಘಾತಕ ವರ್ತನವು ಸ ವತ ರಂಡಿಯಾಗಲೆನ್ನುವ ತಿರ ಮಹಾರಾಷ್ಟ್ರರು ಕ ರ್ನಾಟಕಕ್ಕೆ ಬಹಾದ್ದೂರ ಕನಾ ಟಕರೆಂದಿದ್ದಾರೆ. ಕನ್ನಡಿಗರು ಅದನ್ನು ಕಾಯ್ದುಕೊಳ್ಳುವರು ಆದರೆ ಮರಾಟಿಗರು ಮಾತ್ರ ಮಹಾರಾಷ್ಟ್ರರಿಂದ ಮಹಾರೆಂಬ ಸರ್ಟಿಫಿಕೇಟು ಪಡೆಯುವರು.

ಮರಾಟರನ್ನು ಕುರಿತು ಬೆಳಗಾವಿಯ ಪ್ರಜಾಧ್ವನಿಯ ಶಂಖಧ್ವನಿಯು.

—(೦)—

ಧಾರವಾಡವು ಕನ್ನಡ ಪ್ರಾಂತ; ಆದುದರಿಂ ದ ಧಾರವಾಡದಂತಹ ಅಚ್ಚಗನ್ನಡದ ಪ್ರಾಂತದಲ್ಲಿ ಹೊಟ್ಟೆಯ ಪಾಡಿಗಾಗಿ ಇದ್ದುಕೊಂಡು, ಅಲ್ಲಿ ಮ ರಾಠಿಯ ಪ್ರಸ್ತಾವನ್ನು ಬೆಳೆಸಬೇಕೆಂಬ ಮರಾಠೀ ಜ ನರ ವಿಚಾರವು ಸರಿಯಾದದ್ದಿರುವುದೋ ಹೇಗೆ? ಎಂಬದನ್ನು ಅವರೇ ಒಮ್ಮನಸಿನಿಂದ ವಿಚಾರ ಮಾ ಡಲಿ. ಯಾವ ಪ್ರಾಂತಲ್ಲಿ ಯ ಭಾಷೆಯು ಮುಖ್ಯವಾಗಿರುವದೋ ಆ ಭಾಷೆಗೇ ಅಲ್ಲಿ ಪ್ರಾಧಾನ್ಯ ವನ್ನು ಕೊಡುವುದು ತಕ್ಕದ್ದು. ನಾವು ಈಗ ಜ ರ್ಮನಿಗೆ ಹೋಗಿ, ಅಲ್ಲಿ ಕನ್ನಡ ಭಾಷೆಗೇ ಎಲ್ಲರೂ ಪ್ರಾಧಾನ್ಯ ಕೊಡಿರಿ. ಎಂದು ಅಲ್ಲಿರುವರಿಗೆ ಒ ತ್ತಾಯ ಮಾಡತೊಡಗಿದರೆ, ನಮ್ಮ ಪ್ರಯತ್ನಕ್ಕೆ ಯಶಸ್ಸು ಬಂದಹಾಗೇ? ಎಂದೂ ಇಲ್ಲ; ಇದೇ ತತ್ವವನ್ನೇ ಕನ್ನಡ ದೇಶದಲ್ಲಿ ನಿರಂತರವಾಗಿ ವಾಸ ವಾಗಿದ್ದ ಹಾಗೂ ವಾಸಮಾಡಲು ಬರುವ ಪರಪ್ರಾಂ ತದ ನಿವಾಸಿಗಳು, ಮುಖ್ಯವಾಗಿ ಮರಾಠಿಗರು ಧ್ಯೇ ಯದಲ್ಲಿಡಬೇಕು. ಅಲ್ಲದ ಸಲ್ಲದ ಕೆಲಸಗಳಿಗೆ ಕೈ ಹಾಕಲು, ವಿನಾಕಾರಣ ಮಸಕ್ತಾಪ, ಜಗಳ ಮುಂ ತಾದವುಗಳು ಅಂತ್ಯನ್ನವಾಗಿ ಕಡೆಯಲ್ಲಿಯ ಪಿಕ್ಕಟ್ಟೇ ಮುರಿದು ಹೋಗುವ ಸಂಭವವುಂಟು. ಇವೆಲ್ಲ ಕೆ ಲಜಗಳಗಳಿಂದ ನಾವು ಹಣ್ಣಾಗುವುದಷ್ಟೇ ಅಲ್ಲ, ಸ್ವರಾಜ್ಯವನ್ನು ಪಡೆಯಲು ಕೂಡ ಅನರ್ಹರಾಗುವೆ ವು. ಹೀಗಾಗಿ ದೇಶದಲ್ಲಿ ನಮಗೆ ಅಪಕೀರ್ತಿ ಬ ರುವದು. ಆದುದರಿಂದ ಕನ್ನಡ ದೇಶದಲ್ಲಿ ಶಾಂತಿ

ವಾಗಿರುವ ಮಂತ್ರಿಗರು ತಮ್ಮ ದುರಭಿಮಾನವನ್ನು ಬಿಟ್ಟು, ಸನ್ನಿಡಿಗರೊಡನೆ ಸಮಭಾವನೆಯುಂಟಾ ಇರುವರೆಂದು ನಮ್ಮ ಆಶೆ.

ಮುಂಬಯಿಯಲ್ಲಿ ಪೋಲಿಸ ಕೃತ್ಯದ ನಿಷೇಧ.

೨೦ ಸಾವಿರ ಸಿಖಗಳ ಪ್ರಚಂಡ ವಿಸಂತಿ ಪತ್ರವು.

—(೦)—

ಶ್ರೀ ಬಾ| ಗೋಖಲೆ ಅವಂತಿಕಾಬಾಯಿಯವರು ಅಲ್ಲಿ ಬೈಕಲ್ಲಿ ಧ್ವಜಾವಂದನೆ ಮಾಡಿದ ದಿವಸ ಪೋಲಿಸರಿಂದಾದ ಅತ್ಯಾಚಾರದ ನಿಷೇಧ ಮಾಡಲು- ಶಿಖರವು ಸ್ವತಃ ಸಾರ್ವಜನಿಕ ಸಭೆಯನ್ನು ಆಚರಿಬೇಕೆಂದು ಇದ್ದತ್ತು ಸಾವಿರ ಸಿಖಗಳೊಂದು ವಿನಂತಿ ಪತ್ರವು ಶೇರಿಫರ ಕಡೆಗೆ ಕಳಿಸಲ್ಪಟ್ಟಿದೆ. ಇದರ ಮೇಲೆ ಸರ, ರಾವಬಹಾದ್ದೂರ, ರಾವಸಾಹೇಬ, ಜೆ. ಪಿ ಯಂದ ಗೃಹಸ್ಥರೂ ಸಹೀ ಮಾಡಿದ್ದಾರೆ. ಮತ್ತು ಇವರ ಹೆಂಡಂದಿರು ಮಾಧವಬಾಗಿನಲ್ಲಿ ಜಾಹೀರ ಸಭೆ ಕೂಡಿಸಿ, ಪೋಲಿಸರ ಕೃತ್ಯವನ್ನು ನಿಷೇಧಿಸಿದ್ದಾರೆ. ಶೇರಿಫ ಅಂದರೆ ಪಟ್ಟಣನೆಟ್ಟಿಯು. ಪ್ರತಿವರ್ಷ ಬೇರೆ ಬೇರೆಯವನು ಸರಕಾರದಿಂದ ನೇಮಿಸಲ್ಪಡುವನು.

ಹೀಗೆ ಈತನು ಸರಕಾರದ ಮನುಷ್ಯನಾಗಿರುವದರಿಂದ, ಸರಕಾರೀ ಮನುಷ್ಯನು ಸರಕಾರದ ವಿರುದ್ಧ ಹೇಗೆ ಸಭೆ ಕರೆಯುವನೆಂದು ಇಂಗ್ಲೇಜ ಪತ್ರಗಳು ಪ್ರಾಂಜಜನ್ಯ ನಡೆಸಿವೆ. ಪೋಲಿಸರಿಂದಾದ ಹೀನ ಕೃತ್ಯವು ಬರೇ ಪೋಲಿಸರಿಂದೇ ಆಯಿತೇ? ಸರಕಾರದ ಪ್ರೇರಣೆಯಿಲ್ಲದೇ ಎಂಬದನ್ನು ಸರಕಾರಕ್ಕೆ ಪತ್ರ ಬರೆದು ಕೇಳಿದ್ದಾರೆ. ಯಾವ ಉತ್ತರ ಕೊಟ್ಟರೂ ಸಂಕಾರದ ಮೇಲೆ ಬೇಜೇ ಬರುವಂತಿದೆ.

ಲಷ್ಕರೀ ಕಾಯಿದೆಯ ಪ್ರಭಾವದಿಂದ ಸೊಲ್ಲಾಪೂರದ ಸತ್ವ ಹೋಗಲಿಲ್ಲ.

ಸೊಲ್ಲಾಪೂರದಲ್ಲಿ ಲಷ್ಕರೀ ಕಾಯಿದೆಯನ್ನು ಜಾಹೀರ ಮಾಡಿ, ಅನೇಕರನ್ನು ತುರಂಗಕ್ಕೆ ಕಳಿಸಿದರೂ, ಅಲ್ಲಿಯವರ ಮನುಷ್ಯತ್ವದ ಸತ್ವ ಹೋಗಿಲ್ಲ, ಹೋದ ಕಾತೀರ್ಗೈಕಾದಶಿಯ ದಿವಸ ಏಕಾದಶೋತ್ಸವವಾಯಿತು. ಹತ್ತಿಪತ್ತು ಸಾವಿರ ಜನರು ಸೇರಿದ್ದರು. ಬೀದಿಗುಂಟ ಜನರು ಮಹಾತ್ಮಾ ಗಾಂಧಿಕೆ ಜಯವೆಂದು ಜಯ ಜಯಕಾರ ಮಾಡುತ್ತಿದ್ದರು. ಪೋಲಿಸ ನಾಜೂಟರು ಕೆಲವರನ್ನು ಹೊಡೆದು, ಮನಸ್ಸಿನ ಕೀಳತನದ ಪ್ರದರ್ಶನ ಮಾಡಿಕೊಂಡರು.

ಪಾಯುವ್ಯ ಸರಹದ್ದಿನಲ್ಲಿ ಪುಂಡಾಟಿಕೆ.

ಪೇಶಾವರದಲ್ಲಿ ಸುರಕ್ಷಿತೆಯ ಬಂದೋಬಸ್ತು

—(೦)—

ಪೇಶಾವರ ಪ್ರಾಂತದಲ್ಲಿ ಆಫ್ರಿಡಿ ಜನರು ಪುನಃ ತಲೆಯೆತ್ತಿ ಪುಂಡಾಟಿಕೆ ನಡೆಸಿದ್ದರಿಂದ, ಅವರಿಗೆ ಇಂಗ್ಲಿಷ ಸರಕಾರದವರು ವಿಶೇಷವಾದ ಧರ್ಮೋಪಾಯಗಳನ್ನು ಕೈಕೊಂಡಿದ್ದಾರೆ. ತಿರಾ ಪ್ರಾಂತದಲ್ಲಿ ಯಾವನೂ ಕಾಲ್ದಡಿಗೆ ಅಥವಾ ಅಂಗಿಯಿಂದ ಪ್ರಯಾಣ ಮಾಡಬಾರದೆಂದು ಜಾಹೀರಾತು ಹಚ್ಚಿರುವರು. ಪೇಶಾವರ ಜಿಲ್ಲೆಯಲ್ಲಿ ಯುರೋಪಿಯನ್ನರು ಸರಕಾರೀ ಕೆಲಸದ ಹೊರ್ತು ದಂಡಿನ ಹತ್ತಿರಲ್ಲಿ ಹೋಗತಕ್ಕದ್ದಿಲ್ಲ, ಸಮಸರಾ ಮತ್ತು ಮಾಲಕಂಡದ ರಾಜಾದಿಗಳಲ್ಲಿ ಯುರೋಪಿಯನ್ನ ಸ್ತ್ರೀಯರು ಹಿಡಾಕಳ್ಳದಿಲ್ಲ. ಜಾಮರೂಡದಿಂದ ಖಾತಾಸಿಯ ಸರಕ ಸ್ತ್ರಿ ಒಬ್ಬತ್ತಿಂದ ಬೆಳಗಿನ ವಾಲ್ಕರ ಶವ ಸಾ ಯಾವ ಕಾರ ಇದಿಂದಲೂ ತಿರುಗಾಡಕ್ಕಿಲ್ಲೆಂದು ಎಚ್ಚರಿಕೆ ಜಾಹೀರನಾಮೆ ಹೊರಟಿದೆ.

ಒಬ್ಬ ಗಾರ್ಡನಾಜೇಬರು ಹುಚ್ಚೆದ್ದು ಪರಿಸರು.

—(೦)—

ಲಂಡನದಲ್ಲಿರುವ ಗ್ರೀನವೇಚ ಸಾಹೇಬರು ರಾವ್ರಂತ ಟ್ರೇಂಗಳ ಬಗ್ಗೆ ಪರಿಶ್ರಮದಿಂದ ಉದ್ಗಾರ ತೆಗೆದಿದ್ದಾರೆ. ಆ ಉದ್ಗಾರದ ಸ್ಪೇಶಲ ತಾರು ಹಿಂದುಸ್ಥಾನಕ್ಕೆ ಬಂದಿದೆ. ಗಾರ್ಡನು ಗದ್ದರಿಸುವದೇನೆಂದರೆ-

೧ ಈ ಶತಮಾನದಲ್ಲಿ ಪ್ರಜಾಪ್ರಭುತ್ವ ಅಥವಾ ಸ್ವಜಾತ್ರಭುತ್ವದ ದೃಶ್ಯವೆಂದು ಹಿಂದುಸ್ಥಾನದಲ್ಲಿ ಸಹಸಾ ನಡೆಯಲಾರದು.

೨ ಕಾಯದೆ ಪಂಡಿತರಾಗಿ ಬೃಹಸ್ಪತಿಗಳಾದಂಥ ವಕೀಲರೂ, ಲೇಖಕರೂ ಹಿಂದುಸ್ಥಾನವನ್ನು ಆಳಲಾರರು.

೩ ಶಿಸ್ತಿನಿಂದ ಹಿಂದುಸ್ಥಾನದಲ್ಲಿ ಹುಟ್ಟಿದ ರಾಜ್ಯಕ್ರಾಂತಿಯು ತನ್ನ ಮಕ್ಕಳನ್ನು ತಾನೇ ತಿಂದುಬಿಡುವದು.

೪ ಇಂಗ್ಲಂಡದ ಹೊರ್ತು ಯುರೋಪದ್ದು ಸಾಗದಂತೆ, ಇಂಗ್ಲಂಡದ ಹೊರ್ತು ಹಿಂದುಸ್ಥಾನದ ಯಾವ ಕೆಲಸವೂ ಸಾಗಲಾರದು.

೫ ನಮ್ಮ ಕಾಲದಲ್ಲಾಗಲಿ, ಸೂರ್ಯಚಂದ್ರರಿರುವತನಕವಾಗಲಿ. ಸಂಯುಕ್ತ ಹಿಂದುಸ್ಥಾನವೆಂಬದು ಎಂದಿಗೂ ಆಗಲಾರದು;

ಧಾರವಾಡದ ಪಿಕೆಟಿಂಗದ ಸುದ್ದಿಗಳು

—(೦)—

ಗಾಂಧೀ ಚೌಕಿನಲ್ಲಿರುವ ಶ್ರೀ ಆರ್. ಎನ್. ಕುಲಕರ್ಣಿಯವರು ಎಂದೋ ವಿಲಾಯತಿಯ ಅರವೆಯ ಗಂಟುಕಟ್ಟಿಟ್ಟಿದ್ದರು. ನಿನ್ನೆ ಅದರ ಮೇಲೆ ತಾಂಗ್ರೆಸದವರಿಂದ ಮುದ್ರೆ ಹಾಕಿಸಿ, ಮಾರಲಿಗುಂಪು ಮಾಡಿದರು.

ಒಬ್ಬ ಮಾರವಾಡಿಯ ಅಂಗಡಿಯ ಮುಂದೆ ಹೊಡತಿಂದ ಸ್ವಯಂಸೇವಕನ ಮನೆಯ ಹೆಣ್ಣುಮಕ್ಕಳೇ, ಆ ಮಾರವಾಡಿಯ ಅಂಗಡಿಯ ಮುಂದೆ ಪಿಕೆಟಿಂಗ ನಡೆಸತಕ್ಕವರಿದ್ದಾರೆ.

ಯಾರದೋ ಒಂದು ಮಕಾಟಿ ವ್ಯಕ್ತಿಯು ನಮಗೆ ಪೂರಾ ತಿಳಿದಿದೆ, ನಮ್ಮ ಸಹೀ ತಕ್ಕೊಂಡಿತು. ಅದಕ್ಕೆ ತಮ್ಮ ಸಮ್ಮತಿ ಇಲ್ಲೆಂದು ಮಾರವಾಡಿಗಳು ಡಿಕ್ಟೇಟರಾದ ಶ್ರೀ ಕೌಜಲಗಿ ಹನಮಂತರಾಯರ ಮುಂದೆ ದೂರಿಕೊಂಡಿದ್ದಾರೆ.

ಮಾರವಾಡಿಗಳು ಶ್ರೀ ಹನಮಂತರಾಯರ ಕೂಡ ಕೈಲಿಗೆ ಬಂದಿದ್ದು ವಿಲಾಯತಿಯ ಜವಳಿಯ ಗಂಟು ಕಟ್ಟಿಕಲಿಕ್ಕೆ ಸಿದ್ಧರಿದ್ದಾರೆಂದೂ ಇದ್ದಿಗ್ಗೆ ಬಂದಬಂದಲಿ ನಡೆವಿದೆಂದೂ ತಿಳಿಯುತ್ತದೆ.

ದುಂಗಳವಾರ ದಿವಸ ಹಳ್ಳಿಗಳಿಂದ ಅರವೆ ಕೊಳ್ಳಲಿಕ್ಕೆ ಬಂದವರು ನಮಗೆ ತೀರ ತಿಳುವಾಗಿ, ಅಗ್ಗ ತೋರುವ ಪರದೇಶೀ ಅರವೆ ಬೇಡ ನಾವೇ ನೂತು ನಾವೇ ನೇಯುವೆವೆಂದು ಹೇಳಿ, ಸ್ವದೇಶೀ ಅರವೆಯ ಗಿರಣಿಗಳ ಅರವೆ ಗಳನ್ನು ಅಗತ್ಯದ ಪಟ್ಟಿಗೆ ಕೊಂಡುಕೊಂಡು ಹೋದರು

ತನ್ನ ಗ್ರಾಮೋಫೋನದಿಂದಲೇ ತನ್ನ ದೇಹಸಂಸ್ಕಾರ.

—(೦)—

ಫ್ರಾನ್ಸ ದೇಶಕ್ಕೆ ಸೇರಿದ ನಾರ್ಮಂಡಿವಾಸಿಯಾದ ರೋಯಿನಾರ್ಡನೆಂಬ ಕವಿಯು ಸ್ವರ್ಗವಾಸಿಯಾದನು. ಕ್ರಿಶ್ಚನ್ನ ಧರ್ಮ ಪ್ರಕಾರ ತನ್ನ ಶವವನ್ನು ಹುಗಿಯದೆ, ಅದಕ್ಕೆ ಅಗ್ನಿಸಂಸ್ಕಾರ ಮಾಡಬೇಕೆಂದು ವೃತ್ತಪತ್ರದಲ್ಲಿ ಬರೆದಿಟ್ಟಿದ್ದನು. ಅವರ ಕೂಡ ತನ್ನ ಮರಣ ಕಾಲದಲ್ಲಿ ಅನ್ನಶಕ್ಕ ಅವರ ಮಂತ್ರವನ್ನು ತಾನಾಗಿ ಕವಿತಾಬದ್ಧವಾಗಿ ರಚಿಸಿ, ಅದನ್ನೊಂದು ಗ್ರಾಮೋಫೋನಿನಲ್ಲಿ ಹಿತಿಸಿಟ್ಟಿದ್ದನು. ಶವವನ್ನು ಚಿತೆಯಮೇಲಿಟ್ಟ ಬಳಿಕ, ಈ ಫೋನು ಹಚ್ಚಿದರು. ಮಂತ್ರ ಮುಗಿದ ಬಳಿಕ ಅಗ್ನಿ ಹಚ್ಚಿದರು.

ಮೂರ್ತಿ ಸಣ್ಣದಾದರೂ
ಕೀರ್ತಿ ದೊಡ್ಡದು.

— (೦) —

ಮಹಾತ್ಮರ ಶಿಬಿರದಲ್ಲಿದ್ದ ವೀರಶೈವ ವೀರ ಸತ್ಯಾಗ್ರಹಿಯಾದ ಶ್ರೀ ಮಹಾದೇವ ವೈಲಾರರವರು ಧಾರವಾಡದಿಂದ ತಮ್ಮ ಹುಟ್ಟೂರಾದ ಮೊಟೇಬೆನ್ನೂರಿಗೆ ಹೋದರು ಆ ಮತ್ತು ಸುತ್ತಲಿನ ಗ್ರಾಮಗಳ ಜನರು ಇವರ ದರ್ಶನೋತ್ಸುಕರಾಗಿ ಇವರ ಒರವನ್ನೇ ಎದುರು ನೋಡುತ್ತಿದ್ದರು. ಇವರಿಗಾಗಿ ಮೊಟೇಬೆನ್ನೂರಿನಲ್ಲಾದ ಬಹುಮಾನವು ಮೂರ್ತಿ ಸಣ್ಣದಾದರೂ ಕೀರ್ತಿಯು ದೊಡ್ಡದೆನ್ನುವಂತಾಯಿತು. ಸುತ್ತಲಿನ ಗ್ರಾಮಗಳ ನಾಲ್ಕಂಟು ಸಾವಿರ ಜನರು ಇವರನ್ನು ನೋಡಿ, ಆನಂದಪಡಲಿಕ್ಕೆ ಬಂದಿದ್ದರು ಮೊಟೇಬೆನ್ನೂರಲ್ಲಿ ಈ ಮೆರವಣಿಗೆ ಬಹುಮಾನವಾದಬಳಿಕ ಇವರು ಬ್ಯಾಡಗಿ, ಹಾವೇರಿ, ಮತ್ತು ರಾಣೇಬೆನ್ನೂರಿಗೆ ಹೋದರು. ಅಲ್ಲಿಯೂ ಸನ್ಮಾನ ಸಮಾರಂಭಗಳಾದವು.

ಮದ್ರಾಸದಲ್ಲಾದ್ದೊಂದು ಒಡಂಬಡಿಕೆ.

—— (-) ——

ಬ್ರಾಹ್ಮಣ ಬ್ರಾಹ್ಮಣೇತರ, ಹಿಂದೂ, ಮುಸಲಮಾನ, ಕ್ರಿಶ್ಚನ್ನ, ಅಸ್ಪೃಶ್ಯವೆಂಬ ಭಾವವನ್ನು ಅಳಿಸುವದಕ್ಕಾಗಿ ಮದ್ರಾಸ ಮ್ಯುನಿಸಿಪಾಲಿಟಿಯ ಅಧ್ಯಕ್ಷಸ್ಥಾನವು ಅವರವರ ಸಂಖ್ಯಾಪ್ರಮಾಣದಿಂದ ಹೊರೆಯಬೇಕೆಂದು ಮೆಂಬರರು ಗೊತ್ತುಮಾಡಿಕೊಂಡರು. ಪ್ರತಿವರ್ಷ ಒಬ್ಬರು ಅಧ್ಯಕ್ಷರಾಗತಕ್ಕದ್ದು ಅದರ ಕ್ರಮವು ಮುಂದಿನಂತಿರುವದು.

೧ ಬ್ರಾಹ್ಮಣೇತರ ೨ ಬ್ರಾಹ್ಮಣ ೩ ಬ್ರಾಹ್ಮಣೇತರ ೪ ಕ್ರಿಶ್ಚನ್ನ ೫ ಬ್ರಾಹ್ಮಣೇತರ ೬ ಮುಸಲಮಾನ ೭ ಬ್ರಾಹ್ಮಣೇತರ ೮ ಅಸ್ಪೃಶ್ಯ

ಎಂಟನೇ ವರ್ಷ ಅಸ್ಪೃಶ್ಯನು ಅಧ್ಯಕ್ಷನಾಗುವನು. ಮತ್ತು ಎಂಟು ವರ್ಷಕ್ಕೊಮ್ಮೆ ಬ್ರಾಹ್ಮಣ, ಕ್ರಿಶ್ಚನ್ನ ಮತ್ತು ಮುಸಲಮಾನನಿಗೆ ನಂಬರ ಬರುವದು. ಬ್ರಾಹ್ಮಣೇತರಂಗೆ ಮಾತ್ರ ಎರಡು ವರ್ಷಕ್ಕೊಮ್ಮೆ ಪಾಳಿಗೆ ಒದುವದು.

ಮುಂಬಯಿಯಲ್ಲಿ ಪಿಕೆಟಿಂಗ ಮಾಡಿದ ವೀರ ಅನ್ನಪತಿಕ್ಷಿಯ, ಶ್ರೀ ಪಡದಿಯವರಿಗೆ ಆರು ತಿಂಗಳ ಸಾದಾ ಕೈದಿನ ಶಿಕ್ಷೆಯಾಯಿತು. ಇವರ ಪತಿಯವರು ತುರಂಗೆ ಬಿಟ್ಟು ಬಂದು ಒಂದ ತಿಂಗಳು ಸಹ ಆಗಿಲ್ಲ.

ಶ್ರೀ. ಸೇನಗುಪ್ತರ ಪತ್ನಿಗೆ ಒಂದು ವರ್ಷದ ಸಾದಾ ಶಿಕ್ಷೆಯಾಯಿತು.

ಸಂದಾರ ವಲ್ಲಭಭಾಯಿ ಪಟೇಲರನ್ನು ಮೊನ್ನೆ ರಾತ್ರಿ ಯಂರವಡೆಯಿಂದ ಮುಂಬಯಿಗೆ ಕರಕೊಂಡು ಬಂದು, ನಸಕು ಹರಿಯುವದರೊಳಗಾಗಿ, ಮನೆಗೆ ಮುಟ್ಟಿಸಿದರು.

ಹಾವೇರಿಯಲ್ಲಿ ದಬ್ಬಾಳಿಕೆ.

ಹಾವೇರಿ ತಾಲೂಕಿನಲ್ಲಿ ಜಂಗಲ ಸತ್ಯಾಗ್ರಹದ ಪ್ರಾರಂಭವನ್ನು ಆ ತಾಲೂಕಿನ ಸರ್ವಾಧಿಕಾರಿಗಳಾದ ಶ್ರೀ ಅಗ್ನಿಹೋತ್ರಿ ಗೋವಿಂದಾಚಾರ್ಯರು ಪ್ರಾರಂಭಿಸಿದ್ದಾರೆಂದು ಒರೆದಿದ್ದೇವಷ್ಟೇ; ಈಗ ಕಲ್ಲೇದೇವರ ಗ್ರಾಮದಲ್ಲಿ ಜಂಗಲ ಕಾಯುದೆ ಮುರಿದದ್ದಕ್ಕಾಗಿ ಈ ಕೆಳಗಿನವರನ್ನು ಹಿಡಿದಿದ್ದಾರೆ.

ಹಾವೇರಿ

೧) ಶ್ರೀ. ಗೋವಿಂದಾಚಾರ್ಯ ಅಗ್ನಿಹೋತ್ರಿ (ಸರ್ವಾಧಿಕಾರಿ) ೨) ರಾಮಕೃಷ್ಣ ಗಣಪುಲೆ ೩) ಸಂಗಪ್ಪ ಸುರಳಿಹಳ್ಳಿ.

ಕಲ್ಲೇದೇವರ.

೧) ಶಿವಮೂರ್ತಯ್ಯ ಹಿರೇಮಠ ೨) ಪುಟ್ಟಪ್ಪಾ ಬಳಿಗಾರ.

ಆಗಡಿ.

೧) ರಾಮಚಂದ್ರ ಸವಡಿ. ೨) ಚೆದಂಬರ ಪಾಟೀಲ. ೩) ವೆಂಕಣ್ಣಾ ಹೊನ್ನತ್ತಿ. ೪) ಗೋಪಾಲ ಸೂಡಿ ೫) ಚಿದಂಬರ ದೇಸಾಯಿ. ೬) ಕರಿಯಪ್ಪ ಹುಚ್ಚಣ್ಣನವರ.

ಇವರನ್ನು ಹಿಡಿದು ಜೈಲಿಗೆ ತಂದಿದ್ದಾರೆ.

೧) ಪುರುಷೋತ್ತಮ ಹೇಜೇಬ, ಆಗಡಿ. ೨) ಕೃಷ್ಣರಾವ ದೇಶಪಾಂಡೆ ಗುತ್ತಲ. ೩) ಶೋಷ್ಠೇಶ್ವರರಾವ ನಾಡಿಗೇರ ಗುತ್ತಲ. ೪) ಸೋಮಪ್ಪಾ ಆಗಡಿ ಬ್ಯಾಡಗಿ. ೫) ಮುರಿಗೆಪ್ಪಾ ಹೊಲಿಹಳ್ಳಿ ಬ್ಯಾಡಗಿ. ೬) ಗದಿಗೆಯ್ಯಾ ಹಿರೇಮಠ ಮೋಟೆಬೆನ್ನೂರ ೭) ಪರಮಪ್ಪ ಸಿಂಗಪ್ಪನವರ ಕನವಳ್ಳಿ ಇಷ್ಟು ಜನರನ್ನು ಹಿಡಿದು ರಾಣೇಬೆನ್ನೂರಿಗೆ ಒಯ್ದಿದ್ದಾರೆ.

ಶ್ರೀ ಅಗ್ನಿಹೊತ್ರಿಯವರ ಸಂದೇಶ

"ಸದ್ಯದ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ಹಿಂದೀ ತರುಣನು ರಣಾಂಗಣದಲ್ಲಿ ಕಾದಬೇಕೆಂಬುದನ್ನು ಮರೆಯಬೇಡಿರಿ ಮತ್ತು ಸುಮ್ಮನೆ ಕೂತ್ರಬೇಡಿರಿ. ಭಾರತ ಮಾತೆಯ ಉದ್ಧಾರಕ್ಕಾಗಿ ಹಿಂಜರಿಯಬಾರದಾಗಿ ಪ್ರಾರ್ಥನೆ"

ತಮ್ಮೆಲ್ಲರಡಿಯಾಳು
ಅಗ್ನಿಹೋತ್ರಿ ಗೋವಿಂದಾಚಾರ್ಯ

ಶ್ರೀ. ದಿವಾಳರ ರಂಗರಾಯರು ಈಸ್ಟಿಗೆ ರಂಗಾಗಿ ಒಂದು ಸಂದೇಶವನ್ನು ಪ್ರಸಿದ್ಧಿಸಿದ್ದು, ಅದನ್ನು ನಾಳೆನ "ವಿಜಯ"ದಲ್ಲಿ ಮುದ್ರಿಸುವೆವು.

ನೋಟೀಸು

ಭಾಗೀರಥಿ ಧೃತಾರ ಅಪ್ಪಾಸಾಹೇಬಗೌಡಾ ಕೃಷ್ಣಪ್ಪಗೌಡಾ ಪಾಟೀಲ ಸಾ॥ ಉಕ್ಕುಂದ ಸಂಸ್ಥಾನ ಮುಧೋಳ ಈತಿಗೆ-

ಕಳಗೆ ಸಹಿ ಮಾಡಿದವನು ನಿನಗೆ ಕೊಡುವ ನೋಟೀಸ ಏನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ಈಗ ೪ ವರ್ಷಗಳ ಹಿಂದೆ ನನ್ನ ಸಂಗಡ ಬಾಳ್ವೆ ಮಾಡಲಿಕ್ಕೆ ಬಂದನಂತರ ದುರ್ನಡತೆಗೆ ಬಿದ್ದು ಕೆಟ್ಟ ಜನರ ಉಪದೇಶದಿಂದಾ ನನ್ನ ಜೀವ ತೆಗೆದುಕೊಳ್ಳಲಿಕ್ಕೆ ಖಟಪಟಿ ನಡ್ಸಿದ್ದು ನನಗೆ ಪೂರಾ ಖಾತ್ರಿ ಆದ್ದರಿಂದ ನೀನು ನನಗೆ ಹೇಳದೇ ಕೇಳದೇ ಈಗ ೮-೧೦ ತಿಂಗಳ ಹಿಂದೆ ಅಂದಾಜ ೧೫೦ ತೊಲಿ ಭಂಗಾರವನ್ನು ತೆಗೆದುಕೊಂಡು ಓಡಿ ಹೋಗಿರುತ್ತೀದಿ ಮತ್ತು ನಿನ್ನ ನಡತೆಯು ತೀರ ಕೆಟ್ಟು ಹೋದ್ದರಿಂದ ನಾನು ಈ ಮೂಲಕ ನಿನಗೆ ತಿಳಿಸುತ್ತೀನಲ್ಲಾ ನಿನ್ನನ್ನು ನಾನು ಹಿಂದೂ ಧರ್ಮ ಶಾಸ್ತ್ರ ಪ್ರಕಾರ ತ್ಯಾಗಮಾಡಿರುತ್ತೇನ ಇದೇ ನಿನಗೆ ಘಾರೀಖತ ಅಂತಾ ತಿಳಿಯಬೇಕು ಮತ್ತು ನೀನು ಕಳವಿಲೆ ಪೈದ ದಾಗೀನೆ ವಗೈರೆಗಳ ಬಗ್ಗೆ ನಿನ್ನ ಮೇಲೆ ದಿವಾಣಿಯಲ್ಲಿ ಅಗರ ಫೌಜದಾರಿಯಲ್ಲಿ ಕೆಲಸ ನಡಿಸತಕ್ಕವನಿದ್ದೇನೆ ನೀನು ಈನಂತ್ರ ಗಂಡು ಅಗರ ಹೆಂಣು ಹಡದಲ್ಲಿ ಅವು ನನ್ನ ಮಕ್ಕಳಲ್ಲಾ ವ ನೀನು ನನ್ನ ಹೆಂಡತಿ ಅಲ್ಲಾ ನಾನು ಎರಡನೇ ಲಗ್ನ ಮಾಡಿಕೊಂಡಿರತೆನೆ ನನ್ನ ಯಾವ ಆಸ್ತಿಯ ಮೇಲೆ ನಿನ್ನದು ಅಗರ ನಿನಗೆ ಹುಟ್ಟಿದ ಜುದಾದ ಮಕ್ಕಳದೂ ಯಾವ ಪ್ರಕಾರದ ಹಕ್ಕು ಇರುವದಿಲ್ಲಾ ಅಂತಾ ಕೊಟ್ಟ ನೋಟೀಸ ಹಾ॥ಪಿ- ೧೧-೧೯-೩೦

ಅಪ್ಪಾಸಾಹೇಬ ಕೃಷ್ಣಪ್ಪಾ ಬಿರಾದಾರ ಪಾಟೀಲ ಉಕ್ಕುಂದ

ಚಂದಾದಾರರಿಗೆ ಸೂಚನೆ

ನನ್ನಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರು ಹೆಸರಿನಿಂದ ಹ್ವಿ. ಪಿ ಯನ್ನು ಕಳಿಸುವೆವು. ಚಂದಾದಾರರು ಹಿ.ಪಿ. ಸ್ವೀಕಾರವಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

B 144

ವಿಜಯ

ನಿತ್ಯ ಪತ್ರಿಕೆ ಬೆಲೆ ಅರ್ಧ ಅಣ್ಣೆ

ಸಂಪಾದಕರು:- ಅಣ್ಣಾ ಚಾರ್ಯರ್ ಬಾಳಾಚಾರ್ಯರ್ ಹೊಸಕೇರಿ.

ವರ್ಷ ೧೧ ಧಾರವಾಡ ಶುಕ್ರವಾರ ತಾರೀಖು ೭ನೇ ನವ್ಹೆಂಬರ ೧೯೩೩ (ಸಂಚಿಕೆ ೨೪೩

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ ಇದರಲ್ಲಿ ವಾದಿ ಶ್ರೀ. ಸಿದ್ಧಾವಧೂತರ ಅಸಲಿ, ಶ್ರೀ. ಅರೂಢಸ್ವಾಮಿಗಳ ಕೈಫಿಯತು ಮತ್ತು ಮಹಜರಪಾದ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತ ವಾದಿ, ಪ್ರತಿವಾದಿ, ಹಾಗು ಮಹಜರ ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಪ್ರಸಿದ್ಧ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದಕ್ಕೆ ಎಂದೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಪ್ಯಾ. ಪಿ. ಖರ್ಚ ಬೇರೆ ಒಂದೇರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಪದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಪ್ಯಾ. ಪಿ. ಯಿಂದ ಲಿಬ್ಬಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಚಿತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೆದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ೩೦ ಮೂವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟಿ ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೆಂದಿಯ ಎಂಟು ಲಕ್ಷದ ಮೇಲುಂಟು. ಚಲಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜಾಸ್ತಿಗ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಡಾಗೀನಿಗಳನ್ನು ಸತ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೮-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ.

ವಿಜಯ.

ಜಾಲುಕ್ಯವಿಕ್ರಮ ವರ್ಷ ೮೫೫ ಕಾರ್ತೀಕ ವದ್ಯ ೧

ಮುಂಬಯಿ ಸರಕಾರ ಮತ್ತು ಜಿಲೆವಳಿಯು.

ಮುಂಬಯಿ ಇಲಾಖೆಯ ಗವರ್ನರಸಾಹೇಬರು ವರ್ಷದಲ್ಲಿ ಮೂರು ಸ್ಥಳಗಳಲ್ಲಿ ವಾಸವಾಗಿರುವರು. ಚಳಿಗಾಲ ಮುಂಬಯಿ, ಮಳೆಗಾಲ ಪುಣೆ ಮತ್ತು ಬೇಸಿಗೆಯ ಮಹಾಬಳೇಶ್ವರ ಈ ಪ್ರಕಾರ ವಾಸಸ್ಥಾನಗಳಾಗಿವೆ. ಈ ವರ್ಷ ಮುಂಬಯಿ ಇಲಾಖೆಯ ಅಧಾಯವು ಬಹುವಾಗಿ ಕಡಿಮೆಯಾಗಿ ಎಷ್ಟೋ ಕೆಲಸಗಳಿಗೆ ಕತ್ತರಿ ಹಾಕಿದೆ. ಆದ್ದರಿಂದ ವೆಚ್ಚವನ್ನು ಕಳಿಸುವದೇ ಗಳಿಕೆಯಾಗುವದಾದ್ದರಿಂದ, ಬೇಸಿಗೆಯ ಮಹಾಬಳೇಶ್ವರದ ಯಾತ್ರೆಯನ್ನು ನಿಲ್ಲಿಸಬೇಕೆಂದು ವಿಚಾರ ನಡೆಯಿತು. ಸಾಹೇಬರು ಬೇಸಿಗೆಯನ್ನು ಬೈಲಿನಲ್ಲಿ ಕಳೆಯುವದರಿಂದಾಗುವ ಖರ್ಚಿನಷ್ಟಕ್ಕಿಂತ ಮಹಾಬಳೇಶ್ವರದ ತಂಪು ಹವೆಯಲ್ಲಿ ಕಳೆಯುವದರಿಂದ, ಹೆಚ್ಚು ಕೆಲಸವಾಗುವದೆಂಬ ನಿಮಿತ್ಯ ಹೇಳಿ, ಈಗಾಗಲೇ ಮುಂದಿನ ಬೇಸಿಗೆಯ ಮಹಾಬಳೇಶ್ವರ ವಾಸವನ್ನು ಗಟ್ಟಿ ಮಾಡಿದ್ದಾರೆ. ಸಾಹೇಬರು ಮಹಾಬಳೇಶ್ವರ ವಾಸಿಯಾದರೂ ಬೇಟೆಯ ನಿಮಿತ್ಯವಾಗಿ ಯಲ್ಲಾಪೂರ, ಶಿದ್ದಾಪೂರದ ಅಡವಿಗಳಲ್ಲಿ ಬೇಟೆಗಾಗಿ ಬರುವರು. ಈ ವರ್ಷ ಮಾರ್ಚ ಎಪ್ರಿಲ ತಿಂಗಳಲ್ಲಿಯೇ ಕಾಯದೆಭಂಗದ ಚಳವಳಿಯು ಪ್ರಾರಂಭವಾದ್ದರಿಂದ, ಸಾಹೇಬರ ಬೇಟೆಯ ಎರಡು ಪ್ರವಾಸಗಳು ರಹಿತವಾದವು. ಅದೇ ವೇಳೆಯಲ್ಲಿ ಧಾರವಾಡದಲ್ಲಾಗಬೇಕಾಗಿದ್ದ ಕರ್ನಾಟಕ ಸ್ಟ್ಯಾಟುಟ ರ್ಯಾಲಿಯೂ ಬಂದಾಗಿ ಸಾಹೇಬರು ಧಾರವಾಡಕ್ಕೆ ಬರುವದೂ ನಿಂತು ಹೋಯಿತು. ಈ ಪ್ರಕಾರ ಕಾಯದೆಭಂಗವು ಬೇಸಿಗೆಯ ಕಾರ್ಯಕ್ರಮದ ಆರಂಭಂಗ ಮಾಡಿತು.

ಸಾಹೇಬರು ಬೇಸಿಗೆ ತೀರಿಸಿಕೊಂಡು, ಮಳೆಗಾಲದ ದೆಸೆಯಿಂದ ಪುಣೆ ಪಟ್ಟಣವಾಸಿಯಾದರು. ಆದರೆ ಅಲ್ಲಿ ಎಷ್ಟೂ ಆರಾಮ-ವಿರಾಮವಿರಲಿಲ್ಲ. ಮುಂಬಯಿಯಲ್ಲಿದ್ದ ಕಾಯದೆಭಂಗದ ಉರಿಯು ಅವರನ್ನು ಮೇಲಿಂದ ಮೇಲೆ ಮುಂಬಯಿಗೆ ಹೋಗುವಂತೆ ಮಾಡಿತು. ಸೊಲ್ಲಾಪೂರದ ದಂಗೆ, ಲಷ್ಕರೀ ಕಾಯದೆಯು ಚಿಂತಾಜನಕವಾಗಿ, ಅವರನ್ನು ಹೆಚ್ಚು ಚಿಂತೆಗೆ ಗುರಿಮಾಡಿತು. ಸಾಹೇಬರು ಪುಣೆಯಲ್ಲಿರುವಾಗ, ಊರಲ್ಲಿ ಅನೇಕ ಸಮಾರಂಭಗಳಾಗುವ ಅವುಗಳಲ್ಲಿ ಅಧ್ಯಕ್ಷಸ್ಥಾನವು ಇವರಿಗೇ ದೊರೆಯುವದು. ಆದರೆ ಈ ವರ್ಷ ಸಾಹೇಬರು ಫ್ರೇಶ್ವಿಯರ ಪುಣೆಯಲ್ಲಿ ಬರುವಂಥ ಒಂದೂ ಸಮಾರಂಭವಾಗಲಿಲ್ಲ. ಏಕೆಂದರೆ. ಸಮಾರಂಭವಾಡಿ, ಸಾಹೇಬರನ್ನು ಕರೆಸುವ ಎದೆಗಾರಿಕೆಯು ರಾಜನಿಷ್ಠ, ಮರಾಠಾ, ಬ್ರಾಹ್ಮಣ, ಬ್ರಾಹ್ಮಣೇತರ ಮುಂತಾದ ವರಲ್ಲಿರಲೇ ಇಲ್ಲ. ಎಲ್ಲಾದರೂ ಒಂದೆರಡು ಸಮಾರಂಭಗಳಾಗಿದ್ದರೆ- ಎಲ್ಲಿನವನ್ನೆ ಸಾಹೇಬರ ಖಡಕೆಯಲ್ಲಿಯೇ ಆದವು. ಹೀಗೆ ಪುಣೆಯ ವಾಸವು ಸುಖ ಮತ್ತು ಸಮಾಧಾನದ್ದಾಗಲಿಲ್ಲ.

ಸಾಹೇಬರು ಚಳಿಗಾಲದ ದೆಸೆಯಿಂದ ಮುಂಬಯಿಗೆ ಹೋದರು. ಅಲ್ಲಿ ಕಾಯದೆಭಂಗದ ಉರಿಯೇ ದಶದಿಕ್ಕುಗಳನ್ನು ವ್ಯಾಪಿಸಿರುತ್ತದೆ. ಇಂಗ್ಲಂಡದಿಂದ ಅಮೇರಿಕೆಯು ಸ್ವತಂತ್ರವಾಗುವಾಗ, ಬೋಸ್ಟನದಲ್ಲಿಯೇ ರಣಾಗ್ನಿ ಹಿಡಿಯಲ್ಪಟ್ಟಿತು. ಇಂಗ್ಲೀಷ ಜಹಾಜನ್ನು ಕೂಲಿಕಾರರು ಸಮುದ್ರದಲ್ಲಿ ಚಲ್ಲಿ ಯುದ್ಧ ಪ್ರಾರಂಭವಾಡಿದರು. ಇಂದು ಮುಂಬಯಿಯು ಹಿಂದುಸ್ಥಾನದ ಬೋಸ್ಟನ್ನವಾಗಿರುತ್ತದೆ. ಅಂಥ ಮುಂಬಯಿಯಲ್ಲಿ ಸಾಹೇಬರು ನಾಲ್ಕು ತಿಂಗಳು ಕಳೆಯಬೇಕಾಗಿದೆ. ದಿನಾಲು ಊರ ತುಂಬ ಸಿಳಿಟಿಂಗ, ದಿನಾಲು ಕಾಂಗ್ರೆಸ ಕಮ್ಯೀಟಿಗಳ ಜನನ ಮರಣ, ದಿನಾಲು ದಸ್ತಗಿರಿ, ಶಿಕ್ಷೆ, ಇವನ್ನೆಲ್ಲ ಕಣ್ಣಾರೆ ನೋಡುವಂತಾಗಿದೆ. ಗವರ್ನರ ಸಾಹೇಬರು ಬಂದರೆ- ಅವರನ್ನು ದೊಡ್ಡ ದೊಡ್ಡ ಜನರೆಂಬುವರು ಕಾಣಲಿಕ್ಕೆ ಹೋಗುವರು. ಅವರ ಉಗುಳನ್ನು ದಾಟಿಬಾರ್ದೆಂದು ಆ ಮಹನೀಯರು ಅವರು ಹೇಳಿದ ಮಾತಿಗೆ ಶದ್ಧಾಸ್ತು ಎನ್ನುವರು. ಆ ಕಾಲವು ಇಂದು ನಿಃಸಂಶಯವಾಗಿ ಹಿಂದಾಯಿತು. ಅಜ್ಜದ ವೈದ್ಯಾಸಿನಲ್ಲಿ ಇನ್ನೂರು-ಮುನ್ನೂರು ಜನರ ತಲೆಯೇಣಿದು, ಸ್ತ್ರೀಯರ ಮಾನಭಂಗ ಮಾಡಿ, ಪಂಚಮಹಾಪಾತಕ ಮಾಡಿದಂಥ ಕೃತ್ಯದ ನಿಷ್ಠೇದ್ಧವನ್ನು ಇಥೇ ಮುಂಬಯಿಯೇ ಮಾಡುತ್ತಿರುವದು. ಸರ ಲಲುಭಾಯಿ ಸಾಮಲದಾಸರು ಪ್ರಖ್ಯಾತ ಸಹಕಾರಿಗಳು. ಇವರು ಈಗ ಕಲ್ಕತ್ತೆಯಲ್ಲಿದ್ದಾರೆ. ತರೀಕ್ಷಣಗೆ ಸಭೆಯಾಡಿಸಲು ಕಳಿಸುವ ವಿನಂತಿ ಅರ್ಜಿಯ ಮೇಲೆ ತಮ್ಮ ಸಹಿಯನ್ನು ಹಾಕಬೇಕೆಂದು ಇವರು ಕಲಕತ್ತೆಯಿಂದಲೇ ಕಾರು ಮಾಡಿದ್ದಾರೆ. ಇದೊಂದೇ ಸಂಗತಿಯಿಂದ ಮುಂಬಯಿಯಲ್ಲಿ ದಟ್ಟಾಳಿಕೆಯ ವಿರುದ್ಧ ಲೋಕಮತವು ಎಷ್ಟು ಸಂತಪ್ತವಾಗಿದೆಂಬದು ಸಾಹೇಬರಿಗೆ ಅನುಕೂಲ ವಾತಾವರಣವೇ ಇಲ್ಲೆಂದೂ ಸ್ಪಷ್ಟವಾಗುತ್ತದೆ. ಸುತ್ತಲು ಹಬ್ಬಿರುವ ಉರಿಯು ಸಾಹೇಬರ ಚಳಿಯನ್ನು ಬಹುಪಾಲಿಗಿ ಕಳೆದು, ಅವರಿಗೆ ಚಳಿಗಾಲವೇ ಅನಿಸಲಾರದು. ಅರ್ಥಾತ ಕಿರೀಟವು ಮುಳ್ಳಿನದಾಗಿರುತ್ತದೆಂದು ಇಂಗ್ಲಿಷದಲ್ಲೊಂದು ಗಾದೆಯುಂಟು. ಅದರ ನಿತ್ಯ ಅನುಭವವು ಸಾಹೇಬರು ಮುಂಬಯಿಯಲ್ಲಿ ಬರುವದಾದರೇನಾಶ್ಚರ್ಯ!!

ಗವರ್ನರ್ ಸಾಹೇಬರಿಗೆ ವಿರುದ್ಧವಾಗಿ ಸ್ಲೇಟರ ಸಾಹೇಬರ ಮತ

ಗವರ್ನರೆಂಬ ಸಾಹೇಬರು ಇಂಗ್ಲಂಡದ ಹೊರ್ಸ ಹಿಂದುಸ್ಥಾನಕ್ಕೆ ಗತಿಯೇ ಇಲ್ಲೆಂದು ಬರೆದ ಲೇಖದ ಮುಖ್ಯಾಂಶಗಳನ್ನು ನಿನ್ನೆ ನಂಬಿಕೆಯಲ್ಲಿ ಬರೆದಿರುತ್ತೇವೆ. ಅವರಿಗೆ ಉತ್ತರವನ್ನು ಮಂತ್ರಿ ಗಿಲ್ಬರ್ಟ ಸ್ಲೇಟರರೆಂಬಸಾಹೇಬರು ಒಂದು ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ. ಇವರನ್ನುವದೇನಂದರೆ-

೧ ಇಂದೂ ದೇಶಿಯರು ತಮ್ಮ ಬದಲಾಗಿ ನಾವು ಹಿಂದುಸ್ಥಾನವನ್ನು ಆಳಬೇಕೆಂದು ಅಪೇಕ್ಷಿಸಿದ್ದರಿಂದ, ನಾವು ಹಿಂದುಸ್ಥಾನದಲ್ಲಿ ಅರಸು ಕುಲದವರಾಗಿದ್ದೇವೆ.

೨ ಸ್ವದೇಶದ ಬಗ್ಗೆ ರಾಷ್ಟ್ರೀಯ ಭಾವನಾಪ್ರೇರಿತರಾದ ಶಾಲೆ ಕಾಲೇಜಗಳಲ್ಲೋದುವ ಸಾವಿರಾರು ವಿದ್ಯಾರ್ಥಿಗಳ ಸಹಾಯದಿಂದಲೇ ನಾವು ಹಿಂದುಸ್ಥಾನದಲ್ಲಿ ದೊರೆತನ ಮಾಡುತ್ತೇವೆಂಬದನ್ನು ಮರಯಲಾಗದು.

೩ ಇಂಗ್ರೇಜಿ ಅಡಳತೆ ಬೇಡಾಯಿತೆಂದರೆ- ಬಹಳ ತುಸು ಜನರು ಇಂಗ್ರೆಜಿ ಚಕ್ರದಲ್ಲಿ ಉಳುಕು ಹಾಕಿ, ಅದು ಮುಂದೆ ನಾಗದಷ್ಟು ಕಾಪಾಡ್ಯಾಯಿಕ ಮಾಡಬಹುದು.

೪ ೪೦ ಲಕ್ಷ ಜನಸಂಖ್ಯೆಯುಳ್ಳ ಆಯರ್ಲಂಡವನ್ನೇ ಹಿಡಿಯಲಾರದ ನಾವು ೩೨ ಕೋಟಿ ಜನರುಳ್ಳ ಹಿಂದುಸ್ಥಾನವನ್ನು ಹಿಡಿಯುವದು ಶಕ್ಯವೇ?

೫ ಸದ್ಯ ಹಿಂದುಸ್ಥಾನದಿಂದ ನಮ್ಮನ್ನು ಹೊರಗೆ ಹಾಕಬೇಕೆಂದವರು ನೂರರಲ್ಲಿ ಪುನ ೩ ನೂರಕ್ಕೆ ಒಬ್ಬರಾಗಿದ್ದಾರೆ. ಅವರು ಮೂವತ್ತು ಸಾವಿರ ಜನರಾಗಿ ನಮಗೆ ಎಷ್ಟೋ ತೊಂದರೆ ಕೊಡುತ್ತಿದ್ದಾರೆ. ಈ ಸಂಖ್ಯೆಯು ನೂರಕ್ಕೆ ಒಂದಾಗಿ ೩೨ ಲಕ್ಷವಾಯಿತೆಂದರೆ- ಏನಾಗುವದೆಂಬದನ್ನು ತಿಳಿದು ನೋಡಬೇಕಾದ್ದು.

ಬಹು ಸಂಖ್ಯಾಕರು ಕೇಳಿದಂತೆ, ಅವರ ಅಪೇಕ್ಷಾನುಸಾರವಾಗಿ ನಾವು ನಡೆಯಬಹುದಾಗಿದ್ದೇ

ಹಿಂದೂ ಜನರಿಗೆ ನೀವು ಸ್ವತಂತ್ರರಾಗಿದ್ದೀರೆಂದು ಮನವಟ್ಟು ಮಾಡಿಕೊಟ್ಟೇ ನಾವು ಅಲ್ಲಿಂದೇಕಾಗಿರುತ್ತೇವೆ.

ಅಲ್ಲಾಬಾದಿನಲ್ಲಿ ಕಾಂಗ್ರೆಸದವರು ಗೆದ್ದರು.

—(o)—

ಪಂಡಿತ ಜವಾಹರಲಾಲರನ್ನು ಶುರಂಗಕ್ಕೆ ಕಳಿಸಿದ್ದರ ನಿಷೇಧ ಮತ್ತು ಲೋಕ ಜಾಗೃತಿಯ ನಿದರ್ಶಕವೆಂದು ಜವಾಹರಲಾಲ ಸಪ್ತಾಹವನ್ನು ಪ್ರಾರಂಭಿಸಿದರು. ಪಂಡಿತ ಜವಾಹರಲಾಲ ಮತ್ತು ಪಂಡಿತ ಮದನಮೋಹನ ಮಾಲವಿಯಾ ಇವರು ಪಟ್ಟಣದ ಮುಖಂಡರಾಗಿದ್ದಾರೆ. ಇಬ್ಬರೂ ಶುರಂಗ ವಾಸಿಯಾದ್ದರಿಂದ ಈ ಸಪ್ತಾಹದಲ್ಲಿ ಊರೇ ತೊಡಗಿತು. ಸೋಮವಾರದ ದಿವಸ ಹೊಂಟ ಮೆರವಣಿಗೆಯು ಅದ್ಭುತ ಮತ್ತು ಅಪೂರ್ವವಾಗಿತ್ತು. ಜಡ್ಡಿನಿಂದ ತೀರ ಅಶಕ್ತರಾಗಿದ್ದರೂ, ಪಂಡಿತ ಮೋತಿಲಾಲರು ಪತ್ನಿ ಸಹಿತವಾಗಿ ಬಂದು, ಇದಕ್ಕೆ ತಮ್ಮ ಸ್ಥಾನ ಭೂತಿಯುಂಟೆಂದು ತೋರಿಸಿದರು. ತೋರಿಸಿದ ಸ್ಥಳವು ಒಳ್ಳೇ ಗಡಚಿನದಾಗಿತ್ತು. ಮೆರವಣಿಗೆಯು ದಂಡಿನ ಭಾಗದಲ್ಲಿ ಸರ ತೇಜಬಹಾದ್ದೂರ ಸಪ್ರುಸಾಕೇಬರ ಮನೆಯ ತನಕ ಬಂತು. ಅಲ್ಲಿ ಕಲೆಕ್ಟರ, ಪೋ|| ಸುಪ|| ಮತ್ತು ಬೇರೆ ಅಮಲದಾರರು ನೂರಾರು ಲಾಠೀ ಸಿಪಾಯರೊಂದಿಗೆ ನಿಂತುಕೊಂಡು, ಮೆರವಣಿಗೆಯು ಮುಂದೆ ಹೋಗಬಾರದೆಂದು ೧೪೪ ನೆಯ ಕಲಮಿನ ನೋಟೀಸು ಕುದಿ ಹೇಳಿದರು. ಕೂಡಲೆ ಜನರು ನಿಂತಲ್ಲಿಯೇ ನಿಂತರು. ಈ ವರ್ತಮಾನ ಕೇಳಿ, ಉಸಿರುಕುಂಬ ಜಳವಳಿಯುಂಟಾಗಿ, ಜನರ ಪ್ರಚಂಡ ಸ್ತೋಮವು ಅತ್ತಕಡೆಗೆ ಬಂತು. ಪಂಡಿತ ಮಾಲವಿಯಾಯವರ ಪತ್ನಿಯವರೂ ಬಂದರು. ಜವಾಹರಲಾಲರ ಪತ್ನಿಯವರು ಮೆರವಣಿಗೆಯಲ್ಲಿ ಪ್ರಮುಖ ಭಾಗ ತಕ್ಕೊಂಡಿದ್ದರು. ಇವರು ಬಂದವರ ಸ್ವಾಗತ ಮಾಡಿದರು ಬಹಳ ಗದ್ದಲವಾದದ್ದನ್ನು ಕಂಡು, ನೋಡಲಿಕ್ಕೆ ಒಂದವರ ಹಾಗು ಮೆರವಣಿಗೆಯವರ ನಡುವೆ ಅಂತರ ಬಿಟ್ಟು, ಪೋಲಿಸರು ಮೆರವಣಿಗೆಯವರ ಸುತ್ತಲು ಹಗ್ಗ ಹಾಕಿದರು. ಇದನ್ನು ಕಂಡು ಜನರು ಸತ್ಯಾಗ್ರಹ ಮಾಡಿ, ನೆಲವಿಡಿದು ಕೂತರು. ಸಾಯಂಕಾಲದ ನಾಲ್ಕುಗಂಟೆಯಿಂದ, ರಾತ್ರಿ ಹತ್ತರ ತನಕ ಎರಡೂ ಬಣಗಳು ಉರ್ಷೆಯಲ್ಲಿದ್ದವು. ಹತ್ತು ಹೊಡೆದ ನಂತರ ಸರಕಾರದವರು ಪೋಲಿಸರೊಂದಿಗೆ ಹೊಡೆಟುಹೋದರು ಕೂಡಲೆ ೧೪೪ ಕಲಮು ಮೃತ್ಯು ಹೊಂದಿತು. ಮೆರವಣಿಗೆಯು ಮುಂದೆ ಸಾಗಿ ತನ್ನ ಉದ್ದಿಷ್ಟವನ್ನು ಪೂರ್ಣಮಾಡಿಕೊಂಡಿತು. ಮೆರವಣಿಗೆಯಲ್ಲಿ ಸುತ್ತಿನ ಅನೇಕ ಬಂಡಿಗಳನ್ನು ತಂದಿದ್ದರು. ಎಳ್ಳುಗಳನ್ನು ಬಹುಮಾಗಿ ಶೃಂಗರಿಸಿದ್ದರು. ಒಂದು ಬಂಡಿಯಲ್ಲಿ ಸ್ವದೇಶಿ ವಸ್ತ್ರಗಳನ್ನು ಹೇರಿದ್ದರು. ಕೆಲವರ ಇಬ್ಬರಿಗೆ ಪರದೇಶಿ ಅರಿವೆಗೆ ಬಹಿಷ್ಕಾರ ಹಾಕಿರಿ; ಶರ್ಟ ಕುಶಿಯುಬೇಡಿರೆಂಬ ಬೋರ್ಡು ಹಚ್ಚಿದ್ದರು. ಪಂಡಿತ ಜವಾಹರಲಾಲರು ಶುರಂಗದಲ್ಲಿದ್ದದ್ದರ ದೃಶ್ಯ ತೋರಿಸಿದ್ದರು. ರಾಷ್ಟ್ರೀಯ ನಿಶಾನೆಯು ಗಗನ ಮಂಡಲ ವ್ಯಾಪಿಸಿ, ಅದರ ಜಯಜಯಕಾರವಾಗಲೆಂದಿದ್ದರು. ಇನ್ನು ಕೆಲವದರ ಮೇಲೆ ಮನುಷ್ಯಗಣತಿಗೆ ಬಹಿಷ್ಕಾರ ಹಾಕಿರೆಂದಿದ್ದರು. ಇನ್ನು ಕೆಲವು ಒಂಡಿಗಳಲ್ಲಿ ಭಾರತಮಾತೆಯು ಗುಲಾಮದನ್ನೂ, ಪೋಲಿಸ ಮತ್ತು ಜನರಲ ಡಾಯರನ ಚಿತ್ರಗಳನ್ನೂ ತೆಗೆದಿದ್ದರು.

ಧಾರವಾಡದಿಂದ ಬಳ್ಳಾರಿಗೆ ಹೋದ ಸ್ವಯಂಸೇವಕರಿಗೆ ಪೋಲಿಸರು ಕೊಟ್ಟ ಎದ್ದಲಗಾಟ.

—o*o—

ಹಾವೇರಿಯ ಈವರು ಸ್ವಯಂಸೇವಕರು ಧಾರವಾಡ ಕಾಂಗ್ರೆಸ ಕಮೇಟಿಯ ಅಪ್ಪಣೆಯ ಮೇರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಾರ ಕಾರ್ಯಕ್ಕೆ ಹೋದರು. ಇವರು ಹೊಸಪೇಟೆ, ಹರಪನಹಳ್ಳಿ, ಕುಡತಣಿ ಮುಂತಾದ ಸ್ಥಳಗಳಲ್ಲಿ ತಮ್ಮ ಕಾರ್ಯ ತೀರಿಸಿಕೊಂಡು ರೇಲಿನಿಂದ ಬಳ್ಳಾರಿಗೆ ಹೋದರು. ಪೋಲಿಸರು ಇವರನ್ನು ಸ್ಟೇಶನದಲ್ಲಿಳಿಯಗೊಟ್ಟರೂ ಊರೊಳಗೆ ಹೋಗಗೊಡಲಿಲ್ಲ. ಇಷ್ಟೇ ಅಲ್ಲದೆ, ಇವರ ಹತ್ತರವಿದ್ದ ರೂಪಾಯಿ ನಾಣ್ಯ ಕಸಕೊಂಡು ದರಿದ್ರನಾರಾಯಣ ಮಾಡಿ, ತಿರಿಗಿ ಹೊಸಪೇಟೆಗೆ ಅಟ್ಟಿದರು. ಹೊಸಪೇಟೆಯವರು ಇವರನ್ನು ಸರವನಸಳ್ಳಿಯ ತನಕ ಮೋಟಾರ ವೆಚ್ಚ ಕಳಿಸಿದರು. ಅಲ್ಲಿಂದ ಇವರು ಒಳದಾರಿಯಿಂದ ಹಾವೇರಿಗೆ ಹೋದರೆಂದು ಬಳ್ಳಾರಿಯಿಂದ ಬಂದ ಸತ್ರದ ಸಾರಾಂಶವಾಗಿರುತ್ತದೆ.

ಕರ್ಣಾಟಕ ಕಾಂಗ್ರೆಸ ಭಕ್ತರಿಗೆ ಜೆದರಿಕೆ

—(o)—

ವಿಜಾಪೂರ ಜಿಲ್ಲೆಗೆ ಸೇರಿದ ಕೆರೂರ ಗ್ರಾಮದಲ್ಲಿ ಕಾಯದೇಭಂಗ ಮತ್ತು ಜಂಗಲ ಸತ್ಯಾಗ್ರಹದ ಕೋಲಾಹಲವು ಬಹಳವಾಗಿರುವದರಿಂದ, ಸರಕಾರದವರು ಈ ಊರಿಗೆ ಏನಾದರೂ ಹೆದರಿಕೆ ಕೂಡ್ರಿಸಬೇಕೆಂದು ಆಲೋಚಿಸಿದ್ದಾರೆ. ಸ್ವತಃ ಪೋಲಿಸನಾಹೇಬರು ಅಲ್ಲಿಗೆ ಹೋಗಿ, ನೀವು ಜಳವಳಿಯನ್ನು ನಿಲ್ಲಿಸದಿದ್ದರೆ ಪರೀಕ್ಷಾ ಪೋಲಿಸರನ್ನು ಕೂಡಿಸಿ, ನಿಮ್ಮ ಮಗ್ಗಲು ಮುರಿಯುವೆವೆಂಬ ಭಯ ಹಾಕಿದ್ದಾರೆ.

ಮುಂಬಯಿ ಕೌನ್ಸಿಲ ಹಾಲಿನ ಮೇಲೆ ರಾಷ್ಟ್ರೀಯ ನಿಶಾನೆ.

ಬಹಾಗಿಲಕ್ಕೆ ಕಾಂಗ್ರೆಸ ಬೋರ್ಡು.

—o*o—

ಮುಂಬಯಿಯಲ್ಲಿ ಕಾಯದೆ ಕೌನ್ಸಿಲ ಸಭೆಯು ಕೂಡುವ ಕಟ್ಟಡದ ಮೇಲೆ ಮೊನ್ನೆ ಬೆಳಗಾದ ಕೂಡಲೆ, ರಾಷ್ಟ್ರೀಯ ನಿಶಾನೆ ಹಚ್ಚಿದ್ದು ಕಂಡು ಒಂದು ಹಾಲಿನ ಬಾಗಿಲಕ್ಕೆ ಹೋಗಿ ನೋಡುವಾಗ, ಕಾಂಗ್ರೆಸ ಕಮೆಟಿಯ ಬೋರ್ಡು ಇತ್ತು. ಇದು ಪ್ರಜಾಪಕ್ಷದವರ ಆಟವೆಂದೇಂದು ಜನರ ತರ್ಕವುಂಟು. ಪೋಲೀಸರು ಬೋರ್ಡ ಮತ್ತು ನಿಶಾನೆಯನ್ನು ಜಪ್ತ ಮಾಡಿದರು.

ಪಿಕೆಟಿಂಗದ ದೆಸೆಯಿಂದ ೪೩ ಸ್ತ್ರೀಯರ ದಸ್ತಗಿರಿಯು.

—(o)—

ಮುಂಬಯಿಯಲ್ಲಿ ವಿಲಾಯತಿಯ ಜವಳೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿದ್ದ ೪೩ ಸ್ತ್ರೀಯರನ್ನು ಪೋಲಿಸರು ಮೊನ್ನಿನ ದಿವಸ ಹಿಡಿದರು. ಇವರಲ್ಲಿ ಶ್ರೀ ಪ.ಸುಭಾಯಿರೆಂಬ ಪಾಲಿಸಿಟರರ ಪತ್ನಿಯೂ ಒಬ್ಬಳಾಗಿದ್ದಾಳೆ. ಪೋಲಿಸರ ಈ ದಸ್ತಗಿರಿಯ ನಿಷೇಧವೆಂದು ಅನೇಕ ಅಂಗಡಿಕಾರರು ಅಂಗಡಿಗಳನ್ನು ಬಂದು ಮಾಡಿ, ಸತ್ಕ್ರಿಯ ನಿಷೇಧಪನ್ನು ವ್ಯಕ್ತಪಡಿಸಿದರು.

ಲಾರ್ಡ ಆರ್ವಿನಸಾಹೇಬರ ಪಿಕೆಟಿಂಗವು ಬೇಕಾಯಿದೆತೀರ್ದೆಂಬ ದಬ್ಬಾಳಿಕೆಯ ಪ್ರಕಾರ ಕೊಡುವ ಶಿಕ್ಷೆಯಲ್ಲಿ ಪಟಕೆಯು ಬರುವದಿಲ್ಲ; ಶಿಕ್ಷತ್ತೆಯಲ್ಲಿ ಯಾರಿಗೂ ಪಟಕೆ ಹೊಡೆಯಗೊಡುವದಿಲ್ಲೆಂದು ಅಲ್ಲಿಯ ಮುಖ್ಯ ಮ್ಯಾಜಿಸ್ಟ್ರೇಟರು ಜಾಹೀರವಾಡಿದ್ದಾರೆ.

ಬಂಗಾಲದಲ್ಲಿ ಅಕ್ಕಿಯು ಬಹಳ ಅಗ್ಗವಾಯಿತು

—(o)—

ಬಂಗಾಲದಲ್ಲಿ ಅಕ್ಕಿಯು ಬಹಳವಾಗಿ ಬೆಳೆಯುತ್ತಿದೆ. ಬೆಳೆದಷ್ಟೆ ಅದು ಸಂಸ್ಥಳಕ್ಕೆ ಹೋಗುತ್ತಿತ್ತು. ಆದರೆ ಇದು ಈ ಸಾರೆ ನಿಂತು ಹೋದ್ದರಿಂದ ಬಹಳ ಅಗ್ಗವಾಗಿದೆ. ನಾಂಗರಾ ಎಂಬ ಜಾತಿಯ ಅಕ್ಕಿಯು ಅತ್ಯುತ್ತಮವಾದದ್ದು ಮಣಕ್ಕೆ ಹತ್ತು ರೂಪಾಯಿ ಇದ್ದದ್ದು ನಾಲ್ಕು ರೂಪಾಯಿ ಆಗಿದೆ.

ಧಾರವಾಡದಲ್ಲಿ! ಶಿಕ್ಷೆ ವಿಜಾಪೂರದಲ್ಲಿ!!

ಕಾರಣ ಹತ್ತನೇ ತಾರೀಖು

ಶಿಕ್ಷೆ ನಾಲ್ಕನೇ ತಾರೀಖು

—(o)—

ವರ್ತಮಾನಪತ್ರಗಳ ಉಲ್ಲೇಖ ಸುದ್ದಿಗಾರರು ಎತ್ತು ಮುಂದೋಡುತ್ತಾರೆಂದರ ಒಂದು ಉದಾಹರಣೆಯು ಜ್ಞಾನಪ್ರಕಾಶದಲ್ಲಿ ನೋಡಲಿಕ್ಕೆ ದೊರೆಯುವದು. ಶ್ರೀ. ಭಿಸೆಯವರ ಮೇಲೆ ಗುಳೇದಗುಡ್ಡ ಮತ್ತು ವಿಜಾಪೂರದಲ್ಲಿ ಭಾಷಣ ಮಾಡಿದ ಬಗ್ಗೆ ವಿಜಾಪೂರದಿಂದ ಧಾರವಾಡಕ್ಕೆ ವಾರಂಟು ಒಂದು, ಅವರು ಸದ್ಯ ಜಾಮೀನದ ಮೇಲಿದ್ದಾರೆ ವಿಚಾರಣೆಯು ಹತ್ತನೆಯ ತಾರೀಖಿನ ದಿವಸವಿದ್ದುನಾಳೆನ ದಿವಸ ಇವರು ಅಲ್ಲಿಗೆ ಪ್ರಯಾಣ ಮಾಡುವರು. ಆದರೆ ಜ್ಞಾನಪ್ರಕಾಶದ ಧಾರವಾಡದ ಸುದ್ದಿಗಾರನು ಇವರಿಗ ಎರಡು ವರ್ಷ ಸಕ್ರಮ ಶಿಕ್ಷೆ ವಿಧಿಸಿ ಅದಕ್ಕೆ ಆಪ್ರಕಾರ ತಾರು ಕೊಟ್ಟು ಬಿಟ್ಟನು. ನಿಜ್ಯ ಮುದ್ರಾಲಯದಲ್ಲಿಯೇ ಶ್ರೀ ಭಿಸೆಯವರು ಈ ಸುದ್ದಿ ಓದಿ ಖೊಳ್ಳನೆ ನಕ್ಕರು. ವಾರಾಟಿಯಲ್ಲಿ ಹೇಳುವಂತೆ ಶ್ರೀ ಭಿಸೆಯವರ ಮೇಲಿನ ಇಡಾ ಪೀಡಾ ಟಳೋ, ಅಮಂಗಲ ಪಳೋ ಎಂದು ಹರಿಸುತ್ತೇವೆ.

ಪಂಡಿತ ಜವಾಹರಲಾಲ ಶಿಕ್ಷೆಯ ಸಾರ್ವತ್ರಿಕ ನಿಷೇಧ.

—(o)—

ಇದೇ ತಿಂಗಳ ೧೬ನೆಯ ತಾರೀಖು ಆದಿತ್ಯವಾರದ ದಿವಸ ಹಿಂದುಸ್ಥಾನದ ಶುಂಬ ಪ್ರತಿಯೊಂದು ಪಟ್ಟಣ ಮತ್ತು ಖೆಡ್ಡಿಯಲ್ಲಿ ಪಂಡಿತ ಜವಾಹರಲಾಲರಿಗೆ ಶಿಕ್ಷೆಯಾದ್ದರ ಜಾಹೀರ ನಿಷೇಧ ಮಾಡುವ ಸಭೆಯಾಗಬೇಕು. ಮತ್ತು ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗಬೇಕೆಂಬ ಅವರ ಸಂದೇಶವನ್ನು ಸಭೆಯಲ್ಲಿ ಜಾಹೀರ ರೀತಿಯಿಂದ ಓದಬೇಕು. ಮತ್ತು ಅದನ್ನು ಪ್ರತಿಯೊಬ್ಬರು ಉಚ್ಚರಿಸಬೇಕೆಂದು ಪಂಡಿತ ಮೋತಿಲಾಲರು ಜಾಹೀರ ಮಾಡಿದ್ದಾರೆ.

ಬೆಳಗಾವಿಯ ವಿಜಯನಗರವಲ್ಲಿ ಬಾಂಬು

—(o)—

ಕುರುಂದವಾಡದ ಮಾಧವಪೂರ(ವಡಗಾವಿ)ದ ಎರಡು ಸಾವಿರ ರೈತರು ಗ್ರಾಮತ್ಯಾಗ ಮಾಡಿದ್ದಾರೆ. ಕಾರಭಾರಿ ಶ್ರೀ. ರೇಶವಾಂಡೆಯವರು ಟಳಕವಾಡಿಯಲ್ಲಿರುತ್ತಿದ್ದು ಇವರ ಮನೆಯ ಹಿತ್ತಲದಲ್ಲಿ ಯಾರೋ ಬಾಂಬು ಹಾರಿಸಿದರೆಂದು ಪ್ರಸಿದ್ಧವಾಗಿದೆ.

ಚಟ್ಟೋಪಾಧ್ಯಾಯರಿಗೆ ಶಿಕ್ಷೆ

—(o)—

ಮುಂಬಯಿಯ ಡಿಕ್ಟೇಟರರಾದ ಶ್ರೀ. ಚಟ್ಟೋಪಾಧ್ಯಾಯರು ೫೦ ಸಾವಿರ ಜನರು ಕೂಡಿದ ಸಭೆಯಲ್ಲಿ ಬಂಧು ಭಗಿನಿಯರೇ ಎಂದು ಅನ್ನುವಷ್ಟರಲ್ಲಿ ಪೋಲೀಸರು ಇವರನ್ನು ದಸ್ತಗೀರ ಮಾಡಿದರು. ಮರುದಿವಸ ಮ್ಯಾಜಿಸ್ಟ್ರೇಟರು ಇವರಿಗೆ ಒಂದು ವರ್ಷದ ಸಕ್ರಮ ಶಿಕ್ಷೆ ವಿಧಿಸಿದರು. ಅಡ ಹೋಕೇಟ ಮಿ. ಬಾಬರೇಕರರು ಡಿಕ್ಟೇಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಸರದಾರ ಪಟೇಲ, ಡಾಕ್ಟರ ಹರ್ಡಿಕರ, ಜಯರಾಮ ದೌಲತರಾಮ ಮೊದಲಾದ ಕಾಂಗ್ರೆಸ ವರ್ಕಿಂಗ ಕಮೀಟಿಯ ಮೆಂಬರರು ಬಿಡುಗಡೆ ಹೊಂದಿದರು.

ನೋಟೀಸು

ರಾಯಾ ತಾಯಿ ಬುಳ್ಳವ್ವಾ ಮುಸೆಪ್ಪನವರ ಶಳವಾರ ಸಾಕೀನ ಗೋನಾಳ ತಾಲೂಕ ಗುಡಗೇರಿ ಈತನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ನಾಗವ್ವಾ ಕೋಮ ರಾಯಾ ಮುಸೆಪ್ಪನವರ ಸಾ|| ಅತ್ತಿಗೇರಿ ಅಥವಾ ಬುಳಲಕೊಪ್ಪ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನುದರೆ-

ನೀನು ನನ್ನ ಮದಿವೆಯ ಗಂಡನಿದ್ದು. ನಿನ್ನಿಂದ ಒಂದು ಹೆಣ್ಣು ಮಗುವಾಗಿದೆ ಅದು ಈಗ ಹತ್ತು ವರ್ಷದ್ದಾಗಿರುತ್ತದೆ ನೀನು ನನ್ನ ತವರ ಮನೆಯಲ್ಲಿದ್ದು ಮನೆಯ ಆಳಿಯತನದಿಂದ ಯಾವತ್ತು ಪ್ರಪಂಚ ಸಾಗಿಸಿಕೊಂಡು ಹೋಗಬೇಕೆಂದು ನನ್ನ ತಾಯಿಯು ನನ್ನನ್ನು ನಿನಗೆ ಮದಿವೆ ಮಾಡಿ ಕೊಟ್ಟಳು ಆದರೆ ನೀನು ಐಲೀಕಡೆಗೆ ಐದಾರು ವರ್ಷ ವಾಯಿತು ನನ್ನ ಮನ್ನೆ ಬಿಟ್ಟು ಹೊರಗೆ ಹೋದವನು, ತಿರುಗಿ ಬರಲೇಇಲ್ಲ ಮತ್ತು ನನ್ನನ್ನು ನಿನ್ನೂರಿಗೂ ಕರಕೊಂಡು ಹೋಗಲಿಲ್ಲ ನನ್ನ ತಾಯಿಯು ಇನ್ನೊಬ್ಬ ಮಗಳನ್ನು ಮದುವೆ ಮಾಡಿ ಕೊಟ್ಟು ನನ್ನನ್ನು ಮನೆ ಬಿಟ್ಟು ಹೊರಗೆ ಹಾಕಿದಳು ಆಗಿನಿಂದ ನಾನು ಹಾಗು ನನ್ನ ಮಗಳ ಸಂರ್ಗ್ಷಣೆಯ ದೆಶೆಯಿಂದ ಸಾವುಕಾರರಲ್ಲಿ ಸಾಲಮಾಡಿ ಹೊಟ್ಟೇ ಹೊರಕೊಂಡಿರುತ್ತೆನ ಈ ರಳಮು ೩೫೦ ರೂಪಾಯಿ ಆಗಿರುವದು ಮುಂದೆ ಸಾಲ ಹುಟ್ಟದಾದ್ದರಿಂದ ನಿನಗೆ ಈ ನೋಟೀಸು ಕೊಡುವ ಅಗತ್ಯ ವುಂಟಾಯಿತು ನೀನು ಈ ನೋಟೀಸು ಮುಟ್ಟದ ಎಂಟು ದಿವಸಗಳಲ್ಲಿ ಸದರ ಸಾಲಾ ತೀರಿಸಿ ನನ್ನನ್ನು ಕರಕೊಂಡು ಹೋಗಿ ಹಲೋರೀತಿಯಿಂದ ಪ್ರಪಂಚ ಮಾಡಿಕೊಂಡಿರಬೇಕು ಅದಕ್ಕೆ ತಪ್ಪಿದರೆ ನಿನ್ನ ಮನಸಿನಲ್ಲಿ ನನ್ನ ಕೂಡ ಪ್ರಪಂಚ ಮಾಡುವದಿರುವದಿಲ್ಲೆಂದು ತಿಳಿದು ನಾನು ಎರಡನೇಯ ವನನ್ನು ಉಡಿಕ ಮಾಡಿಕೊಂಡು ನಿರ್ವಾಹ ಸಾಗಿಸಿ ಕೊಳ್ಳುವೆನು ಮತ್ತು ಇಗಾದ ಸಾಲದ ಬಗ್ಗೆ ನಿನ್ನ ಮೇಲೆ ಕಾಯದೆಶೀರ ಇಲಾಜ ಮಾಡುವೆನು ಅಂತಾ ಕೊಟ್ಟ ನೋಡಚೀಟಿಯ ನೋಟೀಸು ಮತ್ತು ನಾನು ಉಡಿಕೆಯಾದಸಂತರ ನನ್ನ ಮೇಲೆ ಮತ್ತು ನನ್ನ ಉಡಿಕೆಯ ಗಂಡನಮೆಲೆ ನಿನ್ನ ಹಕ್ಕು ಬಿಲಕೂಲ ಉಳಿಯಲಾರದು ಈ ನೋಟೀಸಿನ ಪಜ್ಜ ನಿನ್ನ ಕಲೆಯಮೇಲದೆ ತಿಳಿಯುವದು

ತಾ||೨-೧೨-೧೯೩೦ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ನಾಗವ್ವಾ ಕೋಮ ರಾಯಾ ಮುಸೆಪ್ಪನವರ ಈಕೆ ಕೈದು ಇರುತ್ತದೆ

ಧಾರವಾಡದಲ್ಲಿ ಅಂಗಡಿ ಮತ್ತು ಬಂಗಲೆಯ ಮಾರಾಟ

ಮು ನಂ. ೧೫೬೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟ ಜವಳಿ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕಿಲ್ಲೆದಲ್ಲಿ ಶ್ರೀ. ಹೆಬಳೀಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಭೆನರ್ಜಿ ಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಜೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ಚಂದಾದಾರರಿಗೆ ಸೂಚನೆ

ನವ್ಹೆಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರು ಹೆಸರಿನಿಂದ ಹ್ಯಿ. ಪಿ. ಯನ್ನು ಕಳಿಸುವೆವು. ಚಂದಾದಾರರು ಹ್ಯಿ.ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಈ ಪತ್ರವನ್ನು ಆಚಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾ ಜಾಯಾ ಬಾಳಾಜಾಯಾ ಹೊಸಕೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೮ನೇ ನವ್ಹೆಂಬರ ೧೯೩೦ (ಸಂಚಿಕೆ ೨೪೪

ಜಾತ್ರೆಗೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಹಾಡೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ಹಾಡೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಜಾತ್ರೆಗೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ಹಾಡಿ ಶ್ರೀ. ಸಿದ್ಧಾರೂಢ ಅಪೀಲ, ಶ್ರೀ. ಅರೂಢ ಸ್ವಾಮಿಗಳ ಕೈಫಿಯತ್ತು ಮತ್ತು ಮ. ನೇಪರಾದ ಶ್ರೀ. ಸದಾಂಶ ಇವರ ತೀರ್ಪು ಕೊಡಲ್ಪಟ್ಟಿರ ಮತ್ತ ದಾವಿ, ಸ ತಿವಾದಿ. ಹಾಗು ಮ ನೇಪರ ಬಾಯಿತಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಜಾತ್ರೆಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನ ತೆಗೆಸಿದೆ. ಜಾತ್ರೆಯ ಮಹತ್ವದ ದೃಷ್ಟಿಯಿಂದ ಇನ್ನು ಪ್ರತಿಗಳು ತೀರಿ ತುಸುವೆನಿಸುವವು. ಆದರಿಂದ ಗ್ರಾಹಕರು ಶೀಘ್ರ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೇಡೂ ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನ ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ಲಿಬ್ಬಿಸುವವರು ೧/೪ ಹಣವನ್ನ ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸರ್ವಾಂಗ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೆದು ರೂ ಯ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಜಸ್ಸಿನ ಪ್ರಕಾರ ತಿಂಗಳಾ ಕಸಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ಕಿಕೀಟು ಕಳಿಸಬೇಕು.

ಆರ್. ಬಿ. ಮಂಥೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂದಿಗಯ ಎಂಟು ಲಕ್ಷದ ಮೇಲುಂಟು. ಚಳಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ಹರದ ಡಿನಾಜಿಟಗಳಿಗೆ ಜಾಸ್ತಿಗಿ ಬಡ್ಡಿ ಕೊಡಲಾಯಿವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕಿಂಗ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಅಡ್ಡೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೩-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ. ವಿಜಯ. ಧಾರವಾಡ.

ವಿಜಯ.

ಚಾಳುಕ್ಯವಿಕ್ರಮ ವರ್ಷ ೮೫೫ ಕಾರ್ತೀಕ ಸದ್ಯ ೨

ಕರ್ನಾಟಕಸ್ಥರಿಗೆ ಭಿನ್ನಹ.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದನ್ನರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುವದು. ದರವನ್ನು ಸಮಜಾಯಿಸಿ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೮-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ.

ವಿಜಯ.

ಶುಭಕೃನಿಕ್ರಮವರ್ಷ ಭಾದ್ರ ಮಾಸ ೧೮ ಶುಕ್ರವಾರ

ರಾವುಂಡ ಟೇಬಲಕ್ಕೆ ಕೆಲ ಮಟ್ಟಿಗೆ ಕಳೆಯೇರಿತು.

ಜಾದಶಹರ ಭಾಷಣ, ಮುಖ್ಯ ಮಂತ್ರಿಯವರ ಆಡಳ ಮೇಲಿನ ಭಾಷ್ಯ ಮತ್ತು ಲಾರ್ಡ ಆಯರ್ವಿನಸಾಹೇಬರ ಭಾವೀ ಜವಾಬದಾರ ರಾಜ್ಯ ಪದ್ಧತಿಯ ಮೇಲಿನ ತಂತ್ರಸಾರ ಇವುಗಳಿಂದ ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯ ದೊರೆಯುವ ಆಕೆಯಿಲ್ಲವಾದ್ದರಿಂದ, ನೀವು ಸ್ವದೇಶದ ದಾರೀ ಹಿಡಿಯಿರೆಂದು ಶ್ರೀ. ಕೇಳಕರ ಮತ್ತು ಶ್ರೀ. ಛಾಬ್ಲಜಿ ನಾರಾಯಣಜಿಯವರು ಬ್ಯಾರಿಸ್ಟರ ಜಯಕರರಿಗೆ ತಾಕೀದ ಕಳಿಸಿದಾಗ, ಲಂಡನದಲ್ಲಿ ರಾವುಂಡ ಟೇಬಲಕ್ಕೆ ಕೆಲಮಟ್ಟಿಗೆ ಕಳೆಯೇರಿದಂತೆ ತಾರಿನ ವರ್ತಮಾನ ಬಂದಿದೆ.

ಸೋಮವಾರ ಪ್ರಾತಃಕಾಲದಲ್ಲಿ ಟೇಬಲಿನ ಮುಂದೆ ಮುಖ್ಯ ವಿಷಯ ಸ್ವಾರಂಭವಾಯಿತು. ಎಲ್ಲಾ ಮೆಂಬರರು ಸೇರಿದ್ದರು. ಗದಗುಟ್ಟಿ ನಡುಗುವಂಥ ಜಳಿಯು. ಒಂದು ಮಗ್ಗಲಿಗೆ ಅಗ್ನಿಪ್ರಿಗೆ ಹೊತ್ತಿಸಿದ್ದರು. ವಿದ್ಯುತ್ತಿನ ದೀಪಗಳ ಕೃತ್ರಿಮ ಕಾವನ್ನುಂಟು ಮಾಡಿದರು. ಹಿಂದೀ ಮೆಂಬರರು ಉಣ್ಣೆಯ ದಪ್ಪವಾದ ಉದ್ದಂಗಿಗಳನ್ನು ಕಾಲಜನಕ ಹಾಕಿ, ಕೊರಳಿನಿಂದ ಮಫಲರ ಸುತ್ತಿದ್ದರು. ಈ ಪ್ರಕಾರದ ಪರಿಸ್ಥಿತಿಯಲ್ಲಿ ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯ ಬೇಕೆಂದು ಸರ ಸಪ್ರು ಸಾಹೇಬರು ಭಾಷಣ ಮಾಡಿದರು. ಇವರ ವಿಚಾರಪರಿಪ್ಲುತವಾದ ಭಾಷಣ ಕೇಳಿ, ಮಿ. ಮ್ಯಾಕಡೋನಾಲ್ಡ ಸಾಹೇಬರು ಇವರ ಕೈಹಿಡಿದು ಶೇಕಹ್ಯಾಂಡ ಮಾಡಿ, ನೀವು ನಿಮ್ಮ ಪರವಾಗಿ ಬಹು ರಮ್ಯವಾಗಿ ಭಾಷಣ ಮಾಡಿದಿರಿ. ನಾವು ನಿಮ್ಮ ಪಕ್ಷದವರಾಗಿ ನಿಲ್ಲುವೆವೆಂದು ಉದ್ಗಾರ ತೆಗೆದರು. ನಿಮಗೆ ನನ್ನ ಬಹುಮಾನಪೂರ್ವಕವಾದ ವಂದನೆಗಳೆಂದು ಭಾರತ ಮಂತ್ರಿ ಮಿ. ಬೆನ್ನಸಾಹೇಬರು ನುಡಿದರು. ಲಾರ್ಡ ರೀಡಿಂಗಸಾಹೇಬರು ಇವರ ಭಾಷಣವನ್ನು ಚಿತ್ತಗೊಟ್ಟು ಕೇಳಿ, ನೀವು ಅಂಕಿಕರಣ ಬಹಳ ಮಾಕಾಡಿದಿರೆಂದರು. ಇವರ ವಾಕ್ಚಾತುರ್ಯ ಕೇಳಿ, ಉಳಿದ ಯುರೋಪಿಯನ್ನ ಮೆಂಬರರು ಸಹ ಸಂತುಷ್ಟರಾದರು. ಸರ ಸಪ್ರುಸಾಹೇಬರಿಗೆ ಬೆಂಬಲವಾಗಿ ಬಿಕಾನೇರದ ಮಹಾರಾಜರು ಮಾತಾಡಿದರು. ಈ ಭಾಷಣವು ಕಬ್ಬಿನ ಮೇಲೆ ಜೇನು ಇಟ್ಟಂತಾಯಿತು.

ಸರ ಸಪ್ರು ಮತ್ತು ಬಿಕಾನೇರದ ಮಹಾರಾಜರು ಮಾಡಿದ ಭಾಷಣಗಳಲ್ಲಿ ಸಾಯುವನ್ನ ಕವೀಕನದ ರಿಪೋರ್ಟ ಅಥವಾ ಲಾರ್ಡ ಆಯರ್ವಿನಸಾಹೇಬರ ತಂತ್ರದ ಉಲ್ಲೇಖವೇ ಇರಲಿಲ್ಲ. ರಾವುಂಡ ಟೇಬಲಿನಲ್ಲಿ ಇವೆರಡನ್ನೂ ಬಿಟ್ಟು, ಸ್ವತಂತ್ರವಾಗಿಯೇ ವಿಚಾರ ನಡೆಯುವದು. ಇವುಗಳ ಪರಿಣಾಮವು ಗುಡ್ಡ ಇಲೀ ಹತ್ತಂತಾಯಿತು. ಮುಖ್ಯವಾಗಿ ವಸಾಹಾತಿನ ಸ್ವರಾಜ್ಯವೇ ಮುಂಗುತ್ತಾರಾಗುವದು. ಇದೇ ತಾತ್ಪರ್ಯದ ಭಾಷಣವನ್ನು ಬ್ಯಾರಿಸ್ಟರ ಜಯಕರರು ಮಾಡಿದ್ದಾರೆ.

ಹಿಂದುಸ್ಥಾನದಲ್ಲಿ ಸ್ವರಾಜ್ಯವಾಯಿತೆಂದರೆ- ಹಿಂದೂ ಜನರು ತಮ್ಮ ಸಾಲ ಮುಣುಗಿಸುವರೆಂದು ಇಂಗ್ಲಿಷ ಜನರಿಗೆ ಭಯವಾಗಿದೆ. ಹೀಗೆಂದಿಗೂ ಆಗದು. ನೀವು ವಿಲಾಯತಿಯಲ್ಲಿ ತೀರ ಚಿಕ್ಕ ದೇಶಗಳಿಗೆ ಸಾಲ ಕೊಟ್ಟಿದ್ದೀರಿ. ಅವುಗಳ ಬಗ್ಗೆ ನೀವೆಲ್ಲಿ ಅವಿಶ್ವಾಸಗೊಂಡಿದ್ದೀರಿ? ದಂಡಿನಲ್ಲಿ ಯುರೋಪಿಯನ್ನರು ಹಿಂದೀ ಜನರಲರ ಕೈಕೆಳಗೆ ಕೆಲಸ ಮಾಡಲಾರರೆಂದು ಕೆಲವರು ಟೀಕಿಸುವರು. ಹೈಕೋರ್ಟಿನ ಮುಖ್ಯ ಜಡ್ಜರು ಹಿಂದೀ ಆಗಿದ್ದಾರೆ ಅವರ ಕೈಕೆಳಗೆ ಯುರೋಪಿಯನ್ನರು ಕೆಲಸ ಮಾಡುವದಿಲ್ಲವೇ? ಮಂತ್ರಿಗಳ ಕೈಕೆಳಗೆ ಕೆಲಸ ಮಾಡುವದಿಲ್ಲವೇ? ಅದೇ ಪ್ರಕಾರ ಸೈನ್ಯದಲ್ಲಿಯೂ ಮಾಡುವರು. ರಾಜ್ಯಕಾರಭಾರದಲ್ಲಿ ಉಚ್ಚವರ್ಣ-ಕನಿಷ್ಠ ವರ್ಣವೆಂಬ ಭೇದವಿರಲೇ ಕೂಡದು. ಈ ಭೇದ ಬಿಟ್ಟರೆ- ಹಿಂದುಸ್ಥಾನದಲ್ಲಿ ಎಂದಿಗೂ ಶಾಂತಿ ಸಮಾಧಾನವುಂಟಾಗಲಾರದು. ಬಕೇ ಪ್ರಾಂತಿಕ ಸ್ವಾತಂತ್ರ್ಯ ಕೊಟ್ಟು, ಹಿಂದುಸ್ಥಾನ ಸರಕಾರದವರನ್ನು ಬೇಜವಾಬದಾರ ಮಾಡಿದರೆ- ಒಂದೇ ವಾರದಲ್ಲಿ ಈ ಆಡಳಿತೆಯು ಖಂಡೇರಾಯನಂತೆ ಮುರಿದು ಹೋಗುವದು ಲಾರ್ಡ ರೀಡಿಂಗಸಾಹೇಬರು ಚಿತ್ತಗೊಟ್ಟು ಈ ಬಗ್ಗೆ ವಿಚಾರ ಮಾಡತಕ್ಕದ್ದು. ಇದೇ ಹಿಂದುಸ್ಥಾನದ ಆಡಳಿತೆಯೇ ರೂಪಾಂತರ ಹೊಂದಿದೇಶಾಗಿದೆಂಬದಾಗಿ ಸರ ಸಪ್ರುಸಾಹೇಬರು ಮಾಡಿದ ಭಾಷಣದ ಸಾರಾಂಶವಾಗಿರುತ್ತದೆ.

ಡಾಕ್ಟರ ಹರ್ಡೀಕರಿಗೆ ಇನಬಿನ ತಂಡಿಯು ಬಲವಾಗಿದ್ದು, ಅದನ್ನು ಕಳೆದುಕೊಳ್ಳುವದಕ್ಕೆ ಅವರು ಬಹಳ ದಿವಸ ಮುಂಬಯಿಯಲ್ಲಿರಬೇಕೆಂದು ಒಬ್ಬ ಡಾಕ್ಟರರ ಸುಖವಾಗಿದೆ. ಇನ್ನೊಬ್ಬ ಡಾಕ್ಟರರು ಇವರಿಗೆ ಕಂಪ್ಲ ಹವೆಗೆ ಹೋಗಿರೆಂದು ಅಂದಿರುತ್ತಾರೆ.

ಶ್ರೀ ಕೌಜಲಗಿ ಹನಮಂತರಾಯರಿಗೆ ಪುನಃ ೧೫ ತಿಂಗಳ ಶಿಕ್ಷೆ

ಶ್ರೀ. ಕೌಜಲಗಿ ಹನಮಂತರಾಯರ ಹೇಲೆ ಜಾನಾಪೂರದ ಪ್ರಕರಣವು ವಿಚಾರಣೆಯಾಗದೆ ಉಳಿದಿತ್ತೆಂದು ಆ ಪ್ರಕರಣದಲ್ಲಿ ಇವರಿಗೆ ಬೆಳಗಾವಿಯಲ್ಲಿ ೧೫ ತಿಂಗಳ ಸಶ್ರಮ ಶಿಕ್ಷೆಯಾಯಿತು.

ಕಿಹನೇರ ಸಿಪಾಯಿಯ ಹೇಲೆ ಜರಿ ಸಂಭೋಗದ ಆರೋಪ.

ಬಾರಡೋಲಿ ತಾಲುಕಿನಲ್ಲಿರುವ ತಿಂಗೋಡದ ಗ್ರಾಮದ ಹೆಂಡತಿಯು ಮಂಗಳವಾರ ಸಾಯಂಕಾಲದಲ್ಲಿ ಹೊಲದಿಂದ ಮನೆಗೆ ಬರುತ್ತಿರುವಾಗ ಕಿಹನೇರ ಹೆಸರಿನಿಂದ ಅಲ್ಲಿಗೆ ಹೋದ ಪೊಲಿಸಪಾದ ತಿವರತ್ನನೆಂಬವನು, ಆಕೆಯನ್ನು ಹಿಡಿದು ಕೆಡಸಿದನೆಂಬ ಆರೋಪದಿಂದ ಆತನನ್ನು ಪತ್ತೆಗೀರ ಮಾಡಿದ್ದಾರೆ. ಗ್ರಾಮಸುರಾಜಪಿಷ್ಟನಿದ್ದು, ಈವರೆಗೆ ಸರಕಾರಕ್ಕೆ ಸರಕಾರೀ ಅಮಲದಾರರಿಗೂ ಬಹುವಾಗಿ ಸಹಾಯ ಮಾಡಿದ್ದಾನೆ ಇಂಥವನ ಹೆಂಡತಿಗೆ ಮಂಣಪ್ರಾಯವಾದಂಥ ಭೋಗ ಬರಬೇಕೆ? ಅಥವಾ ಕರ್ಮದ ಫಲವೇನು?

ಲೇಡಿ ಜಗಮೋಹನದಾಸಳಿಗೆ ಶಿಕ್ಷೆ.

ಮುಂಬಯಿಯಲ್ಲಿ ಮಂಗಳವಾರ ಮಾರ್ಕೆಟ್ಟಿನಲ್ಲಿ ಕಟ್ಟಿದ ಸರ ಜಗಮೋಹನದಾಸರ ಮೊಮ್ಮಗನ ಹೆಂಡತಿ ಲೇಡಿ ಲಕ್ಷ್ಮಿಬಾಯಿಗೆ ತನ್ನ ಮಾರ್ಕೆಟಿನಲ್ಲಿಯೇ ಸಟ್ಟಿಂಗ ಮಾಡಿದ್ದಕ್ಕೆ ನಾಲ್ಕು ತಿಂಗಳ ಸಾದಾ ಶಿಕ್ಷೆ ಹೊಂದಿದಳು. ಇವಳ ಕೂಡ ಇನ್ನೊಬ್ಬ ಕೊಟ್ಯಾಧೀಶನಾದ ಭಾಟಿಯಾನ ಹೆಂಡತಿ ಗಂಗಾಬಾಯಿಯೂ ಶಿಕ್ಷೆಗೆ ಗುರಿಯಾಗಿದಳು. ಇವಳು ಏಳು ಮಕ್ಕಳ ತಾಯಿಯಾಗಿದ್ದಳೆ. ಹಿರಿಯ ಮಗನು ೧೧ ವರ್ಷದವನಾಗಿದ್ದಾನೆ.

ಮೈಸೂರ ರಾಜ್ಯದಲ್ಲಿ ಕಾಯದೆಭಂಗದ ಪ್ರಯತ್ನಗಳು.

ಬ್ರಿಟಿಷ ಇಲಾಖೆಯಲ್ಲಿ ನಡೆದ ಕಾಯದೆಭಂಗದ ಚಳವಳಿಗೆ ಉತ್ತೇಜನವಾಗುವಂಥ ಲೇಖಗಳನ್ನು ಬರೆಯುವಾರೆಂದು ಅಲ್ಲಿಯ ಮೂರೂ ಕನ್ನಡ ನಿತ್ಯಪತ್ರಗಳಿಗೆ ದರಬಾರದಿಂದ ವಾರ್ನಿಂಗ ದೊರೆಯಿತು. ಮತ್ತು ಮೂರು ತಿಂಗಳ ತನಕ ಈ ಚಳವಳಿಗೆ ಪೋಷಕವಾಗ ವಂಥ ಸಭೆ, ಮೆರವಣಿಗೆ ಬಹಿಷ್ಕಾರ ಮುಂತಾದ ಯಾವ ಕೃತ್ಯಗಳನ್ನೂ ಪ್ರಜರು ಮಾಡಲಾಗದೆಂದು ಮತ್ತೊಂದು ಜಾಹೀರಾತ್ತಿನ್ನು ಪ್ರಕಟಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಶೀಕ್ಷೆ ಮತ್ತು ಹರತಾಳ.

ಮೊನ್ನೆಯ ದಿವಸ ಹುಬ್ಬಳ್ಳಿಯಲ್ಲಿ ಡಿಕ್ಟೇಟರ ಶ್ರೀ ರಾಮರಾವ ಶೇವಡೆಯವರಿಗೆ ಎರಡು ತಿಂಗಳು ಸಾದಾ ಕೈದು ಮತ್ತು ೨೫ ರೂಪಾಯಿ ದಂಡ ಮತ್ತು ಕಾಂಗ್ರೆಸಿಕ್ಕೆ ಮನೆ ಕೊಟ್ಟ ಶ್ರೀ ದಿನಕರ ಇವರಿಗೆ ಒಂದು ತಿಂಗಳ ಸಾದಾ ಕೈದು ಮತ್ತು ೧೫ ರೂಪಾಯಿ ದಂಡವಾಯಿತು. ಮತ್ತು ಇದೇ ಪ್ರಕರಣದಲ್ಲಿ ಶ್ರೀ ಕಟಾಡಿಯವರಿಗೆ ಮೂರು ತಿಂಗಳ ಸಾದಾ ಕೈದು ಹಾಗು ೫೦ ರೂಪಾಯಿ ದಂಡವಾಯಿತು.

ಶ್ರೀ ರಾಮರಾಯರ ಸಂದೇಶವು-

ಈಗ ಕರ್ನಾಟಕದ ಪರೀಕ್ಷೆಯ ಕಾಲ ಬಂದಿದೆ. ನಾವು ಬಹಿರಂಗವಾಗಿ ಶಾಂತಿಯಿಂದ ಮಾಡುತ್ತಿರುವ ಚಳವಳಿಯನ್ನು ಒತ್ತಿ, ಹತ್ತಿಕ್ಕಿ, ಕುಗ್ಗಿಸಿ, ಮುಗ್ಗಿಸಿ ಬಿಡುವ ಪ್ರಯತ್ನ ನಡೆದಿದೆ. ಈ ಅಸ್ವಾಭಾವಿಕ ಪ್ರಯತ್ನದಿಂದ ಕಾಂಗ್ರೆಸದ ಚಳವಳಿಯು ಸಾಯುವದೆಂದು ಆಳರಸರು ಭಾವಿಸಿರುವರು. ಆದರೆ ಇದು ಅವರ ಭ್ರಮೆ. ಕೆಳಗೆ ಒತ್ತಿದಂತೆ ಚೆಂಡು ಮೇಲಕ್ಕೆ ಹಾರುವದೆ ಈ ಚಳವಳಿಯು ಹೆಚ್ಚೆಚ್ಚು ಉಕ್ಕೇರುವದೆಂಬದರಲ್ಲಿ ಸಂದೇಹವಿಲ್ಲ. ಆದುದರಿಂದ ಹಿಂಜರಿಯದೆ, ನಿರ್ಭಯರಾಗಿ ದಬ್ಬಾಳಿಕೆಗೆ ಸೊಪ್ಪು ಹಾಕದೆ, ಈ ಸ್ವಾತಂತ್ರ್ಯದ ಚಳವಳಿಯನ್ನು ಎಲ್ಲರೂ ನಡಿಸಬೇಕೆಂದು ಸ್ವಾರ್ಥನೆಯು.

ಶಿಕ್ಷೆಯಾದ ಕೂಡಲೆ ಪಟ್ಟಣಿಗರು ಹರತಾಳ ಮಾಡಿದರು. ಶ್ರೀ ರಾಮರಾಯರ ತರುವಾಯ ಶ್ರೀ. ಬೇಮಕಂಠ ಸರ್ವಾಧಿಕಾರಿಯಾದರು. ಇವರು ಅಂಕೋಲೆಯ ಉಪ್ಪಿನ ಕಾಯದೆಭಂಗದಲ್ಲಿ ಅವಭೃತ ಸ್ನಾನಮಾಡಿ ಬಂದವರಾಗಿದ್ದಾರೆ.

ಒತ್ತಟ್ಟಿಗೆ ಹರತಾಳ, ಒತ್ತಟ್ಟಿಗೆ ತಾಂಬೂಲ.

ಶ್ರೀ. ಶೇವಡೆ ರಾಮರಾವ ಮೊದಲಾದ ಪ್ರಭೃತಿಗೆ ಶಿಕ್ಷೆಯಾದ್ದರ ದೆಸೆಯಿಂದ ಹುಬ್ಬಳ್ಳಿಯಲ್ಲಿ ಹರತಾಳವಾಯಿತು. ಏನೋ ಹೆಸರಿಗೆ ಹರತಾಳ ನಲ್ಲ. ಸಂಪೂರ್ಣ ಹರತಾಳ. ಆದರು ಈ ಪ್ರಕಾರ ವಿವಾದದಲ್ಲಿರುವಾಗ, ಮ್ಯುನಿಸಿಪಾಲಿಟಿಯ ಕಟ್ಟಡದಲ್ಲಿ ರಾ. ಬ. ಕಂಬಳಿಯವರಿಗೆ ಮಂತ್ರಿಯಾದ ಬಗ್ಗೆ ತಾಂಬೂಲ ಸಮಾರಂಭವಾಯಿತು. ಈ ಸಮಾರಂಭವು ಹೋದವರಿಗೆ ನಿಜವಾಗಿ ಬೇವು ಬೆಲ್ಲ ಸವಿದಂತಾಗಿರಬಹುದು. ಮುನಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂದು ರಾ. ಬ. ರ ಸರ ಕಾಲದಲ್ಲಿ ದೊಡ್ಡ ಹರ್ಜಿಯಾಯಿತು. ಕೊನೆಯಲ್ಲಿ ಗಿಡದ ಮೇಲೆ ನಿಶಾನೆ ಹತ್ತಿತು. ಆ ನಿಶಾನೆಯು ಇನ್ನೂ ಅಲ್ಲಿ ಸ್ಥಿರವಾಗಿದ್ದು, ಮುಂದೆ ಚಿರವಾಗುವದು. ಇದರಕೂಡ ಖಾಳೆಯಲ್ಲಿ ಗಿಡದ ಸುತ್ತಲು ಅನೇಕಾನೇಕ ಮರಿಗೆಲು ಹುಟ್ಟುವಂತೆ ಮುನಸಿಪಾಲಿಟಿಯವರು ಈ ಸಮಾರಂಭದಲ್ಲಿ ರಾಷ್ಟ್ರೀಯ ನಿಶಾನೆಗಳನ್ನು ಹಚ್ಚಬಹುದಾಗಿತ್ತು. ಆದರೆ ಯಾ ನಿಯತ್ನಕ್ಕಾಗಿ ಹಚ್ಚಿ, ಮನಾನಂದ ಪಡೆದರು.

ಆಮಂತ್ರಣ ಪತ್ರಿಕೆಯಲ್ಲೊಂದು ಫೋಜು.

ಅಬಕಾರಿ ಜೆಸರಿಗೆ ಪರ್ಜ

ರಾ. ಬ. ಕಂಬಳಿಯವರು ಒಕ್ಕಲತನ, ಸಹಕಾರಿಸಂಘ ಮತ್ತು ಅಬಕಾರಿ ಖಾತೆಯ ಮಂತ್ರಿಯಾಗಿದ್ದಾರಷ್ಟೇ, ಒಂದಾನೊಂದು ಸಹಕಾರಿ ಸಂಘದವರು ಇವರನ್ನು ಸನ್ಮಾನಕ್ಕೆ ಆರಿದಿದ್ದಾರೆ. ಅದಕ್ಕೆ ಆಮಂತ್ರಣ ಪತ್ರಗಳನ್ನು ಕಳಿಸಿರುವರು. ಅದರಲ್ಲಿ ಒಕ್ಕಲತನ ಮತ್ತು ಸಹಕಾರ ಮಂತ್ರಿ ಎಂದೆರಜೇ ಖಾತೆ ಇಳ ಹೆಸರು ಹೇಳಿ, ಅಬಕಾರಿಯನ್ನು ಬಿಟ್ಟು ಬಿಟ್ಟಿದ್ದಾರೆ. ಅಬಕಾರಿಯಲ್ಲಿ ಶೆರೆ, ಸಿಂದಿ ಬ್ರ್ಯಾಂಡಿ ಗಾಂಜಾ, ಅಫೂ, ಮೊದಲಾದ ಮಾದಕ ಪದಾರ್ಥಗಳು ಬರುತ್ತವೆ. ರಾ. ಬ. ಅವರು ಇವುಗಳ ಮಂತ್ರಿಯಾಗಿದ್ದಾರೆಂದು ಬರೆಯುವದು ಗುರುಮನೆತನದ ಮರಸ್ಥರಿಗೆ ಅಸಹ್ಯವೆನಿಸಿ, ಅದರ ಉಚ್ಚಾರ ಮಾಡಿರಲಿಕ್ಕಿಲ್ಲ. ಹೀಗೆ ಬಾಯಿ ಹೇಳಿಸುವದಕ್ಕಿಂತ ರಾ. ಬ. ರವರಿಗೆ ಇದರ ಸಂಬಂಧವನ್ನೇ ಕಡಕೊಳ್ಳಿರೆಂದು ಉಪದೇಶ ಮಾಡುವದು ಪ್ರಶಂಸಾರ್ಹವಾಗುತ್ತದೆ.

ಕೇವಲ ಕುನಸಿನ ಶಿಕ್ಷೆ.

ಪಂಜಾಬ ಇಲಾಖೆಗೆ ಸೇರಿದ ಕಸೂರದಲ್ಲಿ ಕಾಂಗ್ರೆಸದ ಮುಂದಾಳು ಮತ್ತು ಅಧ್ಯಕ್ಷರಾದ ಶ್ರೀ ಕಾಜಾಶಿಂಗರಿಗೆ ಅಲ್ಲಿಯ ಮ್ಯಾಜಿಸ್ಟ್ರೇಟರು ಹಲಕೆ ಕಳವಿನಂಥ ಆರೋಪ ಹೊರಿಸಿ, ನಾಲ್ಕು ವರ್ಷ ಸಶ್ರಮ ಶಿಕ್ಷೆ ವಿಧಿಸಿದರು. ಇದರ ಮೇಲೆ ಜಡ್ಜ ಕೋರ್ಟಿಗೆ ಅಪೀಲಾಯಿತು. ಜಡ್ಜರಾದ ಮೆ. ಕೋಶಾಸಾಹೇಬರು ಇವರನ್ನು ಬಂಧಮುಕ್ತ ಮಾಡಿ, ತೀರ್ಪಿನಲ್ಲಿ ಮುಂದೆ ಕೊಟ್ಟಂತೆ ಉದ್ಗಾರ ತೆಗೆದಿದ್ದಾರೆ.

ಆರೋಪಿಯು ಕಾಂಗ್ರೆಸದ ಒಬ್ಬ ಮಹತ್ವದ ಗೃಹಸ್ಥನಾಗಿ ಕಾಂಗ್ರೆಸ ಚಳವಳಿಯ ಪ್ರತಿಷ್ಠಿತ ಜವಾಬದಾರನಾಗಿದ್ದಾನೆ. ಈ ಚಳವಳಿಯಿಂದ ಆರೋಪಿಯನ್ನು ದೂರೀಕರಿಸಬೇಕೆಂದು ಪೋಲಿಸರು ಇಚ್ಛಿಸಿ, ಇಂಥ ಕ್ಷುದ್ರ ಆರೋಪ ಹೊರಿಸಿದ್ದಾರೆ.

ಆಳರಸರ ಪ್ರೀತಿ ಸಂಪಾದಿಸಲು ಮನಬಲ್ಲಂತೆ ಭಾರೀ ಶಿಕ್ಷೆ ಕೊಡುವ ಮ್ಯಾಜಿಸ್ಟ್ರೇಟರು ಈ ಶಿಕ್ಷೆಯಿಂದ ಬುದ್ಧಿಗಲಿಯುವಂತಿದೆ.

ಮ್ಯಾಜಿಸ್ಟ್ರೇಟರ ಕಛೇರಿಗೆ ಬೆಂಕಿ ಹಚ್ಚುವ ಪ್ರಯತ್ನ.

— (೨) —

ಅಹಮದಾಬಾದಿನಲ್ಲಿರುವ ಮ್ಯಾಜಿಸ್ಟ್ರೇಟ ಕೋರ್ಟಿಗೆ ಬೆಂಕಿ ಹಚ್ಚಬೇಕೆಂದು ಯಾವನೋ ಪ್ರಯತ್ನಿಸಿದನು. ಈತನು ಕಛೇರಿಯ ಒಳಗಲಬಾಗಿಲದಿಂದ ಬಂದು, ರಿಕಾರ್ಡಿನ ಕೋಣೆಗೆ ಬೆಂಕಿ ಹಚ್ಚಿದನು. ಅಷ್ಟರಲ್ಲಿ ಗದ್ದಲವಾಗಿ, ಜನರು ಬಂದು ಬೆಂಕಿ ಆರಿಸಿದರು. ಬಾಗಿಲಕ್ಕೆ ತುಸು ಝಳ ತಾಕಿದೆ.

ಮುಂಬಯಿಯ ಮ್ಯಾಜಿಸ್ಟ್ರೇಟರಿಗೆ ಒಂದು ಧಮಕಿಯ ಪತ್ರ

—(- ೪ -)—

ಮುಂಬಯಿಯ ನಾಲ್ಕನೆಯ ಮ್ಯಾಜಿಸ್ಟ್ರೇಟರಾದ ಎಮ್. ಮೇಘಾನವರಿಗೆ ಕೆಳಗೆ ಕೊಟ್ಟಂತೆ ಒಂದು ಬೆದರಿಸಿದ ಪತ್ರ ಬಂದಿದೆ.

ನಿಮ್ಮ ನಿರಾಶ ಜನಕವಾದ ಶೀಘ್ರಗಳನ್ನೋದಿ ನಮಗೆ ಅತ್ಯಂತವಾಗಿ ವಿಷಾದವಾಗುತ್ತದೆ. ನೀವೇನೋ ಹಿಂದುಸ್ಥಾನದಲ್ಲಿ ಹುಟ್ಟಿ ಬೆಳೆದವರು ನಿಜ. ಆದರೆ ಜನ್ಮಭೂಮಿಯನ್ನು ಮರೆತು, ಪರಕೀಯರ ಜಾಲಾಬಡಿಯುವ ನಾಯಿಯಾಗಿದ್ದೀರಿ. ಅವರಿಗೆ ಅಲಾಮರಾಗಿದ್ದೀರಿ. ಕಾರಣ ನೀವು ನಿಜ ಜನರ ಮುಖಸ್ತುತಿಯ ಹಾದಿಯನ್ನು ಬಿಟ್ಟು, ನಮ್ಮ ಪ್ರಜಾಸತ್ತಾತ್ಮಕ ಸೈನ್ಯದಲ್ಲಿ ಸೇರಿರಿ. ಇಲ್ಲವಾದರೆ-ಪರಿಣಾಮ ಕಂಡುಕೊಳ್ಳಿರಿ.

ಇದರ ಬುಡದಲ್ಲಿ ಬಂಗಾಲಿ ಸೇನಗುಪ್ತ ಲೆಫ್ಟಿನೆಂಟವೆಂಬ ಸಹಿಯುಂಟು.

ಸರ ಪದವಿಯವರೂ ತುರಂಗಕ್ಕೆ ಹೋಗಲು ಸಿದ್ಧರಾದರು.

—೦*೦—

ಮುಂಬಯಿಯಲ್ಲಿ ತೇಂಘರು ಕೂಡಿಸಿದ ಸಭೆಯನ್ನು ನಾಗರಿಕರೇ ಕೂಡಿಸಬೇಕೆಂದು ಗೊತ್ತು ಮಾಡಿದ್ದಾರೆ. ಪೋಲಿಸರು ಈ ಸಭೆಗೆ ವಿಘ್ನತಂದರೆ-ಮುಂದಾಗುವ ಯಾವ ಪರಿಣಾಮವನ್ನೂ ಲೆಕ್ಕಿಸದೆ, ಅಜದ ಬೈಲಿನಲ್ಲಿ ಸಭೆ ಕೂಡಿಸಬೇಕೆಂದೇ ನಿಶ್ಚಯ ಮಾಡಿದ್ದಾರೆ. ಡಾಕ್ಟರ ದೇಶಮುಖರು ಅಧ್ಯಕ್ಷರಾಗುವರು. ಸರ ಪುರುಷೋತ್ತಮದಾಸ ತಾಕೂರದಾಸ, ಸರ ಲಾಲ್ಜಿಭಾಯಿ ಸಾಮಲದಾಸ, ಶ್ರೀ ಲಾಲಜಿ ನಾರಾಯಣಜಿಯವರು ಮುಖ್ಯವಾಗಿ ಭಾಷಣ ಮಾಡತಕ್ಕವರಾದ್ದಾರೆ.

ನಿರ್ವಾಹವಾಗಿ ದಂಡ ಕೊಟ್ಟರು ಶ್ರೀ. ಜವಟಿ ಎವರು ಸಾಹುಕಾರರು. ಶ್ರೀ. ಗುತ್ತಲ ಸೀತಾ ರಾಮಪಂಕರ ಅಳಿಯಂದಿರು.

ಬಂಗಲ ಸತ್ಯಾಗ್ರಹದ ರಡನೆಯ ಗುಂಪಿನ ೫೯ ನ್ನೆ ರಡು ಜಕ್ಕೂ ಐದರಿಂದ ಒಂದೂವರೀ ತಿಂಗಳ ಶಿಕ್ಷೆಯಾಯಿತು. ಕೆಲವರಿಗೆ ಬರೇ ದಂಡ ದಂಡ ಕೊಡದಿದ್ದರೆ ಶಿಕ್ಷೆ ಎಂದಿತ್ತು. ಯಾರೂ ದಂಡ ಕೊಡಲಿಲ್ಲ.

ಪುಣೆಯ ಕೇಳಕರಂಗೆ ತಾರಿನಿಂದ ಉತ್ತರ

ಹತ್ತು ಕೊಡದಿದ್ದರೆ- ಮೊದಲನೇ ಹಡಗದಿಂದಲೇ ಹಿಂದಿರುಗುವರು.

—(o)—

ನಾವು ಒಳ್ಳೇ ಬಲವಾಗಿ ಸಾತಾಹಾತನ ಸ್ವರಾಜ್ಯ ಬೇಡುವೆವು. ಅದನ್ನು ಕೊಡದಿದ್ದರೆ- ಮೊದಲನೆಯ ಹಡಗದಿಂದ ಹಿಂದುಸ್ಥಾನದ ಹಾದೀ ಹಿಡಿಯುವೆವೆಂದು ಡಾಕ್ಟರ ಮುಂಜೆಯವರು ಶ್ರೀ ಕೇಳಕರರಿಗೆ ಉತ್ತರ ಕಳಿಸಿದ್ದಾರೆ.

ರಾವುಂಡ ಟೇಬಲಿನಲ್ಲಿ ಮೈಲಾನಾ ಮಹಮ್ಮದಲ್ಲಿ ಮತ್ತು ಡಾಕ್ಟರ ಮುಂಜೆಯವರು ಮಾಡಿದ ಭಾಷಣಗಳನ್ನು ನಾಳೆನ ಸಂಚಿಕೆಯಲ್ಲಿ ಕೊಡುವೆವು.

ಧಾರವಾಡ-

ಶ್ರೀ. ಮಲ್ಲಪ್ಪ ಧನಶೆಟ್ಟಿಯವರ ಮೇಲೆ ಪ್ರಾಣಾಂತಿಕವಾಗಿ ಬಂದ ಕುತ್ತು ಪರಿಹಾರವಾಗಲೆಂದು ಶ್ರೀ. ಶಂಕರಪ್ಪಾ ಸಂಗನಬಸಪ್ಪಾ ಮಿಣಜಿಗಿಯವರು ಇಲ್ಲಿಯ ಶ್ರೀ. ಉಳವೀ ಬಸವೇಶ್ವರ ದೇವರಿಗೆ ಸೋಮವಾರ ದಿವಸ ರುದ್ರಾಭಿಷೇಕ ಮಾಡಿಸಿದರು.

ನೋಟೀಸಿನದರಗಳು

—(೨)—

ಸಿಂಗಲ ಕಾಲಮಿನ ಹತ್ತು ಎಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಎಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಎಳಿಗೆ ಐದ ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಆವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಎಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡಿ
ಮತ್ತು ——————— ಧಾರವಾಡ
ಕಾಮಸಕಟ್ಟೆ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಜ್ಞಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಅಳತೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸಂ. ೧,೨, ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಸಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸಾಪನೆ	೧ ೦ ೦
೫. ಚರಿತ್ರ ಸಂಗ್ರಹ ಭಾ. ೧.	೪-೦-೦
೬. ಅಳಸಿಂಗಾಚಾರ್ಯರ ರಾಮಾಯಣ ಕಾಂಡಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೧-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೩-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಲ್ಯಾಂಡ ರೆಫಿನ್ಯೂ ಕೋಡು	೨-೧೧-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨-೧೩-೦
೧೨. ಸೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೮-೦
೧೩. ಇಸೂಪನೀತಿ ಕಥೆ ಭಾ. ೧, ೨,	೨- ೪-೦
೧೪. ಕಾರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ಶೀರೆಗಳು ಪತ್ತಲಗಳು ಕಿರಿಗಳು

ಶ್ರೀದತ್ತ ವ್ಹೀವಿಂಗ್ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ ಹವಕತಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣಹೋದರೆ- ಮಾಲು ತಿರಿಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆ ಯಾವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨ತೊಲೆಯ ಸೇರು	೧ಕ್ಕೆ ೨—೦—೦
ಕೃಷ್ಣ ಪಾರಿಜಾತ ಅಶ್ಮರು ತೊಲೆ	೧ಕ್ಕೆ ೪—೨—೦

೧೯-೧೧-೩೧ ಮೈಸೂರಸ್ಟೋರ್ಸ,
ಹುಬಳ್ಳಿ. ಬೆಳಗಾವಿಯವರಗಲ್ಲಿ

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

ಮು. ನಂ. ೧೫೭೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟ ಜವಳಿ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಶಿಲ್ಪೆದಲ್ಲಿ ಶ್ರೀ. ಪೇಬಳಿಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯನ್ನು ಸಂವಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೨೨ನೇ ನವ್ಹೆಂಬರ ೧೯೩೦ (ಸಂಚಿಕೆ ೨೫೫

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ಪಾದೀ ಶ್ರೀ. ಶಿದ್ಧಾಪೆದೂತರ ಅನೆಲರ್ಜಿ, ಶ್ರೀ. ಅರೂಢಸ್ವಾಮಿಗಳ ಕೈಫಿಯತು ಮತ್ತು ಮುನೆಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮತವಾದಿ, ಸ್ರತಿವಾದಿ, ಹಾಗು ಮುನೆಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕಕ್ಕೆ ಚ್ಛನರ ಆಗಿಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ಸಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ವಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ವಿ. ಪಿ. ಯಿಂದ ಲಿಟ್ಟಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಪದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕಿಟ್ಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ- ಆಪರೆಟಿವ ಕ್ರೆಡಿಟ್ಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಯ ಎಂಟು ಲಕ್ಷದ ಮೇಲುಂಟು. ಚಳಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿವಾಜಿಟಗಳಿಗೆ ಜನ್ನಾಗಿ ಬಡಿ ದೊಗೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟಿಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟು ಕೊಳ್ಳಬಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ವಾಗೀನೆಗಳನ್ನು ವತ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೦-೦
೬ ,,	೬-೦-೦
೩ ,,	೮-೮-೦

ವಾರ ಪತ್ರಕ್ಕೆ ೧ ವರ್ಷಕ್ಕೆ ೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ.

ವಿಜಯ.

ಜಯಶಂಕರ್ಯವಿಶ್ವಮನಸ್ಸರ್ ಲಾಭ ಸಾರ್ಗಶಿಷ್ಟ ಶುದ್ಧ

ಸರ ಸಪ್ರು ಜಯಶಂಕರ ಭಾಷಣಗಳಿಂದ ನಿಲ್ಲಾಯಿತಿಯಲ್ಲಿದ್ದ ಚಳವಳಿಯು.

ಹಿಂದುಸ್ಥಾನದಲ್ಲಿ ಮಹಾಶ್ಯರ ಕೂಡ ಸಂಧೀ ಮಾಡಿಸಲು ಮುಖಂಡರಾಗಿದ್ದ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ವಸಾಹಾತಿನ ಸ್ವರಾಜ್ಯವೇ ತಮ್ಮ ಕೋರಿಕೆ ಬೇಡಿಕೆ ಎಂದು ರಾವುಂಡ ಟೇಬಲಿನಲ್ಲಿ ಮಾಡಿದ್ದ ಭಾಷಣಕ್ಕೆ ಮುಸಲಮಾನರ ಮತಿಯಿಂದ ಸರ ಕಾಫಿಯವರು ಅನುಮೋದನ ಕೊಟ್ಟರು. ಬ್ಯಾರಿಸ್ಟರ ಜಿನ್ನಾ ಸಾಹೇಬರು ಈ ಭಾವ ಭಾಷಣ ಮಾಡುವದಿಲ್ಲ. ಇವರೂ, ಸರ ರಾಮಸ್ವಾಮಿಯವರೂ ಪ್ರತಿಕೂಲ ಭಾಷಣ ಮಾಡತಕ್ಕವರಿಗೆ ಉತ್ತರ ಕೊಡಲು ಕತ್ತಿಯನ್ನು ಹುಸೆಮುತ್ತಲಿದ್ದಾತೆ.

ಲಾರ್ಡ ಪೀಲರೆಂಬವರು ಭಾರತ ಮಂತ್ರಿಯಾಗಿದ್ದರು. ಇವರು ಹಿಂದೀ ಅಥವಾ ಇಂಗ್ಲಿಷ ಜನರನ್ನು ಸಮಾಧಾನ ಪಡಿಸುವದರ ಬದಲು ಅಡ್ಡಗೋಡೆಯ ಮೇಲೆ ದೀಪವಿಟ್ಟಂಥ ಸುದ್ದಿಗಳನ್ನಾಡಿದ್ದಾರೆ. ವಸಾಹಾತಿನ ಸ್ವರಾಜ್ಯವೆನ್ನುವರು. ಅದು ಸಂಪೂರ್ಣ ಪ್ರಜಾಸ್ವಭುತ್ವವಾಗುವದಿಲ್ಲೆಂದಂದಿದ್ದಾರೆ.

ಪರ್ಶಮಾನಪತ್ರಗಳಲ್ಲಿ ಟಿಲಿಗ್ರಾಫನೆಂಬ ಪತ್ರ ಬಹಳ ಗಾಂಭೀರಿಯಾಗಿದೆ. ಸರ ಸಪ್ರುಸಾಹೇಬರು ಮೊದಲು ಶರ್ಕಮಾಡಲಿಕ್ಕೆ ಬರದಂತೆ, ವಸಾಹಾತಿನ ಸ್ವರಾಜ್ಯದ ದೊಡ್ಡ ಭಾರವನ್ನೇ ಹೇರಿದರು. ಇದು ಪ್ರಾರಂಭದಲ್ಲಿಯೇ ಅಶಕ್ಯವೆನಿಸುವಂಥ ಕೃತ್ಯವಾಯಿತೆಂದು ಹೇಳಪಟ್ಟಿರುತ್ತದೆ ನ್ಯೂಜ ಕ್ರಾನಿಕಲವೆಂಬ ಪತ್ರವು ಇಂಗ್ಲಿಷ ಜನಾಂಗದ ಕಾಣ್ಣಿಳಗಿನ ಕಸರು ಹೋಗಿ, ಅವರಿಗೆ ಹಿಂದುಸ್ಥಾನದ ಬೇಡಿಕೆಯ ಬೃಷ್ಟ ಕಲ್ಪನೆಯಾಗುವಂಥ ಲೇಖ ಬರೆದಿದೆ. ಇದು ಅನ್ನುವದೇನಂದರೆ-

ಹಿಂದುಸ್ಥಾನಕ್ಕೆ ಏನು ಬೇಕಾಗಿರುತ್ತದೆಂಬ ಸಂಶಯವೇ ಉಳಿಯಲಿಲ್ಲ. ಪ್ರಚಂಡವಾಗಿ ಬೆಳೆಯುತ್ತಿರುವ ರಾಷ್ಟ್ರೀಯತ್ವದ ದಾರಿಯಲ್ಲಿ ಸಂಸ್ಥಾನಿಕರನ್ನು ಸೆಬ್ಬಾವಿನಂತೆ ಅಡ್ಡ ಹಾಕಬೇಕೆಂಬದಾಗಿ ಮಾಡಿದ ವಿಚಾರವನ್ನು ಮೂರಾ ತೆಗೆದುಹಾಕಬೇಕು. ಹಿಂದುಸ್ಥಾನದ ಪ್ರಗತಿಗಾಗಿ ಸರ ಸಪ್ರು ಜಯಕರರು ತೆಗೆದ ಯೋಜನೆಗೆ ಸಂಸ್ಥಾನಿಕರು ವಿರುದ್ಧರೆಂಬದನ್ನೂ, ಅವರ ಕೂಡ ಸಹಕಾರ ಮಾಡುವರೆಂಬದನ್ನೂ ಖಂಡಿಸಲಾಯಿತು. ಸಂಯುಕ್ತ ಹಿಂದುಸ್ಥಾನವೆಂಬದು ಬಹು ದಿವಸದ ಮಾತೆಂದು ಥಾರ್ಡ ಲಯರ್ಬಿನಸಾಹೇಬರು ಅಂದಿದ್ದಾರೆ. ಅದರೆ ಅಥು ನನ್ನ ಮುಂದೇ ಹುಟ್ಟಿರುತ್ತದೆ.

ಲಂಡನದಲ್ಲಿರುವ ಕಾಂಗ್ರೇಸ ಪಕ್ಷದವರು ರಾವುಂಡ ಟೇಬಲನ್ನು ನಿಷೇಧಿಸಿ, ಅಲ್ಲಿಯ ಟ್ರಾಫಲ್ಗಾರ ಕೂಟನಲ್ಲಿ ರಾಷ್ಟ್ರೀಯ ನಿಶಾನೆ ಸಹ ಹಚ್ಚಿದರು. ಇವರು ಬ್ಯಾರಿಸ್ಟರ ಜಯಕರರ ವಸಾಹಾತಿನ ಸ್ವರಾಜ್ಯದ ಭಾಷಣವನ್ನು ನಿಷೇಧಿಸಿ ಕಮ್ಮಟ್ಟೊಂದು ಠರಾವು ಮಾಡಿದ್ದಾರೆ. "ವಸಾಹಾತಿನ ಸ್ವರಾಜ್ಯ ದೊರೆತರೆ- ಸ್ವಾತಂತ್ರ್ಯದ ಚಳವಳಿಯು ಅಡಗುವದೆಂದು ಜಯಕರರು ಯುರ್ರವದೆಯಲ್ಲಿ ನಡೆದ ಸಂಭಾಷಣೆಯಿಂದ ಅನ್ನುವರು. ಆದರೆ ತರುಣ ಹಿಂದುಸ್ಥಾನದ ವತಿಯಿಂದ ಇವರಿಗೆ ಮಾತಾಡುವ ಅಧಿಕಾರವೇ ಇರುವದಿಲ್ಲ. ರಾವುಂಡ ಟೇಬಲ್ಲದಲ್ಲಿ ವಸಾಹಾತಿನ ಸ್ವರಾಜ್ಯವು ಒಪ್ಪಿಗೆಯಾದ್ದರೂ ಬ್ರಿಟಿಶ ದೊರೆತನದ ನೆರಳಿನಲ್ಲಿ ಸ್ಥಾಪಿಸಲ್ಪಡುವ ಯಾವದೇ ಸರಕಾರದ ವಿರುದ್ಧ ಕಾಯದೆಭಂಗವು ಬಲವಾಗಿ ನಡಿಸಲ್ಪಡುವದು." ಎಂಬದಾಗಿ ಇವರು ಗೊತ್ತುವಳಿ ಪಾಸಮಾಡಿದ್ದಾರೆ.

ರಾವುಂಡ ಟೇಬಲಿನ ನಿಷೇಧಕರು ಹಾರ್ದಾರ್ದಾಯಕರಾದರು.

—ಃ*[]()[]*ಃ—

ಶ್ರೀ. ಶಕಲಾತವಾಲಾ ಮತ್ತು ಬಂಗಾಲಿ ಶೀಲರು ರಾವುಂಡ ಟೇಬಲಿನ ನಿಷೇಧಕ ಮಾತ್ರರಲ್ಲದೆ, ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗಬೇಕೆನ್ನುವಂಥವರಾಗಿದ್ದಾರೆ. ಇವರು ಆ ಟೇಬಲಿನ ಬೋಜ್ಯ ನೋಡುವದಕ್ಕಾಗಿ ಡೇಲಿ ವರ್ಕರ ಮತ್ತು ಲಿಬರ್ಟಿ ಎಂಬ ಪತ್ರಗಳ ಪ್ರತಿನಿಧಿಯಾಗಿ ಹೋಗಿದ್ದರು. ಯಾವ ಪತ್ರಗಳ ಪ್ರತಿನಿಧಿಗಳಿಗೂ ಒಳಗೆ ಬಿಡಬಾರದೆಂದು ಟೇಬಲಿನವರು ಠರಾವು ಮಾಡಿದ್ದರಿಂದ ಎಲ್ಲರ ಎದೆ ಇವರ ನಿರಾಶೆಯೂ ಆಯಿತು.

ಗವರ್ನರಸಾಹೇಬರ ಕನ್ನೆದುರಿಗೆ ಹರತಾಳ.

—(೦)—

ಕರಾಚ್ಚಿಯಲ್ಲಿ ನಾಮದಾರ ಗವರ್ನರಸಾಹೇಬರಿರುವಾಗಲೇ ಶ್ರೀ. ಜಯರಾಮದಾಸರನ್ನು ಹಿಡಿದರು. ಅದರ ನಿಷೇಧವೆಂದು ಪಟ್ಟಣಿಗರು ಹರತಾಳ ಮಾಡಿದರು. ದಿಗ್ವಲಂ ಕಾಂಗ್ರೆಸ ಶೇಜೋಬಲಂ ಎಂದು ಹೇಳುವಂತಾಯಿತು.

ಕೌನ್ಸಿಲದಲ್ಲಿ ಪೋಲಿಸರ ಲಾಠೀರಾಜ್ಯದ ಪ್ರಶ್ನೋತ್ತರಗಳು

—(೨)—

ಮದ್ರಾಸದ ಕಾಯದೆ ಕೌನ್ಸಿಲದಲ್ಲಿ ಪೋಲಿಸರ ಲಾಠೀ ರಾಜ್ಯದ ಪ್ರಶ್ನೋತ್ತರಗಳು ನಡೆದವು. ಪೋಲಿಸರು ದಬ್ಬಾಳಿಕೆಯು ಪ್ರಸಂಗಗಳಲ್ಲಿ ಹೇಗೇಗೆ ವರ್ತಿಸಬೇಕೆಂದಾಗಿ ಇನ್ಸಪೆಕ್ಟರ ಜನರಲ್ ಸಾಹೇಬರು ಪೋಲಿಸ ಸಾಹೇಬರಿಗೆ ಸರಕ್ಯುಲರಗಳಿಂದ ಹುಕುಮು ಕೂಟ್ಟಿರುವರೇ? ಅವು ಕಾಯದೆಯ ಪ್ರಕಾರ ಇರುವವೇ? ಎಂಬ ಪ್ರಶ್ನೆ ಕೇಳಲು

ಸಮಯ ಬಂದಿರುವಂತೆ ಇನ್ಸಪೇಕ್ಟರ ಜನರಲರು ಸರಕ್ಯುಲರ ತೆಗೆಯುವರು. ಅವರು ಕಾವು ತೆಗೆದ ಸರಕ್ಯುಲರಗಳನ್ನು ಸರಕಾರಕ್ಕೆ ಕಳಿಸಿಲ್ಲ. ಮತ್ತು ಸರಕಾರವು ಅವನ್ನು ತರಿಸಬೇಕೆಂಬದಾಗಿ ಇಚ್ಛಿಸುವದಿಲ್ಲೆಂಬದಾಗಿ ಉತ್ತರವಾಯಿತು. ಆಗ

ಶ್ರೀ. ಪ್ರಾರ್ಥಸಾರ್ಥಿಅಯಂಗಾರ-ತಮ್ಮ ಹದ್ದಿನಲ್ಲಿ ಪೋಲಿಸ ಸಾಹೇಬರಿಗೆ ತಮ್ಮ ಮನಸಿಗೆ ಬಂದಂತೆ ಹುಕುಮು ಮಾಡುವ ಅಧಿಕಾರವಿರುತ್ತದೆಂದು ನಾನು ತಿಳಿಯಬೇಕೇ?

ಉತ್ತರ. ಪೋಲಿಸ ಸಾಹೇಬರು ಸಮಂಜಸವಾದ ಹುಕುಮುಗಳನ್ನೇ ತೆಗೆಯುತ್ತಾರೆಂದು ಸರಕಾರದ ನಂಬಿಗೆಯುಂಟು.

ಪ್ರಶ್ನೆ - ಕಾಯದೆಯ ಚಟುವಟಿಕೆಯಲ್ಲಿಯೇ ಇವರು ಹುಕುಮು ತೆಗೆಯುವರೆ?

ಉ -ನಿಶ್ಚಯ.

ಶುರಂಗದಲ್ಲಿ ಮಜ್ಜಿಗೆ ಕೊಡುವ ವಿಚಾರ.

ಇದೇ ಕೌನ್ಸಿಲದಲ್ಲಿ ಶುರಂಗದಲ್ಲಿ ಕೈದಿಗಳಿಗೆ ಮಜ್ಜಿಗೆ ಕೊಡುವ ವಿಚಾರ ನಡೆಯಿತು.

ಪ್ರ- ಕೆ ವರ್ಗದ ಕೈದಿಗಳಿಗೆ ಮಜ್ಜಿಗೆಯನ್ನು ಕೊಡುತ್ತೀರಾ?

ಉ- ಪ್ರಯೋಗವೆಂದು ಅಲ್ಲಿಯವರೆಗೆ ಶುರಂಗದಲ್ಲಿ ಒಂದು ಸಾವಿರ ಕೈದಿಗಳಿಗೆ ಮಜ್ಜಿಗೆ ಕೊಡಲ್ಪಡುತ್ತಿದೆ.

ಪ್ರ- ಯಾವ ಶೋಧಕ್ಕಾಗಿ?

ಉ- ಕೈದಿಗಳಿಗೆ ಮಜ್ಜಿಗೆಯು ತಡೆಯುತ್ತದೆಯೋ ಹೇಗೆಂದೂ, ಅವರು ಪುಷ್ಟರಾಗುವರೆ? ಸೊರಗುವರೆ ಹೇಗೆಂದೂ-

ಪ್ರ- ಹಿಂದೂ ಜನರ ಊಟದಲ್ಲಿ ಮಜ್ಜಿಗೆಯು ಬೇಕಾಗಿದ್ದೇ-

ಉತ್ತರ- ಕೆಲವರಿಗೆ ಬೇಕೆಂಬದು ನಿಜ. ಎಲ್ಲರಿಗೂ

ಅಲ್ಲ.

ಪ್ರ- ಮಜ್ಜಿಗೆಯ ಪ್ರಯೋಗವನ್ನು ಹೊಂದಿನಿಂದ ಪ್ರಾರಂಭಿಸಿದ್ದೀರಿ.

ಉ- ಹಂದು ತಿಂಗಳ ಹಿತು.

ಪ್ರ- ಯಾವ ಸಂಸ್ಥಾವು ಕಂಡು ಬಂತು.

ಮಂತ್ರಿಯವರು ಉತ್ತರ ಕೊಡಲಿಲ್ಲ. ಎಲ್ಲ ಸ್ವದೇಶಿಗಳಿಗೆ ಮಜ್ಜಿಗೆ ಕೊಡಬೇಕೆಂಬ ವಿಚಾರವಾಗಿ ಕೌನ್ಸಿಲದಲ್ಲಿ ಸ್ಪೇಶಲ ವಿಚಾರವಾಗಬೇಕೆಂದು ಶ್ರೀ. ವೆಂಕಟಾಚಲಮುದಲಿಯವರು ಸ್ಪೇಶಲ ಠರಾವು ತರಬೇಕೆಂದರು. ಅದೇನೂ ಅಂಥ ಮಹತ್ವದ ವಿಷಯವಲ್ಲೆಂದು ಅಧ್ಯಕ್ಷರು ಮಂಜೂರಿ ಕೊಡಲಿಲ್ಲ.

ಸರ್ವಶಕ್ತಿಯನ್ನುಪಯೋಗಿಸಿ ಕಾಯದೆಭಂಗ ಮುರಿಯುವರು

—(೮)—

ಮದ್ರಾಸ ಇಲಾಖೆಯ ಕೌನ್ಸಿಲ ಸಭೆಯು ಮೊದಲ ಸೋಮವಾರ ದಿವಸ ಪ್ರಾರಂಭವಾಯಿತು. ಆಗ ಗವರ್ನರಸಾಹೇಬರು ಭಾಷಣ ಮಾಡುವಾಗ ಕಾಯದೆಭಂಗದ ಚಳವಳಿಯನ್ನು ಮುರಿಯಲು ಬ್ರಿಟಿಶ ಸಾಮ್ರಾಜ್ಯದಲ್ಲಿರುವಂಥ ಎಲ್ಲ ಶಕ್ತಿಯನ್ನು ಉಪಯೋಗಿಸುವೆವೆಂದು ಉದ್ಗಾರ ತೆಗೆದಿದ್ದಾರೆ. ಸಾಹೇಬರಂತೆ ಕಾಂಗ್ರೆಸದವರೂ ತಮ್ಮ ಶಕ್ತಿಯನ್ನೆ ವೆಚ್ಚಮಾಡಿ, ತಮ್ಮ ಧ್ಯೇಯವನ್ನು ಪೂರ್ಣಮಾಡಿಕೊಳ್ಳುವ ಪಂಥತೊಟ್ಟಿದ್ದಾರೆ. ಯಾವದು ಗೆದ್ದಿಯುವದೆಂಬದನ್ನು - ಸುಖವಸ್ತುಗಳು ಎದುರು ನೋಡುವರು.

ರಾವುಂಡಬೇಬಲಕ್ಕೆ ಯಶ

—(೮)—

ಸಾಹೇಬರು ಕಾಯದೆಭಂಗದ ಮೊಲೋ ಪ್ರಾಟನ ಮಾಡಲೆಣಿಸಿದಾಗ, ರಾವುಂಡಬೇಬಲಕ್ಕೆ ಯಶಬಂದಿಲೆಂದು ಹಾರೈಸಿದ್ದಾರೆ. ರಾವುಂಡಬೇಬಲದ ಯಶವೆಂದರೆ - ಅರ್ಧಕ್ಕಿಂತ ಹೆಚ್ಚು ಕಾಂಗ್ರೆಸದ ಜಯವೆಂಬದನ್ನು ಸಾಹೇಬರು ಪೀಡಿತವಾಗಿ ತಿಳಿಯಬೇಕಲ್ಲವೇ?

ಪಂಜಾಬದ ಪ್ರಮುಖರ ದಸ್ತಗಿರಿ.

ಜನವರಿಯಲ್ಲಿ ದಿನದ ದೆಸೆಯಿಂದ ಪಂಜಾಬದಲ್ಲಿ ಅನೇಕ ಜನ ಪ್ರಮುಖರನ್ನು ಹಿಡಿದಿದ್ದಾರೆ. ಢಾಲಾ ಧುನಿಚಂದ, ಪಂಡಿತ ಸಂತಾನಮ, ಪಂಡಿತ ಠಾಕೂರದತ್ತ ಮುಲ್ತಾನಿ ಮೊದಲಾದವರು ಪ್ರಮುಖರಾಗಿದ್ದಾರೆ. ಇವರು ತುರಂಗ ಬಿಟ್ಟು ಬಂದ ಬಹಳ ದಿವಸಗಳಾಗಿವೆ.

ವಕೀಲರು ಬಿಟ್ಟ ಬಾಣ ಹಿಂದಕ್ಕೆ ತಕ್ಕೊಳ್ಳಲಿಲ್ಲ.

—:*:—

ಶಾ. ಬ. ಕಂಬಳಿಯವರು ದಿವಾಣಶಾದರೆಂದು, ಅವರ ಅಭಿನಂದನ ಮಾಡಿದ ಕಾರಣ್ಣು ಅವರಿಗೆ ಕಳಿಸಬೇಕೆಂದು ಹುಬ್ಬಳ್ಳಿಯ ವಕೀಲರ ಸಂಘದಲ್ಲಿ ಠರಾವು ಬಂತು. ಶ್ರೀ ಪಾವಟೆಯವರೇ ಅಧ್ಯಕ್ಷತಾದರು. ವಕೀಲರು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿರುವರು. ಶಾ. ಬ. ರವರಿಗೆ ಹೋಟು ಸಹ ಕೊಟ್ಟಿಲ್ಲ. ಇಂಥವರು ಹೇಗೆ ಅಭಿನಂದನ ಮಾಡುವದೆಂಬ ಪ್ರಶ್ನೆ ಹೊಟ್ಟು, ಅಭಿನಂದನ ಮಾಡಕಕ್ಕದ್ದಲ್ಲೆಂಬ ಠರಾವು ಸಮಾನುಮತದಿಂದ ಪಾಸಾಯಿತು.

ಗೋದಿಯ ವ್ಯಾಪಾರಕ್ಕೆ ಮಂದಿಯು

—(೦)—

ಉತ್ತರ ಹಿಂದುಸ್ಥಾನದಲ್ಲಿ ಹತ್ತು ಲಕ್ಷ ಟನ್ನ ಗೋದಿಯು ಸಿಲಕು ಬಿದ್ದಿದೆ. ಆಸ್ಟ್ರೇಲಿಯಾ ಮತ್ತು ಬೇರೆ ದೇಶಗಳ ಗೋದಿಯು ಇಂಗ್ಲಂಡಕ್ಕೆ ಹೋಗುವ ಮುಂಚೆತವಾಗಿಯೇ ಈ ಗೋದಿಯು ಇಂಗ್ಲಂಡಕ್ಕೆ ಹೋಗಲೆಂದು ಆ ಪ್ರಾಂತದ ರೇಲ್ವೆ ಕಂಪನಿಗಳು ಇದರ ಗೂಡ್ಸಿನ ದರವನ್ನು ಕಡಿಮೆ ಮಾಡಿರುತ್ತವೆ. ಆದರೆ ಇದು ಕರಾಚಿ ಬಂದರದಿಂದ ಆರು ನೂರು ಮೈಲುಗಳಾಚೆಯಿಂದ ಬಂದಿದ್ದಿರಬೇಕು.

ಸರದಾರ ಪಟೇಲರು ಇಂದೇ ಕಾಯದೆ ಮುರಿಯುವದಿಲ್ಲ.

—(***)—

ಅಹಮದಾಬಾದನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಸರದಾರ ಪಟೇಲರಿಗೆ ಎಂಡು ತಿಂಗಳ ಶಿಕ್ಷೆ ಮಾತ್ರಾತಭಾರದೆಂದು ಹುಕುಮು ಮಾಡಿದ್ದಾರೆಯೇ; ಸರದಾರರು ಸದ್ಯ ಕಾಯದೆಭಂಗ ಮಾಡುವದಿಲ್ಲ. ಜಾಂಜೋಲ್ಲಿ, ಭಾರಾಸಿ ಮೊದಲಾದ ತಾಲೂಕಗಳಲ್ಲಿ ಸಂಚಾರ ಮಾಡಿ, ಅವಶ್ಯವಾದ ಏರ್ಪಾಡುಗಳನ್ನು ಮಾಡಿ, ಕಾಯದೆಭಂಗ ಮಾಡುವರೆಂದು ಪ್ರಸಿದ್ಧವಾಗಿದೆ.

ತಿರುಪತಿಯ ದೇವಸ್ಥಾನಕ್ಕ ಮೇಲ್ವಿಚಾರಣೆಗಾಗಿ ಸ್ವತಂತ್ರವಾಗಿಯೇ ಒಂದು ಕಾಯದೆ ಇರಬೇಕೆಂದು, ಶ್ರೀ ರಂಗನಾಥ ಮೊದ್ಲಿಯಾರರು ಒಂದು ಕಾಯದೆಯನ್ನು ಮದ್ರಾಸದ ಕೌನ್ಸಿಲದಲ್ಲಿ ತಂತಕ್ಕೆ ಪರಿದ್ದಾರೆ.

ಬ್ರಾಹ್ಮಣೇತರ ಮುಖಂಡನಿಗೆ ಮೂರು ತಿಂಗಳು ಶಿಕ್ಷೆ ಮತ್ತು ಸಾವಿರ ರೂಪಾಯಿ ದಂಡ.

—೦:೦—

ಪುಣೆಯಲ್ಲಿ ಡಿಕ್ಟೇಟರರಾದ ಶ್ರೀ. ಜೇಧೆಯವರು ಎರಡನೆಯ ಡಿಕ್ಟೇಟರರು. ಇವರಿಗೆ ಪುಣೆಯ ಕಲೆಕ್ಟರರು ಮೂರು ತಿಂಗಳ ಶಿಕ್ಷೆ ಮತ್ತು ಹಂದು ಸಾವಿರ ರೂಪಾಯಿ ದಂಡ ಮಾಡಿ, ಬ ಕ್ಲಾಸ ಕೊಟ್ಟರು. ಸಾಹೇಬರು ಸಾವಿರ ರೂಪಾಯಿ ದಂಡ ಮಾಡಿದ್ದು ಮುಂದೆ ಡಿಕ್ಟೇಟರರಾಗುವಂಥವರನ್ನು ಹೆದರಿಸುವದಕ್ಕೋ, ಶ್ರೀ ಜೇಧೆಯವರು ಶ್ರೀಮಂತರಿದ್ದಾರೆಂದೋ ತಿಳಿಯದು.

ಡಿಕ್ಟೇಟರರು ಮುಕರಿದರು.

—(-:||:-)—

ಶ್ರೀ. ಜೇಧೆಯವರಿಗೆ ಶಿಕ್ಷೆಯಾದ ಕೂಡಲೆ, ನಾನು ಡಿಕ್ಟೇಟರನಾಗುತ್ತೇನೆಂದು ಅನೇಕ ಜನರು ಕಾಂಗ್ರೆಸ ಕಮೀಟಿಯ ಮುಂದೆ ಮುಕರಿದರು. ಸರಕಾರೀ ಕೆಲಸ ತೆ ವಾದರೆ ಅದನ್ನು ಕುಲಬಲಿಕ್ಕೆ ನಾಲ್ಕಾರು ದಿವಸಗಳಾದರೂ ಹತ್ತುತ್ತತೆ. ನೇಮಣೂಕಿಗೆ ಒಂದು ವಾರದ ತಯಾರಿಯ ಅವಕಾಶ ಬೇಕಾಗುತ್ತದೆ. ಡಿಕ್ಟೇಟರರಾಗತಕ್ಕವರಿಗೆ ನಿಮಿಷದ ಅವಕಾಶ ಹತ್ತುವದಿಲ್ಲ. ತುರಂಗಕ್ಕೆ ಹೋಗುವ ಉಮೇದಿ ನೋಡಿರಿ. ಈ ಉಮೇದಿಯು ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿಯೇ ಇರುವದು.

ಹಾವೇರಿಯಲ್ಲಿ ಶ್ರೀ. ಹವಟೆ ವೆಂಕಟರಾಯರಿಗೆ ದಂಡ

—(೦)—

ಇವರಿಗೆ ಶಿಕ್ಷೆ

—(೦)—

ಜವಾಹರಲಾಲರ ಸಂದೇಶವನ್ನು ಓದಿದ ಬಗ್ಗೆ ಹಾವೇರಿಯ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾಗಿದ್ದ ಶ್ರೀ. ಹವಟೆ ವೆಂಕಟರಾಯರಿಗೆ ಪ್ರಾಂತ ಅಧೀಸರಕಾದ ಮೆ. ಮೆಯರ ಸಾಹೇಬರು ಇನ್ನೂರು ರೂಪಾಯಿ ದಂಡ, ದಂಡ ಕೊಡದಿದ್ದರೆ - ಒಂದೂವರೆ ತಿಂಗಳ ಶಿಕ್ಷೆ ವಿಧಿಸಿದರು. ಶ್ರೀ. ಹವಟೆಯವರು ದಂಡ ಕೊಡದೆ ತುರಂಗಕ್ಕೆ ಹೋಗಲಿಕ್ಕೆ ಸಿದ್ಧರಾದರು. ತುರಂಗಕ್ಕೆ ಹೋದರೂ, ನಿಮ್ಮ ಜೆಂಡಿಗೆಯ ಮೇಲೆ ದಂಡ ವಸೂಲ ಮಾಡುತ್ತೇವೆಂದು ಸಾಹೇಬರು ಅನ್ನಲು - ಇವರು ದಂಡ ಕೊಟ್ಟರು. ಬಾಂಡೋಲಿಯ ರೈತರು ಸರ್ವಸ್ವ ಹಾನಿಗೆ ಗುರಿಯಾಗಿರುವಾಗ ಕಾವು ತುರಂಗಕ್ಕೆ ಹೋಗುವದು ದೊಡ್ಡ ವಿಷಯವಲ್ಲೆಂದು ಇವರಂದುಕೊಂಡಿದ್ದರು. ದಂಡ ತಪ್ಪದ್ದರಿಂದ,

ನೋಟೀಸು

—(೦)—

ನಾಗವ್ವಾ ಕೋಮ ರಾಯಾ ಮುಕಿಪ್ಪನವರ ಸಾ॥ ಅತ್ತಿಗೇರಿ ವ ಬೆಳವಳಕೊಪ್ಪ ತಾ॥ ಶಿಗ್ಗಾ ವಿ ಇವಳಿಗೆ

ಕೆಳಗಿ ಹೆಬ್ಬಟ್ಟಿನ ಗುರ್ತ ಮಾಡುವೆ ರಾಯಾ ತಾಯಿ ಬುಳ್ಳವ್ವಾ ಮುಕಿಪ್ಪನವರ ಸಾ॥ ಗೋನಾಳ ತಾ॥ ಗುಡಗೇರಿ ಅತನ. ಈ ನೋಟಿನಿಂದ ತಿಳಿಸುವದೇನಂದ್ರೆ ನೀನು ನನ್ನ ಲಗ್ನದ ಹೇಣತಿ ಯಿದ್ದು ಧಾರವಾಡ ವಿಜಯ ಪತ್ರದ ತಾ॥ ೮ ಮಾಹೆ ನವ್ಹಂಬರ ಸನ್ ೧೯೩೦ ನೇ ಯಿತ್ತಿಯ ಪತ್ರದಲ್ಲಿ ನನ್ನ ಹೆಸರ್ಲೆ ಕೊಟ್ಟ ನೋಟಿನ ಅಜಿಬಾತು ಸುಳ್ಳು ಯಿರುತ್ತದೆ ಲಗ್ನ ಆದ. ಲಾಗಾಯತ್ತು ನಿನ್ನಲ್ಲೇ ಯಿದ್ದು ಯೀವತ್ತಿನವರಗೂ ಅಲ್ಲೇ ಇಂದು ವರುಷಕ್ಕೆ ೪೦ ರೂಪಾಯಿ ದಂತೆ ದುಡಿದು ನಿನ್ನ ಹೊಟ್ಟೆಗೆ ನಿನ್ನ ಮಲತಾಯಿ ಹೊಟ್ಟೆಗೆ ಹಾಕಿದೆ ಈಗ ಅಜಮಾಸ ೫-೬ ತಿಂಗಳ ಲಾಗಾಯಿತು ನನಗೆ ವೈಯಲ್ಲಿ ಅಜಾರಿ ಆದ್ದರಿಂದ ನನ್ನನ್ನು ನೀನು ಮತ್ತು ನಿನ್ನ ಮಲತಾಯಿ ಇಬ್ಬರುಕೂಡಿ ಹೊರಗೆ ಹಾಕಿದರಿ ನಾನು ಯಿತ್ತ ಬಂದನಂತರ ೩-೪ ಸಾವಿರ ಅತ್ತೀ ಗೇರಿಗೆ ಕರೆಯಲಿಕ್ಕೆ ಬಂದರೆ ಬರುವದಿಲ್ಲೆಂದು ತಕರಾರ ಮಾಡಿದಿ ಕಾರಣ ಯೀಗ ಈ ನೋಟೀಸು ಕೊಟ್ಟಿರುತ್ತೇನೆ ಇದು ಮುಟ್ಟಿದ ಎಂಟು ದಿವಸದಲ್ಲಿ ನಿನ್ನ ವೈಮೇಲೆ ಲಗ್ನದ ಕಾಲಕ್ಕೆ ಇಟ್ಟ ದಾಗೀನೆಗಳು ಭಂಗಾರಬಳೆ ಜೋಡು ೧ ಕಿಮ್ಮತ್ತು ರೂಪಾಯಿ ೧೨೦ ಭಂಗಾರದ ಸರಿಗಿ ೧ ತೊಲಿ ೮॥ ರೂಪಾಯಿ ೨೦೦ ಒಂದಿ ೨ ಬೆಳ್ಳಿ ರೂಪಾಯಿ ೧೬ ಲಗ್ನದ ತೀರಿ ೧ ಕಿಮ್ಮತ್ತು ರೂಪಾಯಿ ೩೪ ಈ ಪ್ರಕಾರ ದಾಗೀನೆಗಳನ್ನು ತಕ್ಕೊಂಡು ಬಂದು ಸುರಳೀತ ಪ್ರಪಂಚ ಮಾಡುತ್ತಾ ಹೋಗಬೇಕು ಜರ ನಿನ್ನ ಮನತಿನಲ್ಲಿ ಪ್ರಪಂಚ ಮಾಡುವದು ಇರದೆ ಇದ್ರೆ ಮೇಲ ನಮೂದಿಸಿದ ಯಾವತ್ತು ದಾಗೀನೆಗಳು ಮತ್ತು ಲಗ್ನದ ಖರ್ಚಿನ ಬಾಬತ್ತು ೨೦೦ ರೂಪಾಯಿಗಳು ಮತ್ತು ನನ್ನ ಮಗಳು ನಿಂಗವ್ವಾ ಅಜಮಾಸು ೮ ವರ್ಷ ದಾಕಿ ಅತಿಯನ್ನು ತಂದು ಕೊಟ್ಟು ನನ್ನ ಕಡಿಂದಾ ಪಾವತಿ ತಕ್ಕೊಂಡು ನಿನ್ನ ಮರ್ಜಿ ಒಂದಂತೆ ಪಡಬೇಕು ಜರ ಅದರಂತೆ ಮಾಡದೆ ಉಡಿಕಿ ಮಾತಿಕೊಂಡಲ್ಲಿ ಮತ್ತು ನಿಂಗವ್ವನ ಲಗ್ನ ಮಾಡಿಕೊಳ್ಳಲಿ ನಿನ್ನ ಮೇಲಿನ ಮತ್ತು ನಿನ್ನ ಅಣ್ಣಾ ಮಾಡಿಕೊಂಡವನ ಮೇಲೂ ಮತ್ತು ನಿಂಗವ್ವನ ಲಗ್ನ ಮಾಡಿಕೊಂಡವನ ಮೇಲೂ ರೀತಿ ಪ್ರಕಾರ ಕೋರ್ಟಿನ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರು ಪುಸ್ತಕ ಮ್ಯಾಪಾರಿಗಳು)

ಮಾಳಮಡಿ
ಮತ್ತು ——————— ಧಾರವಾಡ
ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹಿ) ನಕಾಶೆ ಚಿತ್ರಗಳೂ ಬರವಣಿ ಸಾಮಾನುಗಳೂ ಯೋಗ್ಯ ಬೆಲೆಗ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಅಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತ ಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮಾಜ್ಯ ಸಂಗ್ರಹ ಪ್ರತಿ ಗಿಕ್ಕೆ	೨-೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧-೬-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸಾಪನೆ	೧ ೦-೦
೫. ಚರಿತ್ರ ಸಂಗ್ರಹ ಭಾ. ೧.	೪-೦-೦
೬. ಆಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೫-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ಗಿಕ್ಕೆ	೧- ೮-೦
೧೦. ಲ್ಯಾಂಡ ರೆಫ್ಲಿಸ್ಯೂ ಕೋಡು	೩-೧೧-೦
೧೧. ಗ್ರಾಮ ಸಮೂನೆ ಲೆಕ್ಕದ ಪುಸ್ತಕ	೨-೧೩-೦
೧೨ ಸೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ಗಿಕ್ಕೆ	೧-೧೦-೦
೧೩. ಇಸೂಪನೀತಿ ಕಥೆ ಭಾ ೧, ೨,	೨- ೪-೦
೧೪. ಕಾರ್ತನ ಕಂಠಾಭರಣ .	೧-೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ಪ್ರ ಇಲಾಜ ಮಾಡಬೇಕಾದೀತು ತಿಳಿಯುವದು ಈ ನೋಟೀಸಿನ ಖರ್ಚು ನಿನ್ನ ತಲೀ ಮೇಲದೆ

ತಾ॥ ೨೨ ಮಾಹೆ ನವ್ಹಂಬರ ಸನ್ ೧೯೩೦ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ರಾಯಾ ತಾಯಿ ಬುಳ್ಳವ್ವಾ ಮುಕಿಪ್ಪನವರ ಅತಂದು ಅದೆ

ನೋಟೀಸಿನವರಗೆಗಳು

—(೦)—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದ ರೂಪಾಯಿ ಮುಂದೆಂಪ್ರತಿಯೊಂದು ವಳಿಗೆ ಒಂದೂವರ ಅಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದ ಅಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಅಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಧಾರವಾಡದಲ್ಲಿ

ಅರಗಡಿ ಮತ್ತು ಬಂಗಲೆಯ ಮಾರಾಟ

ಮು ನಂ. ೧೫೮೬ ದುಮ್ಮಜಿನ ಅಂಗಡಿ ಮಂಗಳವಾರಪೇಟೆ ಜಡಳ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕೆಲ್ಲೆದಲ್ಲ ಶ್ರೀ. ಹೇಬಳಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೆಸರೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ

K N 143

ವಿಜಯ

ನಿತ್ಯ ಪತ್ರಿಕೆ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾ ಹಾಯರ್ ಬಾಳಾಹಾಯರ್ ಹೊಸಕೇರಿ.

ಪರ್ಷ ೧೧ ಧಾರವಾಡ ರವಿವಾರ ತಾರೀಖು ೨೩ ನೇ ನವ್ಹೆಂಬರ ೧೯೩೦ (ಸಂಚಿಕೆ ೨೫೬

ಮೆರವಣಿಗೆಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮೆರವಣಿಗೆಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾವೆರೂಢರ ಅಸೇಚಿ, ಶ್ರೀ. ಅರೂಢ ಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸದಾನಂದ ಇವರ ತೀರ್ಪು ಕೊಡಲ್ಪಟ್ಟಿದೆ. ಮೊಕದ್ದಮೆ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಪುಸ್ತಕದ ಒನರ ಆಗಬಹುದೆ ಸಾಹಸದು ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮೆರವಣಿಗೆಕ್ಕೆ ಸಿದ್ಧ ಮಾಡಿರುತ್ತದೆ ಅದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವತೆ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕುಸುವೆನಿಸುವವು, ಆದ್ದರಿಂದ ಗ್ರಾಹಕರು ಶೀಘ್ರ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಪಾಣಿಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ಲಿಬ್ಬಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಹಾನೇಶ್ವರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ದೇಶಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ಶನ್ನ ವರ್ಷಸ್ಸಿನ ಪ್ರಕಾರ ತಿಂಗಳಾ ಕನಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪುಸ್ತಕ ಬೇಕಾದಲ್ಲಿ ಸಮಕ್ಷವಾ ಅಥವಾ ಒಂದು ಆಣೆ ಪೋಸ್ಟ ತೀಕಿಟ ಕಳಿಸಬೇಕು.

ಆರ್. ಬಿ. ಮುಖೋಪಾಧ್ಯಾಯ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯ ಎಂಟು ಲಕ್ಷದ ಮೇಲುಂಟು. ಇಷ್ಟ ಹೊಂದಿ ಮೊದಲಾಗಿ ಬ್ಯಾಂಕಿನ ಎಲ್ಲಿ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಶೀನು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜನ್ಮಾಗಿ ಬಡ್ಡಿ ಕೊಡಲ್ಪಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಿಕೊಳ್ಳಬೇಕು.

ಮಲ್ಲಿಕಾರ್ಜುನ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ಸಾಲ್ಯಾ ಅರ್ಥ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಬಾಗೀನಗಳನ್ನು ಪತ್ತೇ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ.

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೮-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ

ಮ್ಯಾ. ವಿಜಯ ಧಾರವಾಡ.

ಭಾರತಾಪತ್ರಿಕೆ ಯ ಸಾರಾಂಶ ಮತ್ತು ಇತರ ವೇಳೆ ಪ್ರಕಟಿಸಲ್ಪಟ್ಟಿ ಇಷ್ಟು

ವಿಜಯ.

ಜಾಳುಕ್ಯವಿಶ್ರಮವರ್ಷ ಲಾಂಛನ ಮಾರ್ಗತ್ರಿವರ್ಗ ಶುದ್ಧಿ.

ರಾವುಂಡ ಟೇಬಲ.

ಡಾಕ್ಟರ ಮುಂಜೆಯವರ ಭಾಷಣ.

ಇಂಗ್ಲಿಷ ಜನರು ಹಿಂದುಸ್ಥಾನದ ಹಿತಚಿಂತೆ ಮಾಡುತ್ತಾರೆಂದು ಲಾರ್ಡ ಪೀಲಸಾಹೇಬರು ಹೇಳುತ್ತಾರೆ. ಅವರು ಹಾಗೆನ್ನಬಹುದು. ಆದರೆ ಒಳ್ಳೆ ಲಿಗನು ಹಾಲಿನ ದೆಸೆಯಿಂದ ಆಳಿನ ಹೊಟ್ಟೆ ನೋಡುವಂತೆ, ಇಂಗ್ಲಿಷ ಜನರು ಹಿಂದುಸ್ಥಾನದ ಕ್ಷೇಮ ನೋಡುತ್ತಿದ್ದಾರೆ. ಇಂಗ್ಲಿಷರಿಗೆ ಹಿಂದುಸ್ಥಾನದಲ್ಲಿ ಯಾವ ವಿಷಯದಲ್ಲಿಯೂ ಗುತ್ತಿಗೆಯಿಲ್ಲಂತೆ. ಲಾರ್ಡ ಪೀಲರು ಅನ್ನುತ್ತಾರೆ. ಹೀಗನ್ನುವದು ಪೂರಾ ಸುಳ್ಳು ಸರ ಬಾಟಲ ಪ್ರಿಯರನೆಂ ದೋರ್ವ ಮುಂಬಯಿಯ ಗವರ್ನರನು ಸೈಕಿನವನ್ನ ಳಂಪನಿಗೆ ಸಮುದ್ರ ದಂಡೆಯ ಅಡಗದ ವ್ಯಾಪಾರದ ಗುತ್ತಿಗೆ ಕೊಟ್ಟು, ಹಿಂದೀ ಹಡಗಗಳ ವ್ಯಾಪಾರವನ್ನು ಮುಣುಗಿಸಿದನು. ಅದೇ ಪ್ರಕಾರ ಮ್ಯಾಂಚೆಸ್ಟರದ ಹಿತಕ್ಕಾಗಿ ಹಿಂದುಸ್ಥಾನದ ಜವಳಿಯ ವ್ಯಾಪಾರ ಮುಣುಗಿಸಿದರೆಂದು ವಿಲ್ಸನರೆಂಬಸಾಹೇಬರು ಅರಿದ ಸ್ಪಷ್ಟನೇ ಹೇಳುತ್ತಿದ್ದರು. ದಂಡು, ಸಿವಿಲ ಸರ್ವೀಸ ಮತ್ತು ವೈದ್ಯಕೀ ಖಾತೆಗಳು ಇಂಗ್ಲೇಜರಿಗಾಗಿಯೇ ಕಾದಿಟ್ಟಂತಾಗಿವೆ. ಹಿಂದುಸ್ಥಾನದಲ್ಲಿ ನಡೆದ ಜಳವಳಿಯ ಕಸವು ಮೋಡಿರಿ. ಪೋಲಿಸರ ಬಡಿಗೆಯ ಹೊಡತಕ್ಕೆ ಜನರು ಹೆದರಂದಾಗಿದ್ದಾರೆ. ನಾನು ಸ್ವತಃ ಎರಡು ಸಾರೆ ಶುರಂಗಕ್ಕೆ ಹೋಗಿ ಬಂದಿದ್ದೇನೆ. ನನ್ನ ಮಿತ್ರರು ಮಾಡಿದ ತಿರಸ್ಕಾರವನ್ನು ಸಂಗಿಕೊಂಡು, ನಾನು ಇಲ್ಲಿಗೆ ಬಂದಿದ್ದೇನೆ. ಇಂಗ್ಲಂಡ ಮತ್ತು ಹಿಂದುಸ್ಥಾನದ ೧೨೫ ವರ್ಷಗಳ ಸಂಬಂಧ ಕಡಿಯವಾರದ್ದೊಂದೇ ಕಾರಣ ತಾನು ಭಾರ ಹೇರಿದರೆ- ಹಂಚೆಯ ಸೊಂಟ ದುರಿಯುವಂಥ ಕಪ್ಪನ್ನು ಬ್ರಿಟಿಶ ಸರಕಾರವು ಮಾಡುತ್ತೇನೆಂಬದನ್ನು ನೋಡಬೇಕಾಗಿದೆ. ಇಲ್ಲಿ ನಾನು ಭವತಿ ಭಿಕ್ಷಾಂದೇಹಿ ಎಂದು ವನಾಹಾತಿನ ಸ್ವರಾಜ್ಯದ ಬಿಕ್ಷೆ ಬೇಡಲಿಕ್ಕೆ ಬಂದಿಲ್ಲ. ಪೂರ್ಣ ಜವಾಬದಾರ ಸ್ವರಾಜ್ಯ ಧೊರೆತ ಹೊರ್ತು ಭರತಖಂಡದ ಸಮಾಧಾನವಾಗಲಾರದು.

ಸ್ವೌಲಾಸ್ಯ ಮಹಮ್ಮದಲ್ಲಿಯವರ ಭಾಷಣ.

ಡಾಕ್ಟರ, ಮುಂಜೆಯವರಂತೆ ನಾನೂ ನನ್ನ ದೇಶಬಾಂಧವರಿಂದ ದ್ರೋಹದ್ರೋಹಿ ಎಂದೆನಿಸಿಕೊಂಡು ಇಲ್ಲಿಗೆ ಬಂದಿದ್ದೇನೆ. ಲಾರ್ಡ ಪೀಲಸಾಹೇಬರ ವಿಚಾರಗಳು ಗಿಸದ ತೆಳ್ಳಿಕೆ ಹೊಂಗೆಯಂತಿದ್ದು, ಅವನ್ನು ತುಂಡರಿಸಿ ಚಲ್ಲಿಕ್ಕದ್ದು. ಬ್ರಿಟಿಶರು ಸ್ವಾತಂತ್ರ್ಯವಾಣಿ ಎಡಮಂಡ ಬರ್ಕನನ್ನು ಮರೆತಿದ್ದಾರೆ. ಮೈ. ಮ್ಯಾಕಡೋನಾಲ್ಡ ಸಾಹೇಬರು ನನ್ನ ಹಳೇ ಮಿತ್ರರು. ಇವರು ಹಿಂದುಸ್ಥಾನದ ಕಾರಭಾರದಲ್ಲಿ ಸ್ಥಿತ್ಯಂತರವಾಡುವೆನೆಂದು ಪ್ರತಿಸುತ್ತೇನೆ. ಎಲ್ಲರಿಗಿಂತ ಈ ಪರಿಷತ್ತು ಕರೆದ ಬಾದಶಹ ಪಂಚಮಜಾರ್ಜರಲ್ಲಿ ನನ್ನ ನಂಬಿಗೆಯುಂಟು. ನಾನು ಪ್ರಜಾಸತ್ತಾತ್ಮಕವಾದಿಯಾಗಿದ್ದರೂ, ಬಾದಶಹರಲ್ಲಿ ನನ್ನ ಹೆಚ್ಚು ವಿಶ್ವಾಸವುಂಟು ಅವರಿಗೆ ಸಾರ್ವಭೌಮರೆನ್ನರು; ಅನ್ನದಿರರು. ಅವರಿಗೆ ಹಳೇ ಮತ್ತು ಹೆಚ್ಚಿನ ಪ್ರಧಾನರಿಗಿಂತ ಹಿಂದುಸ್ಥಾನದ ಹೃದ್ಗತವು ಹೆಚ್ಚಾಗಿ ತಿಳಿಯುತ್ತದೆ. ಸಿರಿಕೋಟಿ ಹಿಂದೀ ಪ್ರಜರಿಗೆ ನ್ಯಾಯ ಕೊಡಿರೆಂದು ಇವರೊಬ್ಬರಿಗೇ ನಾನು ಬೇಡಿಕೊಳ್ಳುತ್ತೇನೆ. ಹಿಂದೀ ಸಂಸ್ಥಾನಿಕರು ನನ್ನ ಸ್ವರಾಜ್ಯಾಕಾಂಕ್ಷೆಯ ಬಗ್ಗೆ ತೋರಿಸಿದ ಸಹಾನುಭೂತಿಯ ದೆಸೆಯಿಂದ ನಾನು ಅವರಿಗೆ ಋಣಜ್ಞನಾಗಿರುತ್ತೇನೆ. ಈ ಪರಿಷತ್ತು ಮುಗಿದ ಬಳಿಕ, ನಾನು ಗುಲ್ಬಾರ್ಗಾ ನನ್ನನೆನಿಸಿಕೊಂಡು, ಹಿಂದುಸ್ಥಾನಕ್ಕೆ ತಿರಿಗಿ ಹೋಗುವೆನು. ಸ್ವಾತಂತ್ರ್ಯದ ಸತ್ವ ತಕ್ಕೊಂಡೇ ಹೋಗುವೆನು. ಇಂಗ್ಲಂಡದಲ್ಲಿರುವಷ್ಟರಲ್ಲಿ ಸ್ವಾತಂತ್ರ್ಯ ದೊರಕಿಸುವೆನು. ಅಥವಾ ಸತ್ತೇ ಹೋಗುವೆನು. ಲಾರ್ಡ ಆಯರ್ವಿನಸಾಹೇಬರು ನನ್ನ ಮಿತ್ರರಿದ್ದರೂ, ಅವರ ರಾಜ್ಯಕಾರಭಾರದ ಪದ್ಧತಿಯು ನನಗೆ ಸಮ್ಮತವಿಲ್ಲ. ನಾನು ಸರ ಸಪ್ರ ಜಯಕರರ ಕೂಡ ಮಹಾತ್ಮರೊದಿಗೆ ಒಡಂಬಡಿಕೆ ಮಾಡಿಸಲು ಸಿದ್ಧನಾದೆನು. ಅದಕ್ಕೆ ಯಶಬರಲಿಲ್ಲ. ಆದರೂ ಇಲ್ಲಿ ಯಶಬರುವುದು ಅಪೇಕ್ಷಿಸುತ್ತೇನೆ. ಇಡೀ ಹಿಂದುಸ್ಥಾನದ ಪುರುಷತ್ವವನ್ನು ನಷ್ಟಮಾಡುವಂತೆ ಲಷ್ಕರೀ ಖಾತೆಯ ಭೋರ್ಣಣವಾಗಿದೆ. ಆದರೆ ೩೨ ಕೋಟಿ ಜನರು ನಾಹುಲ್ಲಿಕ್ಕೆ ಸಿದ್ಧವಾದ್ದರಿಂದ ಎಲ್ಲರನ್ನೂ ಕೊಲ್ಲುವದು ಧೊರನ್ನ ಶಕ್ತಿಗೂ ಶಕ್ಯವಲ್ಲ. ಯಾವಾಗಲು ಹಿಂದುಸ್ಥಾನದಲ್ಲಿ ಒಡಕನ್ನು ಬಾವಾ ಬ್ಲಂತೆಂದು ಹೆದರಿಸುವಂತೆ ಹೆದರಿಸಿ ತೋರಿಸುತ್ತಾರೆ. ಈ ಖುಟಿಲ ನೀತಿಯೇ ಬ್ರಿಟಿಶ ರಾಜಕಾರಣದ ಬುಡದಲ್ಲುಂಟು. ಹಿಂದೂ ಮುಸಲಮಾನರು ತಂತಮ್ಮೊಳಗೆ ಒಡಕಾಡುತ್ತಾರೆಂದು ಈಗ ನಿಶ್ಚಯ ಮಾಡುತ್ತಿದ್ದಾರೆ. ನನ್ನ ಹುಟ್ಟು ಹಿಂದುಸ್ಥಾನ, ಬೆಳದದ್ದು ಹಿಂದುಸ್ಥಾನ. ಶೇಷನ ಹಿಂದುಸ್ಥಾನ, ಧರ್ಮ ಹಿಂದುಸ್ಥಾನ ಎಲ್ಲವೂ ಹಿಂದುಸ್ಥಾನವೆಂದು ತಿಳಿಯುವಿ. ಹಾವಿಬ್ಬರೂ ಹಿಂದಾದ ರೆ ಸ ರ ಕೀಯರ ದಿಬ್ಬಾಳಿಕೆಯು ಹಿಂದುಸ್ಥಾನದಲ್ಲಿ ನಡೆಯುವದು ತಕ್ಕವೇ ಆಗಲಾರದು. ನಾವಿಬ್ಬರೂ ಅಣ್ಣತಮ್ಮಂದಿರು ಇಂದಿನ ಅಸಹಕಾರ ಚಳವಳಿಯಲ್ಲಿದ್ದೆವು. ಲಾರ್ಡ ರೀಡಿಂಗಸಾಹೇಬರು ನಮ್ಮನ್ನು ಶುರಂಗದಲ್ಲಿ ಹಾಕಿದರು. ಲಾರ್ಡ ರೀಡಿಂಗಸಾಹೇಬರು ಏನಾದರೂ ತಪ್ಪು ಮಾಡಿದರೆ ಅವನ್ನು ಶುರಂಗದಲ್ಲಿ ಹಾಕುವ ಅಧಿಕಾರವು ನಮಗಿರಬೇಕು. ವನಾಹಾತಿನ ಸ್ವರಾಜ್ಯದಲ್ಲಿ ನನ್ನ ಪೂರಾ ನಂಬಿಗೆಯಿಲ್ಲ. ಪೂರ್ಣ ಸ್ವಾತಂತ್ರ್ಯವಾದಿಯಾಗಿದ್ದೇನೆ. ನೀವು ಈಗ ವನಾಹಾತಿನ ಸ್ವರಾಜ್ಯ ಕೊಡದಿದ್ದರೆ- ಅಮೇರಿಕೆಯಂತೆ ಹಿಂದುಸ್ಥಾನವೂ ಸ್ವಾತಂತ್ರ್ಯವಾಗಿ ಜಗತ್ತಿನಲ್ಲಿ ಮೆರೆಯುವದೆಂದು ಖಚಿತವಾಗಿ ತಿಳಿಯಿರಿ. ಅಂಥ ಪ್ರಸಂಗ ಬರಬೇಡೆಂದು ನಾನು ಇಚ್ಛಿಸುತ್ತೇನೆ. ಪೂರನೆಯ ಜಾರ್ಜನು ಆಮೇರಿಕೆ ಕಳೆದನು. ಪಂಚಮ ಜಾರ್ಜಬಾದಶಹರು ಹಿಂದುಸ್ಥಾನವನ್ನುಳಿಸಿಕೊಂಡರೆಂದು ಜಗತ್ತಿನ ಇತಿಹಾಸದಲ್ಲಿ ಕೀರ್ತಿಪಡೆಯುವಿ. ನಾನು ಬುದ್ಧಿವಂತರಿಂದ ಇಷ್ಟು ಮಾತಾಡುವಾಗಲೇ ಆಯಾಸವಾಗಿದೆ. ಹಿಂದುಸ್ಥಾನವು ಇಂಗ್ಲಂಡದಂತೆ ಸ್ವತಂತ್ರವಾದ ದೇಶವೆಂದು ಅಧ್ಯಕ್ಷರಾದ ಮೈ. ಮ್ಯಾಕಡೋನಾಲ್ಡ ಸಾಹೇಬರು ಜಾಹೀರಮಾಡಿದ್ದೇ ನನಗೆ ಸ್ವನೇ ಭಾಷಣ ಮಾಡಲಿಕ್ಕೆ ಹೇಳುವರೆಂದು ಆಶಿಸುತ್ತೇನೆ.

ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂಬ ಚರ್ಚೆಯ.

(೨)

ರಾವುಂಡ ಟೇಬಲದ ಪ್ರತಿನಿಧಿಗಳು ವನಾಹಾತಿನ ಸ್ವರಾಜ್ಯದ ಒಂದು ಭಾಗವಾದ ಹಿಂದುಸ್ಥಾನ ಸರಕಾರದ ಆಡಳಿತೆಯಲ್ಲಿ ತಮಗೆ ಜವಾಬುದಾರಿಕೆ ಗುಮಂಥ ಹಕ್ಕು ಸ್ವಾತಂತ್ರ್ಯ ಬೇಡುವರು. ಇದು ದೊರೆಯುವದೆಂದು ಬ್ರಿಟಿಶ ಮಂತ್ರಿಗಳು ಜಾಹೀರ ಮಾಡಿದ ಕೂಡಲೆ, ಅದಕ್ಕೆ ಕೂಡಿಸಿ, ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂದು ಎಂಥೆಂಥೇ ಕುದುರೆಯನ್ನು ಮುಂದೆ ಹಾಕುವರು. ಡೆಲಿಗೇಟರು ಕಾಯದೆಭಂಗವನ್ನು ಅಲ್ಲಗಳೆಯುವದು ನಿಜ; ಆದರೆ ಅವರಿಗೆ ತಮ್ಮ ಸಾವಿರಾರು ಜನರು ಶುರಂಗದಲ್ಲಿರುವದು ನಾಚಿಕೆಯ ಮಾತಾಗಿದೆ. ಇವರನ್ನು ಬಿಡಿಸಿಕೊಳ್ಳಲು, ಮುಂದಾಗಿ ಪ್ರಯತ್ನಿಸುವರು.

ಅಜಪತ್ರಾಯರ ಮಗಳಿಗೆ ಶಿಕ್ಷೆ.

ಹತ್ತು ಸಾವಿರದ ಜಾಮೀನು.

—(೦)—

ಧಾರವಾಡ ಒಪ್ಪಪತ್ರಾಯರ ಮಗಳು ಶ್ರೀ ಸಾ॥ ಸಾರ್ವತಿಬೇಲಿಗೆ ಧಾರವಾಡ್ರೋಹದ ಅಪರೋಪದ ದೆಸೆಯಿಂದ ಹತ್ತು ಸಾವಿರ ರೂಪಾಯಿಯ ಜಾಮೀನು ಜೋಡಿದರು. ಜಾಮೀನು ಕೊಡದ್ದರಿಂದ, ಅವರು ತಿಂಗಳ ಸಾದಾ ಶಿಕ್ಷೆ ವಿಧಿಸಿದರು.

ಡಾಕ್ಟರ ಹರ್ಡಿಕರರ ಮೇಲೆ
ಸುನ್ನ ವಾರಂಟು.

—(೦)—

ಡಾಕ್ಟರ ಹರ್ಡಿಕರರು ಮುಂಬಯಿಯಲ್ಲಿದ್ದಾರೆ. ಪೋಲಿಸರು ಇವರ ವಾಸಸ್ಥಾನದಲ್ಲಿ ಝುಡತಿಗೆ ಹೋಗಿ, ಹಿಂದು ಯುನಿವಾರ್ಸಿಟಿ ಮತ್ತು ಒಂದು ಪದಕವನ್ನು ಜಪ್ತಮಾಡಿದ್ದಾರೆ. ಇವರ ಮೇಲೆ ವಾರಂಟುಂಟೆಂದೂ ತಾರಿಖ ನರ್ಸವಾನ ಪ್ರಸಿದ್ಧವಾಗಿರುತ್ತದೆ.

ಡಾಕ್ಟರ ಕಬ್ಬೂರರಿಗೆ ಶಿಕ್ಷೆ.

—(೦)—

ಇಲ್ಲಿಯ ಡಾಕ್ಟರರಾದ ಶ್ರೀ ನಾರಾಯಣರಾವ ಕಬ್ಬೂರ ಇವರಿಗೆ ಶಿಕ್ಷೆಯಲ್ಲಿ ಆರು ತಿಂಗಳ ಕಠಿಣ ಕೈದು ಮತ್ತು ಇನ್ನೂರು ರೂಪಾಯಿ ದಂಡವಾಯಿತು. ಇವರ ಮೇಲೆ ಇನ್ನೊಂದು ಅಪರೋಧವಿದ್ದು, ಅದರ ವಿಚಾರಣೆ ಮಾಗಶಿರ್ಷದಲ್ಲಿದೆ. ಇವರು ಕರ್ನಾಟಕದಲ್ಲಿ ಎರಡನೆಯ ಸರ್ವಾಧಿಕಾರಿಯು. ಇವರನ್ನು ಕಾಂಪ್ಲಾರದ ಜೇಲಿನಲ್ಲಿಡುವರು.

ಧಾರವಾಡದ ಲಿಮ್ಯಾಯಿಯವರಿಗೆ
ವಿಜಾಪೂರದಲ್ಲಿ ಶಿಕ್ಷೆ.

—(೦)—

ಇಲ್ಲಿ ಇಂಜಿನಿಯರ ಖಾತೆಯಲ್ಲಿದ್ದು, ರಜಾಗಿರಿಗೆ ವರ್ಗಾಗಿದ್ದ ಶ್ರೀ ಲಿಮ್ಯಾಯಿಯವರು ಗೃಹಸ್ಥಾಶ್ರಮಕ್ಕಾಗಿ ವಿಜಾಪೂರಕ್ಕೆ ಹೋಗಿದ್ದರು. ಅಲ್ಲಿ ಕಾಯದೆಭಂಗದ ಬಗ್ಗೆ ಭಾಷಣ ಮಾಡಲು ಮೆಜಿಸ್ಟ್ರೇಯವರ ಕೋರ್ಟಿನಲ್ಲಿ ಆರು ತಿಂಗಳ ಪಕ್ರನು ಶಿಕ್ಷೆ ಮತ್ತು ಹಿಂದೂವರ್ಷ ನೂರು ರೂಪಾಯಿ ದಂಡಕ್ಕೆ ಪಾತ್ರರಾದರು.

ಇದೇ ಪ್ರಕರಣದಲ್ಲಿ ಎರಡನೆಯ ಡಿಕ್ಟೇಟರರಾದ ಶ್ರೀ. ದೀಕ್ಷಿತರಿಗೆ ಹಿಂದು ವರ್ಷದ ಕಠಿಣ ಶಿಕ್ಷೆದಾಯಿತು.

ಶಾಂಪಾರಾಂದ ಶಿಕ್ಷಕರ ಹಕ್ಕಿನ
ಮೇಲೆ ಸೂರ್ಯಾಂತಿ.

—(೦)—

ಕಾರವಾರ ಜಿಲ್ಲೆಯ ಶೋಕಳಬೋರ್ಡಿನ ಶಿಕ್ಷಣ ಖಾತೆಯಲ್ಲಿ ಒಂದು ಸ್ಥಳದ ಪ್ರೌಢ ಶಿಕ್ಷಕರಿಗಾಗಿ ಕಾದಿಡಲ್ಪಟ್ಟಿದೆ. ಅದರಲ್ಲಿ ಸ್ಕೂಲಬೋರ್ಡಿನವರು ಈಗ ಶೆಂವಾದ ಈ ಸ್ಥಳದಲ್ಲಿ ಹಕ್ಕುದಾರರಾದ ಪ್ರೌಢ ಶಿಕ್ಷಕರನ್ನು ನೇಮಿಸಿದೆ, ಒಬ್ಬ ಮ್ಯಾಟ್ರಿಕ್ಯುಲೇಟನ್ನು ಕಂದು ಇವರ ಹಕ್ಕನ್ನು ಮುಣಗಿಸಿ ಬಿಟ್ಟರು. ಮ್ಯಾಟ್ರಿಕ್ಯುಲೇಟನ ಕನ್ನಡ ಶಿಕ್ಷಣವೆಷ್ಟು? ವಾಲ್ಕನೆಯ ಇಯತ್ತಿಯವರೆಗೆ ಇವನು ಆರು, ಏಳು ಇಯತ್ತೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಪರೀಕ್ಷೆ ತಿಳಿಯುವದು ಹೇಗೆ? ಪ್ರೌಢ ಶಿಕ್ಷಕರಿಗೆ ಶಿಕ್ಷಣದ ಮಾಡಿದು ತೋರಿಸಿ ಕೊಡುವದು ಹೇಗೆ? ಈ ಅನ್ಯಾಯದ ನೇಮಣೂಕಿಯನ್ನು ಬೋರ್ಡಿನವರು ರದ್ದುಮಾಡುವರೆಂದು ಆಶಿಸುತ್ತೇವೆ.

ಪ್ರ. ಡೊ. ಸೂ ಮಾರ್ಗಶೀರ್ಷಶುದ್ಧ
ಏಕಾದಶಿ ನಿರ್ಣಯ

—:*:—

ಈ ವರ್ಷ ಇದೇ ಮಾರ್ಗಶೀರ್ಷಶುದ್ಧ ಏಕಾದಶಿ ಸೋಮವಾರ ಮತ್ತು ಮಂಗಳವಾರ ಹೀಗೆ ಎರಡು ಏಕಾದಶಿ ಆಗುತ್ತವೆ. ಈ ಏಕಾದಶಿ ವಿಷಯದಲ್ಲಿ ಧರ್ಮ ಪಂಚಾಂಗದಂತೆ ಏಕಾದಶಿ ಮಾಡಬೇಕೆಂಬ ಸಂಶಯವು ಮೇಲಿಂದ ಮೇಲೆ ಜನರಿಗೆ ಬರಹತ್ತಿದ್ದರಿಂದ ಆ ಸಂಶಯವನ್ನು ಕಳೆಯಲಿಕ್ಕೆ ಶ್ರೀಮದ್ಗುರುಕ್ಷೇತ್ರಾಧಿಪತಿಗಳಾದ ಶ್ರೀಮತ್ ಶಿಷ್ಟಧ್ಯಾನತೀರ್ಥ ಶ್ರೀಪಾದಂಗಳವರು ಇದೇ ಧಾರವಾಡದಲ್ಲಿ ಜೋಶಿಸ್ಥ ಜನರ ಸಭೆಗೂಡಿಸಿ ಸೂರ್ಯಸಿದ್ಧಾಂತ ಪ್ರಕಾರ ಪಂಚಾಂಗವನ್ನು ಮಾಡಬೇಕೆಂದು ಪ್ರಮಾಣ ಸಹಿತವಾಗಿ ನಿರ್ಣಯಿಸಿ ಅದರಂತೆ ಸೂರ್ಯಸಿದ್ಧಾಂತ ಪಂಚಾಂಗವನ್ನು ಪ್ರಸಿದ್ಧ ಪಡಿಸಿದ್ದಾರೆ. ಅದರಲ್ಲಿ ಏಕಾದಶಿ ಎಗ್ಗು ಎಗ್ಗುವದೆಂಬುದು ಸ್ಪಷ್ಟವದೆ ಸಂಶಯವಿಲ್ಲ. ಕಾರಣ ಎಂಡು ಉಪವಾಸವಾಗುವವು. ಇದಲ್ಲದೆ ಸುಂಪುರ, ಸೊಲ್ಲಾಪುರ, ಸವಣೂರ, ಮುಂತಾದ ಪಂಚಾಂಗಗಳು ದೃಷ್ಟಾದೃಷ್ಟ ಧರ್ಮ ಕಾರ್ಯಗಳಿಗೆ ಸ್ವೀಕಾರ ಮಾಡಲಿಕ್ಕೆ ಯೋಗ್ಯವಲ್ಲವಾದ ಕಾರಣ ಸೂರ್ಯಸಿದ್ಧಾಂತರೀತ್ಯ ತಯಾರಿಸಿದ ಈ ಪಂಚಾಂಗರೀತಿನೇ ಧರ್ಮಾಚರಣವನ್ನು ಮಾಡಬೇಕು ಅಂತಾ ಶ್ರೀಗಳವರ ಆಜ್ಞಾಪ್ರತ್ರವು ಕೂಡ ಬಂದಿದೆ.

ಇಂತಿ ಮಾರ್ಗಶೀರ್ಷ
ಶು ೨ ಶನಿವಾರ ಕೃಷ್ಣಾಚಾರ್ಯ ಗುರ್ಜಳ

ಹರ್ಷಮಾನಸಾನ

—ಂ*ಂ—

ಸದ್ಯ ಶನಿಯು ಹಿಂದುಸ್ಥಾನಕ್ಕೆ ಏಳೂವರೀ ಸ್ಥಾನದಲ್ಲಿ ಬರಲಿರುವನು. ಗುರುವು ಅಂನೇ ಸ್ಥಾನದಲ್ಲಿರುತ್ತಿನೆಂದು ಶ್ರೀ. ಶಂಭುಶಾಸ್ತ್ರಿ ಎಂಬವರು ಹೇಳುತ್ತಾರೆ.

ಪಹಣೇಲದ ಶ್ರೀ. ವೇದಕ ವಕೀಲರಿಗೆ ಕೈ ಬೇಡಿ ಹಾಕಿ, ಶವಾಸಣಿಗಾಗಿ ಚಾಂಗೇಂಕ್ಕೆ ನಡಿಸಿಕೊಳ್ಳುತ್ತಾ ಹೋಗಿ ತಿರಿಗಿ ನಡಿಸಿಕೊಳ್ಳುತ್ತಾ ಕರಕೊಂಡು ಬಂದರು.

ಬಾಮರಾವತಿಯಲ್ಲಿ ಕೌನ್ಸಿಲ ಚುನಾವಣೆಯ ವೇಳೆಯಲ್ಲಿ ಮೂರುಶತ್ರೆಗಳನ್ನು ಸಿಂಗಾಸಿ, ನೀವು ಯಾವ ಶತ್ರೆಗೆ ಹೋಟು ಕೊಡುವಿರೆಂಬ ಭೋರ್ಡುಗಳನ್ನು ಅವುಗಳ ಎದುರು ಮಗ್ಗಲಿಗೆ ತೂಗು ಹಾಕಿ, ಊರ ತುಂಬ ಮೆರೆಸಿದರು.

ಶಿಗ್ಗಾವಿಯ ಶ್ರೀ ಮಾಧವರಾವ ಹಳಪೇಟೆ ಮೊದಲಾದ ಎಲ್ಲ ಆರೋಪಿಗಳಿಗೆ ಐದೈದು ತಿಂಗಳ ಸಶ್ರಮ ಶಿಕ್ಷೆಯಾಯಿತು.

ಕನ್ನಡ ವಾಙ್ಮಯದಲ್ಲಿ
ಹೊಸ ಮಾದರಿಯ ಬಿಸಿ ಬಿಸಿ ಅಡಿಗೆ!

ಹೆತ್ತುಪ್ಪ ಕರಿಗಡುಬು!

(ಕನ್ನಡಿಗರ ಕೂಟದ ಸಾಹಿತ್ಯಶಾಖೆಯಿಂದ ನೆಕುಸುಮ)

ಮೊಣಕಾಲ ಮಡುಸಿ, ತಗಣಿ ಒರದ, ನಾನಾವಿಧ ತಿಂಡಿಯುಕೊಂಡ, ಎದೆಯೂ ಹಾಡುತಿದೆ ನೋಡಿದಿರಾ? ಮೊದಲಾದ ಕವಿತೆಗಳನ್ನುಳಕೊಂಡಿದೆ. ಬಗಲಲ್ಲಿ ಕಟ್ಟಾಡಿಸಿದರೂ ಎರಡಪ್ಪು ನಗೆಯು ಈ ಪುಸ್ತಕದೊಳಗಿನ ಒಂದೊಂದು ಸಾಲಿಗೂ ಬಂದು ಹೊಟ್ಟೆ ಕುಟ್ಟು ಹಿಡಿಯದಿರಲಾರದು. ನಿಮ್ಮ ದುಡಿತದ ದಣಿವು ಹಿಂಗ ಬೇಕಾದರೆ ಏನೇ ಕಡುಬಿನ ಕಾಳಗದಲ್ಲಿ ಸೇರಲೇ ಬೇಕು. ಕನ್ನಡ ನಾಡಿನ ಭೋಜನ ವೈಶಿಷ್ಟ್ಯವಾದ ಹೆತ್ತುಪ್ಪ ಕರಿಗಡುಬಿಗೆ ಮುಗಿ ಬೀಳುವವರು ಬಹಳ ಮಂದಿ. ಆದುದರಿಂದ ಈಗಿಂದೀಗಲೇ ನೀವೂ ಹಿಂದನ್ನು ತೆಗೆದುಕೊಳ್ಳಿರಿ.

ಬೆಲೆ ೧॥ ಆಣೆ ಮಾತ್ರ

ಪುಸ್ತಕಗಳು ದೊರೆವ ವಿಳಾಸ—

೧) ಕನ್ನಡಿಗರ ಕೂಟ, ಧಾರವಾಡ.
೨) ವಿಜಯ ಮುದ್ರಾಲಯ
೩) ಶಂಕರೇಶ ವಾಚನಾಲಯ

ಶ್ರೀ. ಕೌಜಲಿಗಿ ಹಣಮಂತರಾಯರ ಶೀಕ್ಷೆಯ ಬರಹ ವರ್ಗಗಳು.

— ೫*[]()[]*೫ —

ಶ್ರೀ ಕೌಜಲಿಗಿ ಹಣಮಂತರಾಯರಿಗೆ ಬೆಳಗಾವಿಯ ಹು. ಡಿ ಕಲೆಕ್ಟರರು ಆರು ತಿಂಗಳ ಸಶ್ರಮ ಶೀಕ್ಷೆ ವಿಧಿಸಿ, ಅ ವರ್ಗ ಕೂಟ್ಟರು. ಒಳಿಕ ಮೆ. ಹಿರೇಮಠಸಾಹೇಬರು ೧೫ ತಿಂಗಳ ಶೀಕ್ಷೆ ಹೇಳಿ, ಬ ವರ್ಗ ಕೊಟ್ಟಿದ್ದಾರೆ. ಒಬ್ಬ ಮ್ಯಾಜಿಸ್ಟ್ರೇಟರು ಶ್ರೀ ಹಣಮಂತರಾಯರು ಸುಖಸಂಪನ್ನರೆಂದೂ, ಇನ್ನೊಬ್ಬರು ಮಧ್ಯಮ ಸ್ಥಿತಿಯವರೆಂದೂ ಅಭಿಪ್ರಾಯಪಟ್ಟಂತಾಯಿತು. ಶ್ರೀ ಹಣಮಂತರಾಯರು ಮಧ್ಯಮ ವರ್ಗದವರೆನ್ನುವದಕ್ಕೆ ಮೆ. ಹಿರೇಮಠ ಸಾಹೇಬರಿಗೆ ಯಾವ ಪುರಾವೆ ದೊರೆಯಿತೋ ದೇವರ ಬಲ್ಲ. ಸಾಹೇಬರ ಮನದಾಟವೇ ಸರಿ.

ಮ್ಯಾಜಿಸ್ಟ್ರೇಟ ಹಿರೇಮಠರಿಂದ, ಕಾಯ್ದೆಧಿಂ ೧೮ ಹಿರೇಮಠರಿಗೆ ಶೀಕ್ಷೆ.

—(೩**೩)—

ಮುರಗೋಡದ ಶೆಂದೀ ವೃಕ್ಷ ಸಂಹಾರದ ಪ್ರಕರಣದಲ್ಲಿ ಶೀಕ್ಷೆಯಾಗದೆ ೧೫ ಜನರು ಉಳಿದಿದ್ದರು. ಇವರಲ್ಲಿ ಇರು ಜನರಿಗೆ ಮೆ. ಹಿರೇಮಠಸಾಹೇಬರು ಎಂಡೆರಡು ವರ್ಷಗಳ ಸಶ್ರಮ ಶೀಕ್ಷೆ ವಿಧಿಸಿದರು. ಇವರಲ್ಲಿ ಮೊದಲನೆಯವರು ಶ್ರೀ ಚನ್ನವೀರಯ್ಯ ಹಿರೇಮಠರೆಂಬವರಿದ್ದಾರೆ ಹೀಗೆ ಹಿರೇಮಠರು ಹಿರೇಮಠರಿಗೇ ಶೀಕ್ಷೆಕೊಟ್ಟಂತಾಯಿತು.

ಮೆ. ಹಿರೇಮಠಸಾಹೇಬರು ಶೀಕ್ಷೆ ಕೊಡುವದರಲ್ಲಿ ಹಿರಿದಿನವರಾದರು. ಇವರಷ್ಟು ಉಗ್ರ ಶೀಕ್ಷೆಯನ್ನು ಕರ್ನಾಟಕದಲ್ಲಿ ಯಾವ ಮ್ಯಾಜಿಸ್ಟ್ರೇಟರೂ ಕೊಡಲಿಲ್ಲ. ಇವರ ಹಿಂದಿನ ವೆಲ್ಸಸಾಹೇಬರೇ ಸಾವಿರ ಪಾಲಿಗೆ ಬೇಕಾದರೆಂದು, ಆ ಪ್ರಾಂತದವರಿಗೆ ಅನಿಸಿದರೆ ಆಶ್ಚರ್ಯವೆಲ್ಲ. ಇವರ ಮೇಲಿನ ಅಧಿಕಾರಿಗಳು ಲಕ್ಷಣಿಕೆಯನ್ನು ಬಿಗೀ ಹಿಡಿಯುವರೆಂದು ಇವರಿಗೆ ಕಿವಿಮಾತು ಹೇಳುವದು ಅವಶ್ಯವಾಗಿರುತ್ತದೆಂದು ಹೇಳದಿರಲಾರೆವು.

ಗಂಡಸ್ಥವರೇ ಮಂಗಲಸೂತ್ರ ಕಟ್ಟಬೇಕು.

ಮುಂಬಯಿ ಸರಕಾರದವರು ಶುರಂಗವಾಸಿಯಾಗುವ ಹೆಣ್ಣುಮಕ್ಕಳ ಕುಂಕುಮ ಬಳೆ ಮತ್ತು ಮಂಗಳಸೂತ್ರವನ್ನು ತೆಗೆಸುತ್ತಿದ್ದರಷ್ಟೇ; ಅವನ್ನು ಇಡಬೇಕೆಂದು ಮಾಡಿದ ಹುಕುಮಿನಲ್ಲಿ ಯಾರ ಗಂಡಂದಿರು ಜೀವಂತವಿದ್ದಾರೆ; ಅಂಥ ಹೆಂಗಸರು ಮಂಗಳಸೂತ್ರವಿಡಬೇಕೆಂದಿದ್ದಾರೆ. ಗಂಡ ಸತ್ತ ಮೇಲೂ ಹೆಣ್ಣುಮಕ್ಕಳು ಮಂಗಳಸೂತ್ರ ಕಟ್ಟುತ್ತಾರೆಂಬ ಸರಕಾರದ ತಿಳುವಳಿಕೆಯನ್ನು ನೋಡಿ, ಹಿಂದೂ ಜನರು ಹೊಟ್ಟೆ ಹಿಡಿಸಲಾರದಷ್ಟು ನಗದಿರಲಾರರು.

ನೋಟೀಸು ೯

ರಾ || ರಾ || ಶಂಕರರಾವ ತಿರೂರ ಇವರಿಗೆ

ನೀವು ಇವತ್ತಿಗೆ ಒಂದು ವರ್ಷವಾದರೂ ನಮ್ಮ ಮನೆಯ ನ ಪಿಲ ಬಾಡಿಗೆ ಕೊಟ್ಟಿರುವದಿಲ್ಲ. ಮನೆ ಯಲ್ಲವೂ ಬೀಳುವಂತಾಗಿದೆ, ಆದ್ದರಿಂದ ಇಂದಿಗೆ ಆ ದಿವಸಗಳಲ್ಲಿ ನೀವು ಬಂದು ನಮ್ಮ ೧೨ ತಿಂಗಳ ಬಾಡಿಗೆ ರೂಪಾಯಿ ೪೮ ಕೊಟ್ಟರೆ ಬಳಿತು. ಇಲ್ಲವಾದರೆ ನಾನು ಕಾಯದೆಪ್ರಕಾರ ಪಂಚರನ್ನು ಕೂಡಿಸಿ, ಬಾಗಿಲನು ತೆಗೆಯಿಸಿ, ಅವರ ಸಮಕ್ಷಮ ಇದ್ದ ಸಾಮಾನುಗಳ ಯಾದೀ ಮಾಡುವೆನು. ನೀವು ರೂಪಾಯಿ ಕೊಡದ ಪಕ್ಷದಲ್ಲಿ ಅದರಿಂದ ಭರ್ತಿ ಮಾಡಿಕೊಳ್ಳುವೆನು. ಪೂರ್ಣವಾಗದ ಪಕ್ಷದಲ್ಲಿ ದಿವಾಣೀ ಕೋರ್ಟಿನಲ್ಲಿ ಇಲಾಜು ಮಾಡಲಾದೀತು.

ಸಹಿ ಪಾಂಡುರಂಗ ನರಸಿಂಹ ಡಂಬಳ ಧಾರವಾಡ
ತಾ || ೨೩-೧೧-೬೦

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡಿ
ಮುಖ್ಯ ——————— ಧಾರವಾಡ
ಕಾಮನಕಟ್ಟೆ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಜ್ಞಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಕಾಲೇಜಿಯೋಗಾಯಿಕೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗ ದೊರೆಯುವವು. ಭಾಂಡರದ ಬೆಲೆಪಟ್ಟಿ ಬೇಕಾದಪರು ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯಿತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮಾಜ್ಯ ಸ. ೧,೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ.	೧೮ ೩-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸಚಪನೆ	೧ ೮-೦
೫. ಚರಿತ್ರ ಸಂಗ್ರಹ ಭಾ. ೧.	೪-೦-೦
೬. ಅಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೫-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಲ್ಯಾಂಡ ರಿಫ್ಲಿಸ್ಯೂ ಕೋಡು	೨-೧೧-೦
೧೧. ಗ್ರಾಮ ಸಮೂಸೆ ಲೆಕ್ಕದ ಪುಸ್ತಕ	೨-೧೫-೦
೧೨. ಸೀಧರ್ಮನೀತಿ, ಗೃಹಸಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸೂಪನೀತಿ ಕಥೆ ಭಾ. ೧, ೨,	೨- ೪-೦
೧೪. ಕಾರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ, ಬೇಕಪಾಂಡೆ ಬಿ. ಎಸ್. ಸಿ.

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

ಮು. ನಂ. ೧೫೭ ದುಮ್ಮಜಿಲಿನ ಅಂಗಡಿ ಮಂಗಳವಾರಪೇಟೆ ಜವಳಿ ಹೊಣೆಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕೆಲ್ಲೆದಲ್ಲಿ ಶ್ರೀ. ಹೇಬಳಿಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬಲಅರ್ಧಅಣ

ಸಂಪಾದಕರು:- ಅಣ್ಣಾಚಾರ್ಯರ ಬಾಳಾಚಾರ್ಯರ ಹೊಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೨೪ನೇ ನವೆಂಬರ ೧೯೩೦ (ಸಂಚಿಕೆ ೨೫೭

ಪೂರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಪೂರಾಟಕ್ಕೆ ಸಿದ್ಧ ಮಾಡಿದ್ದೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾರೂಢರ ಅಸಲಿ, ಶ್ರೀ. ಅಳೂಢೆ ಸ್ವಾಮಿಗಳ ಕೈಫಿಯತ ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಮೊತ್ತ ವಾದಿ, ಪ್ರತಿವಾದಿ. ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕದ ಬೆಲೆ ಅಗಲದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಪೂರಾಟಕ್ಕೆ ಸಿದ್ಧ ಮಾಡಿರುತ್ತದೆ ಇದರ ಎಂಟೇ ಸಾವಿರ ಪ್ರತಿಗಳನ್ನೆ ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇದ್ದು ಪ್ರತಿಗಳು ತೀರಿ ತಿಸುವೆನೆಸುವವು, ಆದ್ದರಿಂದ ಗ್ರಾಹಕರು ಸ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಏದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತೆಗೆಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಚಿತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಇವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಗಸ್ಥಿನ ಪ್ರಕಾರ ತಿಂಗಳಾ ಕನಿಷ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷವಾ ಅಥವಾ ಒಂದು ಇಣಿ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹಿಂದಿಗೆಯು ಎಂಟು ಲಕ್ಷದ ಮೇಲುಂಟು. ಜನರ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಾಹೀಮ ಮತ್ತು ಟ್ರೇಡ ತರದ ಡಿಪಾಜಿಟಗಳಿಗೆ ಜಾಸ್ತಿಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸೂಚಿಸಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರ್ಧ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಬಾಗೀದಾರಿಗೆಗಳನ್ನು ಪತ್ತಿಗೆ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಶಿ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೮-೮-೦
ವಾರ ಪತ್ರಿಕೆ - ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ಮ್ಯಾ. ವಿಜಯ ಧಾರವಾಡ.

ವಿಜಯ.

ಬೆಳಗಾವಿ ವಿಕ್ರಮವರ್ಷ ೨೫೫೬ ಮಾರ್ಗಶಿರ ಶುದ್ಧ ೪

ಮನುಷ್ಯಗಣತಿಗೆ ಬಂದ ಸೀಕ್ಲಾಟ.

ಬರುವ ಮನುಷ್ಯಗಣತಿಯ ಸಿದ್ಧತೆಯನ್ನು ಸರಕಾರದವರು ಪದ್ಧತಿ ಪ್ರಕಾರ ನಡೆಸಿದ್ದಾರೆ. ಆದರೆ ಈ ಸಾರೆ ಅದಕ್ಕೆ ಗುರುಬಲದ ಬದಲಾಗಿ ಶನೀಕಾಟ ಬಂದಿರುತ್ತದೆ. ಕಾಂಗ್ರೆಸದವರು ದಕ್ಕೆ ಬಹಿಷ್ಕಾರ ಹಾಕಬೇಕೆಂದು ಜಾಹೀರ ಮಾಡಿದಂದಿನಿಂದ ವಿನಾಕಾರಣ ವಿಘ್ನಗಳು ಬರುತ್ತಲಿವೆ. ಘಾಟ್ಕೋಪರ ಮತ್ತು ರತ್ನಾಗಿರಿ ಮ್ಯುನಿಸಿಪಾಲಿಟಿಗಳು ಇದರಲ್ಲಿ ಭಾಗ ತಕ್ಕೊಳ್ಳಲಾರದೆಂದು ಠರಾವ್ಯ ಮಾಡಿವೆ. ಕರಾಚಿ, ಅಹಮದಾಬಾದ, ಸುರತ ಮುಂತಾದ ಮ್ಯುನಿಸಿಪಾಲಿಟಿಗಳು ಇದೇ ದಾರೀ ಹಿಡಿಯುವವು. ಅಲ್ಲಾಬಾದ ಮಹಾಪಾಲಿಕೆಯಲ್ಲಂತೂ ಮನುಷ್ಯಗಣತಿಯವರು ಮುಂದೆ ಮನೆಯ ನಂಬರ ಹಾಕುತ್ತಾ ಹೋದರೆ- ಕಾಂಗ್ರೆಸದವರು ಹಿಂದೆ ಅಳಿಸುತ್ತಾ ಹೋಗುತ್ತಿದ್ದಾರೆ. ಮನೆಯವರು ಬೇಕಾದ ಮಾಹಿತಿ ಹೇಳುವದಂತೂ ದೂರಿನ ಮಾತು. ಗಣತಿಯ ಕಾಲವು ಸನಿಯವಾದಂತೆ ಕಾಂಗ್ರೆಸದವರ ಕಾರ್ಯವು ಬಲವಾಗುತ್ತಾ ಕೊನೆಯಲ್ಲಿ ಸರಕಾರದ ಶ್ರಮವೆಲ್ಲ ಹೊಳೆಯಲ್ಲಿ ಹುಳೀ ತೊಳೆದಂತಾಗುವದುಂಟು.

ಕರ್ನಾಟಕ ಸತ್ಯಾಗ್ರಹ ಮಂಡಲದವರೂ ಪ್ರಕಟನೆಯನ್ನು ಪ್ರಸಿದ್ಧ ಮಾಡಿ, ಯಾರೂ ಇದರಲ್ಲಿ ಭಾಗ ತಕ್ಕೊಳ್ಳಬಾರದೆಂದು ಸೂಚಿಸಿ, ಮ್ಯುನಿಸಿಪಾಲಿಟಿಯವರು ಶಾಕೆದ ನಂಬರನ್ನು ಅಳಿಸಬೇಕೆಂದು ಶುರೂ ಹಿಡಿಸಿದ್ದಾರೆ. ಸಾವಿರಾರು ಹಸ್ತಪತ್ರಿಕೆಗಳನ್ನೂ ಹಂಚಿದ್ದಾರೆ. ಇದರ ಪರಿಣಾಮವು ನಟ್ಟಗಾದಂತೆ ತೋರುತ್ತದೆ. ಏಕಂದರೆ- ಎಷ್ಟೋ ಮನೆಗಳ ನಂಬರಗಳು ಅಳಿಸಿ ಹೋಗಿವೆಂದು ಕಂಡುಬಂದಿದೆ.

ಮನುಷ್ಯಗಣತಿಗೆ ಅಡ್ಡೀ ಮಾಡಿದವರಿಗೆ ಶಿಕ್ಷೆ, ದಂಡವುಂಟು. ಆದು ಶಾಂತ ಕಾಲದಲ್ಲಿ! ದೇಶದ ತುಂಬ ಉಲ್ಬಣವೆದ್ದಾಗ ದಂಡಕ್ಕೂ ಶಿಕ್ಷೆಗೂ ಯಾರೂ ಹೆದರುವದಿಲ್ಲ. ಯಾರು ಅಳಿಸಿದರೆಂದು ಹೇಳುವದಕ್ಕೂ ಹುಡುಕುವದಕ್ಕೂ ಸಾಕಷ್ಟು ಸಿಬಂದಿಯನ್ನು ಎಲ್ಲಿಂದ ತರುವರು. ಊರೂರಿಗೆ ಹಳ್ಳಿ ಹಳ್ಳಿಗೆ ಮ್ಯಾಜಿಸ್ಟ್ರೇಟ ಮತ್ತು ಪೋಲೀಸರು ಬೇಕಾಯಿತು. ಸರಕಾರವು ಇದನ್ನೆಲ್ಲ ಮಾಡುತ್ತಾ ಹೋದರೆ- ಹಿಡೀ ಜೋಳಕ್ಕಾಗಿ ಪಡೀ ಜೋಳ ಕಳೆಕೊಂಡಂತಾಗುತ್ತದೆ. ಕಾರಣ ದೇಶ ಶಾಂತವಾಗುವ ತನಕ, ಗಣತಿಯನ್ನು ಮುಂದೆ ಹಾಕುವದೇ ಉತ್ತಮ ಪಕ್ಷವಾಗುತ್ತದೆ.

ಸ್ವರಾಜ್ಯ ಸಂಪಾದನೆಯಲ್ಲಿ ಸ್ತ್ರೀಯರ ಸಂಸ್ಮರಣೀಯ ಕಾರ್ಯ.

ಮುಂಬಯಿಯ ಪೋಲಿಸರು ಸ್ವಯಂಶೇವಿಕೆಯರನ್ನು ಅಮಾನುಷವಾಗಿ ನಡಿಸಿಕೊಂಡ ಬಗ್ಗೆ ನಿಷೇಧ ಮಾಡಲು ಡಾಕ್ಟರ ದೇಶಮುಖರ ಅಧ್ಯಕ್ಷತೆಯಲ್ಲಿ ಲಕ್ಷ ಜನರ ಸಭೆ ಕೂಡಿತ್ತು. ಈ ಸಮಯದಲ್ಲಿ ಡಾಕ್ಟರರು ಸ್ತ್ರೀಯರ ವಿಷಯವಾಗಿ ಕೆಳಗೆ ಕೊಟ್ಟಂತೆ ಪ್ರಶಂಸೋದ್ಗಾರ ತೆಗೆದಿದ್ದಾರೆ

ಈ ಅಪಮಾನವು ಮುಂಬಯಿಯ ಭಗಿನಿಯರ ಮಟ್ಟಿಗೆ ಇರದೆ, ಇಡೀ ಹಿಂದುಸ್ಥಾನದ ಭಗಿನಿಯರದಿರುತ್ತದೆ. ಈ ಅಮಾನುಷ ಕೃತ್ಯದ ನಿಷೇಧವೆಂದು ಎಷ್ಟು ಮಾಡಿದರೂ ತುಸುವೆ. ಆದ ಸಂಗತಿಯ ಬಗ್ಗೆ ವಿಷಾದ ವ್ಯಕ್ತಪಡಿಸುವಂಥ ಸಮಂಜಸತನ ಕೂಡ ಸರಕಾರದಲ್ಲಿ ಕಂಡು ಬರಲಿಲ್ಲ. ಹಿಂದೀ ಸ್ತ್ರೀಯರ ವಿಷಯವಾಗಿ ನಮಗೆ ಅತ್ಯಂತವಾಗಿ ಅಭಿಮಾನವುಂಟಾಗಿರುತ್ತದೆ. ಅವರು ಸ್ವಾತಂತ್ರ್ಯದ ನಿಶಾನೆಯನ್ನು ಒಳ್ಳೇ ಧೈರ್ಯದಿಂದ ಹಾರಾಡಿಸುತ್ತಿದ್ದಾರೆ. ಸಿಂಹವು ತನ್ನ ಮರಿಯ ಬೆನೆಯಿಂದ ಕಳವಳಗೊಂಡು ಬೇಕಾದ ಧೈರ್ಯ ಮಾಡಲು ಸಾಹಸ ಪಡುವಂತೆ, ನಮ್ಮ ಭಗಿನಿಯರು ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಮಾಡುತ್ತಲಿದ್ದಾರೆ. ಆದುದರಿಂದ ಇವರ ವಿಷಯವಾಗಿ ಯಾರಿಗೆ ಸ್ವಾಭಿಮಾನವೂರ್ಣವಾದ ಕೌತುಕವುಂಟಾಗಲಿಕ್ಕಿಲ್ಲ? ಇಂದೀ ದೇಶಕಾರ್ಯಕ್ಕಾಗಿ ನಡೆಸಿದ ಇವರ ಅಪೂರ್ವ ಸ್ವಾರ್ಥತ್ಯಾಗದ ಸ್ಮರಣೆಗಾಗಿ ಪ್ರತಿವರ್ಷ ಆಕ್ಟೋಬರ ತಿಂಗಳ ೨೬ನೆಯ ತಾರೀಖಿನ ದಿವಸ "ಸ್ತ್ರೀದಿನ" ಮಾಡಬೇಕು.

ಕಾಂಗ್ರೆಸದ ಹೊಕ್ಕು ಎಲ್ಲವೂ ವ್ಯರ್ಥವೇ

—(o)—

ಇದೇ ಸಭೆಯಲ್ಲಿ ಮಿ. ಹಾರ್ನಿಮನ್ನರ ಭಾಷಣವಾಯಿತು. ಅವರು ಅಂದದ್ದೇನಂದರೆ-

ನನ್ನ ದೇಶಬಾಂಧವರಿಂದಾದ ಅತ್ಯಾಚಾರಕ್ಕಾಗಿ ನನಗೆಷ್ಟು ನಾಚಿಕೆಯುಂಟಾಗಿರುತ್ತದೆಂಬದನ್ನು ಹೇಳಲಾರೆನು ಯಾವ ಅಧಿಕಾರಿಯು ಕಣ್ಣಿನ ಮುಂದೆ ಈ ಅತ್ಯಾಚಾರವಾಯಿತು; ಆ ಅಧಿಕಾರಿಯು ಒಂದು ಕ್ಷಣವಾದರೂ ಈ ದೇಶದವರಲು ಯೋಗ್ಯನಾಗಿರುವದಿಲ್ಲ ಯಾವತ್ಕಾಲ ಪರ್ಯಂತರ, ನೀವು ನಿಮ್ಮ ದೇಶದ ಹಿಡೆಯರಾಗಲಾರರು; ನಿಮ್ಮ ಸಂಪತ್ತಿನ ಧನಿಯಾಗಲಾರಿ; ಆಸತ್ಕಾಲಪರ್ಯಂತರ, ಸದ್ಯ ಯಜಮಾನರಾಗಿ ಕೂಡುವರಿಗೆ ಬೇಕಾದಂಥ ಅತ್ಯಾಚಾರ ಮಾಡಲು ಅವಕಾಶ ವಿರುತ್ತದೆ. ಸ್ತ್ರೀಯರ ಮಾನ ಮರ್ಯಾದೆಯನ್ನು ಕಾಯಬೇಕೆಂದು ನಿಜವಾಗಿ ನಿಮ್ಮ ಅಪೇಕ್ಷೆಯಾಗಿದ್ದರೆ - ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸವನ್ನು ಎತ್ತಿ ಹಿಡಿಯಿರಿ. ಕಾಂಗ್ರೆಸದ ಅನುಯಾಯಿಯಾಗಿರಿ. ಕಾಂಗ್ರೆಸದ ಬಲ ಹೆಚ್ಚಿಸಿರಿ ಇದರ ಹೊರತು ಎಲ್ಲವೂ ವ್ಯರ್ಥವೇ ಎಂದ ತಿಳಿಯಿರಿ.

ಸ್ತ್ರೀಯರು ಶೂರರಾಗಿದ್ದಾರೆ

ಶ್ರೀ ನಟರಾಜನವರು ಅಂದದ್ದು-

ಸರಕಾರವು ನಮ್ಮ ಭಗಿನಿಯರ ಮೇಲೆ ಕಯ್ಯತ್ತಿ ಪಸರ ವೃತ್ತಿಯ ಪ್ರದರ್ಶನ ಮಾಡಿಕೊಂಡಿತು. ಸ್ತ್ರೀಯರ ಹಾಗೂ ಶಿಶುಗಳ ಸಂರಕ್ಷಣೆ ಮಾಡುವದು ಸರಕಾರದ ಆದ್ಯ ಕರ್ತವ್ಯವು. ಈ ಕರ್ತವ್ಯಕ್ಕೆ ಅರದಾಳ ಬಡೆಯುವ ಸರಕಾರಕ್ಕೆ ನಾ ಏನೆನ್ನಬೇಕೆಂಬದೇ ತಿಳಿಯದಾಗಿದೆ. ನಮ್ಮ ಸ್ತ್ರೀಯರು ಬರೇ ಡೊಂಗಸಾಂಗಿ ಉಳಿದಿಲ್ಲ. ಶೂರಧೀರರಾಗಿದ್ದಾರೆ. ಅವರು ಮುಂದಿಟ್ಟ ಹೆಜ್ಜೆಯನ್ನೆಂದಿಗೂ ಹಿಂದಿಡಲಾರರು.

ಹೊಡೆಯಲು ಬೆತ್ತ ಕೊಟ್ಟ ಮತ್ತು ಬೆತ್ತದಿಂದ ಹೊಡೆದ ಶಿಕ್ಷಕರ ಮೇಲೆ ಸಿರ್ಯಾದಿ.

ಮುಂಬಯಿ ಪತ್ತರಿರುವ ಕುರ್ಲಾದಲ್ಲಿರುವ ಇಂಗ್ಲಿಷ ಶಾಲೆಯ ಇಬ್ಬರು ಶಿಕ್ಷಕರ ಮೇಲೆ ಒಬ್ಬ ಗೃಹಸ್ಥನು ತನ್ನ ಹುಡುಗನನ್ನು ಬೆತ್ತದಿಂದ ಹೊಡೆದುದಕ್ಕಾಗಿ ಫೌಜದಾರಿಯಲ್ಲಿ ಫಿರ್ಯಾದಿ ಮಾಡಿದ್ದಾನೆ. ಒಬ್ಬ ಮಾಸ್ತರನು ಮತ್ತೊಬ್ಬ ಮಾಸ್ತರನಿಂದ ಬೆತ್ತ ಇಸಕೊಂಡು ಹೊಡೆದನು. ಒಬ್ಬನು ಹೊಡೆದನೆಂದೂ, ಇನ್ನೊಬ್ಬನು ಹೊಡೆಯಲಿಕ್ಕೆ ಸಹಾಯ ಮಾಡಿದನೆಂದೂ ಇಬ್ಬರ ಮೇಲೂ ಫಿರ್ಯಾದಿ ಇರುತ್ತದೆ.

ಗದ್ದಾಗ ಸಾಹೇಬದ ಸಿಂಧದಲ್ಲಿ ಒಂದು ಹಳ್ಳಿಯನ್ನು ನೋಡಲಿಕ್ಕೆ ಹೋದಾಗ, ಅಲ್ಲಿಯ ಶಾಲೆಗೆ ಹೋದರು. ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯೂ ಇದ್ದಿಲ್ಲ. ಪಂಕರು ಸತ್ತಗೆ ಶಾಲೆಗೆ ದಿಕ್ಕಿಲ್ಲೆಂಬಂತೆ !!

ಡಾಕ್ಟರ ಕಟ್ಜುವವರಿಗೆ ಎರಡನೆಯ ಆಪರೇಶನ ಪದ ದೆಸೆಯಿಂದ ಮೂರು ತಿಂಗಳ ಸತ್ತಮ ಕ್ಷುರ್ಕ್ಷಿ ಗವಾಸವಾಯಿತು.

ೀಲರಿಗೆ ಶ್ರೀ. ಜೋಶೀ ನಾರಾಯಣ ರಾಯರ ಸಂದೇಶ

—— (೮) ——

ೀಲರ ಹೃದಯದಲ್ಲಿ ಬ್ರಮ್ಹನೇನು ಬರೆದಿರುವನೆ.?

—(೦)—

ಶುರಂಗಕ್ಕೆ ಹೋಗುವಾಗ ಬೆಳಗಾವಿಯಲ್ಲಿ ಜೋಶಿ ನಾರಾಯಣರಾಯರು ತಮ್ಮ ವ್ಯವಯ ಒಂಭುಗಳಾದ ವಕೀಲರನ್ನುದ್ದೇಶಿಸಿ ಮುಂ ಕೊಟ್ಟಂತೆ ಒಂದು ಸಂದೇಶವನ್ನು ಜಾಹೀರ ಮಾಡಿದ್ದಾರೆ.

ಮಾತೃಭೂಮಿಯ ಶ್ರೇಯಸ್ಸಿಗಾಗಿ ಆರು ತಿಂಗಳ ಕಠಿಣ ಶ್ರಮ ತೀಕ್ಷ್ಣ ಭೋಗಿಲು ಇಂದು ಸ್ವರಾಜ್ಯಾಶ್ರಮಕ್ಕೆ ಹೊಟ್ಟಿಂತ್ತೇನೆ ಈ ವರೆಗೆ ನೀವು ನನ್ನನ್ನು ಪ್ರೀತಿಸುತ್ತಿದ್ದಂತೆ ಮುಂದಾದರೂ ಪ್ರೀತಿಸುವರೆಂದು ಆಶಿಸುತ್ತೇನೆ. ಸಾಗಿನ ಸಮಯವು ಕೇವಲ ಬಿಕ್ಕಟ್ಟಿನದಾಗಿದೆ. ನಿಸ್ವಾರ್ಥಬುದ್ಧಿಯಿಂದ ದೇಶಸೇವೆಯನ್ನು ಮಾಡುವದು ಪರಮ ಪವಿತ್ರವಾದ ಕೆಲಸವಾಗಿದೆ. ಆ ಕಾರ್ಯ ಮಾಡಲು ನೀವು ಹಿಂಜರಿಯಲೆಂದು ನಾನು ಆಶಿಸುತ್ತೇನೆ. ಯಾವ ಕಾರ್ಯದ ದೆಸೆಯಿಂದ ಮಹಾತ್ಮರು ಶುರಂಗದ ಮೇರುವರೋ ಆ ಕಾರ್ಯ ಮಾಡಲು ನಿಮ್ಮ ಧೈರ್ಯದಿಂದ ಮುಂದೆ ಬರುವರೆಂದು ಇಚ್ಛಿಸುತ್ತೇನೆ. ಈ ಕಾರ್ಯದಿಂದ ಕೃತಿಯಿಂದ ಜಳವಳಿಯಲ್ಲಿ ವಕೀಲ ವರ್ಗವೇ ಮುಂದೆ ಬರಬಹುದಾದೆ. ಇವತ್ತಿನ ಕ್ಷಣ ಸಮಯದಲ್ಲಿ ವಕೀಲರು ಮುಂದೆ ಬರದಿದ್ದರೆ- ಇವರಿಗೆ ನಾಶಿಕಾಲ. ಮುಂತೇ ಸರ. ಸ್ವರಾಜ್ಯವು ತೀರ ಸನಿಯಕ್ಕೆ ಬಂದಿದೆಯೆಂದು ನನ್ನ ಮನೋದೇವತೆಯು ಹೇಳುತ್ತದೆ. ಪೂರ್ಣ ಸ್ವರಾಜ್ಯ ಪ್ರಾಪ್ತಿಯಾದಬಳಿಕ ಸ್ವರಾಜ್ಯ ಸಂಪಾದನೆಯ ಕೆಲಸದಲ್ಲಿ ಮಳೆಲರ ಶ್ರಮದ ಅಷ್ಟೇ ಆಗಲಿಲ್ಲೆಂದೆನಿಸಿಕೊಳ್ಳುವ ಹೆಸರು ತಂದುಕೊಳ್ಳಬೇಡಿರಿ. ಈ ಗೊಗೆಯು ತಲೆಯಮೇಲೆ ಕಾಹೀಮವಾಗಿ ಕೂತರೆ-ನಿಮಗೆ ಕೆಳಗೆ ಮೋರೆ ಮಾಡಬೇಕಾದೀತು! ನಮ್ಮ ವಕೀಲವರ್ಗದ ಅಬ್ರು ನಿಮ್ಮ ಕೈಯ್ಯಲ್ಲುಂಟೆಂದು ಹೇಳಿ, ನಿಮ್ಮ ನಿರೋಪ ತಕ್ಕೊಳ್ಳುತ್ತೇನೆ.

ಶ್ರೀ ಜೋಶಿ ನಾರಾಯಣರಾಯರು ವಕೀಲರನ್ನುದ್ದೇಶಿಸಿ ಹೇಳಿದ ಉಪದೇಶದ ಮಾತು ಡಬ್ಬಿಯೊಡದಮೇಲೆ ನೀರು ಹಾಕಿದಂತೆಯೇ ಸರಿ. ಕೆಲ ವಕೀಲರ ಅಪವಾದವನ್ನು ಬಿಟ್ಟು, ಎಲ್ಲ ವಕೀಲರು ಈ ಜಳವಳಿಯಲ್ಲಿ ಹೆದರಿಕೊಂಡಿದ್ದು ಹಿಂದಿನ ಜಳವಳಿಯಲ್ಲಿ ಹೆದರಿದ್ದಿಲ್ಲೆಂದು ಸ್ಪಷ್ಟವಾಗಿದೆ. ಆಗ ವಕೀಲಿ ಬಿಟ್ಟವರು ಇಂದು ಧುರಂಧರ ವಕೀಲಿ ನಡಿಸುತ್ತಿದ್ದಾರೆ. ಶ್ರೀ. ನಾರಾಯಣರು ಭವಿಷ್ಯ ಮಾಡಿದಂತೆ ಇವರು ತಲೆ ಕೆಳಗೆ ಮಾಡುವದೇ ಸ್ವತ್ತು ಇವರ ಲಲಾಟದಲ್ಲಿ ಬರೆದಿದ್ದಾಗಿರುವುದೆ.

ಕಾರವಾರದ ಜೈಲು

೧ ಜೈಲಿನಲ್ಲಿ ಕೈದಿಗಳನ್ನಿಡುವದಕ್ಕೆ ಸ್ಥಳವಿಲ್ಲ. ೨೫ ಕೈದಿಗಳನ್ನಿಡುವ ಬೆರಕಿನಲ್ಲಿ ೪೦-೪೫ ಜನರನ್ನಿಡುತ್ತಿರುವರು. ಹಾಗೂ ೩ ಜನರನ್ನಿಡುವ ಕೋಣೆಗಳಲ್ಲಿ ೫-೬ ಜನರನ್ನು ಇಡಹತ್ತಿದ್ದಾರೆ.

೨ ಜೈಲಿನಲ್ಲಿ ಹಾಸಿಗೆ, ಹೊದಿಕೆ, ಧಾಲಿ, ವಾಟು, ಅಂಗಿ, ಚಡ್ಡಿಗರ ವ್ಯವಸ್ಥೆಯಿಲ್ಲ. ಜೈಲಿಗೆ ಹೋಗಿ ನಾಲ್ಕು ಸಾಲ್ಕು ತಿಂಗಳಾಗಿದ್ದರೂ ಇನ್ನೂ ಡ್ರೆಸ್ಸು ಪೂರೈಸಿಲ್ಲ. ಆರಾರು ತಿಂಗಳಿಗೆ ಎರಡು ಡ್ರೆಸ್ಸುಗಳನ್ನು ಕೊಡಬೇಕೆಂದಿದ್ದು, ಕೆಲವರಿಗೆ ಒಂದೊಂದು ಸೆಟ್ಟನ್ನು ಮಾತ್ರ ಕೊಟ್ಟಿರುವರು.

೩ ಈಗ ಜಳಿಗಾಲವಿದ್ದು ಚಳಿ ಚನ್ನಾಗಿ ಬೀಳುತ್ತಿದೆ. ಆದರೆ ಜೈಲಿನ ಸೇಮದಂತೆಯಾದರೂ ಹಾಸಿಗೆ ಹೊದಿಕೆಗಳನ್ನು ಪೂರೈಸಿಲ್ಲ. ಆದ್ದರಿಂದ ಕೈದಿಗಳು ತೊಂದರೆ ಪಡುತ್ತಿರುವರು.

೪ ರಾಜಕೀಯ ಕೈದಿಗಳಿಗೆ ಅವರು ಬೇಡಿದ ಕೆಲಸವನ್ನು ಕೊಟ್ಟರೆ ಕೆಲಸವು ಚನ್ನಾಗಿ ಆಗುತ್ತದೆ. ಆದರೆ ಅವರು ಬೇಡಿದ ಕೆಲಸಗಳನ್ನು ಕೊಡದೆ ಜೈಲು ಸುಪರಿಂಟೆಂಡೆಂಟರು ತಮ್ಮ ಮನಸ್ಸಿಗೆ ಬಂದ ಕೆಲಸಗಳನ್ನು ಒತ್ತಾಯದಿಂದ ಮಾಡಹೇಳುತ್ತಿರುವರು.

೫ ರಾಜಕೀಯ ಕೈದಿಗಳಿಗೆ ಕಲ್ಲು ಒಡೆಯುವದು, ಹಿಟ್ಟು ಬೀಸುವದು ಮುಂತಾದ ಬರುಸಾದ ಕೆಲಸಗಳನ್ನು ಕೊಡುತ್ತಿರುವರು. ಕಲ್ಲು ಒಡೆಯುವವರು ಮುಂಜಾನೆ ೭ ಘಂಟೆಯಿಂದ ಸಂಜೆ ೪½ ಘಂಟೆಯವರೆಗೆ ಒಂದೇ ಸವನೆ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಮಧ್ಯಾನ್ಹದ ಊಟವನ್ನು ಸಹ ಕಲ್ಲು ಒಡೆಯುತ್ತಿರುವ ಬಯಲಿನಲ್ಲಿ ಎಂಬಲ್ಲಿಗೇ ಒಯ್ದು ಹಾಕುತ್ತಿರುವರು.

೬ ಅಡಿಗೆಯ ಪದಾರ್ಥಗಳಲ್ಲಿ ಉಪ್ಪಿನ ಪ್ರಮಾಣವು ತೀರ ಕಡಿಮೆಯಿರುತ್ತದೆ. ಸತ್ಯಾಗ್ರಹಿಗಳು ಉಪ್ಪಿನ ಸತ್ಯಾಗ್ರಹವನ್ನು ಮೊಟ್ಟಮೊದಲು ಆರಂಭಿಸಿದ್ದರಿಂದ ಸರಕಾರಕ್ಕೇ ಉಪ್ಪಿನ ಬರಗಾಲವುಂಟಾಗಿರುವದೋ ಎಂದು ಭಾಸವಾಗುತ್ತದೆ.

೭ ಕಾರವಾರ ಜೈಲಿನಲ್ಲಿದ್ದ ರಾಜಕೀಯ ಕೈದಿಗಳಲ್ಲಿ ಅನ್ನವನ್ನು ಉಣ್ಣುವ ರೂಢಿಯುಳ್ಳವರೇ ಹೆಚ್ಚಾಗಿರುವರು. ಆದರೆ ಅವರಿಗೆ ಅನ್ನದ ಬದಲು ರೊಟ್ಟಿಯನ್ನೇ ತಿನ್ನಬೇಕೆಂದು ಒತ್ತಾಯಪಡಿಸುತ್ತಿರುವರು. ಹಾಗೆ ರೊಟ್ಟಿ ತಿನ್ನುವ ವಾಡಿಕೆಯಿಲ್ಲದ್ದರಿಂದ ಅನೇಕರು ಬೇನೆ ಬೀಳುತ್ತಿರುವರು. ಜೈಲಿನಲ್ಲಿ ಅತಿಸಾರದ ಬೇನೆಯು ಹಬ್ಬುವದಕ್ಕೆ ಇದೇ ಕಾರಣವಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಈ ಸಾಲಿ ೧೦೨ ಕ್ಕೆ ೪೦ ಜನರು ಅತಿಸಾರ ಬೇನೆಯಲ್ಲಿ ನರಳಿದರು.

೮ ಬೆರಕ ನಂಬರ ೩-೪ ಇವುಗಳ ಮಧ್ಯೆ ವಾಯುಖಾನೆಗಳಿರುವದರಿಂದ ಆ ವಾಸನೆಯಿಂದ ಕೈದಿಗಳು ಬಹಳ ಕಷ್ಟಪಡುತ್ತಿರುವರು. ವಾಯುಖಾನೆಗಳನ್ನಿಡುವುದಕ್ಕೆ ಬೇರೆ ಸ್ಥಳಗಳಿದ್ದರೂ ಇಲ್ಲೇ ಅವುಗಳನ್ನಿಟ್ಟಿದ್ದಾರೆ.

೯ ಜೈಲಿನಲ್ಲಿ ಇನ್ನೆಲ್ಲ ಕಷ್ಟಗಳಿದ್ದರೂ ಎಲ್ಲ ರಾಜಕೀಯ ಕೈದಿಗಳೂ ಆನಂದೋತ್ಸಾಹದಿಂದಿರುವರು. ಕ. ಧು. ಕು.

ಕಾಂಗ್ರೆಸದವರು ಪೆಂಡಾರಿಗಳಲ್ಲ.

ಅವರಿಗೇಕೆ ಹೆದರುವದು?

—(- !! -)—

ರಾಯಂಡ ಟೇಬಲಿನಲ್ಲಿ ನಾಮದಾರ ಶ್ರೀನಿವಾಸಶಾಸ್ತ್ರಿಗಳು ಭಾಷಣ ಮಾಡಿದ್ದು-

ನಾನು ಸನದಿನ ಪ್ರಕಾರ ರಾಜಕೀಯ ಸುಧಾರಣೆಯಾಗಬೇಕೆನ್ನಬಲ್ಲೆನು. ನಾನು ನನ್ನ ಜನ್ಮದಲ್ಲಿ ಶುರಂಗದ ಸನಿಯದಲ್ಲಿ ಹೋಗಕಕ್ಕವನಲ್ಲ. ಆದರೆ ರಾಜಕೀಯ ಜಳವಳಿಗಾಂಧಾಗಿದ್ದೇನೆ. ಸರಕಾರವು ಅನೇಕ ಪ್ರಸಂಗಗಳಲ್ಲಿ ನನ್ನಲ್ಲಿ ಉಪಸಂಬಿಗೆ ಇಟ್ಟು ಹಿಂದಕ್ಕೆ ನನ್ನ ಹಿಂದೆ ಗುಪ್ತ ಪೋಲಿಸರನ್ನು ಬಿಟ್ಟಿರುತ್ತಾರೆ. ನನ್ನ ಪಾರಿಯು ಸುರಕ್ಷಿತವಿಲ್ಲ. ಕೆಲ್ಲುಮುಳ್ಳುಗಳುಳ್ಳದ್ದಾಗಿರುವದು ನಿಜ ಗುಪ್ತ ಪೋಲಿಸರ ಶುಕ್ಲಕಾಷ್ಟದ ಅನುಭವವು ಸ್ವಶಕ್ತಿ ಮೆ. ಮ್ಯಾಕಡೋನಾಲ್ಡ ಸಾಹೇಬರಿಗೂ ಉಂಟು.

ಪಸಾಹಾತಿನ ಸ್ವರಾಜ್ಯ ಕೊಟ್ಟರೆ- ಅದನ್ನು ಕಾಂಗ್ರೆಸದವರು ಚೆಲ್ಲಾಪಿಲ್ಲಿಮಾಡುವರೆಂದು ಹೆದರಬೇಡಿರಿ. ಅವರೇನು ಪೆಂಡಾರಿಗಳಲ್ಲ. ಕಾಡು ಜನರಲ್ಲ. ವಂಶಪರಂಪರೆಯ ಬದಮಾಷರಲ್ಲ. ಬ್ರಿಟಿಷ ಸರಕಾರದ ಜನ್ಮದ ವೈರಿಗಳೆಂದು ಪ್ರತಿಜ್ಞೆ ಮಾಡಿದವರಲ್ಲ. ಅವರು ಸುಸಂಸ್ಕೃತರೂ, ಪ್ರಸನ್ನವಂತರೂ ಆಗಿದ್ದಾರೆ. ಅವರಲ್ಲಿ ಅನೇಕ ಜನರು ಪ್ರಖ್ಯಾತಿ ಪಡೆದವರಾಗಿದ್ದಾರೆ. ಅವರು ನಮ್ಮ ಹತ್ತಿರದವರು, ರಕ್ತಸಂಬಂಧಿಕರೂ ಆಗಿದ್ದಾರೆ. ರಾಜಕೀಯ ತಾಪದ ದೆಸೆಯಿಂದಲೇ ಅವರು ಬಹಿಷ್ಕಾರವಾದಿಸಾಗಿದ್ದಾರೆ. ಅವರ ತಕರಾರುಗಳನ್ನು ದೂರ ಪಡಿಸಿದರೆ- ಅವರೇ ಹೊಸ ರಾಜ್ಯಘಟನೆಯನ್ನು ಅಮಲಿನಲ್ಲಿ ತರಲು ಮುಂದೆ ಬಂದು ಅವರು ಎಲ್ಲ ಸೂತ್ರಗಳನ್ನು ಕೈಕೊಂಡು, ತಮ್ಮನ್ನು ಹೊಂಗೆ ಹಾಕುವರೆಂದು ಇಂಗ್ಲಿಷ ಜನರು ಭಯಗೊಂಡಿದ್ದಾರೆ. ಹಾಗೇನೂ ಆಗಲಾರದೆಂದು ನಾನು ಹೇಳುತ್ತೇನೆ.

ಸಾಪ್ತಾಹಿಕ

ವಿಜಯ.

ಬೆಲೆ ೧ ಅಣ್ಣೆ

ಸಂಪಾದಕರು:- ಅಣ್ಣಾ ಜಾರ್ಯ ಬಾಳಾಚಾರ್ಯ ದೊಸಕೇರಿ.

ವರ್ಷ ೧೧ ಧಾರವಾಡ ಮಂಗಳವಾರ ತಾರೀಖು ೨೨ನೇ ನವೆಂಬರ ೧೯೩೦ (ಸಂಚಿಕೆ ೪೪

ಪಾಶ್ಚಾತ್ಯ ವಿಕ್ರಮವರ್ಷ ೧೮೫೫ ಮಾರ್ಗಶಿರ ಶುದ್ಧ ೫

ಶ್ರೀ ಧನಕಟ್ಟಿ ಮೊದಲಾದವರ ಗಲ್ಲಿನ ಶಿಕ್ಷೆ ಕಾಯಿದವಾದ ಬಗ್ಗೆ ಗದಗಿನಲ್ಲಿ ಪ್ರಚಂಡ ಹ ರತಾಳವಾಯಿತು. ಶಾಲೆಗಳು ಸಹ ಬಂದಾಗಿದ್ದವು.

ಇನಾಮೂರದಲ್ಲಿ ಐವರನ್ನು ಹಿಡಿದರು. ಐದೈ ದು ತಿಂಗಳ ಶಿಕ್ಷೆಯಾಯಿತು.

ಶ್ರೀ. ಮರುಳಾರಾಧ್ಯಶಾಸ್ತ್ರಿಗಳ ಮೇಲೂ ಇನ್ನೊಂದು ಆರೋಪ ಹೊರಿಸಿ, ವಿಚಾರಣೆಗಾಗಿ ಇ ವರನ್ನು ಬದಾಮಿಗೆ ಕಳಿದ್ದಾರೆ.

ಯ್ಯನ್ನು ಸುಟ್ಟದೆ. ಆಸ್ಪತ್ರೆಯಲ್ಲಿ ಇವರ ಆ ಕೆ ನಡೆದಿದೆ.

ನಿವ್ವಾಣಿಯಲ್ಲಿ ಶ್ರೀ ಮಧ್ವಾಚಾರ್ಯ ಟೊ ಪಿ ಮೊದಲಾದವರಿಗೆ ಆರು ತಿಂಗಳ ಸತ್ರಮ ಶಿಕ್ಷೆಯಾಯಿತು. ಇವರ ವಿಚಾರಣೆ ನೋಡಲಿ ಹೋದ ನಾನಾಸಾಹೇಬ ವಾಂಟರೆಯವರನ್ನು ಚೇರಿಯಲ್ಲಿಯೇ ಹಿಡಿದರು. ಆಚಾರ್ಯರ ಕೂ ಇವರಿಗೂ ಶಿಕ್ಷೆ ಹೇಳಿ, ಇವರನ್ನೂ ಶುರಂಗ ಕಳಿಸಿದರು.

ಕ್ರಾನಿಕಲದ ಸಂಪಾದಕರಾದ ಮಿ. ಸಯ್ಯ ದ ಅಬ್ದುಲ್ ಬ್ರೆಲ್ವಿ ಇವರಿಗೆ ಐದು ತಿಂಗಳ ಸಾ ಸಾ ಶಿಕ್ಷೆಯಾಯಿತು. ಇವರ ಕೂಡ ಪ್ರಿಂಟರ ಮಿ. ಕವಾಡಿಯಾ ಇವರಿಗೂ ಇಷ್ಟೇ ಶಿಕ್ಷೆಯಾ ಯಿತು, ಶಿಕ್ಷೆಯ ಕೂಡ ೧೫೦ ದಂಡವಾಯಿತು. ದಂಡ ಕೊಡದಿದ್ದರೆ - ಒಂದೂವರೇ ತಿಂಗಳು ಹೆ ಚ್ಚಿಗೆ ಶಿಕ್ಷೆ !!

ಪುಣೆಯಿಂದ ಬೆಳಗಾವಿಗೆ ಕಿಚನರ ಪೋಲಿ ಸರ ನೂರು ಸಿಪಾಯರು ಬಂದಿದ್ದಾರೆ.

ಇಲ್ಲಿಯ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಪ್ರೆ ಸಿಡೆಂಟರ ಚುನಾವಣೆಯು ಇದೇ ತಿಂಗಳ ೧೪ನೆಯ ತಾರೀಖಿನ ದಿವಸ ಸಾಯಂಕಾಲದ ನಾಲ್ಕು ಗಂಟೆಗೆ ನಡೆಯುವದು.

ಧಾರವಾಡ

ಈ ಊರಲ್ಲಿ ಸಂಜಯವೆಂಬ ಹೆಸರಿನಿಂದ ದಿ ನಪತ್ರಿಕೆಯು ಹೊರಡಬೇಕೆಂಬ ಉದ್ಯೋಗ ನಡೆ ದಿತ್ತು. ಆ ವಿಚಾರವು ರಹಿತವಾಯಿತೆಂದು ತಿಳಿ ಯುತ್ತದೆ.

ಧಾರವಾಡದಿಂದ ಸವದತ್ತಿಗೆ ಹೋಗುವ ಒಂ ದು ಮೋಟಾರಿನಲ್ಲಿ ಹತ್ತಿಪ್ಪತ್ತು ಜನರನ್ನು ಕೂ ಡ್ರಿಸಿಕೊಂಡು ಹೋಗುತ್ತಿದ್ದಾಗ, ಮೋಟಾರ ಸೊ ಡವುಳ್ಳ ಬಿದ್ದು, ಒಬ್ಬನು ಸತ್ತನಷ್ಟೇ; ಈ ಅಪ ರಾಧದ ವಿಚಾರಣೆಯಾಗಿ, ಮೋಟಾರದ ಮಾಲೀ ಕನಿಗೆ ೪೦೦ ಮತ್ತು ಡ್ರಾಯಿವ್ಹರನಿಗೆ ೨೧೦ ರು ಪಾಯಿ ದಂಡವಾಯಿತು.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡಿ
ಮತ್ತು ——————— ಧಾರವಾಡ
ಕಾಮನಕಟ್ಟೆ

ನಮ್ಮಲ್ಲಿ ಇದಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾ ರದ ಬೆಲೆಪಟ್ಟಿ ಬೇಕಾದವ ೨ ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿ ಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮಾಜ್ಯ ಸ. ೧,೨, ಪ್ರತಿ ೧ಕ್ಕೆ	೨– ೪–೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧– ೬–೦
೩. ಛತ್ರಪತಿ ಶಿವಾಜಿ ಮಹಾರಾಜ	೨–೧೨–೦
೪. ಕರ್ನಾಟಕ ಸಿಂಹಾಸನ ಸಾಪನೆ	೧ ೦–೦
೫. ಚರಿತ್ರ ಸಂಗ್ರಹ ಭಾ. ೧.	೪–೦–೮
೬. ಅಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪–೮–೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨– ೦–೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೨–೦–೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧– ೮–೦
೧೦. ಲ್ಯಾಂಡ ರೆಜಿಸ್ಟ್ರೇಶನ್ ಕೋಡು	೨–೧೧–೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨–೧೩–೦
೧೨. ಸೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦–೧೦–೦
೧೩. ಇನೂಪಸೀತಿ ಕಥೆ ಭಾ. ೧, ೨,	೨– ೪–೦
೧೪. ಕಾರ್ತನ ಕಂಠಾಭರಣ	೧–೧೦–೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ಮೋಟೀಸಿನವರಗಳು

ಸಿಂಗಲ ಕಾಲಮಿನ ಹತ್ತು ಸಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಳಿಗೆ ಒಂದೂ ವರಿ ಆಣೆ ಇಂಗ್ಲಿಷ ಪ್ರತಿಯೊಂದು ಸಳಿಗೆ ಐದು ಆಣೆ ಸಂಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋ ರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿ ಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಂ ದೆ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಸಳಿಗಳಿಗೆ ಇಮ್ಮಡಿ ಚಾ ರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಡಿಸೆಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭ ವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ರಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ.ಪಿ. ಸ್ವೀಕಾರಮಾಡಿ ವಿಜಯನನ್ನು ಪ್ರೋತ್ಸಾಹಿಸಬೇ ಕೆಂದು ವಿನಂತಿಯು.

ಧಾರವಾಡದಲ್ಲಿ

ಅಂಗಡಿ ಮತ್ತು ಬಿಂಗಲೆಯ ಮಾರಾಟ

—(ಕ್ಷ ಕ್ಷ ಕ)—

ಮು ನಂ. ೧೫೭೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟೆ ಜವಳಿ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕಿಲ್ಲೆದಲ್ಲಿ ಶ್ರೀ ಹೇಬಳಿ ಕರ ಇವರ ಒಂಟ್ಲೇದ ಎದುರಿನಲ್ಲಿ ಮಿ. ಫೆರ್ನಾಂ ಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳಬೇಕ್ಕ ಬೆಲೆ ಮತ್ತು ಬೇರೆ ಮಾಹಿತಿಯ ನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಆಣ್ಣಾಚಾರ್ಯ ಬಾಳಾ ಚಾರ್ಯ ಹೊಸಕೇರಿ ಇವರು ಧಾರವಾಡವಲ್ಲಿರು ವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮು ದ್ರಿಸಿ ಪ್ರಸಿದ್ಧ ಮಾಡಿದ್ದರು.

R N D 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖು ೪ ನೇ ಡಿಸೆಂಬರ ೧೯೩೦ (ಸಂಚಿಕೆ ೨೬೫

ಕರ್ನಾಟಕ ನಗರಸಂಕೀರ್ತನ ಮಂಡಲ, ಧಾರವಾಡ.

ಸರ್ವಾಂಗ ಸುಂದರವಾದ ಕನ್ನಡ ಪದಗಳ ಮುಖಾಂತರ ಧಾರವಾಡ ಜನತೆಯಲ್ಲಿ ಕರ್ನಾಟಕ ಸಂಸ್ಕೃತಿ, ಕನ್ನಡ ಭಾಷೆಯ, ಪ್ರಸಾರ ಮಾಡುವದೇ ಇದರ ಗುರಿ.

ಕಾಂಗ್ರೆಸ ಅಥವಾ ಬೇರೆ ಯಾವ ರಾಜಕೀಯ ಸಂಸ್ಥೆಗೂ ಇದರ ಸಂಬಂಧವು ಎಷ್ಟು ಮಾತ್ರವೂ ಇರುವದಿಲ್ಲ.

ಕನ್ನಡಿಗರೆಲ್ಲರು ನಗರಸಂಕೀರ್ತನ ಮಂಡಲದವರು ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಭಾಗ ತೆಗೆದುಕೊಂಡ ಕನ್ನಡ ನಾಡಿನ ಹಾಗೂ ನುಡಿಯ ಸೇವೆ ಗೈಯ್ಯಬೇಕೆಂದು ವಿನ್ನಹ.

ಕ. ನ. ಸ. ಮ. ಧಾರವಾಡ.
ತಾ॥ ೨೯-೧೧-೧೯೩೦

ತಮ್ಮ ವಿಧೇಯರಾದ
ಗೌ॥ ಕಾರ್ಯದರ್ಶಿಗಳು.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ 'ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಸಕ್ತ ಕಟಿಂಗ ಮುದತ ೨ ವರ್ಷ ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಸಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಪದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ಕನ್ನ ವರ್ಷಸ್ಸಿನ ಪ್ರಕಾರ ತಿಂಗಳಾ ಕನಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ 'ಮಾಹಿತಿ ಪತ್ರಿಕೆ' ಬೇಕಾದಲ್ಲಿ ಸಮಕ್ಷವಾ ಅಥವಾ ಒಂದು ಆಣೆ ಪೋಸ್ಟ ತೀಕೀಟು ಕಳಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಇಕ್ಷ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೆಂದಿಗೆಯು ಎಂಟು ಲಕ್ಷದ ಮೇಲುಂಟು. ಚಲ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜಾಸ್ತಿಗಿ ಬಡ್ಡಿ ಕೊಡಲಿಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಡಾಗೀನೆಗಳನ್ನು ಪತ್ತೇ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೧-೦
೩ ,,	೮-೮-೦

ವಾರ ಪತ್ರಿಕೆ ೧ ವರ್ಷಕ್ಕೆ ೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ಮ್ಯಾ ವಿಜಯ ಧಾರವಾಡ.

ವಿಜಯ.

ಶ್ರೀಕುಳ್ಯವಿಕ್ರಮವರ್ಷ ಲಾಭಮಾರ್ಗಶಿರ್ಷ ಶುದ್ಧಗಳಿ

ಜಂಜೀರಾ ಸಂಸ್ಥಾನದಲ್ಲಿ ಗಾಂಧಿ ಟೊಪ್ಪಿಗೆಯು ಹೊಟ್ಟೆಯಲ್ಲಿ ಜಂಬಿಯೂ ಇರಿದರು.

ಕುಲಾಬಾ ಜಿಲ್ಲೆಯಲ್ಲಿ ಜಂಜೀರಾ ಎಂಬತೊಂದು ಚಿಕ್ಕ ಸಂಸ್ಥಾನವುಂಟು. ಇದೊಬ್ಬ ನವಾಬರಿಗೆ ಸೇರಿದ್ದು. ಸದ್ಯದ ನವಾಬರು ಅಲ್ಪವಯಸ್ಸಿನವರು, ತಾಯಿಯು ರೀಜಂಟರಾಗಿ ದೊರೆತನ ಮಾಡುತ್ತಿದ್ದಾಳೆ. ಇದೊಂದು ಸಂಸ್ಥಾನವುಂಟೆಂದು ಯಾರಿಗೂ ಗೊತ್ತಾಗದಂಥ ಅಪ್ರಸಿದ್ಧವಾದದ್ದು. ಏನೇನ ಪ್ರಕಾರದಿಂದ ಪ್ರಸಿದ್ಧವಾಗಬೇಕೆಂದು ಇದು ಗಾಂಧೀ ಟೊಪ್ಪಿಗೆಯ ಹೊಟ್ಟೆಯಲ್ಲಿ ಜಂಬಿಯೂ ಇರಿದು, ಪ್ರಖ್ಯಾತಿಗೆ ಬಂತು. ಯುರೋಪಿಯನ್ನ ಕಲೆಕ್ಟರರು, ಗಾಂಧೀ ಟೊಪ್ಪಿಗೆ ಹಾಕಿದವರು ಕಾಯದೆಗೆ ಭಂಗ ಮಾಡಿದಂತಾಯಿತೆಂದು, ಅವರನ್ನು ಹಿಡಿಸಿ ಶುರಂಗಕ್ಕೆ ಕಳಿಸಿದರು. ಆದರೆ ಈ ಸಂಸ್ಥಾನದವರು ಅದರಿ ಹೊಟ್ಟೆಯಲ್ಲಿ ಜಂಬಿಯೂ ಇರಿದು, ಅಬಕ್ಕೆ ತಮ್ಮ ರಾಜ್ಯದಲ್ಲಿ ಮಣ್ಣು ಕೊಟ್ಟಿದ್ದಾರೆ. ಇಂದು ಸರಕ್ಯೂಲರ ತೆಗೆದು ಕೈಕಳಗಿನ ಕಾಮದಾರರಿಗೆ ಮುಂದೆ ಕೊಟ್ಟಂತೆ ತಿಳಿಸಿದ್ದಾರೆ.

ಗಾಂಧಿ ಟೊಪ್ಪಿಗೆಯು ಒಂದಾನೊಂದು ರಾಜಕೀಯ ಚಳವಳಿಯ ವೈಶಿಷ್ಟ್ಯವಾಗಿದೆ. ಸಂಸ್ಥಾನದಲ್ಲಿ ವಿಶೇಷವಾಗಿ ಶಾಲೆಗೆ ಹೋಗುವ ವಿದ್ಯಾರ್ಥಿಗಳಲ್ಲಿ ಇದರ ಪ್ರಸಾರವು ಹೆಚ್ಚಾದಂತೆ ತೋರುತ್ತದೆ. ಈ ಸಂಗತಿಯು ಮುಸಲಮಾನ ರಾಜ್ಯದಲ್ಲಿ ಅಕ್ಷೇಪಪಡುವಂತಹದಾಗಿದ್ದು, ಸರಕಾರ ಮತ್ತು ಸರಕಾರದಿಂದ ಗ್ರಾಂಟು ಪಡೆಯುವಂಥ ಶಾಲೆಗಳಲ್ಲಿ ಗಾಂಧೀ ಟೊಪ್ಪಿಗೆ ಉಪಯೋಗಿಸಬಾರದೆಂದು ಬೇಗಮ (ರೀಜಂಟ್) ಸಾಹೇಬರ ಹುಕುಮುಂಟು. ಈ ಹುಕುಮು ಜಾಹೀರ ಮಾಡಿದ ನಂತರ ಹಿಂದೆರಡು ದಿವಸಗಳಲ್ಲಿ ವಿದ್ಯಾರ್ಥಿಗಳು ಗಾಂಧೀ ಟೊಪ್ಪಿಗೆ ಹಾಕಿಕೊಂಡು ಬರುವದನ್ನು ಬಿಡದಿದ್ದರೆ- ಅಂದರೆ ಟೊಪ್ಪಿಗೆ ಹಾಕಿಕೊಂಡು ಬಂದರೆ- ಅವರನ್ನು ಹೊರಗೆ ಹಾಕಕ್ಕಾದ್ದು. ಇದೇ ಪ್ರಕಾರ ಗಾಂಧೀ ಟೊಪ್ಪಿಗೆ ಹಾಕಿಕೊಂಡು ಯಾವನಾದರೂ ದೇವಸ್ಥಾನದ ಬಳಲುಕ್ಕಾ ಔಷಧಾಲಯಕ್ಕೆ ಬಂದರೆ- ಅವರಿಗೆ ಮದ್ದು ಕೊಡಬಾರದು. ಯಾವನೊಬ್ಬ ಸರಕಾರೀ ಕಾಮದಾರನು ಟೊಪ್ಪಿಗೆ ಹಾಕಿಕೊಂಡು ಕಚೇರಿಗೆ ಬಂದರೆ- ಕೂಡಲೆ ಅವನಿಗೆ ಸಸ್ಪೆಂಡ ಮಾಡಿ, ವರಿಷ್ಠರ ಕಡೆಗೆ ರಿಪೋರ್ಟು ಮಾಡಬೇಕು. ಬ್ರಿಟಿಶ ಇಲಾಖೆಯಂತೆ ಸಂಸ್ಥಾನದ ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳು ಸ್ವತಂತ್ರವಲ್ಲ. ಸಂಸ್ಥಾನದ ಉಪಾಂಗವಾಗಿವೆ ಆದ್ದರಿಂದ ಇವುಗಳ ಮೆಂಬರರು ಗಾಂಧೀ ಟೊಪ್ಪಿಗೆ ಹಾಕಿಕೊಂಡು ಕಮೀಟಿಗೆ ಬಂದಾಗದು. ಗಾಂಧೀ ಟೊಪ್ಪಿಗೆಯು ಅಗ್ಗದಿಂದ ಹೊರೆಯುವ ಶಿರೋಭೂಷಣವೆಂದು ಹೇಳುವರು. ಈ ಟೊಪ್ಪಿಗೆಯು ಮುಂಜೆ ಅಗ್ಗದಿಂದ ಬೇರೆ ವಸ್ತ್ರಾಭರಣಗಳು ದೊರೆಯುತ್ತವೆ. ಆದ್ದರಿಂದ ಟೊಪ್ಪಿಗೆಯು ನೆವನವು ಎಷ್ಟೂ ನ್ಯಾಯವು ಮತ್ತು ಸಮಂಜಸವಾಗಿರುವದಿಲ್ಲ.

ಮುಸಲಮಾನ ರಾಜ್ಯವಾದ್ದರಿಂದ ಗಾಂಧೀ ಟೊಪ್ಪಿಗೆಯು ಅಕ್ಷೇಪಾರ್ಹವೆನ್ನುವ ಬೇಗಮಸಾಹೇಬರು ನಿಜಾಮರಾಜ್ಯದಲ್ಲಿ ಗಾಂಧೀ ಟೊಪ್ಪಿಗೆಗೆ ಪ್ರತಿಬಂಧವಿಲ್ಲೆಂಬದನ್ನು ಅರಿಯಬೇಗಲ್ಲವೇ? ಇಂದು ವಿಲಾಯತಿಗೆ ಹೋಗಿರುವ ಮುಸಲಮಾನ ಮುಂದಾಳುಗಳಾದ ಮೈಲಾನಾ ಮಹಮದಲ್ಲಿ, ಶೌಕತಲ್ಲಿಯವರು ಗಾಂಧೀ ಟೊಪ್ಪಿಗೆ ಹಾಕುತ್ತಿದ್ದಾರಲ್ಲ! ಲಕ್ಷಾವಧಿ ಮುಸಲಮಾನರು ಗಾಂಧೀ ಟೊಪ್ಪಿಗೆ ಹಾಕುತ್ತಾರಲ್ಲ! ಇವರೆಲ್ಲರಿಗೂ ಗಾಂಧೀ ಟೊಪ್ಪಿಗೆಯು ಅಗ್ಗರ್ಮ, ಅಪವಿತ್ರವೇಕೆ ಆಗಿಲ್ಲ? ಸಂಸ್ಥಾನಿಕರು ತಮ್ಮ ಮೆಟ್ಟಿಗೆ ರಾಜ್ಯಕಾರಭಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಬೇಡುತ್ತಾರೆ. ಆ ಸ್ವಾತಂತ್ರ್ಯದಲ್ಲಿ ಯಾವದೊಂದು ನಿರುಪದ್ರವಿ ರಾಜಕೀಯ ಚಳವಳಿಯನ್ನು ಸಮೂಲ ನಾಶಮಾಡುವ ಮೂರ್ಖತನ ನಡೆಸಿದರೆ- ಅದು ಸ್ವರಾಜ್ಯ ಹಿಂದವಾಸಿಗಳಿಗೆ ಹೇಗೆ ಒಪ್ಪಿಗೆಯಾಗುವದು?

ಬ್ರಾಹ್ಮಣೇತರ ಪುಷ್ಪ. ಜನಗಣನೆ.

—(೦)—

ಪುಣೆ ಪ್ರಾಂತದ ಬ್ರಾಹ್ಮಣೇತರರ ಸಭ್ಯಶೋಧಕ ಸಮಾಜದ ಮುಖ್ಯ ಧ್ಯೇಯವು ಜಾತಿಭೇದ ಮುರಿಯುವದಾಗಿದೆ ಆದುದರಿಂದ ಈಗ ಭಾರತ ಗಣತಿಯಲ್ಲಿ ಪ್ರತಿಯೊಬ್ಬ ಬ್ರಾಹ್ಮಣೇತರನು ತನ್ನ ಜಾತಿ ಉಪಜಾತಿಯನ್ನು ಸರ್ವತ್ರಾ ಹೇಳಕಕ್ಕದ್ದಲ್ಲ. ಪ್ರತಿಯೊಬ್ಬನು "ಹಿಂದೀ" ಎಂದು ದಾಖಲಿಸಿಕಕ್ಕದ್ದೆಂದು ಶ್ರೀ. ದಿನಕರರಾವ ಜನಳಕರರೆಂಬವರು ಜಾಹೀರ ಮಾಡಿದ್ದಾರೆ.

ರಾವುಂಡ ಟೇಬಲಿನ ವಾರಿಯಲ್ಲಿ ಹೆಗ್ಗಲಿ ಮುಳ್ಳುಗಳು,

ರಾವುಂಡ ಟೇಬಲಿನ ಪ್ರಾರಂಭದಲ್ಲಾದ ಭಾಷಣಗಳು ಸಕ್ಕರೆಗಿಂತ ಸವಿಯಾದವು. ಅಲ್ಲಿಗೆ ಹೋದ ಮೆಂಬರರು ನಿಶ್ಚಯವಾಗಿ ಸ್ವರಾಜ್ಯ ತರುವರೆಂದೆನಿಸಿತು. ಅದು ಪೂರ್ಣ ಮೃಗಜಲವಾಗಿ, ಸ್ವರಾಜ್ಯಸಿಗುವದು ಬಹು ಕಠಿಣ ಕೆಲಸವಾಗುವದೆಂದೆನಿಸಿದೆ. ಢಾಕ್ಟರ ಮುಂಜೆಯವರು, ಅಯಲಂಡದ ಸ್ವರಾಜ್ಯದ ಕಾಯದೆಯನ್ನು ಮಾದರಿಯನ್ನಾಗಿ ಮುಂದಿಟ್ಟುಕೊಂಡು, ವಸಾಹಾತಿನ ಸ್ವರಾಜ್ಯವೆಂದು ಮೂಲ ಫಿರಿಕೆ ಬಳೆದು, ಅನಂತರ ಮಿಕ್ಕ ವಿಷಯಗಳ ಚರ್ಚೆಗೆ ಪ್ರಾರಂಭ ಮಾಡಬೇಕೆಂದು ಹೇಳಿದ್ದರು. ಫೆಡರಲ ಹಿಂದುಸ್ಥಾನವೆಂಬ ದೊಡ್ಡ ಹೆಸರಿಗೆ ಮರುಳಾಗಿದ್ದ ಸರ ಸಪ್ರು, ಶ್ರೀನಿವಾಸಶಾಸ್ತ್ರಿ ಮೊದಲಾದವರು ಈ ಠರಾವನ್ನು ವಿರೋಧಿಸಿದರು. ಚಮತ್ಕಾರವೆಂದರೆ- ಇದು ಬಹುಮತದಿಂದ ನಾಪಾಸಾಯಿತು. ವಸಾಹಾತಿನ ಸ್ವರಾಜ್ಯವೆಂಬ ಶಬ್ದ ಹೇಗೆ, ಈಗ್ಗೆ ರಾಜ್ಯಕರ್ತರ ಕೈಕಟ್ಟಕಕ್ಕದ್ದಲ್ಲ. ಎಲ್ಲ ವಿಷಯಗಳು ಮುಗಿದ ಬಳಿಕ, ಆ ಶಬ್ದವನ್ನು ಎಲ್ಲಾದರೂ ಸೇರಿಸಬಹುದೆಂದು ಇವರ ಮತವಾಗಿದೆ.

ಹಿಂದುಸ್ಥಾನದಲ್ಲಿ ವಸಾಹಾತಿನ ಸ್ವರಾಜ್ಯ ಮತ್ತು ಪೂರ್ಣ ಸ್ವರಾಜ್ಯವೆಂಬೆಂಡು ಕಂಡಗಳಾಗಿರುತ್ತವಷ್ಟೇ; ಪೂರ್ಣ ಸ್ವರಾಜ್ಯಕ್ಕೆ ಇಂಗ್ಲೀಷ ಜನರೇಕೆ ಒಪ್ಪುವದು? ಇಂಗ್ಲಿಷರಂತೆ ರಾವುಂಡ ಟೇಬಲಿಗೆ ಹೋದವರೂ ವಸಾಹಾತಿನ ಸ್ವರಾಜ್ಯವೇ ಕೊನೆಯ ಹಾರಿಕೆ ಎಂದೇ ಒಪ್ಪಬೇಕಾಗಿದೆ. ಅಲ್ಲಿಗೆ ಹೋದವರು ಅದೇ ಪ್ರಕೃತಿಯವರಾಗಿದ್ದಾರೆ. ಕೌನ್ಸಿಲದಲ್ಲಿ ಹೋಗುವ ಮೊದಲು ಎಲ್ಲ ಮೆಂಬರರು ರಾಜನಿಷ್ಠೆಯ ಆಣೆಮಾಡಬೇಕಾಗುತ್ತದೆ. ಈ ಆಣೆಮಾಡಿದರೇ- ಅವರು ಮೆಂಬರರಾಗಿ ಕೌನ್ಸಿಲ ಖುರ್ಚಿಯ ಮೇಲೆ ಕೂಡ್ರಲು ಸತ್ಪಾತ್ರರಾಗುತ್ತಾರೆ. ರಾವುಂಡ ಟೇಬಲಿನ ಒಟವು ಇದಕ್ಕಿಂತ ಬಹಳೇ ದೊಡ್ಡದಿರುವದು. ಹಿಂದುಸ್ಥಾನವು ಬ್ರಿಟಿಶ ಸಾಮ್ರಾಜ್ಯಾಂತರ್ಗತವಾದದ್ದೊಂದು ದೇಶವೆಂದು ಇವರು ಒಪ್ಪಲೇಬೇಕು. ಅಲ್ಲಿವರ ಭಾವೆಯಿಂದ ಹಿಂದುಸ್ಥಾನದ ೩೨ ಕೋಟಿ ಪ್ರಜೆಗಳು ತಮ್ಮ ದೇಶವು ಬ್ರಿಟಿಶ ಸಾಮ್ರಾಜ್ಯಕ್ಕೆ ಸೇರಿದ್ದೆಂದೇ ಕಬೂಲಿ ಜವಾಬು ಕೊಟ್ಟಂತಾಗಕಕ್ಕದ್ದು. ವಸಾಹಾತಿನ ಸ್ವರಾಜ್ಯವೆಂಬ ಹೆಸರು ಮುಂದೆ ಬರುವದಾದರೂ, ಬ್ರಿಟಿಶ ಸಾಮ್ರಾಜ್ಯಾಂತರ್ಗತವೆಂಬದು ಹಿಂದುಸ್ಥಾನದ ಹಣೆಯಲ್ಲಿ ಮುಂದಾಗಿ ಬರೆದಿಡಬೇಕಾಗಿರುತ್ತದೆ.

ರಾವುಂಡ ಟೇಬಲಿನ ಹಿಂದೀ ಪ್ರತಿನಿಧಿಗಳಿ

ಗಿಂತ ಹೆಚ್ಚಾದ ರಾಜನಿಷ್ಠೆಯನ್ನು ಸಂಸ್ಥಾನಿಕರು ತೋರಿಸಿದ್ದಾರೆ. ಹಿಂದುಸ್ಥಾನದ ಅರಸರು ಜಾದ ಶಹ ಪಂಚಮಜಾರ್ಜರಲ್ಲಿ ನಿಸ್ಸೀಮನಾದ ರಾಜನಿಷ್ಠೆಯುಳ್ಳವರಾಗುವರು. ಮತ್ತು ಹಿಂದುಸ್ಥಾನವು ಯಾವಾಗಲು ಬ್ರಿಟಿಶಸಾಮ್ರಾಜ್ಯಾಂತರ್ಗತವಾಗಿಯೇ ಇರುವದೆಂಬ ಎರಡು ಶರ್ತುಗಳನ್ನು ಮೆಂದಲು ಕ್ಷಿಡಂಡಿಸಿಕೊಂಡೇ ಇನೆರು ಫೆಡರಲ ಹಿಂದುಸ್ಥಾನದ ಅಡಳಿತೆಯ ವಾಲುಗಾರರಾಗುವರು. ಪ್ರಜಾಮತ ಸರಕಾರದ ಪ್ರತಿನಿಧಿಯಾದ ಸರ ಅಳಬರ ಹೈದರಿಯವರು ಈ ಬಗ್ಗೆ ಒಂದು ವಿಸ್ತೃತವಾದ ಸೂಚನೆ ಪತ್ರ ಬರೆದಿದ್ದು, ಅದರಲ್ಲಿ ಬ್ರಿಟಿಶಸಾಮ್ರಾಜ್ಯಾಂತರ್ಗತವೆಂಬದಕ್ಕೆ ಹೆಚ್ಚಾದ ಮಹತ್ವ ಕೊಟ್ಟು, ಅದರಂತೆ ಸಂಸ್ಥಾನಿಕರಿಗೆ ತಂತಮ್ಮ ಮಟ್ಟಿಗೆ ಸಂಪೂರ್ಣ ಸ್ವಾತಂತ್ರ್ಯ ಬೇಡಿದ್ದಾರೆ. ಫೆಡರಲ ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಯಾವನೊಬ್ಬ ಸ್ವಾತಂತ್ರ್ಯಕ್ಕೆ ಕೂಗುವ ಅಫ್ಘಿಕೆಯ ಜಾರ್ಟಜಾಗಸಾಹೇಬನಂತೆ ಸ್ವಾತಂತ್ರ್ಯದ ಮಾತಾಡಿದರೆ- ಇವರೆಲ್ಲರೂ ಸೌರಿ ಆಶನ ನೆತ್ತಿಯನ್ನು ಕುಕ್ಕುವರೆಂಬದು ಸಹಜವಾಯಿತು.

ಮಸಾಹಾಶು ಅಥವಾ ಸಾಹಂತ್ಯವೆಂಬ ಶಬ್ದಗಳ ವಾದಕ್ಕೆ ಮುಸಲಮಾನರು ತಮ್ಮ ಆಗ್ರಹವನ್ನು ಮುಂದೆ ಹಾಕಿದ್ದಾರೆ. ಹಿಂದೂ ಮುಸಲಮಾನರ ಮಿಶ್ರ ಹುನಾವಣೆಯಾದರೆ- ಹಿಂದೂಮುಸಲಮಾನರು ಒಬ್ಬರನ್ನೊಬ್ಬರು ನಂಬುವ ಅಗತ್ಯವಿದ್ದು, ದಂಗೆ ಕತ್ತವಾಕವಾಗಲಾರದೆಂದು ಅನ್ನುವರು. ಬೇಕಾದರೆ- ನಾವು ನಿಮ್ಮ ಮಿಶ್ರ ಹುನಾವಣೆಗೆ ಒಪ್ಪುತ್ತೇವೆ. ನಮ್ಮ ಹದಿನಾಲ್ಕು ಕಲಮುಗಳಿಗೆ ಟೊದಲು ತಥಾಸ್ತು ಎನ್ನಿರೆಂಬ ಆಗ್ರಹವನ್ನೇ ಹಿಡಿದಿದ್ದಾರೆ. ಹಿಂದೂ ಮೇಂಬರರಿಗೆ ಈ ಆಗ್ರಹವು ದುರಾಗ್ರಹವೆನಿಸಿದ್ದು, ಈ ಮೂಲಕ ಟೇಬಲಿನ ಕೆಲಸವು ನೆನೆಗುದಿಗೆ ಬೀಳುವ ಅವಲಕ್ಷಣಗಳಾಗುತ್ತಿರುವದು. ನಾಕಾಳಿ ನಡೆಯ ಹೆಸರಿನಿಂದ ಟೇಬಲಕ್ಕೆ ನಾಲ್ಕೈದು ತಿಂಗಳ ವಿಶ್ರಾಂತಿ ಕೊಟ್ಟು, ಮೇ ತಿಂಗಳಲ್ಲಿ ಮತ್ತೆ ಕೂಡಬೇಕೆಂಬ ವಿಚಾರ ನಡೆದಿದೆಂದೂ ನಿರ್ಣಯವಾನ ಬಂದಿದೆ.

ಟೇಬಲಿನಲ್ಲಿ ಮುವಾಳ, ಮುಸಲಮಾನ ಮತ್ತು ಯುರೋಪಿಯನ್ನರು ತಂತಮ್ಮ ಮಟ್ಟಿಗೆ ಒಂದುಗುಟ್ಟಿನವರಾಗಿರುತ್ತಾರೆ. ಕ್ರಿಶ್ಚನ, ಬ್ರಾಹ್ಮಣೇತರ, ಅಸ್ಪೃಶ್ಯ ಮೊದಲಾದವರು ಯಾರನ್ನು ಆಶ್ರಯಿಸಬೇಕೆಂಬ ದೊಡ್ಡ ಪ್ರಶ್ನವಾಗಿತ್ತು. ಅವರು ತಮ್ಮಲ್ಲಿಯೂ ಶಕ್ತಿಯುಂಟೆಂದು ತೋರಿಸಲು ಜ್ಯಾಡಿಪ್ಪರ ಜಯಕರರ ಮುಂದಾಳುತ್ವದಲ್ಲಿ ಒಂದು ಕೂಟ ನಿರ್ಮಾಣ ಮಾಡಿಕೊಂಡಿದ್ದಾರೆ. ವಸಾಹಾತಿನ ಸ್ವರಾಜ್ಯವೇ ತಮ್ಮ ಪ್ರಯತ್ನದ ಕರ್ತವ್ಯವೆಂದು ಪ್ರತಿಯೊಬ್ಬರು ಹೇಳಿದರೂ. ಅದರ ದಾರಿಯಲ್ಲಿ ತಂತಮ್ಮ ಮತಿಯಂದ ವಿಘ್ನ ತರುತ್ತಿರುವರು. ಟ್ರೇಬಲವೆಂದರೆ-ಮೂವರು ಬುದ್ಧಿವಂತರ ಕಮೀಟಿಯು. ಆದರೆ ಮೂವರಲ್ಲಿ ಇಬ್ಬರು ಸತ್ತುಹೋಗಿ, ಒಬ್ಬನೇ ಉಳಿದಂಥ ಕಮೀಟಿಯಾಗಿರುತ್ತದೆಂದು ಸಂಜೇ ರಘರಿ ಯುಂಬ ಪತ್ರವು ಟೀಕೆ ಮಾಡಿದೆ. ಮೇಲಿನ ವಿವೇಚನೆ ಮತ್ತು ಅಭಿಪ್ರಾಯಗಳನ್ನು ನೋಡಲಾಗಿ, ಇಂದು ರಕವುಂಡ ಟ್ರೇಬಲಿನ ದಾರಿಯು ಸುಗಮವಾಗಿಂದೆ ತೀಕ್ಷ್ಣವಾಗಿ ನಡೆಯದಂತೆ, ನೆಗ್ಗಲಿಯ ಮುಳ್ಳಿನಂತೆ, ಅಂಗಾಲಿಗೆ ಒತ್ತುತ್ತಿರುವದೆಂದು ಕಂಡುಬರುವದು.

ಒಕ್ಕಲಿಗನಿಗೂ ಪೌಜದಾರರಿಗ ನಡೆದ ಸವಾಲು ಜವಾಬು.

—o*o—

ಬಾರಡೋಲಿ ತಾಲೂಕೆನಲ್ಲಿ ಹಪ್ತೆ ವಸೂಲಿಗಾಗಿ ಹೋದ ಸಬ್ಬ ಇನ್ಸಪೇಕ್ಟರನಿಗೂ ಒಬ್ಬ ರೈತನಿಗೂ ಮುಂದೆ ಕೆಟ್ಟಂತೆ ಪ್ರಶ್ನೋತ್ತರ ಜರಿಯಿತು

ಬಾರಡೋಲಿ ಬಿಬ್ಬು, ಪಂಚಾಯತ ಸಂಸ್ಥಾನಕ್ಕೆ ಗುಳೀ ಹೋದ ದಯಾಭಾಯಿಯನ್ನು ಕರೆಯಲು ಓಲೆಕಾರನು ಹೋದನು. ದಯಾಭಾಯಿಯು ಬರಬಾಗಲು- ಸಬ್ಬ ಇನ್ಸಪೇಕ್ಟರು ಅರೇಳು ಜನ ಸವಾಯರನ್ನು ಸಂಗಡ ಕರೆದುಂಡು ಅವನಿದ್ದಲ್ಲಿಗೆ ಹೋಗಿ, ಅಧಿಕಾರದ ದರ್ಪದಿಂದ, ಎಲೋ ದಯಾಭಾಯಿ- ನಿನ್ನೆ ಕರೆಸಿದರೆ- ನೀನೇ ಬರಲಿಲ್ಲೆಂದರು.

ಉತ್ತರ- ನನಗೆ ನಡೆಯಲಿಕ್ಕೆ ಬರದ್ದರಿಂದ ಬರಲಿಲ್ಲ.

ಸ. ಇ.- ಚ್ಛಕ್ಕಡಿಯಲ್ಲಿ ಕೂತು ಬರಬಹುದಾಗಿತ್ತು.

ಉ- ಈ ಕೆಲಸಕ್ಕಾಗಿ ನನ್ನ ಎತ್ತುಗಳನ್ನು ಹೋಕೆಗೇಡ ಮಾಡಬೇಕೆಂದಿರಲಿಲ್ಲ.

ಸ. ಇ.- ಈಗ ಬರುವಿಯಾ?

ಉ- ಇಲ್ಲೇ ಕೂಡಿದ್ದೇವಲ್ಲ. ಏನು ಕೇಳುವದು ಕೇಳಿಕೊಳ್ಳಿರಿ.

ಸ. ಇ.- ನೀನೇಕೆ ತೀರ್ವೆ ಕೊಡುವದಲ್ಲ?

ಉ- ಅಶಕ್ಯವೆನ್ನಾತು. .

ತಮ್ಮ ಆಟ ನಡೆಯದ್ದನ್ನು ಕಂಡು, ಸಬ್ಬ ಇನ್ಸಪೇಕ್ಟರರು ಎಷ್ಟುಗರ್ವದಿಂದ ದಯಾಭಾಯಿಯ ಊರಿಗೆ ಹೋಗಿದ್ದರೋ ಅಷ್ಟೇ ಗರ್ವಭಂಗವಾಗಿ ಹಿಂದಿರುಗಿದರು.

ರಾಷ್ಟ್ರೀಯ ನಿಶಾನೆ ತೆಗೆಯದ್ದಕ್ಕೆ ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಗ್ರಾಂಟು ಹೊರಿಯ ಕಷ್ಟೇ ಗ್ರಾಂಟು ಹೋದರೂ ಕಾಲೇಜವು ಯಥಾಪ್ರಕಾರ ನಡೆಯುವದೆಂದು ಸೇಕ್ಟಟ್ಟನ್ನಿಯವರು ಜಾಹೀರ ಮಾಡಿದ್ದಾರೆ.

ಸಬ್ಬ ಇನ್ಸಪೇಕ್ಟರನ. ಅರಾಜಕರ ಗುಂಡಿನ ಬಾಯಿಗೆ ತುತ್ತಾದನು.

—i*[]()[]*i—

ಚೆಶಗಾಂಗಿನಿಂದ ಕಲಕತ್ತೆಗೆ ಬರುತ್ತಿರುವ ಮೇಲಬಂಡಿಯಿಂದ ಚಾಂದಪೂರವೆಂಬ ಸ್ಟೇಶನದಲ್ಲಿ ಇಬ್ಬರು ತರುಣರಿಳಿದು ಅಲ್ಲೇ ಇನ್ಸಪೇಕ್ಟರ ಜನರಲಸಾಹೇಬನನ್ನು ಕಾಣಲಿಕ್ಕೆ ಬಂದಿದ್ದ ಸಬ್ ಇನ್ಸಪೇಕ್ಟರ ಮೂಕರಜಿಯ ಮೇಲೆ ಗುಂಡು ಹಾಕಿದವರೇ ಪಲಾಯನ ಹೋಗಿದರು ಮೂಕರಜಿಯನ್ನು ಆಸ್ಪತ್ರೆಗೆ ಕರಕೊಂಡು ಹೋಗುವಾಗ ಆತನು ದಾರಿಯಲ್ಲಿ ಪರಲೋಕವಾಸಿಯಾದನು.

ಕೆಲ್ಲೋಸ್ಕರ ವಾಡಿಯ ಕಬ್ಬಿಣ ಕಾರಖಾನೆಯ ಅಡಾಯವೆಷ್ಟ

—(o)—

ಕೆಲ್ಲೋಸ್ಕರ ವಾಡಿಯಲ್ಲಿರುವ ಕಬ್ಬಿಣದ ಕಾರಖಾನೆಗೆ ಈ ವರ್ಷ ಒಟ್ಟು, ೧,೫೦,೮೫೬ ರೂಪಾಯಿ ಲಾಭವಾಯಿತು. ಅದರಲ್ಲಿ ೨೦ ಸಾವಿರ ಕಟ್ಟಡಗಳ ಸುರಕ್ಷತೆಗಾಗಿ ೪೦ ಯಂತ್ರಗಳ ಸವಕಳಿಗಾಗಿ, ೫೦೦೦ ಸಂಶಯದ ರಕಮುಗಳ ಬಾಯಿ ಗೂಡಿಸುವದಕ್ಕಾಗಿ ೪೭೬೫ ಕೆಲಸಗಾರರ ಯೋಗಕ್ಷೇಮಕ್ಕಾಗಿ, ೧೦ ಸಾವಿರ ರಿಜರ್ವ ಫಂಡಿಗಾಗಿ ತೆಗೆದಿಟ್ಟು, ಉಳಿದ ೫೦೪೪೦ ರೂಪಾಯಿಗಳನ್ನು ಶೇರ ಹೋಲ್ಡರರಿಗೆ ಲಾಭ ಹಂಚಿಕೊಡಲು ತೆಗೆದಿಟ್ಟಿದ್ದಾರೆ. ಈ ರಕಮು ದೊಡ್ಡದಾಗಿ ಕಂಡುಬಂದರೂ, ಶೇಂಡಾವಾರಿಗೆ ನಿಗುವದು ನೂರಕ್ಕೆ ಹಾಳ್ಳುರಂಶೆ !!

ಜಗತ್ತು ಎರಡುಲಕ್ಷ ವರ್ಷ ಬದುಕುವದು.

ಲಂಡನದಲ್ಲಿ ಭೂಗೋಲಶಾಸ್ತ್ರಜ್ಞರಾದ ಸೇರ ಜೇಮ್ಸ ಜೀನ್ಸತೆಂಬವರು ಮಾಡಿದ ಭಾಷಣದಲ್ಲಿ ಈ ಜಗತ್ತು ಇನ್ನೂ ಎರಡು ಲಕ್ಷ ವರ್ಷ ಬದುಕಲಿಕ್ಕೆ ಅಡ್ಡಿಯಿಲ್ಲೆಂದು ಹೇಳಿದರು. ನಾಲ್ಕು ಯುಗಗಳಿಗೆ ಒಂದು ಸಾವಿರ ವರ್ಷವಾದರೆ. ಬ್ರಹ್ಮದೇವರಿಗೆ ಒಂದು ದಿವಸವಾಗುತ್ತದೆಂಬ ಮಾತು ನಿಶ್ಚಯವಾಯಿತು.

ಶ್ರೀ. ರಾಮಬ್ರಹ್ಮರ ಮಗಳು ಮತ್ತು ಮಗನಿಗೆ ಭಯಂಕರ ಅಪಘಾತ.

—(o)—

ಬೆಳಗಾವಿಯಲ್ಲಿ ಶ್ರೀ. ರಾಮಬ್ರಹ್ಮಕವರ ಮಗಳು (ವಯ ೧೬) ಮತ್ತು (೯) ನು ಪೆಟ್ರೋಲ್ ಹೊತ್ತಿಸುವಾಗ ಸ್ಟೋವ್ ಒಡೆದು, ಎಣ್ಣೆಗೆ ಬೆಂಕಿ ಹತ್ತಿ, ಇವರಿಬ್ಬರ ಅಂಗಿಗೂ ಹತ್ತಿ ಶೆಂಡು

ನೋಟೀಸು

ಸಯ್ಯದ ರಾಜೇಸಾಹೇಬ ವ ಸಯ್ಯದ ವೀ
ರಸಾಹೇಬ ಶೇತಸನದಿ ಮತ್ತು ಸಯ್ಯದ ಹಾಶೀ
ಮ ವ|| ಸಯ್ಯದ ಮೀರಾಸಾಹೇಬ ಶೇತಸನದಿ
ತಾ|| ಮಾಳಾಪೂರ ಶಹರ ಧಾರವಾಡ ಇವರಿಗೆ—

ಕಳಗೆ ಗುರ್ತಾ ಮಾಡುವ ಗುರುಸಾದಯ್ಯಾ
ನ್ನ ವೀರಭದ್ರಯ್ಯಾ ಜಂಗಿನಮಠ ಇವರು ನಿಮ
ಈ ನೋಟೀಸಿನಿಂದ ತಿಳಿಸುವದೇನಂದರೆ- ಧಾ
ರವಾಡ ಶಹರ ಮಾಳಾಪೂರ ಗ್ರಾಮದಲ್ಲಿರುವ ನಿ
ಮ್ಮ ಜವೀನ ಸಿ ೧|| ಸ|| ನಂ|| ೫೫೫ ಯುಕರಿ ೪ ಶ
ಮು ೬೦ ರೂಪಾಯಿ ಇದನ್ನು ಆಗಾವ ಅಾವಣಿ
ರೀಕ ೧೨ ವರ್ಷ ಕರಾರಿನಿಂದ ಹಿಡಿದಿದ್ದು ಅದರ
ಪೈಕಿ ಅರವತ್ತು ರೂಪಾಯಿ ಕೊಟ್ಟು
ಉಳಿಗ ಎರಡು ನೂರು ರೂಪಾಯಿಗಳ
ಮೆಸೆಯಿಂದ ಈಗ ಸದರ ಭೂಮಿಯಲ್ಲಿ ನಿಂತ
ಜೋಳ ಮತ್ತು ಕಡ್ಲೆಯ ಪೀಕನ್ನು ನಿಮಗೆ ಬಿ
ಟ್ಟದಿಗೆ ಕೊಟ್ಟಿರುತ್ತೇನೆಷ್ಟೇ ಈಗ ಜೋಳದ ಪೀ
ಕ ಕೊಯ್ಯಲಿಕ್ಕೆ ಬಂದಿದ್ದು; ನೀವು ನಿಮ್ಮ ಜೋ
ಳ ಮತ್ತು ಕಡ್ಲೆಯ ಪೀಕನ ಸಂರಕ್ಷಣೆ ಮಾಡಿಕೊಂ
ಡು, ಒಕ್ಕಿಕೊಳ್ಳಿರೆಂದು ಹೇಳಿದರೆ ನೀವು ದಿನಮೇ
ಲೆ ಮಾಡಲಿಕ್ಕೆಹತ್ತಿರುತ್ತೀರಿ ಆದ್ದರಿಂದ ಕಾಯದೇ
ಇರ ರೀತಿಯಿಂದ ಈ ನೋಟೀಸು ಕೊಡುವ ಭಾ
ವ ಬಿತ್ತು ನೀವು ಈ ನೋಟೀಸ ಮುಟ್ಟಿದ ಮೂ
ರು ದಿವಸಗಳಲ್ಲಿ ನಿಮ್ಮ ಪೀಕು ನಿಮ್ಮ ಕಬಜಾ
ತಕ್ಕೊಂಡು ಅದರ ಸಂರಕ್ಷಣೆ ಮಾಡಿಕೊಳ್ಳದೇಕು ಅ
ಪ್ರಕಾರಾ ಪೀಕ ಕಬಜಾ ಬಂದಬಗ್ಗೆ ನಮಗೆ ಪಾ
ವತಿ ಕೊಡಬೇಕು ಈ ನೋಟೀಸಿನ ಪ್ರಕಾರ ನೀ
ವು ನಡೆಯದೆ, ಪೀಕಿಗೆ ಏನಾದರೂ ಲುಕ್ಸಾನ
ಆದರೆ- ಅದರ ಜವಾಬದಾರೀ ನಿಮ್ಮ ಮೇಲೆ ಬಿ
ಳಕೂಲ ಇರುವದಿಲ್ಲ ಅದರ ಲುಕಸಾನಕ್ಕೆ ನೀವೇ
ಪೂರ್ಣ ಜವಾಬದಾರರಿರುತ್ತೀರಿ ಈ ನೋಟೀಸಿನ
ಮರ್ಮ ನಿಮ್ಮ ಕಲ್ಲೆಯಮೇಲದೆ ತಿಳಿಯುವದು

ತಾ|| ೪ ಡಿಸೆಂಬರ ೧೯೩೦ ಸೇ ಇಸ್ವಿ

ಈ ಎಡೆ ಹೆಬ್ಬಟ್ಟಿನ ಗುರ್ತಾ ಗುರಸಾದ
ಯ್ಯಾ ಬಿನ್ನ ವೀರಭದ್ರಯ್ಯಾ ಜಂಗಿನಮಠ ಸಾ||
ಮಾಳಾಪೂರ ಇವರ ಕೈದು ಇರುತ್ತದೆ.

ಮೈಸೂರು ಊದುಬತ್ತಿ

ಹದ್ದ ಅಂಬರಬತ್ತಿ ಇದು ಬಹಳ ಸುವಾ
ನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆ
ಯಾಗದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು
ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂ
ಲವಾಗಿದೆ.

ಬೆಲೆ ತೊಲೆಯ ಸೇರು ೧ಕ್ಕೆ ೨—೦—
ಕೃಷ್ಣಪಾರಿಜಾತ ಅತ್ಯರು ತೊಲೆ ೧ಕ್ಕೆ ೪—೦—
೧೯—೧೧—೨೯ ಮೈಸೂರಿನವರು,
ಹುಬ್ಬಳ್ಳಿ ಎಳಗಾವಿಯವರಗಲ್ಲಿ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡಿ
ಮತ್ತು ——————— ಧಾರವಾಡ
ಕಾಮನಕಟ್ಟೆ

ನಮ್ಮಲ್ಲಿ ಇದಿ ಕರ್ನಾಟಕದಲ್ಲಿ ಆಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗ ದೊರೆಯುವವು. ಭಾಂಡಾ ರದ ಬೆಲೆಪಟ್ಟಿ ಬೇಕಾದವರು ೪ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿ ಯುಂಟು. ಮಾದರಿಗಾಗಿ ಕೆಲವು ಹೆಸರು ಕಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸಂ. ೧,೨, ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ಸೇರಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಸಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸಾವನೆ	೧ ೦-೦
೫. ಚರಿತ್ರ ಸಂಗ್ರಹ ಭಾ. ೧.	೪-೦-೪
೬. ಅಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೦-೩
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೬-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಲ್ಯಾಂಡ ರೆಜಿಸ್ಟ್ರೇಶ್ಯನ್ ಕೋಡು	೨-೧೧-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨-೧೩-೦
೧೨. ಸೀಧರ್ಮನೀತಿ, ಗೃಹಕರ್ಮ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇನೂಪನೀತಿ ಕಥೆ ಭಾ. ೧, ೨,	೨- ೪-೦
೧೪. ಕಾರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ಜೋಶಿಪಾಂಡೆ ಬಿ. ಎಸ್. ಸಿ.

ನೋಟೀಸಿನದರಗಳು

ಸಿಂಗಲ ಕಾಲಮಿನ ಪತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂ ವರಿ ಆಣೆ ಇಂಗ್ಲಿಷ ಪ್ರತಿಯೊಂದೆ ವಳಿಗೆ ಐದು ಆಣೆ ಸಂಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋ ರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂ ದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾ ರ್ಜ. ಕಾಯಂ ಜಾಹಿರಾತುಗಳನ್ನು ಕೊಡುವವರು ಕಳಗಿನ ಪತ್ತಿಕ್ಕೆ ಪತ್ರವ್ಯವಹಾರ ಮಾಡಬಹುದು.

ವ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಡಿಸೆಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭ ವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ.ಪಿ. ಸ್ವೀಕಾರಮಾಡಿ ವಿಜಯನನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

—(ಕ್ಷ*ಕ್ಷ)—

ಮು. ನಂ. ೧೫೬೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟ ಜವಳಿ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕಿಲ್ಲೆದಲ್ಲಿ ಶ್ರೀ. ಹೇಬಳಿ ಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆರ್ನಾಂ ಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯ ನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು

ಈ ಪತ್ರವನ್ನು ಆಣ್ಣಾಚಾರ್ಯ ಬಾಳಾ ಚಾರ್ಯ ಹೊಸಕೇರಿ ಇವರು ಧಾರವಾಡವಲ್ಲಿರು ವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮು ದ್ರಿಸಿ ಪ್ರಸಿದ್ಧ ಮಾಡಿದರು.

R N B 1[illegible]

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಸಕೇರಿ.

ವರ್ಷ ೧೧ ಧಾರವಾಡ ಶುಕ್ರವಾರ ತಾರೀಖು ೫ ನೇ ಡಿಸೆಂಬರ ೧೯೩೦ (ಸಂಚಿಕೆ ೨೬೬

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಡಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ಡಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿದ್ದು ಮಾರಾಟಕ್ಕೆ ಸಿದ್ಧವಾಗಿರುತ್ತೆ. ಇದರಲ್ಲಿ ವಾದೀ ಶ್ರೀ ಸಿದ್ಧಾವದೂತರ ಅಸಲಿ, ಶ್ರೀ ಆರೂಢಸ್ವಾಮಿಗಳ ಕೈಪಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಿಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕಕ್ಕೆ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ಹೆಗೆಸಿದೆ. ಬಾಯಿಯ ಮುಪ್ಪಡ್ಡದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರಿ ಹೋಗುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರದವರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ. ಒಂದೆಡೆ ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಂದಕ್ಕಿಂತ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಮ್ಮ ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಕೊಲೆಯುವ ಸಂಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೆದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಭೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದ್ವಿದ್ದ ವಿದ್ಯಾರ್ಥಿಯ ಕನ್ನ ವರ್ಷಸ್ಸಿನ ಪ್ರಕಾರ ತಿಂಗಳಾ ಕಟಿಸ ಅರವತ್ತು ರೂಪಾಯಿ ಗಳಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಪಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂದಿಗಯಿಯ ಎಂಟು ಲಕ್ಷದ ಮೇಲುಂಟು. ಚಳಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಜಾಸ್ತಿಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಲ್ಲಪ್ಪರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಅರವತಿಂಗಳ ಮುದ್ದತ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟು ಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಮತ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಗಿಯಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೦-೦
೬ ,,	೩-೦-೦
೩ ,,	೮-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ.

ಧಾ ರ ವಾ ಡ ವಿ ಜ ಯ ಪ್ರ ಕ್ರ ವ್ಯ ಕ್ತ ರೀ ಪ್ರ ಕ ನೇ ಡಿ ಶಿಂ ಬ ರ ೧೯೩೦ ಇಸ್ವಿ

ವಿಜಯ.

ಜಾಳುಕ್ಯವಿಕ್ರಮವರ್ಷ ೮೫೫ನೆಯ ಮಾರ್ಗಶಿರ್ಷ ಶುದ್ಧ ೧೫

ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಅಗಲಿಸಿದರು.

ಇಂಗ್ಲಿಷ ಸರಕಾರದವರು ಥೀಬಾ ರಾಜನನ್ನು ಪದಚ್ಯುತ ಮಾಡಿ, ತಾವು ಆತನ ರಾಜ್ಯದ ಆಡಳಿತಗಾರರಾದಕೂಡಲೆ, ಅದನ್ನು ಹಿಂದುಸ್ಥಾನಕ್ಕೆ ಸೇರಿಸಿದರು. ಇದು ಕಾಲಘಟನೆಯಲ್ಲದೆ,, ಮನುಷ್ಯ ಅಥವಾ ದೈವ ಘಟನೆಯಾಗಿರಲಿಲ್ಲ. ಇಂಗ್ಲಿಷ ಶಿಕ್ಷಣ ಮತ್ತು ರಾಜಕೀಯ ಚಳವಳಿಯ ದೃಷ್ಟಿಯಿಂದ ಬ್ರಹ್ಮದೇಶವು ಹಿಂದುಸ್ಥಾನಕ್ಕಿಂತ ಹಿಂದುಳಿದ ನಾಡಾಗಿತ್ತು. ಆಗ ಹಿಂದುಸ್ಥಾನದಲ್ಲಿಯೂ ಸ್ವರಾಜ್ಯ, ಪ್ರಾಂತ ವಿಭಾಗ ಮುಂತಾದ ಚಳವಳಿಗೇನೂ ಇರಲಿಲ್ಲ. ರಾಜ್ಯಕಾರಭಾರದಲ್ಲುಂಟು ಮಾಡಿದ ಅನೇಕ ಜಾತಿಗಳಲ್ಲಿಯ ದೋಷಗಳನ್ನು ತೆಗೆದು ಅವು ಪ್ರಜಾನಮ್ಮದಿಗೆ ಅನುಕೂಲವಾಗಬೇಕೆಂದಿದ್ದವು.

ಈಗಿನ ಚಳವಳಿಯು ಆ ನ ಜನರ ಕಲ್ಪನೆಗೆ ನಷ ಹರಿಯದಂತಾಗಿದೆ. ಹಿಂದುಸ್ಥಾನದಲ್ಲಿಯೇ ಸಿಂಧ ದೇಶವು ಒಂದು ಸ್ವತಂತ್ರ ಪ್ರಾಂತ ಮತ್ತು ಒಡಿಸಾ ಸ್ವತಂತ್ರ ಇಲಾಖೆಯಾಗಬೇಕೆಂಬ ವಿಚಾರ ನಡೆದಿದೆ. ಇವು ಹಿಂದುಸ್ಥಾನದ ಆರ್ಥಿಕ ಲಾಭಹಾನಿಗೆ ಸಂಬಂಧಿಸಲ್ಪಡುವವು. ಬ್ರಹ್ಮದೇಶವನ್ನು ಸ್ವತಂತ್ರ ಮಾಡುವದರಿಂದ. ಅದು ಹಿಂದುಸ್ಥಾನದಿಂದ ಪ್ರತ್ಯೇಕವಾಗಿ, ಸಿಲೋನದಂತೆ ಸರ್ವತಂತ್ರ ಸ್ವತಂತ್ರವಾಗುವದು. ಈ ದೇಶವು ಸ್ವತಂತ್ರವಾಗಬೇಕೆಂದು ಯುರೋಪಿಯನ್ನರು ಹೃಡುಂದ್ರಿ ಬಿಟ್ಟರು. ಕೆಲ ಬ್ರಮ್ಹಿಗಳು ಅವರಿಗೆ ಪ್ರತಿಧ್ವನಿ ಕೂಟ್ಟರು. ಆಗಿನಿಂದ ಈ ದೇಶವು ಹಿಂದುಸ್ಥಾನದಿಂದ ಅಗಲಬೇಕ? ಬಾರದೆ? ಎಂಬ ಚರ್ಚೆ ನಡೆಯಿತು. ಸರ ಸಾಯಮನ್ನ ಸಾಹೇಬರು ಅಗಲಬೇಕೆಂದೇ ಬರದಿಟ್ಟರು. ಅದು ಬ್ರಮ್ಹಿ ಜನರಿಗೆ ವೇದವಾಕ್ಯವಾಯಿತು. ಸಾಯಮನ್ನ ಸಾಹೇಬರ ಹೆಬ್ಬೊತ್ತಿಗೆಯ ಉಪಯೋಗವು ಎಲ್ಲಾಗದಿದ್ದರೂ ಬ್ರಹ್ಮದೇಶದ ಮಟ್ಟಿಗಾಯಿತು.

ರಾಉಂಡ ಟೇಬಲಿನಲ್ಲಿ ಇದೇ ಪ್ರಸ್ತಾಪ ನಡೆಯಿತು. ನಮ್ಮ ದೇಶವನ್ನು ಸ್ವತಂತ್ರ ಮಾಡಬೇಕೆಂದು ನೀವು ಒಪ್ಪಿದರೆ ಉತ್ತಮ. ಇಲ್ಲವಾದರೆ - ಪ್ರತಿಯೊಂದು ಉಪ ಕಮೀಟಿಯಲ್ಲಿ ಒಬ್ಬ ಬ್ರಮ್ಹಿ ಪ್ರತಿನಿಧಿಯನ್ನು ನೇಮಿಸಿಕೊಳ್ಳಬೇಕೆಂದು ಆಗ್ರಹ ಹಿಡಿದರು. ಕಡೆಗೆ ಇದನ್ನು ಸ್ವತಂತ್ರ ಮಾಡಲೇಕೆಂದೇ ಗೊತ್ತಾಯಿತು.

ಬ್ರಹ್ಮದೇಶವು ಹಿಂದುಸ್ಥಾನದ ಒಂದಂಶವಾದರೆ- ಅದರ ಅಸ್ತಿತ್ವವೇ ಲಯವಾಗುವದು. ಅದುದರಿಂದ, ಅದನ್ನು ಸ್ವತಂತ್ರ ಮಾಡಿದರೆ- ಜಗತ್ತಿನಲ್ಲಿ ತಮ್ಮದೊಂದು ದೇಶವುಂಟೆಂದು ಹೆಸರಾಗುವದು. ಸ್ವತಂತ್ರವಾದರೂ, ಮಹಾಹಾತಿನ ಸ್ವರಾಜ್ಯದ ಎಲ್ಲ ಹಕ್ಕುಗಳು ಬೇಕು. ನಾವು ಬ್ರಿಟಿಶರ ಕೂಡ ಸರಿಸಮಾನಸ್ಕಂದರಾಗಿಯೇ ಇರಬೇಕೆನ್ನುವಂಥವರು ಅದಕ್ಕೂ ಕಡಿಮೆಯ ತರಗತಿಯ ಅವಸ್ಥೆಯನ್ನು ಹೊಂದಲಿಚ್ಛಿಸುವದಿಲ್ಲೆಂದು ಮುಂದಾಳುವಾದ ಯು ಬಾ ಪಿಯವರು ಟೇಬಲಿನಲ್ಲಿ ಭಾಷಣ ಮಾಡಿದ್ದಾರೆ.

ಬ್ರಮ್ಹದೇಶದಲ್ಲಿ ಬಹುವಾಗಿ ಹಿಂದೂ ವ್ಯಾಪಾರಿಗಳಿದ್ದಾರೆ. ಲಕ್ಷ ಸಂಖ್ಯೆಯಿಂದ ಹಿಂದೂ ಜನರು ಅಲ್ಲಿಗೆ ಹೋಗಿ ವಾಸನಾಗಿದ್ದಾರೆ ಬ್ರಮ್ಹದೇಶವು ಬ್ರಮ್ಹೀಗಳದೇ ಎಂಬ ಭಾವನೆಯುಂಟಾದರೆ- ಈ ಜನರ ಹಕ್ಕು ಸ್ವಾತಂತ್ರ್ಯಗಳು ಮುಣುಗುವವೆಂದು ಹೆದರುವ ಕಾರಣವಿಲ್ಲೆಂದು ಯು ಬಾ ಪಿಯವರು ನಂಬಿಗೆಯ ಮಾತು ಹೇಳುತ್ತಾರೆ. ಏಕಂದರೆ- ಅಲ್ಲಿ ಜಾತಿಯ ಉಚ್ಚ ನೀಚ, ಅಥವಾ ಒಳಭೇದವಿರುವದೇ ಇಲ್ಲ. ಎಲ್ಲರೂ ಪ್ರೀತಿಯಿಂದ ಸರಿಸಮಾನಸ್ಕಂದರಾಗಿದ್ದಾರೆ. ಮೇಲಾಗಿ ಹಿಂದುಸ್ಥಾನ ಮತ್ತು ಬ್ರಮ್ಹದೇಶದ ನಡುವೆ ಆಗುವಂಥ ವ್ಯಾಪಾರದಲ್ಲಿ ವಿಘ್ನ ತಂದು, ಹಿಂದುಸ್ಥಾನದ ಸರಕಿನ ಮೇಲೆ ಕರ ಹೇರಿ, ಅದರ ಸಂಬಂಧ ತಪ್ಪಿಸಬೇಕೆಂದು ಬ್ರಮ್ಹೀ ಜನರು ಎಂದೂ ಅಪೇಕ್ಷಿಸಲಾರರೆಂದು ಇವರು ಹೇಳುತ್ತಾರೆ.

ಹಿಂದುಸ್ಥಾನವು ಮತ್ತು ಅದರೊಳಗಿನ ಪ್ರತಿಯೊಂದು ದೇಶವು ತನ್ನಷ್ಟಕ್ಕೆ ಸ್ವತಂತ್ರವಾಗಬೇಕೆನ್ನುತ್ತಿರುವಾಗ ಬ್ರಮ್ಹದೇಶವು ತನ್ನ ವಿಚಾರವನ್ನು ತಾನು ನೋಡಿಕೊಳ್ಳುತ್ತೇನೆಂದು ಅನ್ನುತ್ತಿರುವಾಗ್ಯ ಅದಕ್ಕೆ ಹಾಗೆ ಮಾಡಗೊಡುವದು ಸಹಜವಾದದ್ದು. ಸಿಲೋನವು ರಾಜಕೀಯ ದೃಷ್ಟಿಯಿಂದ ಯಾವ ರೀತಿಯಿಂದಲೂ ಹಿಂದುಸ್ಥಾನಕ್ಕೆ ಸಂಬಂಧಪಟ್ಟಿಲ್ಲದ್ದಾಗಿರುತ್ತದೆ. ಹಾಗೆ ಬ್ರಮ್ಹಿಗಳು ಮಾಡಿಕೊಳ್ಳಬೇಕು ಎಂದೂ ದೇಶಗಳು ಸುಖದುಃಖಗಳ ಪಾಲುಗಾರನಾಗುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕಾದುದು ಅವಶ್ಯಕವು.

ಹಿಂದೂ ಮುಸಲಮಾನ ಜಗಳ ಬಗೀ ಹರಿಯಲಿಲ್ಲ.

—(೦)—

ರಾಜಕೀಯವಾಗಿ ಹಿಂದೂ ಮುಸಲಮಾನರಲ್ಲಿ ಒಡಂಬಡಿಕೆಯಾಗಬೇಕೆಂದು ಕಳೆದ ಹಕ್ಕು ವರ್ಷಗಳಿಂದ ಹಿಂದುಸ್ಥಾನದಲ್ಲಿ ರಣಘಟ್ಟರ ನಡೆದಿದೆ. ವಿಲಾಯತಿಗೆ ಹೋದ ಬಳಿಕ ಅಲ್ಲಿಯ ತಂಪು ಹವೆಯಲ್ಲಾದರೂ ಒಡಂಬಡಿಕೆಯಾಗುವದೆಂದು ಅನೇಕರು ಹಾರೈಸಿದ್ದರು. ಆದರೆ ಅಲ್ಲಿಯೂ ಜಗಳವು ಶಿಖರಾಗ್ರಕವಾಯಿತು. ಮುಸಲಮಾನರ ಬೇಡಿಕೆಗಳು ಹಿಂದೂ ಜನರ ದೃಷ್ಟಿಯಿಂದ ಎಷ್ಟು ಮಾತ್ರಕ್ಕೂ ಹಿತಾವಹವಾಗಿರುವದಿಲ್ಲ. ಪಂಜಾಬ ಮತ್ತು ಬಂಗಾಲದಲ್ಲಿ ಜನಸಂಖ್ಯೆಯ ಪ್ರಮಾಣದಿಂದ ಮುಸಲಮಾನರಿಗೆ ಹೆಚ್ಚು ಹಕ್ಕು ಸ್ವಾತಂತ್ರ್ಯಗಳೂ, ಮುಸಲಮಾನರು ಅಲ್ಪ ಸಂಖ್ಯಾಕರಾಗಿರುವಂಥ ಮುಂಬಯಿ, ನಾಗಪೂರ, ಮದ್ರಾಸ ಮುಂತಾದ ದೇಶಗಳಲ್ಲಿ ತಮ್ಮ ಮಹತ್ವವೆನಿಸುವಷ್ಟು ಅಧಿಕಾರವನ್ನೂ ದೊರೆಯಬೇಕೆನ್ನುವರು. ಎಲ್ಲಾ ರೀತಿಯಿಂದಲೂ ಹಿಂದೂ ಜನರು ಹಿಂದುಳಿದು, ತಮ್ಮ ಪ್ರಭುತ್ವ ವಾಗಬೇಕೆಂದು ಇವರ ಮತವು ಈ ಕಾರಣಗಳಿಗೆ ಹಿಂದೂ ಜನರು ಒಪ್ಪದ್ದರಿಂದ, ಒಡಂಬಡಿಕೆಯು ಮುರಿಯಿತು.

ಮುಸಲಮಾನರಲ್ಲಿ ಒಕ್ಕಟ್ಟು.

—(೦)—

ಹಿಂದೂ ಜನರಲ್ಲಿ ಹರಗಟ್ಟು.

—(೦)—

ಲಂಡನದಲ್ಲಿ ಕೂಡಿದ ಎಲ್ಲ ಮುಸಲಮಾನ ಪ್ರತಿನಿಧಿಗಳಲ್ಲಿ ಸಂಪೂರ್ಣ ಒಕ್ಕಟ್ಟಂಟು ಆದರೆ ಹಿಂದೂ ಪ್ರತಿನಿಧಿಗಳ ಕೃತಿಯು ಹುಸಿಯಂಟು. ಜನರು ಸೇರಿ ಹುದಗೆಡಿಸಿದರೆಂಬಂತಾಗಿರುತ್ತದೆ ನಾಮದಾರ ಆಗಾಖಾನ, ಬ್ಯಾರಿಸ್ಟರ ಜಿನ್ನಾ, ಮೌಲಾನಾ ಮಹಮದಲ್ಲಿ ಮೊದಲಾದವರು ಒಂದೊಂದು ರೀತಿಯಿಂದ ಮತಭೇದವುಳ್ಳವರಾಗಿದ್ದರು. ಲಂಡನದಲ್ಲಿ ಇವರೆಲ್ಲರೂ ಒಂದಾಗಿ, ಮುಸಲಮಾನರ ಹಿತವನ್ನೇ ಸಾಧಿಸುವರು. ಇಂಥ ಸಂಬುದ್ಧಿಯು ಹಿಂದೂ ಮೆಂಬರರಲ್ಲಿರುವದಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಿಂದ ನಡೆಯುವಂಥವರಾಗಿದ್ದಾರೆ. ಉದ್ದೇಶ ಸಾಧನೆಗಿಂತ ಬೇರೆ ಬೇರೆ ಕಮೀಟಿಗಳಲ್ಲಿ ತಮ್ಮ ಸೇರ್ಪಡೆಯಾಗಬೇಕೆಂದು ಒಬ್ಬರ ಮೇಲೊಬ್ಬರು ಸ್ಪರ್ಧೆ ನಡೆಸಿದ್ದಾರೆ. ಇವರ ಕೃತಿಯನ್ನು ನೋಡಿ, ಭವಿಷ್ಯ ಪ್ರತಿಯ ಒಂದು ಹಳ್ಳಿಯ ಮ್ಯುನಿಸಿಪಾಲಿಟಿಯಲ್ಲಿ ಮೆಂಬರರು ಹೊಡದಾಡುವಂತೆ ಇವರ ಹೊಡದಾಟವಾಗಿರುತ್ತದೆಂದು ಒಬ್ಬ ಗವರ್ನರರು ಉದ್ಗಾರ ತೆಗೆದಿದ್ದಾರೆ.

ಸರ ಸಪ್ರುಸಾಹೇಬರು ಬೇಸರಗೊಂಡು ಸ್ವತಂತ್ರರಾದರು.

—(೦)—

ಹಿಂದೀ ಪ್ರತಿನಿಧಿಗಳಲ್ಲಿ ತಾಳಿಲ್ಲದ್ದನ್ನೂ, ತಾವು ಈವರೆಗೆ ಒಕ್ಕಟ್ಟಿಗಾಗಿ ಸಡೆಸಿದ ಪ್ರಯತ್ನವು ವಿಫಲವಾದದ್ದನ್ನೂ ಕಂಡು ಸರ ಸಪ್ರುಸಾಹೇಬರು ಈನಂತರ ತಾವು ವಿಚಾರ ಸ್ವಾತಂತ್ರ್ಯಯುಳ್ಳವರಾಗಿ, ತಮಗೆ ಯೋಗ್ಯ ತೋರಿದ ರೀತಿಯಿಂದರೇ ಟೇಬಲಿನಲ್ಲಿ ಕೆಲಸ ನಡಿಸುವೆವೆಂದು ಜಾಹೀರ ಮಾಡಿದ್ದಾರೆ.

ಕಾಂಗ್ರೆಸದ ಹೊರ್ತು ರಾವ್ಹಂಡಟೇಬಲವು ವ್ಯರ್ಥ

—(೦)—

ಈಗ ರಾವ್ಹಂಡ ಟೇಬಲಿನಲ್ಲಿ ಯಾವದೇ ವಿಷಯ ನಡೆಯಲಿ; ಮುಂದೆ ಅದಕ್ಕೆ ಮಂಜೂರಿ ಕೊಡಕಕ್ಕವರು ಕಾಂಗ್ರೆಸದವರೇ. ಕಾಂಗ್ರೆಸದವರು ಒಪ್ಪದ ವಿನಹ, ಯಾವದೇ ಒಡಂಬಡಿಕೆಯು ವ್ಯರ್ಥ ಶ್ರಮ ಮಾಡಿದಂತಾಗುತ್ತದೆಂದು ಸರದಾರ ಪಟೇಲರು ಅಭಿಪ್ರಾಯಪಟ್ಟಿದ್ದಾರೆ.

ಜರ್ಮನಿಯನ್ನು ಸೋಲಿಸಿದ ಇಂಗ್ಲಿಷರು ಹಿಂದುಸ್ಥಾನದ ಜಳವಳಿಗೆ ಹೆದರುವರೇ.

— ❋ —

ಹಿಂದುಸ್ಥಾನದಲ್ಲಿ ಆ್ಯಂಡರ್ಸ್ರೂಜರೆಂಬ ಸಾದುವಿನ ಹೆಸರಿನಿಂದೊಂದು ಊರವು ನ್ಯಾಜ ಜನರು ವಾಸವಾಗಿರುವಲ್ಲೆಲ್ಲ ಪ್ರತಿವರ್ಷ ನಡೆಯುತ್ತದೆ. ಈ ವರ್ಷದ ಭೋಜನವು ಹೊಂದಿ ವಾರದಲ್ಲಾಯಿತು. ಕಲಕತ್ತೆಯ ಆ್ಲಾದ ಸಮಾಂಭದ ಜೇರಮನ್ನಗಿದ್ದ ಕರ್ನಲ ಆರ್ಚರೆಂಬವರು ಕಾಂಗ್ರೆಸವನ್ನು ಕೆಣಕಿದಂಥ ಜಂಬದ ಭಾಷಣ ಮಾಡಿದ್ದಾರೆ.

ಹಿಂದುಸ್ಥಾನದಲ್ಲಿಯ ಜನವರ್ಗಕ್ಕೆ ಇನ್ನೂ ನಮ್ಮ ಸಂರಕ್ಷಣೆಯೇ ಬೇಕು ಸಿವಿಲ ಸರ್ವಂಟ, ಪೋಲಿಸ, ಇವಕ್ಕಿಂತ ಹೆಚ್ಚಾಗಿ ದಂಡು ಈ ಸಂರಕ್ಷಣೆಯ ಭಾರವನ್ನು ಹೊತ್ತಿರುತ್ತದೆ. ಇಂಗ್ಲಿಷ ಜನರು ಇಲ್ಲಿರುವದಕ್ಕೇ ಬಂದಿದ್ದಾರೆ ಹಿಂದೀ ಜನರಿಗೆ ಸಹಾಯ ಮಾಡಲೂ ಸಿದ್ಧರಿದ್ದಾರೆ. ಸ್ವಾತಂತ್ರ್ಯಾಪೇಕ್ಷಿಗಳು ತೀರ ತುಸು ಜನರಿದ್ದಾರೆ. ಜರ್ಮನರನ್ನು ಸೋಲಿಸಿದ ಬ್ರಿಟಿಶರು ಇವರಿಗೆಂದೂ ಸೊಪ್ಪು ಹಾಕಲಾರರು. ಇವರನ್ನು ಒದಿಗಿಟ್ಟು, ಜನತೆಯ ಹಿತಕಾರ್ಯವನ್ನು ಬ್ರಿಟಿಶರು ಕೈಕೊಳ್ಳಲು ಸಮರ್ಥರಾಗಿದ್ದಾರೆ.

ಸಾಹೇಬರ ಈ ಅಹಂಕಾರದ ಮಾತು ಪ್ರಸ್ತುತದಲ್ಲಿ ತೀರ ಅನುಚಿತವೆಂದೇ ಹೇಳಬಹುದಲ್ಲವೇ?

ರಾಷ್ಟ್ರೀಯ ನಿಶಾನೆಯ ಒಗ್ಗೆ ಮಿಷ್ಟರ ಹಾರ್ನಿಮನ್ನರ ಮುಖವು

—(೦)—

ಮುಂಬಯಿಯಲ್ಲಿ ನಿರುಪದ್ರವಿಯಾದಂಥ ರಾಷ್ಟ್ರಧ್ವಜವಂದನೆಗೆ ಅಶಂಕ ತಂದಂಥ ಪೋಲಿಸ ಕಮಿಶನರನು ಯಾವನೇ ಇರಲಿ; ಅತನು ಲಷ್ಕರೀ ಪದ್ಧತಿಯಿಂದ ಜಾಡಗುಡಿಗೆ ಸಲಾಮು ಮಾಡುವಂಥ ದಿವಸವು ಒತ್ತರದಿಂದ ಬರುತ್ತಿರುವದೆಂಬದನ್ನು ಮಾತ್ರ ನಾನು ಹೇಳುತ್ತೇನೆ. ನಾನು ಸಾಯುವ ಪೂರ್ವದಲ್ಲಿ ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯದ ನಿಶಾನೆಯೇ ಮೆರೆಯುವದೆಂದು ಶ್ರದ್ಧಾವಿಶ್ವಾಸದಿಂದ ಹೇಳುತ್ತೇನೆ. ನಿಮಗೆ ಸ್ವರಾಜ್ಯ ಸಂಪಾದಿಸುವದಕ್ಕೆ ನಿಮ್ಮ ಕೈಯೆತ್ತಿಲ್ಲೊಂದೇ ಹದನಾದ ಶಸ್ತ್ರವಿರುವದು. ಅದು ವಿಲಾಯತಿಯ ಸರಕುಗಳಿಗೆ ಅಚ್ಚುಕಟ್ಟಾಗಿ ಹಾಕುವ ಬಹಿಷ್ಕಾರವೇ ಆಗಿದೆಂದು ಮಿ ಹಾರ್ನಿಮನ್ನ ಸಾಹೇಬರು ರಾಣಿಯಲ್ಲಿ ರಾಷ್ಟ್ರ ಧ್ವಜವಂದನೆ ಮಾಡುವಾಗ ಭಾಷಣಮಾಡಿದ್ದಾರೆ.

ಮನೆಮನೆಗೆ ರಾಷ್ಟ್ರೀಯ ನಿಶಾನೆ

—❋—

ತಾವಗಾವಿಯ ಮುಂದಾಳುಗಳಿಗೆ ಕರ್ನಾಡದ ಮ್ಯಾಜಿಸ್ಟ್ರೇಟರು ಶಿಕ್ಷೆ ಹೊಟ್ಟಿದ್ದರು. ಇದರ ಮೇಲೆ ಡಿಸ್ಟ್ರಿಕ್ಟ ಕೋರ್ಟ, ಒಳಕ ಹಾಯಕೋರ್ಟಿಗೆ ಅಪೀಲಾಗಿ, ಇವರು ಹಾಯಕೋರ್ಟನಲ್ಲಿ ಬಂಧಮುಕ್ತರಾದರು. ಶಿಕ್ಷೆ ಹೊಂದಿದವರು ಮನೆಗೆ ಬಂದ ದಿವಸ ಊರತುಂಬ ದೊಡ್ಡ ಹಬ್ಬವಾಯಿತು. ಸಾಧು ಸಂತರು ಬಂದ ದಿವಸವೇ ದೀಪಾವಳಿ ದಸರೆಯು ಪ್ರತಿಯೊಂದು ಮನೆಯನ್ನು ತಳಿರು ತೋರಣಗಳಿಂದ ಶೃಂಗರಿಸಿದ್ದಲ್ಲದೆ. ರಾಷ್ಟ್ರೀಯ ನಿಶಾನೆ ಹಚ್ಚಿ, ದೇಶಾಭಿಮಾನವನ್ನು ಪ್ರಕಟ ಪಡಿಸಿದರು. ಮೆರವಣಿಗೆಯಾಗಿ ರಾಷ್ಟ್ರ ಧ್ವಜವಂದನೆ ನಡೆಯಿತು.

ಪೋಲಿಸ ಸಿಪಾಯಿಯು ಆರು ಜನರನ್ನು ಗುಂಡು ಹಾಕಿ ಕೊಂದನು.

—(೦)—

ಬ್ರಹ್ಮದೇಶದಲ್ಲಿ ಒಬ್ಬ ಪೋಲೀಸ ಅಮಲದಾರನು ಸಂಗಡ ಕೆಲ ಸಿಪಾಯಿರನ್ನು ಕರತಕೊಂಡು, ಮದನವೆಂಬ ಗ್ರಾಮಕ್ಕೆ ಹೋದನು. ಅಲ್ಲಿ ರತಿರಾಮನೆಂಬ ಸಿಪಾಯಿಯು ರಿವ್ಹಾಲ್ವರ ತೆಗೆದವನೇ ಕನ್ನ ಅಮಲದಾರನನ್ನು ಕೊಂದನು. ಈತನನ್ನು ಹಿಡಿಯ ಬಂದ ಆ ಪಳ್ಳಿಯ ಎಲ್ಲರನ್ನೂ ಗುಂಡಿನಿಂದ ನಿಗಚಿದನು. ಇನ್ನು ಮೂವರು ಅಂಗಾಯವಾಗಿದ್ದಾರೆ.

ಮಹಾತ್ಮರ ಪ್ರಕೃತಿ ಮತ್ತು ದಿನಚರ್ಯ

ಮಹಾತ್ಮರಿಗೆ ಯರವಡೆಯ ನೀರು ತಡೆಯುದ್ದರಿಂದ ಮಲಾರೋಗವಾಗುತ್ತದೆ. ಅವರ ಕೂಳ ಮೂರುಪೌಂಡು ಕಡಿಮೆಯಾಗಿದೆ ಸದ್ಯ ಹಾಲು ಮೊಸರು ಬಿಟ್ಟಿದ್ದಾರೆ ಗೀತೆಯ ಪಠಣ ಮತ್ತು ನೂಲು ತೆಗೆಯುವದರಿಂದಲೇ ಅವರ ಹೊತ್ತು ಹೋಗುತ್ತದೆ. ಆಶ್ರಮದಲ್ಲಿರುವ ಸಣ್ಣ ಸಣ್ಣ ಹುಡುಗರಿಗೆ ಪತ್ರಬರೆಯುವದರಲ್ಲಿ ಆನಂದಪಡುತ್ತಾರೆ. ಕಾಕಾ ಕಾಲೇಕರರು ಶಿಕ್ಷೆ ಮುಗಿದದ್ದರಿಂದ ಅವರು ದಾಬಾಡಿಗೆ ಹೊಂದುವ ಶ್ರೀ ವ್ಯಾಸಲಾಲರು ಅವರ ಸಂಗಡಿಗರಾಗಿದ್ದಾರೆ.

ಸಂಸ್ಥಾನಿಕನು ಹ್ವಾಯಿಸರಾಯನಾಗುವನು.

—(೦)—

ಲಾರ್ಡ ಅಯರ್ವಿನಸಾಹೇಬರ ತರುವಾಯ ಲಾರ್ಡ ಗೋರೆಲಸಾಹೇಬರು ಹ್ವಾಯಿಸರಾಯರಾಗುವ ಬದಲು, ಒಬ್ಬ ಸೊಬ್ಬ ಸಂಸ್ಥಾನಿಕನು ಹ್ವಾಯಿಸರಾಯನಾಗುವನೆಂದು ಲಂಡನದಲ್ಲಿ ನೀಲಿಗೆಟ್ಟ ಸುದ್ದಿಯಾಗಿದೆ.

ರಿವ್ಹಾಲ್ವರ, ಬಾಂಬುಸಹಿತ ದಸ್ತಗಿರಿ

ಚಾಂದಪೂರದಲ್ಲಿ ಪೋಲಿಸ ಸಬ್ಇನ್ಸಪೆಕ್ಟರ ಮೂಕರಚಿಯವನ್ನು ಕೊಂದು ಕಾಲಿಗೆ ಬುದ್ಧೀ ಹೇಳಿದ ಈವರು ಬಂಗಾಲಿ ತರುಣರನ್ನು ಹಿಡಿದರು. ಇವರ ಹತ್ತರ ರಿವ್ಹಾಲ್ವರ ಕಾಡತೂಸು ಮತ್ತು ಬಾಂಬುಗಳು ಹೊರಟವೆ.

ಗುಳೇದಗುಡ್ಡದಲ್ಲಿ ಉಜಲಗಿಡ ರದಿದ ಅರೋಪದಿಂದ ಶಿಕ್ಷೆಯಾದವರ ದಂಡವನ್ನು ಒಲಾತ್ಕಾರದಿಂದ ವಸೂಲಮಾಡಿ, ಶಿಕ್ಷೆಮುಗಿದಕೂಡಲೆ ಬಂಧಮುಕ್ತಮಾಡಿದರು.

ನಾಗಪೂರಿನ ವಿಲಾಯತಿಯ ಅರಿಯೆಯ ವರ್ತಕರು ಜನೆವರಿಯ ಹೊನೆಯ ಕನಕ ಅರಿವೆ ಮಾರಲಿಕ್ಕಿಲ್ಲೆಂದು ಪುನಃ ಕಾಂಗ್ರೆಸದವರಿಂದ ಮುಡ್ರಿ ಮಾಡಿಸಿದರು.

ಹುಬ್ಬಳ್ಳಿಯಲ್ಲಿ ಗಾಂಧೀ ನೋಟು ಮಾರುತ್ತಿದ್ದಂಥ ಗುಜ್ಜರವನನ್ನು ಹಿಡಿದಿದ್ದಾರೆ

ಮುಂಬಯಿಯಲ್ಲಿ ಲೆಪ್ಟನೆಂಟ ಪಟವರ್ಧನನ್ನು ಹಿಡಿದು, ಆಸ್ಪೋರಿಗೆ ಬೈದರು.

ಕಾನಪೂರದಲ್ಲಿ ಭಯಂಕರ ಅತ್ಯಾಚಾರ

—(೨)—

ಪೋಲಿಸರು ಗುಂಡು ಹಾಕಿ ಶಾಲಿಗ್ರಾಮ ಶುಕ್ಲನನ್ನು ಕೊಂದರು.

—(೦)—

ಕಾನಪೂರದಲ್ಲಿ ಪೋಲಿಸರು ಕ್ರಾಂತಿಕಾರರ ಶೋಧಕ್ಕಾಗಿ ದಯಾನಂದ ಕಾಲೆಜಿಗೆ ಹೋದರು. ಅಲ್ಲಿ ಶ್ರೀ. ಶಾಲಿಗ್ರಾಮ ಶುಕ್ಲರವರು ಹೊಟೇಲು ಎದುರುಗಡೆ ಕಂಡರು. ಪೋಲಿಸರು ಇವರನ್ನು ಹಿಡಿಯ ಬಯಸಿದರು. ಶುಕ್ಲರು ಹೊಟೇಲಿನ ಒಳಗಿನ ವಿದ್ಯಾರ್ಥಿಗಳ ತಿಗೆದವರೇ ಗನ್ನ ಪೂರ್ಣ ಸಿಡಿತೆಯ ಹಂಟ್, ಹೆಡ್ ಕಾನ್ಸ್ಟೇಬಲ ಮಾ, ಒಬ್ಬ ಸಿಪಾಯಿಗೆ ಗುಂಡುಹಾಕಿ, ಓಡಲಾರಂಭಿಸಿದರು. ಪೋಲಿಸರು ಹಿಂದಿನಿಂದ ಇವರ ಮೇಲೆ ಗುಂಡು ಹಾಕಿ ನೆಲಕ್ಕೆ ಕೆಡವಿದರು. ಶುಕ್ಲರು ಪರದೇಶವಾಸಿಯಾದರು. ಇವರು ಆ ಕಾಲೇಜದ ಒಬ್ಬ ಮಾಜಿ ವಿದ್ಯಾರ್ಥಿಯು.

ಯುರೋಪಿಯನ್ನರ ಮೇಲೆ ಬಾಂಬು ಚಲ್ಲಿದರು.

—(೦)—

ಅದೇ ದಿವಸ ದಿಲ್ಲಿಯಲ್ಲಿಯೇ ಸಾಯಂಕಾಲದಲ್ಲಿ ಚಾಂದನಿ ಚೌಕಿನಂಥ ತುಂಬಿದ ಪೇಟೆಯಲ್ಲಿ ಯುರೋಪಿಯನ್ನರ ಮೇಲೆ ಬಾಂಬು ಚಲ್ಲಿದರು. ಬಾಂಬು ಹಾರಲಿಲ್ಲ. ಯುರೋಪಿಯನ್ನರು ಕುಸ್ತಿ ಹಾಟಿದರು.

THE ANKALIGI BANK LTD.

Head Office

Kamankatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT

Dharwar 3-1-1927 } K. B. ANKALIGI Managing Director

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡಿ
ಮತ್ತು ——————— ಧಾರವಾಡ
ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಭ್ಯಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ಸಕಾಲ ಚಿತ್ರಗಳಿಂದ ಒರವಣ ಸಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯಿತಿ ಉಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದೆ.

೧. ಕರ್ನಾಟಕ ಸಾಹಿತ್ಯ ಸಂ. ೧,೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ಜೀವಿಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸಾಹಸ	೧ ೦-೦
೫. ಚರಿತ್ರ ಸಂಗ್ರಹ ಭಾ. ೧.	೪-೦-೦
೬. ಅಳಸಿಂಗಾಚಾರ್ಯರ ರಾಮಾಯಣ ೧೪ ಸಂಪುಟಗಳು	೧೪-೮-೦
೭. ಮಹಾರಾಣಿ ಎಲ್ಲಿಜಾಬಿ ಮೂಂಸಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೩-೧-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಪ್ಯಾಂಡ ರೆಪ್ಲಿಸ್ಯ ಕೋಡು	೨-೧೧-೦
೧೧. ಗ್ರಾಮ ಸಮಾಜ ವಿಷಯ ಪುಸ್ತಕ	೨-೧೩-೦
೧೨. ಸಿದ್ಧಮಾರ್ಗ, ಗೃಹಕಾರ್ಯ ಸಿದ್ಧಾಪತ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸೂಪನೀತಿ ಕಥೆ ಭಾ. ೧, ೨,	೨- ೪-೦
೧೪. ಕಾರ್ಪನ ಕಂಪ-ಧರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ನೋಟೀಸಿನದರಗಳು

—ಕೆಳಗೆ—

ಸಿಂಗಲ ಕಾಲಮಿನ ಹತ್ತು ಸಾಲಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದೂವರಿ ಆಣೆ. ಇಂಗ್ಲಿಷ ಪ್ರತಿಯೊಂದು ಸಾಲಿಗೆ ಎರಡು ಆಣೆ. ಸಂಕಾರಿ, ಮ್ಯುನಿಸಿಪಾಲಿಟಿ, ಶೋಕಲಬೋರ್ಡ ಟೇಲ್ಸ್ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಡಬಲ ಕಾಲಮಿನ ಸಾಲಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

ಡಿಸೆಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ.ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

—(೩ ೪ ೩)—

ಮು. ನಂ. ೧೫೬೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟೆ ಬಳಿ ಹಿಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೬೫೧೧ ಕಿಲ್ಲೆದಲ್ಲಿ ಶ್ರೀ. ಡೇಬಳೆಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆನಾರ್ಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಜೆಲೆ ಮತ್ತು ಜೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡವಲ್ಲಿದ್ದ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R NB 147

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೂಸಳೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೬ ನೇ ಡಿಸೆಂಬರ ೧೯೩೦ (ಸಂಚಿಕೆ ೨೬೭

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ಮಾನ್ಯ ಶ್ರೀ ಸಿದ್ದಾರಾಮಶಾಸ್ತ್ರಿ ಅಸೋಜಿ, ಶ್ರೀ ಅರೂಢಸ್ವಾಮಿಗಳ ಕೈಪಿಜುತ್ತು ಮತ್ತು ಮುನಸಫರಾದ ಶ್ರೀ. ಸದಾಶಿವ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಪುಸ್ತಕದ ಬೆನ್ನಿನ ಅಗ್ರಭಾಗದ ಸಾಣೆಯ ಮೇಲೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ಛಪಿಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಶೀಘ್ರ ಖಪ್ಪಾಯಿಸುವವು. ಆದ್ದರಿಂದ ಗ್ರಾಹಕರು ಶೀಘ್ರವಾಗಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ್ ಕೊಡಲ್ಪಡುವದು. ಕೂಡಲೆ ಬೇಗ ಬೇಗ ಬೇಡಿರಿ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಎರಡಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಳಗೆ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಾಸ್ತ್ರಶಿಕ್ಷಣ ಕೊಡುತ್ತೇವೆ. ಫಸ್ಟ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಸ್ಟ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ಕನ್ನ ವರ್ಕಸ್ಸಿನ ಪ್ರಕಾರ ತಿಂಗಳಾ ಕನಿಸ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟಿ ಕಳಿಸಬೇಕು.

ಆರ್. ಬಿ. ಮುಧೋಳಕರ

ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಾಳಮಡಾರ ಪೇಟೆ ಧಾರವಾಡ.

ಕೊ-ಆಪರೆಟಿವ ಕ್ರೆಡಿಟ ಸೊಸಾಯಟಿಯ ಅಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಚಿಂದಿಗೊಂಡ ಎಂಟು ಲಕ್ಷದ ಮೇಲುಂಟು. ಜಿಲ್ಲೆಯಲ್ಲಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಸೀಮ ಮತ್ತು ಜೇಲೆ ತರದ ಒಪ್ಪಾಟಿಗಳಿಗೆ ಜಾಮೀನಗಿರಿ ಒಡಿ ಕೊಡಲಿಪಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಂಜುನಾಥ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟು ಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಠಾಗೀನೆಗಳನ್ನು ವತ್ತೀ ಇಟ್ಟುಕೊಳುವ ಒಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೩-೦-೦
೩ ,,	೮-೮-೦

ವಾರ ಪತ್ರಕ್ಕೆ ೧ ವರ್ಷಕ್ಕೆ ೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ.

ಉಲಕೋಚಿಗಳ ಉಪಹಾಸ!

ಹೊಟ್ಟೆಯೊಳಗಿನ ಹೊಲಸು ಹೊರಬಿತ್ತು.

೧ ಪೀಠಿಕೆ

ಧಾರವಾಡದಲ್ಲಿ ಸಾರ್ವಜನಿಕ ಕಾರ್ಯದಲ್ಲಿಯೂ ಕಾಂಗ್ರೆಸ್ಸಿನ ಕೆಲಸಗಳಲ್ಲಿಯೂ ತಮ್ಮ ಮರಾಠೀ ಭಾಷೆಯ ಕಿಳ್ಳೇಕೇತ ಗೊಂಬೆಯನ್ನು ಕುಣಿಸಬೇಕೆಂದು ಇಲ್ಲಿಯ ಎಷ್ಟೋ ಮರಾಠೀ ಚಿತ್ಪಾವನರು ಹವಣಿಸುತ್ತಿದ್ದಾರೆ. ಕೆಲವರಂತೂ ಗನೀಮೀ ಕಾವಾದ ಸಿಹಿವನ್ನೇ ಎರಿದರು. ಆದರೆ ಕನ್ನಡಿಗರಲ್ಲಿ ಸ್ವಸ್ವರೂಪಜ್ಞಾನವು ದಿನೇದಿನೇ ಬೆಳೆಯುತ್ತ ನಡೆದಿರುವದರಿಂದ ಅವರ ಗಟ್ಟುಗಾರಿಕೆಯಲ್ಲಿ ಎಡಜಾಗುತ್ತಿರುವದರಿಂದ ಕೆಲ ಅಂಗಡಿಕಾರರಂಗಂತೂ ತಲೆತಿರುಗಿ ಹೋಗಿದೆ. ಅವರ ಗಟ್ಟುಗಾರಿಕೆಯ ಮಾದರಿಯಿಂದಲೆ ಆ ಅಕ್ಟೋಬರ ೧೯೩೦ ನೆಯ ತಾರೀಖಿನ ಕಿಡಿಗೇಡಿತನ; ಅದು ಅವರ ಅವನತಿಯ ಆರಂಭದಿನವೆಂದೇ ಹೇಳಬೇಕು ಏಕಂದರೆ ಅವರೆಸಗಿದ ಅಕೃತ್ಯಗಳಿಂದ ಅವರಲ್ಲಿಯ ಹಿರಿಯರೂ ಕೂಡ ಹೇಸಿಕೊಂಡಿದ್ದಾರೆ. ಅಂದಿನಿಂದಲೇ ಮರಾಠೀ ಚಿತ್ಪಾವನರ ಮನಃಪ್ರವೃತ್ತಿಯು ಕಾಂಗ್ರೆಸ್ಸಿನ ವಿಪರೀತದೆಶೆಯಲ್ಲಿ ಹರಿಯತೊಡಗಿತು; ಅಂದಿನಿಂದಲೇ ಕನ್ನಡಿಗರ ಬಗ್ಗೆ ವಿಷಮ ಭಾವನೆಯನ್ನವರು ತಾಳಿದರು; ಅಂದಿನ ಅವರ ಗನೀಮೀ ಕಾವಾ ಘಸಲಾ; ಅಂದೇ ಅವರು ಕೈಕಾಲುಗೆಟ್ಟು ಕಡಕೊಂಡು ಬಿದ್ದರೆಂದು ಹೇಳಬೇಕು.

೨ ಅಭೋಗತಿಯ ಹೆಜ್ಜೆಗಳು

ಗೆಡ್ಡವರ ಆಪೇಕ್ಷೆ ಹೆಚ್ಚಿದರೆ, ಸೋತವರ ದೊಚ್ಚು ಹೆಚ್ಚುತ್ತದೆ. ಆದರೆ ಸೋತವರಲ್ಲಿಯ ಬಲವು ಕುಗ್ಗಿ ಹೋಗುವದರಿಂದ ಅವರು ವಾಮಮಾರ್ಗವನ್ನು ಅನುಸರಿಸುತ್ತಾರೆ. ಅದಂತೆಯೇ ನಮ್ಮ ಮರಾಠೀ ಚಿತ್ಪಾವನರ ಸ್ಥಿತಿಯು ಆ ೧೯೩೦ ನೆಯ ತಾರೀಖಿನಿಂದೀಚೆಗೆ ಆಗಿದ್ದರೆ ಆಶ್ಚರ್ಯವೇನು? ಅವರು ತಮ್ಮ ಮರಾಠೀ ಬೇಳೆಯು ಬೆಯ್ಯಲಿಲ್ಲವೆಂದು ಅರ್ಥಾತ ಗನೀಮೀ ಕಾವಾ ಘಸಲಾ ಎಂದು ಕಾಂಗ್ರೆಸ್ಸನ್ನು ಕೂಡ ಬಹಿಷ್ಕರಿಸಿದರು. ಕನ್ನಡ ಮರಾಠೀ ವಾದದ ಬಗ್ಗೆ ತಮಗೆ ಅನುಕೂಲವಾದ ನಿರ್ಣಯವನ್ನು ಕೊಡುವವರೆಗೆ ತಾವು ಕಾಂಗ್ರೆಸ್ಸ ಕಾರ್ಯದಲ್ಲಿ ಸೇರಲಾರೆವೆಂದು ಸ್ಪಷ್ಟವಾಗಿ ಕಾಂಗ್ರೆಸ್ಸಿನವರಿಗೆ ತಿಳಿಸಿದರು. ಆದರೆ ಕರ್ನಾಟಕವು ಕನ್ನಡಮಯವೆಂಬುದು ನಿಶ್ಚಿತ ತತ್ವವಾಗಿರುವದರಿಂದ ಅವರ ದುರಾಗ್ರಹವು ಸಹಜವಾಗಿಯೇ ಮೂಲೆಗುಂಪಾಯಿತು. ಅವರ ಕಿರುಕುಳ ಮನಸ್ಸು ಇಷ್ಟರಿಂದಲೇ ಶಮವಾಗದೆ ಕಾಂಗ್ರೆಸ್ಸನ್ನು ವಿರೋಧಿಸುವ ಹವಣಿಸದಲ್ಲಿ ಬಿದ್ದಿತು. ಸಾರೇಶೀವಪ್ರದ ಸರ್ವ ಕಾವಲಿನ (ಪಿಕೆಟಿಂಗಿನ) ಸ್ವಯಂಸೇವಕರ ಮೇಲೆ ಚಿತ್ಪಾವನರ ಕೆಲವು ಮಿಂಸೆಹೊತ್ತ ಗಂಡಸುಗಳು ಕಲ್ಲೆಸೆದದ್ದೂ ಹೆಂಗಸುಗಳು ಸ್ವಯಂಸೇವಕರ ಬೇಡಿಕೆಯನ್ನು ಮುರಿದೊತ್ತಿ ಪತ್ಯಾಯದಿಂದ ಪರದೇಶೀ ವಸ್ತ್ರವನ್ನು ಕೊಂಡದ್ದೂ ಅವರ ಹೃದಯದ ಹೊಲಗೇರಿಯ ಕುರುಹುಗಳಲ್ಲದೆ ಏನು? ವಿಶೇಷಸಾತೀತರಾದ ದಿವಾಕರ ರಂಗರಾಯರು ಸೆರೆಮನೆಯಿಂದ ಬಿಡುಗಡೆ ಹೊಂದಿದಾಗ ಊರೆಲ್ಲ ಉತ್ಸವವನ್ನು ಮಾಡಿದರೆ ಈ ಚಿತ್ಪಾವನರೆಲ್ಲ ಬುರುಕಿಯಲ್ಲಿಯೇ ಇದ್ದರು. ಇಷ್ಟೇ ಅಲ್ಲ; ಕೆಲ ಕಿಡಗೇಡಿಗಳು ಕೂಟಿಗೆ ಕಟ್ಟಿದ್ದ ತಳಿರು ತೋರಣಗಳನ್ನು ಹರಿದು ಚೆಲ್ಲುವಷ್ಟು ದೊಡ್ಡ ಮನಸ್ಸನ್ನು ತೋರಿಸಿದರು; ಕರ್ನಾಟಕ ವಾತ್ಸಲ್ಯರಾದ ಸತ್ಯವಾದಿ ವರ್ತನದವರಾದ ದಿವಾಕರರಂಥವರ ವಿಷಯವಾಗಿ ಹರತಾಳವನ್ನಾಚರಿಸಿದ್ದಕ್ಕೆ ಕೆಚ್ಚಿನ ಪ್ರಾಪಕೃತಿ ಯಾವುದುಂಟು?

೩ ವಕ್ರದೃಷ್ಟಿ

ಕೆಚ್ಚೆದೆಯ ಅಚ್ಚಕನ್ನಡಿಗರನ್ನು ಕಂಡರೆ ಚಿತ್ಪಾವನರ ಹೊಟ್ಟೆಯಲ್ಲಿ ಸುಣ್ಣ ಸುರಿದಂತಾಗುತ್ತದೆಯೋ ಏನೋ! ಅವರ ಹಿಂದಿನ ಹಿರಿಯರು ಸ್ವಲ್ಪ ಕೆಲವು ಕರ್ನಾಟಕಾಭಿಮಾನಿಗಳಿಗೆ "ಸಪ್ತಋಷಿಗಳು" ಎಂಬ ಹೆಸರಿಟ್ಟಿದ್ದು ಬಹು ಜನರು ಮರೆತಿಲ್ಲ. ಈಗಿನ ಚಿತ್ಪಾವನರು ಕೆಲವು ಕನ್ನಡ ಸೇವಕರನ್ನು ಸಪ್ತವೀರರೆಂದು ಹೀಯಾಳಿಸುತ್ತಿರುವುದರಲ್ಲಿಯೂ ನಾವಿನ್ಯವೇನೂ ತೋರುವದಿಲ್ಲ. ಸಜ್ಜನರಲ್ಲಿ ಕನ್ನಡದ ಪ್ರಾಧಾನ್ಯವನ್ನು ಕಾಯುವದಕ್ಕಾಗಿ ಹೋರಾಡುವವನ್ನು ಏನು ಮಾಡಬೇಕೋ ಅವರ ವಿಕ್ಷಿಪ್ತ ಬುದ್ಧಿಗೆ ಹೊಳೆಯಲೊಲ್ಲದು, ಕೈಲಾಗದವನು ಮೈಯ್ಯೆಲ್ಲ ಹರಿದುಕೊಂಡನೆಂಬಂತೆ ಸಿಕ್ಕ ಸಿಕ್ಕವರಾಗಿ ಹರಿಹಾಯತೊಡಗಿದ್ದಾರೆ. ಅಳುಬುರುಕರಲ್ಲಿ ಕೊಳಕುಮಾತು ಬಹಳ. ಕೊಳಕುಮಾತುಗಳನ್ನಾಡಿಯಾದರೂ ಕೆಚ್ಚೆದೆಯಅಚ್ಚಕನ್ನಡಿಗರಾದ ಸಪ್ತವೀರರ ಕಾಟವನ್ನು ತಪ್ಪಿಸಿಕೊಳ್ಳಬೇಕೆಂದೇನೋ ಈ ಚಿತ್ಪಾವನರು ಇದೀಗ ಒದ್ದಾಡುತ್ತಿರುವಂತಿದೆ. ಆದರೆ ಸಪ್ತಋಷಿಗಳ ತಪಃಪ್ರಭಾವದಿಂದ ಬಿಸ್ಸಿಗೊಂಡು, ಅವರ ತಪೋಭೂಮಿಯನ್ನು ಕಾಯುವ ಅಣಿಯಾದ ವೀರರ ಕಿರಿಬೆರಳನ್ನಾದರೂ ಇನ್ನು ಮುಟ್ಟಿಸಬಹುದೇ? ಅಖಿಲಕರ್ನಾಟಕದಲ್ಲಿ ಕರ್ನಾಟಕದ ಗಂಡು ಮೆಚ್ಚಿದ ಧಾರವಾಡದಲ್ಲಿ ಎಷ್ಟೋ ಕನ್ನಡಿಗರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಹೋರಾಡುತ್ತಿರಲು ಕರ್ನಾಟಕದ ಸೇವಕರನ್ನೇ ಇಷ್ಟು ಅವಮಾನಿಸುತ್ತಿರುವರೆಂದರೆ ಈ ಮರಾಠೀ ಚಿತ್ಪಾವನರ ಹೃದಯದಲ್ಲಿ ಹೊಂಚಿ ಕುಳಿತಿರುವ ಸೌರಿಯ ಬಾಲ ಸುಟ್ಟಿರಬಹುದಲ್ಲವೇ? ಅದರಿಂದಲು ಧಾರವಾಡದ ಸಾರ್ವಜನಿಕರ ಪರಿಸರರಾಗಿ ಕಾಂಗ್ರೆಸ್ಸನ್ನು ಸಹಕರಿಸಿ ಕಾರ್ಯಮಾಡಲೊಲ್ಲದೆ ಕೇವಲ ಮನಃಪ್ರವೃತ್ತಿಯಿಂದ ಕೆಲಸ ಮಾಡಬೇಕೆಂಬ ಅವರ ಧೋರಣೆಯ ವರ್ತನವು ಕುಪಕಕರವೆಂದು ಒಡೆದು ತೋರುತ್ತದೆ.

೪ ಬುದ್ಧಿಪ್ರಭಾವ.

ಕರ್ನಾಟಕದ ಸರ್ವಾಧಿಕಾರಿಗಳಾದ ಸ್ವಾಮಿಯವರು ಕಾಂಗ್ರೆಸ್ಸಿನ ಕಾರ್ಯಕರ್ತರ ಜಪ್ತಿಮಾಡಿದ್ದು ಹಾಗೂ ಜೋಗುವ ಜನಸಾಂಗುಮನ್ನು ಆದರ ಕೊಡುವದಕ್ಕಾಗಿಯೇ ಸೆರೆಮನೆ ಎಂದು ಹೇಳುವ ಹುಡುಗರಿಗೆ, ಹಾಗೂ ಮರಿಬರಿಗೆ ದೊರೆಯಲಿಕ್ಕಾಗಿಯೇ ಈ ಸರ್ವಾಧಿಕಾರಿಯವರು ಪೈಡೊಳಗಿನ ಹುಲಿ ಪುಸ್ತಕಗಳನ್ನು ಹೊಗುವ ತಿಂದಿಯಿದ್ದವರೆಲ್ಲರೂ ಅಂದರೆ ಅರ್ಥರಲ್ಲ. ಸರ್ವಾಧಿಕಾರವು ಅಧಿಕಸ್ವಾಂಗಿಗರ ಕುತ್ತಲ್ಲ. ಕೋತಿಗಳಿಗೆ ಕಜ್ಜಿಕಾಯ ಅಧಿಕಾರ ಸ್ವಾಧೀನಗಳ ಯಾ ಮಾಡಿ. ಅತ್ತು ತಮ್ಮ ಅಗ್ರಹಗಳ ಕ್ಷಮ ತೂಕಕಾರ್ಯವ ಇತರರಲ್ಲಿ ಸ್ವಾಮಿ ಸೆರೆಮನೆಗೆ ಹೋಗಿ ತಮ್ಮ ತಿಂಡಿಯನ್ನು ಕಿಳಿಕಳಿ ಕ್ಷಮಿಸುವುದು. ಇಷ್ಟಲ್ಲದೆ ಸೆರೆಮನೆಗೆ ಹೋಗಿಬಂದವರಾದವರಿಗೆ ಅರ್ಹಸ್ಥಿತಿ ಸಂಪಾದ ಮಾಡಿಗಳೂ ಬೇಕಾದಷ್ಟಿವೆ. ಆದರೆ ಮರಾಠೀ ಚಿತ್ಪಾವನರು ಸೆರೆಮನೆಗೆ ಹೋಗಲಾರದೆ ಬೆಕ್ಕಿನಂತೆ ಸರ್ವಾಧಿಕಾರದ ಮನೆಗಿರಿಗೆ ಹಾಗಾಹೋಗಿ ತಮ್ಮ ಬುದ್ಧಿ ಪ್ರಭಾವನನ್ನು ಜಗತ್ತಿಗೆ ತೋರಿಸಿ ನಗೆಗೇಡಾಗುತ್ತಿರುವರು. ಕರ್ನಾಟಕದ ಸರ್ವಾಧಿಕಾರವು ಮಾಕಹೊಸೀನಿಗೆ ಸಾಧ್ಯವಲ್ಲವೆಂಬುದು ಈ ಮರಾಠೀ ಚಿತ್ಪಾವನರ ತೀಕ್ಷ್ಣಬುದ್ಧಿಗೆ ಹೊಳೆಯಲಿಲ್ಲೆಂಬುದನ್ನು ಬರೆಯಲಿಕ್ಕೆ ವಿಷಾದವೆನಿಸುತ್ತದೆ.

೫ ಅಂತರಂಗದ ಚಿತ್ರ.

ರವಿವಾರ ತಾ ೩೦-೧೧-೧೯೩೦ ನೆಯ ದಿವಸ ಬೆಳಗಾಗುವಷ್ಟರಲ್ಲಿ ಗಾಳಿಸೀಕೂಟದಿಂದ ಮಾಮಲೇದಾರ ಕಚೇರಿಯವರೆಗಿನ ಕೆಲವು ವಿದ್ಯುದ್ದೀಪಸ್ತಂಭಗಳ ಮೇಲೂ ಮುಖ್ಯವಾಗಿ ಶಾಂತೇಶವಾಚನಾಲಯದ ಪಲಿಗೆಯ ಮೇಲೆ, ಖಾದೀ ಅಂಗಡಿಯ ಬಾಗಿಲಮೇಲೆ, ಸೆಕಂಡಹ್ಯಾಂಡ ಬುಕ್ಕಡಿಪೋದ ಗೋಡೆಯ ಮೇಲೂ ಕೆಲವು ತುಂಟರ ಅಂಕರ್ಗ

ಗದ ಚಿತ್ರಗಳನ್ನಂಟಿಸಿದ್ದರು. ಆ ಚಿತ್ರವು ಯಾವದೆಂದರೆ-

"ಬಸವಾಲಪ್ಪನವರ ತರುಫಾಯ ಈ ಕೆಳಗಿನ ಹೆಸರುಗಳಲ್ಲಿಯಾದಾದರೂ ಕರ್ನಾಟಕದ ಸರ್ವಾಧಿಕಾರಿಗಳಾಗಲು ಎದೆಗುಂದುವರೋ ?" ಎಂದು ಬರೆದು ಕೆಳಗೆ ಏಳು ಹೆಸರುಗಳನ್ನು ಬರೆದಿದ್ದರು. ಹಾಗೆ ಹೆಸರುಗಳನ್ನು ಬರೆಯುವದು ಮೂರ್ಖತನದ್ದಾದರೂ "ಉಡುಪಿಯ ಕಲಿಗಳು" ಇತ್ಯಾದಿಯಾಗಿ ಅವಹೇಳನೆಮಾಡುವ ಕತಮೂರ್ಖತನವನ್ನೂ ಅವರು ಮಾಡಿದ್ದರು. ಕರ್ನಾಟಕದ ಕುಲಭೂಷಣರಾದ ಆಲೂರ ವೆಂಕಟರಾಯರ ಹೆಸರನ್ನು ಕೂಡ ಎತ್ತಿ ನಗೆಚಾಟಿಗೆ ಮಾಡುವದೆಂದರೆ ಅವರ ಕೀಳ್ತನದ ಅತಿರೇಕವೇ ಸರಿ.

ಈ ಚಿತ್ರವು ಮರಾಠೀ ಚಿತ್ರಾಪಸರದೆಂಗ್ರ ಮರು ದಿವಸ ೧೯೩೩-೧೯ ಇಸವಿಯ ದಿವಸ ಮಂಜಾನೆ ಗೊತ್ತಾಯಿತು. ಗಾಂಧಿಟೋಪಿ-ಬೀಡಿ ಅಂಗಡಿಯ ಹೊರತಾದ ಸೆಕಂಡಹ್ಯಾಂಡ ಬುಕಡಿಪೋದ ಸರ್ವಾಧಿಕಾರಿಗಳ ಕಛ್ಚೆಂಗಡಿಯ ಗೋಡೆಗೆ ಒಂದು ಪೋಸ್ಟರ್ನ್ನು ಅಂಟಿಸಿದ್ದರು. ಅದರಲ್ಲಿ ಈ ವಿಷಯವು ಸ್ಪಷ್ಟವಾಗಿತ್ತು. ಎಡಗಡೆಯ ಪಾಳಿಯಲ್ಲಿ ಆ ಸಪ್ತವೀರರ ಹೆಸರುಗಳಿದ್ದವು. ಜಾಹೀರದಿನಂದಿಯ ಕೆಳಗೆ ' ಕರ್ನಾಟಕದ ಗಂಡುಮೆಟ್ಟಿಗೆ ಧಾರವಾಡದಲ್ಲಿ ದೆ. ಧ. ವಸುಪಾಲಬ್ಬಾ ಹಂಗಾಮಿಯ್ಯ (ಬಳ್ಳಾರಿ) ಕರ್ನಾಟಕದ ಖಾಸೇ ಸರ್ವಾಧಿಕಾರಿ ಅಂದರೆಯ ಅಜ್ಜಕೆಚ್ಚೆದೆಯ ಬಿಸಿರಕ್ತದ ಧಾರವಾಡದಲ್ಲಿಯ ಸಪ್ತವೀರರಗೆ ಪೈಕಿ ಯಾರೂ ಸರ್ವಾಧಿಕಾರಿಗಳಾಗಲಿಕ್ಕೆ ಒಪ್ಪದಿದ್ದ ಪಕ್ಷದಲ್ಲಿ ಮರಾಠೀ ಚಿತ್ರಾಪಸ್ಸರು ಕಬೂಲ ಇರುತ್ತಾರೆ ವಿಶೇಷ ಮಾಹಿತಿಯ ಬನ್ನಿ:- ಸೆಕೆಂಡ್ಹ್ಯಾಂಡ ಬುಕ್ಡಿಪೋ ಧಾರವಾಡ !! ಎಂದು ಬರೆದಿತ್ತು. ಇದು ಆ ಮರಾಠೀ ಚಿತ್ರಾಪಸ್ಸರ ಅಂತರಂಗವನ್ನು ಸ್ಪಷ್ಟವಾಗಿ ತೋರಿಸುವುದರಿಂದ ನನ್ನ ಟೀಕೆಯನ್ನು ಬಿಡಿಯ ಬಯಸುವುದಿಲ್ಲ.

೩ ಉದ್ಘಟವೃತ್ತಿ

ಈ ಬೋರ್ಡನ್ನು ಹಚ್ಚುವ ಹೊತ್ತಿಗೆ ಕರ್ನಾಟಕ ಜನಾಭ್ಯುದಯಾಕಾಂಕ್ಷರಾದ ದಿವಾಕರ ರಂಗರಾಯರು ಅಲ್ಲಿಗೆ ಬಂದರು. ಸಪ್ತವೀರರಲ್ಲೊಬ್ಬರು ಈ ಮರಾಠಿಚಿತ್ರಾಪಸರ ಕೃತ್ಯದಯೋಗ್ಯಾಯೋಗ್ಯದ ವಿಚಾರ ಮಾಡಬೇಕೆಂದು ಕೇಳಿಕೊಂಡರು. ಆಗ ಅವರು ಶ್ರೀ. ಸಾಕೆಯವರನ್ನು ಕುರಿತು:- ಇದನ್ನು ಯಾರು ಹಚ್ಚಿದರು?

ಶ್ರೀ. ಸಾಕೆ:- ನಾನೇ ಹಚ್ಚಿದ್ದೇನೆ.

ಶ್ರೀ. ದಿವಾಕರ:- ಹಾಗೆ ಮಾಡಬಾರದು ತೆಗೆದು ಬಿಡು.

ಶ್ರೀ. ಸಾಕೆ:- ಊಂ ಹೂ. ತೆಗೆಯುವದಿಲ್ಲ.

ಶ್ರೀ. ದಿವಾಕರ:- (ಅವರ ಹೆಗಲ ಮೇಲೆ ಕೈಹಾಕುತ್ತ) ಬಾಯಿಲ್ಲಿ.

ಶ್ರೀ. ಸಾಕೆ:- ಬರುವದಿಲ್ಲ. ನಿನಗಾಗುವದಾಗಲಿ (ಎಂದು ಕೊಸರಿಕೊಂಡು ಅಂಗಡಿಯೊಳಕ್ಕೆ ಹೋದರು)

ನಿರ್ಮಲ ಹೃದಯದ ಶ್ರೀ. ದಿವಾಕರರ ಮೃದುಹೃದಯಕ್ಕೆ ಮುಳ್ಳು ಹಚ್ಚಿದಂತಾಯಿತೋ ಏನೋ! ಅವರು ಮರುಮಾತಾಡದೆಹೊರಟೆ ಹೋದರು.

ವ್ಯಾಲಂಬಾಲಂಬೃಷ್ಣಾಲ ಶಂಕುಧಿರಸಾ ರೋದ್ಧುಂ ಸಮುದ್ಯಂಧಥೇ | ಛೇತ್ತುಂ ವಜ್ರಮಣೇನಾಪಿ ರಿಷ ಕುಸುಮ ಪ್ರಾಂತೇನ ಸನ್ನಹ್ಯತೇ.

೭ ಸ್ವರೂಪನಾಶ

ಈ ಮರಾಠೀ ಚಿತ್ರಾಪಸರ ಕೃತ್ಯವು ಅವರ ಹಿರಿಯರಿಗೆ, ಸೂತ್ರಧಾರರಿಗೆ, ಅಸಮ್ಮತವಾಗಿರುವುದೆಂಬುದು ಸ್ಪಷ್ಟವೇ ಇದೆ. ಮತ್ತು ಹಿರಿಯರು ಕೆಲ ಹಿಂಡಿದ್ದರಿಂದಲೇ ಆ ಬೋರ್ಡು ಹಚ್ಚಿದವರಿಂದಲೇ ಹರಿಸಲ್ಪಟ್ಟಿತೆಂದು ಕಂಡಿತು. ಅಂತು ಒಳವನ ಸಿಟ್ಟು ಹುಣಿಗೆ ಮೂಲ ಎಂಬಂತೆ ಮರಾಠಿ ಚಿತ್ರಾಪಸರ ತಮ್ಮ ಸ್ವರೂಪನಾಶವನ್ನು ತಾವೇ ಮಾಡಿಕೊಂಡರು. ಸಪ್ತವೀರರಲ್ಲಿಬ್ಬರು ಈ ಬೋರ್ಡಿನ ಫೋಟೊ ತೆಗೆದುಕೊಂಡರು. ಈ ಫೋಟೊ ಇಲ್ಲಿಯ ಮರಾಠೀ ಚಿತ್ರಾಪಸರ ಸ್ವರೂಪನಾಶದ ಹೆಗ್ಗುರುತಾಗಿ- ೧೯೩೩-೩೪ ಇಸವಿಯ ದಿವಸದ ಇತಿಹಾಸದ ಆಧಾರವಾಗಿ- ಅನಂತ ಕಾಲದವರೆಗೆ ಉಳಿಯುವದು.

ಪ್ರತೀಕಾರ ಸಂಘ

—(೦)—

ಮೊನ್ನೆ ಮಂಗಳವಾರ ಶ್ರೀಶಾಂತೇಶ ವಾಚನಾಲಯದಲ್ಲಿ, ಕರ್ನಾಟಕದ ಹುಲಿ ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ, ಕನ್ನಡಿಗರ ಸಭೆ ಸೇರಿ "ಕನ್ನಡ ನಾಡಿನಲ್ಲಿ ಕನ್ನಡ, ಹಿಂದೀ, ಇಂಗ್ಲೀಷ್ ಭಾಷೆಗಳನ್ನುಳಿದು ಸೆರೆನಾಡುಗಳ ನುಡಿಯುವರು ಪ್ರತ್ಯಕ್ಷವಾಗಿಯಾಗಲಿ ಅಪ್ರತ್ಯಕ್ಷವಾಗಿಯಾಗಲಿ ತಮ್ಮ ನುಡಿಯ ಪ್ರಸ್ಥವನ್ನು ಬೆಳೆಸಬೇಕೆಂದಾಗಲಿ ಕನ್ನಡ ಸಂಸ್ಕೃತಿಯ ವಿರೋಧಕವಾಗಿಯಾಗಲಿ, ವಯ್ಯಕ್ತಿಕವಾಗಿ ಅಥವಾ ಸಾಂಘಿಕವಾಗಿ ಪ್ರಯತ್ನ ಮಾಡಿದರೆ ಅಂಥ ವ್ಯಕ್ತಿ ಅಥವಾ ಸಂಸ್ಥೆಯನ್ನು ಶಾಂತವಾದ ಮತ್ತು ನ್ಯಾಯಯುತವಾದ ಅನಾಯಗಳಿಂದ ಪ್ರತೀಕರಿಸಲು ಹೋರಾಡುವ" ಉದ್ದೇಶದಿಂದ "ಪ್ರತೀಕಾರ ಸಂಘ"ವನ್ನು ಸ್ಥಾಪಿಸಲಾಯಿತು. ಶ್ರೀ. ಮಳೆಯ ಗೋವರ್ಧನರಾಯರು ಸ್ಥಾರುಪತ್ಯಗಾರರಾಗಿ ನಿಯಮಿಸಲ್ಪಟ್ಟರು.

ಪಿಕೆಟಿಂಗ ಆರ್ಡಿನನ್ಸದ ಪ್ರೇತಯಾತ್ರೆಯು.

ಹೆಣ್ಣುಮಕ್ಕಳು ಹಾಡಾಡಿಕೊಂಡು ಅತ್ತರು.

ಪಿಕೆಟಿಂಗ ಪ್ರ[illegible] ಪಿಕೆಟಿಂಗಕ್ಕಾಗಿ ಜನರಿಗೆ ಉತ್ತೇಜನ ಕೊಟ್ಟವರಿಗೆ [illegible] ಎಂದು ಶಾಂತಿ ಆರ್ಡಿನನ್ಸಾಜ್ಞೆಯನ್ನು [illegible] ದಯಾಳಕಿಯ ಹುರುಮಿನ ಆಯುಷ್ಯವು ಸನ್ನಂಬಾ [illegible] ತಾರೀಖಿಗೆ ಮುಗಿಯಿತು. [illegible] ಇಂದಿಗೆ ಒಂದ ಮರಣದ ದೆಶೆಯಿಂದ ಸ್ವರ್ಗವಾಸ ಸೇರಿದಂತೆ ರೆಗೆದರು. [illegible] ಕಟ್ಟಿಗೆಗಳನ್ನು ಕಟ್ಟಿ [illegible] ದರ ಮೇಲೆ ದಬ್ಬಾಳಿಕೆಯ ಬಂದೋಬಸ್ತ ಪ್ರತಿನಿಧಿಸಿ, ಅದರಲ್ಲಿಯಂದು ಅಕ್ಕಾಳ [illegible] ಗೊಂಬೆ [illegible] ಮಲಗಿಸಿದರು. [illegible] ಜನರು [illegible] ಹೊರಟರು. [illegible] ಇದ್ದರು. ಇವರು ಗುಜರಾತ್ ಸ್ತ್ರೀಯರ ಪದ್ಧತಿಯಂತೆ [illegible] ಪಿಕೆಟಿಂಗ ಆರ್ಡಿನನ್ಸ ಸತ್ತಯಾ [illegible] ಎಂದು ಎದೆ ಎದೆ ಬಡಕೊಂಡು [illegible] ಅಳುತ್ತ [illegible] ಗಂಡಸರು ಮುಸಲಮಾನರಂತೆ [illegible] ಕೇಕೆಗಳಿಗೆ [illegible] ಕೊಡುತ್ತಿದ್ದರು. [illegible] ನಿಷೇಧ ವಿರಲಿಲ್ಲ. ದೊಡ್ಡ ದೊಡ್ಡ ಬೀದಿಗಳಲ್ಲಿ [illegible] "ಪಿಕೆಟಿಂಗ ಆರ್ಡಿನನ್ಸ ಸತ್ತಯಾ" ಎಂಬ ಧ್ವನಿಯ ಬಿರಾಮಂಡಲವನ್ನು ವ್ಯಾಪಿಸಿತು. ಜ್ಯಾಂಗ್ರಿ ಮುಸೆ ಫ ಹುಶೀನ ಇವರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ಪ್ರೇತಗಳಿಗೆ ಕಬ್ರಸ್ತಾಂತರ ಮಂತ್ರ ಹೇಳಲ್ಪಟ್ಟಿತು. ಒಂದಕ ಒಟ್ಟಿದ ಚಿತೆಗಳ ಮೇಲ ಪ್ರೇತಗಳನ್ನಿಟ್ಟು ಅಗ್ನಿ ಸಂಸ್ಕಾರ ಮಾಡಿದರು. ದೆಂಗಸರು ಗಾಗಿ ನಿ ಮಿಷಗಳ ತನಕ ಪಿಕೆಟಿಂಗ ಆರ್ಡಿನನ್ಸ ಸತ್ತಿಯಾ ಸ್ವೋದಿಯಾಎಂದು ಹಾಡಾಡಿಕೊಂಡು ಅತ್ತರು.

ದಿಲ್ಲಿಯಲ್ಲಿ ಬಾಂಬು

—(೦)—

ಇಬ್ಬರು ವಿದ್ಯಾರ್ಥಿಗಳು ಘಾಯಮಾದರು

—(೦)—

ದಿಲ್ಲಿಯಲ್ಲಿ ಮುಸಲಮಾನರ ಯುನಾಯಿಟಿಡ್ ಯೂ ಕಾಲೇಜದ ಪತ್ತರ ಒಂದು ಬಾಂಬು ಇಟ್ಟು, ಸ್ಫೋಟಕವೆಂದು ಬರೆದಿದ್ದರು. ಇದರೂ ಇಬ್ಬರು ವಿದ್ಯಾರ್ಥಿಗಳು ಅದನ್ನು ಎತ್ತಲು - ಅ [illegible] ಅವರ ಮೋರೆಯನ್ನು ಸುಟ್ಟಿತು. ವಿದ್ಯಾರ್ಥಿಗಳು ಆಸ್ಪತ್ರೆಯಲ್ಲಿ ಆಸರೆ ಹೊಂದುತ್ತಲಿದ್ದಾರೆ.

ಸರದಾರ ಪಟೇಲರಿಗೆ ಆಗಾಡಿ ಪಿಛಾಡಿ.

ಅಹವ ದಾಬಾದಿನಲ್ಲಿ ಭಾಷಣ ಮಾಡಬಾರ ದೆಂದು ಅಲ್ಲಿಯ ದಿ॥ ಮಾ॥ ಸ-ಹೇಬರು ಸರದಾರ್ ಪಟೇಲರ ಮೇಲೆ ನೋಟೀಸು ತೆಗೆದರು ಈಗ ಖೇಡ ಜಿಲ್ಲೆಯ ದಿ॥ ಮ್ಯಾ॥ ಇವರಿಗೆ ತಮ್ಮ ಜಿಲ್ಲೆಯಲ್ಲಿ ಬರಬಾರದೆಂದು ಪಾಯಬಂದಿ ಮಾಡಿದ್ದಾರೆ ಈ ಜಿಲ್ಲೆಯಲ್ಲಿ ಇವರ ವತನಿಯಿದ್ದು, ಸ್ವಂತ ಮನೆಗೆ ಹೋಗಲಿಕ್ಕೆ ಸಹ ಎದವಾದರು.

ಅಧ್ಯಕ್ಷ ಪಟೇಲರನ್ನು ಕೊಯಮತ್ತೂರಿನ ತುರಂಗಕ್ಕೆ ಬೈದರು. ಇವರ ಸಂಗಡ ಒಟ್ಟು ಸಂ ಜಾಬಿ ಡಾಕ್ಟರಿದ್ದಿರುವನು.

ಅರಳೆಯ ರೇಲ್ವೆಯ ದರ ಕಡಿಮೆ ಮಾಡುವ ವಿಚಾರ.

ರೇಲ್ವೆ ಕಂಪನಿಗಳು ಉತ್ತರ ಹಿಂದುಸ್ಥಾನದಲ್ಲಿ ಗೋಣಿಯ ಹಾಸಿಲನ್ನು ಕಡಿಮೆ ಮಾಡಿದವು ಅದೇ ಪ್ರಕಾರ ಹತ್ತಿಯ ಹಾಸಿಲನ್ನು ಕಡಿಮೆಮಾಡಿದರೆ- ಅದಕ್ಕೆ ಒಂದ ಮಂದಿಯ ಕಡಿಮೆಯಾಗುವದೆಂದು ವ್ಯಾಪಾರಸ್ಥರು ಸರಕಾರಕ್ಕೆ ಸೂಚನೆ ಮಾಡಿದರು. ರೇಲ್ವೆಗಳಿಗೆ ಈ ವರ್ಷ ಎಳು ಕೋಟಿಯ ಮಂದಿಯ ಒಂದಿಗೆ. ಅರಳೆಯ ಹಾಸೀಲ ಕಡಿಮೆ ಮಾಡುವದರಿಂದ ಳಿಗೆ ಲಕ್ಷದ ಹಾನಿಯಾಗುವದು ಬೇರೆ ಜೀನಸುಗಳ ದರ ಹಚ್ಚು ಮಾಡಿ ಹತ್ತಿಯ ದರವನ್ನು ಕಡಿಮೆ ಮಾಡಬಹುದೇ ಹೇಗೆಂಬ ರೇಲ್ವೆ ಬೋರ್ಡಿನವರು ವಿಚಾರ ಮಾಡುತ್ತಲಿದ್ದಾರೆ.

ಸಿಂಧದ ಕಾಂಗ್ರೆಸ ಕಮೀಟಿಯ ಮೇಲೆ ಯುರೋಪಿಯನ್ನರ ಕೋಪ.

—(ಂ)—

ಸಿಂಧದಲ್ಲಿ ಬೇಬಂದಶಾಹಿಯುಂಟಾಗುತ್ತಿರುವದರಿಂದ, ಕಾಂಗ್ರೆಸ ಕಮೀಟಿಯನ್ನು ಬೇಕಾಯದೆ ತೀರ ಮಾಡಿ, ಅದರ ಸ್ಥಾವರ ಜಂಗಮ ಆಸ್ತಿಯನ್ನು ಜಪ್ತ ಮಾಡಿ, ಅದರ ಪ್ರವರ್ತಕ ಮತ್ತು ಸಹಾಯಕರಿಗೆ ಶಿಕ್ಷೆ ಮಾಡಬೇಕೆಂದು ಕರಾಚಿಯಲ್ಲಿ ಯುರೋಪಿಯನ್ನರು ಸಭೆ ಮಾಡಿ, ಸರಕಾರಕ್ಕೆ ತಿಳಿಸಿದ್ದಾರೆ. ಗುಜರಾಥ, ಮಹಾರಾಷ್ಟ್ರ ಮತ್ತು ಕರ್ನಾಟಕದ ಕಾಂಗ್ರೆಸ ಕಮೀಟಿಗಳು ಬೇಕಾಯದೆ ತೀರವಾದರೂ, ಅವುಗಳ ಕೃತ್ಯಗಳು ಅವಿಶ್ರಾಂತವಾಗಿ ನಡೆದಿರುತ್ತವೆಂದದ್ದು ಆ ಯುರೋಪಿಯನ್ನರು ನೋಡಿದ್ದರೆ- ಸಂಕಾರಕ್ಕೆ ಈ ಕರದ ಸೂಚನೆ ಮಾವ ಹತ್ತಿರಲಿಲ್ಲ.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡಿ
ಮತ್ತು ——— ಧಾರವಾಡ
ಕಾಮನಕಟ್ಟೆ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲಯಟ್ಟಿ ಬೇಕಾದವರು ಳಿಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಒರೆಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸ. ೧,೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೪-೦
೪ ಕರ್ನಾಟಕ ಸಿಂಹಾಸನ ಸಾಪನೆ	೧ ೦ ೦
೫. ಚರಿತ್ರ ಸಂಗ್ರಹ ಭಾ. ೧.	೪-೦-೦
೬. ಅಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪-೮-೦
೭ ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೫-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಲ್ಯಾಂಡ ರೆಫ್ಲಿಸ್ಯೊ ಕೋಡು	೨-೧೧-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨-೧೩-೦
೧೨ ಸೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸೂಪನೀತಿ ಕಥೆ ಭಾ. ೧, ೨,	೨- ೪-೦
೧೪. ಕಾರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ಹುಬ್ಬಳ್ಳಿಯಲ್ಲಿ ದಸ್ತಗಿರಿ.

—(ಂ)—

ಮೊನ್ನೆ ರಾತ್ರಿ ಹುಬ್ಬಳ್ಳಿಯಲ್ಲಿ ೧೨ ಜನರನ್ನು ದಬ್ಬಾಳಿಕೆಯ ಕಾಯದೆ ಪ್ರಕಾರ ಹಿಡಿದಿದ್ದಾರೆ-

---

ನೋಟೀಸಿನದರಗಳು

ಸಿಂಗಲ ಕಾಲಮಿನ ಹತ್ತು ಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಳಿಗೆ ಒಂದೂವರ ಆಣೆ ಇಂಗ್ಲಿಷ ಪ್ರತಿಯೊಂದು ಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರ. ಆಣೆ ಡಬಲ ಕಾಲಮಿನ ಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಚಾಹಿಂತಾನುಗಳನ್ನು ಕೂಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

—(ಕ್ಷ*ಕ್ಷ)—

ಮು. ನಂ. ೧೫೬೬ ದುಮ್ಮಜಲಿನ ಅಂಗಡಿ ಮಂಗಳವಾರಪೇಟ ಜಪಳ ಓಣಿಯಲ್ಲಿ ಇರೋದ ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೬೫೧೧ ಕೆಲ್ಲೆದಲ್ಲಿ ಶ್ರೀ ಹೇಬಳಕರ ಇವರ ಬಂಗ್ಲೇದ ಎದುರಿನಲ್ಲಿ ಮಿ. ಕೆರ್ನಾಕಡಿನವರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ಹಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿದುನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N B 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು: ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೭ ನೇ ಡಿಸೆಂಬರ ೧೯೩೦ (ಸಂಚಿಕೆ ೨೬೮

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ಡಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ಡಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೆವೆ. ಇದರಲ್ಲಿ ವಾದೀ ಶ್ರೀ ಸಿದ್ಧಾವದೂತರ ಅರ್ಜಿ, ಶ್ರೀ ಆನಂದಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾಷಣಗಳನ್ನೂ ಕೊಟ್ಟಿರುತ್ತದೆ. ಪುಸ್ತಕದ ಬೆಲೆ ೧ ರೂ ಅಗ್ರಹದ ಮೂಜನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತೆವೆ. ಇದರ ಎರಡೇ ಸಾವಿರ ಪ್ರತಿಗಳನ್ನು ಕೆಗೆಸಿದೆ. ಡಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ಯೂ. ಪಿ. ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದು ಆಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ಯೂ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟ್ಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಸ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಮಸ್ತಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಸ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ತನ್ನ ವರ್ಜಸ್ಸಿನ ಪ್ರಕಾರ ತಿಂಗಳಾ ಕನಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಯ ಎಂಟು ಲಕ್ಷದ ಮೇಲುಂಟು. ಜಕ ಹೆಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಶೀಮ ಮತ್ತು ಬೇಳೆ ಶರಾ ಡಿಪಾಜಿಟಗಳಿಗೆ ಜನತೆಗೆ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದುದರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತ ಕಾರಾರೀಂದ ಹಣವನ್ನು ಡಿಪಾಜಿಟ ಇಟ್ಟು ಕೊಳ್ಳಲಾಗುದು. ಪದವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಪತ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಾವಣೆ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ.

ಸರದಾರ ಪಟೇಲರಿಗೆ ಅಗಾಡಿ ಪಿಛಾಡಿ.

ಅಹಮದಾಬಾದಿನಲ್ಲಿ ಭಾಷಣ ಮಾಡಬಾಂದೆಂದು ಅಲ್ಲಿಯ ಡಿ|| ಮಾ || ಸಾ-ಹೇಬರು ಸರದಾರ ಪಟೇಲರ ಮೇಲೆ ನೋಟೀಸು ತೆಗೆದರು ಈಗ ಖೇಡ ಜಿಲ್ಲೆಯ ಡಿ|| ಮ್ಯಾ|| ಇವರಿಗೆ ತಮ್ಮ ಜಿಲ್ಲೆಯಲ್ಲಿ ಬರಬಾರದೆಂದು ಪಾಯಬಂದಿ ಮಾಡಿದ್ದಾರೆ ಈ ಜಿಲ್ಲೆಯಲ್ಲಿ ಇವರ ಮನೆಯಿದ್ದು, ಸ್ವಗತ ಮನೆಗೆ ಹೋಗಲಿಕ್ಕೆ ಸಹ ಎದವಾದರು.

ಅಧ್ಯಕ್ಷ ಪಟೇಲರನ್ನು ಕೊಯಮತ್ತೂರಿನ ತುರಂಗಳ್ಳ ವೈದರು. ಇವರ ಸಂಗಡ ಒಬ್ಬ ಪಂಜಾಬಿ ಡಾಕ್ಟರನಿರುವನು.

ಅರಳೆಯ ರೇಲ್ವೆಯ ದರ ಕಡಿಮೆ ಮಾಡುವ ವಿಚಾರ.

ರೇಲ್ವೆ ಕಂಪನಿಗಳು ಉತ್ತರ ಹಿಂದುಸ್ಥಾನದಲ್ಲಿ ಗೋದಿಯ ಹಾಸಿಲನ್ನು ಕಡಿಮೆ ಮಾಡಿದವು ಅದೇ ಪ್ರಕಾರ ಹತ್ತಿಯ ಹಾಸಿಲನ್ನು ಕಡಿಮೆ ಮಾಡಿದರೆ- ಅದಕ್ಕೆ ಒಂದ ಮಂದಿಯು ಕಡಿಮೆಯಾಗುವದೆಂದು ವ್ಯಾಪಾರಸ್ಥರು ಸರಕಾರಕ್ಕೆ ಸೂಚನೆ ಮಾಡಿದರು. ರೇಲ್ವೆಗಳಿಗೆ ಈ ವರ್ಷ ಏಳು ಕೋಟಿಯ ಮಂದಿಯು ಒಂದಿದೆ. ಅರಳೆಯ ಹಾಸೀಲ ಕಡಿಮೆ ಮಾಡುವದರಿಂದ ಆಗಿ ಲಕ್ಷದ ಹಾನಿಯಾಗುವದು. ಬೇರೆ ಜೀನಸುಗಳ ದರ ಹೆಚ್ಚು ಮಾಡಿ ಹತ್ತಿಯ ದರವನ್ನು ಕಡಿಮೆ ಮಾಡಬಹುದೇ ಹೇಗೆಂದು ರೇಲ್ವೆ ಬೋರ್ಡಿನವರು ವಿಚಾರ ಮಾಡುತ್ತಲಿದ್ದಾರೆ.

ಸಿಂಧದ ಕಾಂಗ್ರೆಸ ಕಮೀಟಿಯ ಮೇಲೆ ಯುರೋಪಿಯನ್ನರ ಕೋಪ.

—(೧)—

ಸಿಂಧದಲ್ಲಿ ಬೇಬಂದಶಾಹಿಯುಂಟಾಗುತ್ತಿರುವದರಿಂದ, ಕಾಂಗ್ರೆಸ ಕಮೀಟಿಯನ್ನು ಬೇಕಾಯದೆ ತೀರ ಮಾಡಿ, ಅದರ ಸ್ಥಾವರ ಜಂಗಮ ಆಸ್ತಿಯನ್ನು ಜಪ್ತ ಮಾಡಿ, ಅದರ ಪ್ರವರ್ತಕ ಮತ್ತು ಸಹಾಯಕರಿಗೆ ಶಿಕ್ಷೆ ಮಾಡಬೇಕಂದು ಕರಾಚಿಯಲ್ಲಿಯ ಯುರೋಪಿಯನ್ನರು ಸಭೆ ಮಾಡಿ, ಸರಕಾರಕ್ಕೆ ತಿಳಿಸಿದ್ದಾರೆ. ಗುಜರಾಥ, ಮಹಾರಾಷ್ಟ್ರ ಮತ್ತು ಕರ್ನಾಟಕದ ಕಾಂಗ್ರೆಸ ಕಮೀಟಿಗಳು ಬೇಕಾಯದೆ ತೀರವಾದವೂ, ಅವುಗಳ ಕೃತ್ಯಗಳು ಅವಿಧಾಯುವಾಗಿ ನಡೆದಿರುತ್ತವೆಂಬದನ್ನು ಆ ಯುರೋಪಿಯನ್ನರು ನೋಡಿದ್ದರೆ. ಸರಕಾರಕ್ಕೆ ಈ ತರದ ಸೂಚನೆ ಮಾಡುತ್ತಿರಲಿಲ್ಲ.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮುಳಮಡಿ
ಮತ್ತು ——— ಧಾರವಾಡ
ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ಸಕಾಶ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸ. ೧,೨. ಪ್ರತಿ ೧ಕ್ಕೆ	೨– ೪–೦
೨. ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ ಸಚಿತ್ರ	೧– ೬–೦
೩. ಛತ್ರಪತಿ ಶಿವಾಜಿ ಮಹಾರಾಜ	೨–೧೨–೦
೪. ಕರ್ನಾಟಕ ಸಿಂಹಾಸನ ಸಾಪನೆ	೧ ೦ ೦
೫. ಚರಿತ್ರ ಸಂಗ್ರಹ ಭಾ. ೧.	೪–೦–೦
೬. ಅಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪–೮–೦
೭. ಮಹಾರಾಣಿ ಲಕ್ಷ್ಮೀಬಾಯಿ ರೂಂಸಿ	೨– ೦–೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೫–೦–೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧– ೮–೦
೧೦. ಲ್ಯಾಂಡ ರೆಫ್ಲಿನ್ಯ್ಯೂ ಕೋಡು	೨–೧೧–೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨–೧೩–೦
೧೨. ಸೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೮–೧೦–೦
೧೩. ಇಸೂಪನೀತಿ ಕಥೆ ಭಾ. ೧, ೨,	೨– ೪–೦
೧೪. ಕಾರ್ತನ ಕಂಠಾಭರಣ	೧–೧೦–೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

ಹುಬ್ಬಳ್ಳಿಯಲ್ಲಿ ದಸ್ತಗಿರಿ.

—(೦)—

ಮೊನ್ನೆ ರಾತ್ರಿ ಹುಬ್ಬಳ್ಳಿಯಲ್ಲಿ ೧೩ ಜನರನ್ನು ದಬ್ಬಾಳಿಕೆಯ ಕಾಯದೆ ಪ್ರಕಾರ ಹಿಡಿದಿದ್ದಾರೆ.

ನೋಟೀಸಿನದರಗಳು

